ಸಂವಾದ

ಮೇ ೨೦೦೪ ರೂ. ೧೦/-



ಆಡಳಿತ ಪಾಲುದಾರಿಕೆಯಲಿ ಹಿಂದುಳಿದವರಿಗೆ ಅನ್ಯಾಯ

- ಕೋಮುವಾದವನ್ನ ಹಿಮ್ಮೆಟ್ಟಿಸುವತ್ತ...
- ಅಯೋಧ್ಯೆ, ಹಿಂದೂ ಮುಸ್ಲಿಂ ಸೌಹಾರ್ದತೆ
- ನಾಡನ್ನು ಪ್ರತಿನಿಧಿಸದ ನಾಡಗೀತೆ



ನಾಚಿಕೆಗಳು ಬಿಕರಿಗಿವೆ!

ಸಂವಾದ

ಮಾಸ ಪತ್ರಿಕೆ

ಸಂಪುಟ ೨ ಸಂಚಿಕೆ ೭

ಮೇ ೨೦೦೪

ಸಂಪಾದಕ:

ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ:

ಡಾ|| ನಟರಾಜ್ ಹುಳಿಯಾರ್

ಪ್ರೊ|| ರಹಮತ್ ತರೀಕೆರೆ

ಕೆ. ಪುಟ್ಟಸ್ವಾಮಿ

ಡಿ. ಡೊಮಿನಿಕ್

ಬಿ.ಯು. ಸುಮ

ಜಿ. ಪಾಂಡುನಾಯಕ್

ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ

ಅಂಜನಾನಗರ, ಮಾಗಡಿರಸ್ತೆ,

ವಿಶ್ವನೀಡಂ ಅಂಚೆ

ಬೆಂಗಳೂರು - ೫೬೦ ೦೯೧

✆ ೨೩೨೮೭೯೪೩ / ೯೪೪೮೦ ೪೮೩೦೬

PRINTED AND PUBLISHED BY

S.R. GOVINDU

ON BEHALF OF SPOORTHIDHAMA

ANJANANAGAR, MAGADI ROAD

VISHWANEEDAM POST

BANGALORE - 560 091

✆ 080-23287943, 94480 48306

EDITOR :

INDUDHARA HONNAPURA

ಒಳಪುಟಗಳಲ್ಲಿ...

- ☐ ಪತ್ರಗಳು ೩
- ☐ ಅಂತರಂಗ ೫
- ☐ ಅಸಹನೆ ಅತೃಪ್ತಿಯಲ್ಲ, ನೋವಿನ ಅಭಿವ್ಯಕ್ತಿ ೬
  - ○ ನಾಗರಾಜ್ ಹೆತ್ತೂರು
- ☐ ದಲಿತತ್ವ-ಮೂಲಭೂತವಾದ ಒಂದೇ ಅಲ್ಲ ೮
  - ○ ನಾರಾಯಣ ತಿರುಮಲಾಪುರ
- ☐ ಜಾಗತೀಕರಣದ ಜಾತ್ರೆಯಲ್ಲಿ ಬಿಕರಿಗಿಟ್ಟಿರುವ ಮಹಿಳೆ ೧೦
  - ○ ಸುಜಾತ ಕುಮಟ

- ☐ ನಾಡನ್ನು ಪ್ರತಿನಿಧಿಸದ ನಾಡಗೀತೆ ೧೨
  - ○ ಮಾಯಣ್ಣಸ್ವಾಮಿ ಕೆ.
- ☐ ಅಯೋಧ್ಯೆಯ ಹಿಂದೂ ಮುಸಲ್ಮಾನ ಸೌಹಾರ್ದತೆ ೧೪
  - ○ ಮ. ಶ್ರೀ. ಮುರಳಿ ಕೃಷ್ಣ
- ☐ ಏಕರೂಪಿ ಮತ್ತು ಬಹುರೂಪಿ ಸಂಸ್ಕೃತಿಗಳ ಮುಖಾಮುಖಿ ೧೬
  - ○ ಎ. ಚಂದ್ರಶೇಖರ ನಂಗಲಿ
- ☐ ಆಧ್ಯಾತ್ಮ - ಒಂದು ಚಿಂತನೆ ೧೯
  - ○ ಪದ್ಮಾಲಯ ನಾಗರಾಜ್



- ☐ ಆಡಳಿತ ಪಾಲುದಾರಿಕೆಯಲ್ಲಿ ಹಿಂದುಳಿದ ಜಾತಿಗಳಿಗೆ ಅನ್ಯಾಯ ೨೦
  - ○ ರಾಜಪ್ಪ ದಳವಾಯಿ
- ☐ ಕೋಮುವಾದವನ್ನು ಹಿಮ್ಮೆಟ್ಟಿಸುವತ್ತ... ೨೨
  - ○ ಡಾ|| ಯು.ಆರ್. ಅನಂತಮೂರ್ತಿ
  - ○ ದೇವನೂರ ಮಹಾದೇವ
  - ○ ಡಾ|| ಚಂದ್ರಶೇಖರ ಕಂಬಾರ
  - ○ ಬರಗೂರು ರಾಮಚಂದ್ರಪ್ಪ
  - ○ ಡಾ|| ಕೆ. ಮರುಳಸಿದ್ದಪ್ಪ
- ☐ ಭಾರತವನ್ನು ನಾವು ಅತ್ಯುನ್ನತಿಗೆ ಕೊಂಡೊಯ್ಯಬಹುದೇ? ೨೬
  - ○ ಚಂದ್ರಭಾನ್ ಪ್ರಸಾದ್
- ☐ ನಂಬಿಕೆಗಳು ಬಿಕರಿಗಿವೆ! ೩೦
  - ○ ಪ್ರೊ|| ಕೆ.ಎಸ್. ಭಗವಾನ್
- ☐ ಭಾರತದಲ್ಲಿ ಜಾತಿ-ವರ್ಗ ಸಮಸ್ಯೆ ೩೬
- ☐ ವಿವೇಕಾನಂದರ ವಿಚಾರಗಳು ೪೨

ಕವನಗಳು: ☐ ನೀ ಜೀವದೊಲುಮೆಯ ನೆರಳು - ೭ ☐ ಕಂದರ - ೧೮

☐ ಪುರುಷೋತ್ತಮನಾಗುವ ಮೊದಲು - ೩೫ ☐ ಮೂರು ಕವನಗಳು - ೩೯

ಮುಖಪುಟ ಕಲೆ: ಜಾನ್ ದೇವರಾಜ್, ವಿನ್ಯಾಸ: ರಾಥೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

ಹೆಣ ಹೊರುವ ಜಗದ್ಗುರುಗಳು

ಪತ್ರಾಗಾರ

ಪ್ರೀತಿಯ ಇಂದೂಧರ ಅವರೇ,

ದೇವನೂರ ಮಹದೇವ ಅವರ 'ಧರ್ಮದ ಹೆಣ ಹೊತ್ತ ಜಗದ್ಗುರುಗಳು' ಲೇಖನ ಅತ್ಯಂತ ಸಮಂಜಸವಾಗಿದೆ. ಸಮಾಜದ ಶಾಂತಿ ಸೌಹಾರ್ದತೆ ಕಾಪಾಡ ಬೇಕಾದ ಸ್ವಾಮಿಗಳು ಜನರನ್ನೂ ಪರಸ್ಪರ ಎತ್ತಿಕಟ್ಟಿ ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿರುವುದು ಅತ್ಯಂತ ಅಮಾನವೀಯ ಹಾಗೂ ನಾಚಿಕೆಗೇಡಿನ ಸಂಗತಿ.

ಅಷ್ಟೇ ನಾಚಿಕೆಗೇಡಿನ ಸಂಗತಿ ದಲಿತ ನೌಕರರದ್ದು. ನೌಕರಿ-ಬಡ್ತಿ ಇತ್ಯಾದಿ ವಿಚಾರ ಬಂದಾಗ ಮಾತ್ರ ತಾನು ದಲಿತನೆಂದು ಹೇಳಿಕೊಳ್ಳುವ ಇವರುಗಳು ಎಂಥ



ಹೊಣೆಗೇಡಿಗಳು ಹಾಗೂ ಜನದ್ರೋಹಿಗಳು ಎಂಬುದು ಎಲ್ಲರಿಗೂ ವೇದ್ಯವಾಗಿದೆ. ನಿಜವಾಗಿಯೂ ದಲಿತರ ಶತ್ರುಗಳಾಗಿರುವ ಇವರಿಗೆ ಎಂದು ಬುದ್ಧಿ ಬರುತ್ತದೋ ಆ ದೇವರೇ ಬಲ್ಲ!

ಡಾ. ಅಂಬೇಡ್ಕರ್ ಅವರು ದಲಿತ ನೌಕರರು ಎಂಥ ಸ್ವಾರ್ಥಿಗಳು ಅನ್ನುವುದನ್ನು ತಮ್ಮ ಜೀವಿತಾವಧಿಯಲ್ಲೇ ಕಂಡುಕೊಂಡಿದ್ದರು ಮತ್ತು ಅದಕ್ಕಾಗಿ ಪಶ್ಚಾತ್ತಾಪ ಪಟ್ಟಿದ್ದರು. ಅದನ್ನು ಹಲವು ಬಾರಿ ವ್ಯಕ್ತಪಡಿಸಿಯೂ ಇದ್ದರು. ಜಾಗೃತ ದಲಿತರು ಅವರುಗಳಿಗೆ ಸರಿಯಾದ ಬುದ್ಧಿ ಕಲಿಸಬೇಕಾದ ಅಗತ್ಯ ಇದೆ.

ಜೆ.ಡಿ. ಶೀಲವಂತ ಮಾದರ
ಹುಮನಾಬಾದ್.

ಹೊಸ ಕನಸುಗಳ ವಿಶೇಷಾಂಕ

ಪ್ರಿಯ ಇಂದೂಧರ ಹೊನ್ನಾಪುರ ಅವರಿಗೆ, ಸಪ್ರೇಮ ವಂದನೆಗಳು

'ಸಂವಾದ' ವಾರ್ಷಿಕ ವಿಶೇಷಾಂಕ ಅದ್ಭುತವಾಗಿ ಮೂಡಿ ಬಂದಿದೆ. ಹೊಸ ಆಶೆ-ಕನಸುಗಳನ್ನು ಕಟ್ಟಿ ಕೊಡಲು ವಿಶೇಷಾಂಕ ಸಮರ್ಥವಾಗಿ ಪ್ರಯತ್ನಿಸಿದೆ. ಇಂಥ ಹಲವು ವಿಶೇಷಾಂಕಗಳು ಬರಲಿ ಎಂದು ಹಾರೈಸುತ್ತೇನೆ.

ಪ್ರೊ|| ಬುದ್ದಣ್ಣ ಹಿಂಗಮಿರೆ
ಧಾರವಾಡ

ಪಿಸುಣರ ಮಸಲತ್ತು

ಅನಿಂದ್ಯ
ವಂದ್ಯ-ಎಂದು ವಂದಿಸದೆ
ದೇವಪುತ್ರರನ್ನು
ಊರೂರಿಂದ ಹೊರದಬ್ಬಿರುವ
ದಾನವ ದಾಯಾದಿಗಳ ಮೇಲೆ
ಕೇಸುಮಾಡಿ
ನ್ಯಾಯಕ್ಕಾಗಿ
ಪ್ರತಿ ನ್ಯಾಯಾಲಯ
ಅಲೆಯುತ್ತಿರುವ
ಇಂದೂಧರ ಹೊನ್ನಾಪುರ,
ಯಾವ ಧರ್ಮವೂ
ಯಾವ ಶಾಸ್ತ್ರವೂ
ನಮಗೆ ನ್ಯಾಯವಾದಿಯಾಗಿ ಬರಲಿಲ್ಲ
ಬಂದವರೆಲ್ಲ
ಮುಚ್ಚುಮರೆಯಲ್ಲಿ
ಎದುರು ಕಕ್ಷಿಗಳ ಪಕ್ಷ ವಹಿಸಿ
ವಿಚಾರಣೆಯನ್ನು ಮುಂದೂಡಿಸುತ್ತಲೇ ಬಂದರು
ಯುಗ ಯುಗಾಂತರ ಕಳೆಯಿತು
ಬುದ್ಧನ ಯುಗ ಕಳೆಯಿತು
ಬಸವನ ಯುಗ ಕಳೆಯಿತು!
ಭೀಮನ ಯುಗವೂ ಕಳೆಯಿತೂ!
ವೀರಬಾಹುಕನ ಕಾಲು ಹಿಸುಕುವ
ಸತ್ಯ ಹರಿಶ್ಚಂದ್ರ, ಮಹಾರಾಜನ ಕಾಲವಿನ್ನೂ ಬರಲಿಲ್ಲ!
ಅಥವಾ
ಡಾಲರಿಗೆ ಮಾನ ಮಾರಿಕೊಂಡಿರುವ
ಆ ಕಾಲನ ಕಾಲನ್ನೇ ಹಿಸುಕುತ್ತ
ಆ ಪಿಸುಣರೇನಾದರೂ
ಮಸಲತ್ತು ಮಾಡುತ್ತಿದ್ದಾರೋ? ತಿಳಿಯದು?

ಡಾ|| ಎಲ್. ಬಸವ ರಾಜ್, ಮೈಸೂರು

ಕೋಟಿ ಗದ್ದರ್‌ಗಳು ಉದಯಿಸಲಿ

ಮಾನ್ಯರೇ,

ಆಳುವ ವರ್ಗಗಳು ಗುರಿ ಇಟ್ಟ ಗುಂಡೇಟಿಗೂ ಗದಗುಟ್ಟದ ಶೋಷಿತ ಲೋಕದ ದಿಗ್ಗಜ ಗದ್ದರ್ ಕುರಿತು ವೈ. ಮರಿಸ್ವಾಮಿಯವರು ಬರೆದಿರುವ ಲೇಖನ ತುಂಬ ಚೆನ್ನಾಗಿ ಮೂಡಿ ಬಂದಿದೆ.

ಗದ್ದರ್‌ರವರ ಅಭಿಮಾನಿಯಾದ ನಾನು ಈ ಲೇಖನವನ್ನು ಮತ್ತೆ ಮತ್ತೆ ಓದಿದ್ದೇನೆ. ಅಲ್ಲದೆ 'ಸಂವಾದ'ದ ಉತ್ತಮ ಲೇಖನಗಳು ಚರ್ಚೆಯಾಗುವಂತೆ ಗದ್ದರ್‌ರವರ ಲೇಖನಗಳು ಕೂಡ ನಮ್ಮ ಗೆಳೆಯರ ಬಳಗದಲ್ಲಿ ಉತ್ತಮವಾದ ಚರ್ಚೆಯಾಯಿತು.

ಗುಂಡೇಟಿನ ನಂತರವೂ ವಿಚಲಿತಗೊಳ್ಳದ ಸಾಂಸ್ಕೃತಿಕ ಲೋಕದ ಚಕ್ರವರ್ತಿ ಗದ್ದರ್ ಮತ್ತಷ್ಟು ಉತ್ಸಹಕರಾಗಿ ಹಾಡಿ ನರ್ತಿಸುತ್ತ, ಘರ್ಜಿಸುತ್ತಾರೆ. ಇವರ ಸಿಂಹಘರ್ಜನೆ ಮತ್ತು ಗೆಜ್ಜೆಯ ಸಪ್ಪಳಗಳು ಸತ್ತಂತೆ ಮಲಗಿರುವ ಅಸಹಾಯಕರನ್ನು ಎಚ್ಚರಗೊಳಿಸಿ ಚಿಂತನೆಗೆ ಹಚ್ಚುವಂತೆ ಮಾಡಿಬಿಡುತ್ತದೆ.

ಗದ್ದರ್‌ರವರ ಉತ್ಸಾಹ, ಚೈತನ್ಯ ಇಂದಿನ ಎಲ್ಲಾ ಯುವಕ, ಯುವತಿಯರಲ್ಲಿ ಹರಿದು ಬರಲಿ. ಈ ದೇಶದಲ್ಲಿ ಕೋಟಿ ಗದ್ದರ್‌ಗಳು ಉದಯಿಸಿ ಭಾರತಾಂಬೆಯ ಕಣ್ಣೀರೊರೆಸುವಂತಾಗಲಿ.

ಗೌರವದ ವಂದನೆಗಳೊಂದಿಗೆ,

ಹುರಗಲವಾಡಿ ರಾಮಯ್ಯ, ಮಂಡ್ಯ ಜಿಲ್ಲೆ.

ಅರ್ಥಪೂರ್ಣ

ಮಾನ್ಯ ಇಂದೂಧರ ಅವರಿಗೆ,

ಜನವರಿ ೨೦೦೪ ರ ವಿಶೇಷ ಸಂಚಿಕೆ ಅರ್ಥಪೂರ್ಣವಾಗಿ ಮೂಡಿ ಬಂದಿದೆ. ಪ್ರಸ್ತುತ ಸಮಸ್ಯೆಗಳಿಗೆ ಮುಖಾಮುಖಿಯಾಗಿ ಸಂವಾದ ಬೆಳೆಸುವ 'ಸಂವಾದ'ವು ಇವತ್ತು ಜರೂರಾಗಿ ಮಾಡಬೇಕಿದ್ದ ಕ್ರಾಂತಿಯನ್ನು ಅಕ್ಷರದ ಮೂಲಕ ಮಾಡು ತ್ತಿದೆ. ಯಾವುದೇ ಸದ್ದು ಗದ್ದಲವಿಲ್ಲದೆ ಅರ್ಥಪೂರ್ಣವಾಗಿ, ವೈಚಾರಿಕ-ಕ್ರಾಂತಿ ಯನ್ನು ಉಂಟು ಮಾಡುತ್ತಿರುವ ತಮ್ಮ 'ಸಂವಾದ'ಕ್ಕೆ ಅಭಿನಂದನೆಗಳು. ಇಂತಹ ಪತ್ರಿಕೆಗೆ ಲೇಖನವನ್ನು ಕಳುಹಿಸುವುದು ಸೂಕ್ಷ್ಮ ಸಂವೇದಿಗಳಾದ ಪ್ರತಿಯೊಬ್ಬ ಲೇಖಕ-ಲೇಖಕಿಯರ ಕರ್ತವ್ಯವೆಂದು ಭಾವಿಸುತ್ತೇನೆ. ವಂದನೆಗಳೊಂದಿಗೆ,

ವಿಶ್ವಾಸದ
ಶೈಲಜಾ ಹಿರೇಮಠ, ವಿದ್ಯಾರಣ್ಯ

ಪುಟ ಪುಟದಲ್ಲೂ ವೈಶಿಷ್ಟ್ಯ

ಮಾನ್ಯರೇ,

ತಮ್ಮ ಗೌರವಪ್ರತಿಗಳು ಬಂದಿವೆ. ತುಂಬಾ ಧನ್ಯವಾದಗಳು. ಅತ್ಯಂತ ಆಸಕ್ತಿಯಿಂದ ಪತ್ರಿಕೆಯನ್ನು ಸಿದ್ಧಮಾಡುತ್ತಿರುವುದು ಪುಟ ಪುಟದಲ್ಲೂ ಗೋಚರಿಸುತ್ತಿದೆ. ಪತ್ರಿಕೆಯ ಮೂಲ ಉದ್ದೇಶ ಯಶಸ್ವಿಯಾಗಬೇಕೆಂದು ಹಾರೈಸುತ್ತೇನೆ. ದುರ್ಬಲರಿಗೆ ನಿಮ್ಮ ಪತ್ರಿಕೆ ಸಾಂತ್ವನ ಮತ್ತು ಶಕ್ತಿಯನ್ನು ನೀಡಲಿ. ಚಂದಾ ಕಳುಹಿಸುತ್ತಿದ್ದೇನೆ. ದಯವಿಟ್ಟು ಸ್ವೀಕರಿಸಿ.

ಎಸ್. ವಸುಧೇಂದ್ರ
ಬೆಂಗಳೂರು.

ಸಂವಾದ ಚಂದಾ ವಿವರ

ಬಿಡಿ ಪ್ರತಿ ರೂ. ೨೦/-	೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
೧.ವಿದ್ಯಾರ್ಥಿಗಳು/ ಕಾರ್ಯಕರ್ತರಿಗೆ	ರೂ. ೧೦೦/-	ರೂ. ೩೦೦/-	ರೂ. ೫೦೦/-
೨.ನೌಕರರು ಮತ್ತು ವೃತ್ತಿಪರರಿಗೆ	ರೂ. ೨೦೦/-	ರೂ. ೫೦೦/-	ರೂ. ೮೦೦/-
೩.ಸಂಘ-ಸಂಸ್ಥೆಗಳು, ಉದ್ಯಮಿಗಳಿಗೆ	ರೂ. ೨೪೦/-	ರೂ. ೬೦೦/-	ರೂ. ೧೦೦೦/-
೪.ವಿಶೇಷ ಹಿತೈಷಿ ಚಂದಾದಾರರಿಗೆ	ರೂ. ೫೦೦/-	ರೂ.೧೫೦೦/-	ರೂ. ೨೫೦೦/-

ಆಜೀವ ಚಂದಾ ರೂ. ೫,೦೦೦/-, ಪೋಷಕ ಚಂದಾ ರೂ. ೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ, ಅಂಚೆ ಮೂಲಕ ಚಂದಾ ಕಳುಹಿಸುವವರು ಎಂ.ಓ. ಅಥವಾ ಡಿ.ಡಿ. ಮೂಲಕ ಮಾತ್ರ ಕಳುಹಿಸಬೇಕು.

ಚಳವಳಿ ಜಾಗೃತಿಯ ಸಂಕೇತ

ಪ್ರೀತಿಯ ಸಂಪಾದಕರೇ,

'ಸಂವಾದ' ನಾನು ಕಂಡ ಅತ್ಯಂತ ಶ್ರೇಷ್ಠ ಪತ್ರಿಕೆಗಳಲ್ಲಿ ಒಂದು. ಈಗಿನ ಸಂದರ್ಭದಲ್ಲಂತೂ 'ಸಂವಾದ'ಕ್ಕೆ ಸರಿಸಾಟಿಯಾದ ಇನ್ನೊಂದು ಪತ್ರಿಕೆ ಕನ್ನಡದಲ್ಲಂತೂ ಇಲ್ಲ ಅಂದರೆ ಉತ್ಪ್ರೇಕ್ಷೆಯಲ್ಲ.

ಆದರೆ ಏಪ್ರಿಲ್ ಸಂಚಿಕೆಯಲ್ಲಿ ಪತ್ರಿಕೆ ಕುರಿತು ವಿಜಯ ಮಹೇಶ್ ಅವರು ಬರೆದ ಪತ್ರ ಓದಿ ತುಂಬಾ ನೋವಾಯಿತು. ಬಹುಶಃ ವಿಜಯಾ ಅವರು ವಿಕಾರದ ಹಳದಿ ಕನ್ನಡಕ ತೊಟ್ಟು 'ಸಂವಾದ'ವನ್ನು ಓದುತ್ತಿರಬಹುದು ಎನ್ನಿಸುತ್ತದೆ.

ನನಗನ್ನಿಸುವ ಮಟ್ಟಿಗೆ 'ಸಂವಾದ' ಎಲ್ಲವಾದ ಸಿದ್ಧಾಂತಗಳ ವೈಚಾರಿಕ ಚಿಂತನೆಯನ್ನಷ್ಟೇ ನಡೆಸುತ್ತಿದೆಯೇ ಹೊರತು ಯಾವುದೇ ವಾದವನ್ನು ಒಪ್ಪಿ ಪ್ರಚಾರ ಮಾಡುತ್ತಿಲ್ಲ. ಯಾವುದೋ ಪೂರ್ವಾಗ್ರಹಕ್ಕೆ ಒಳಗಾಗಿರುವ ವಿಜಯಾ ಅವರು ಹತಾಶೆಯಿಂದ ಹೀಗೆ ಬರೆದಿದ್ದಾರೆ ಅನ್ನಿಸುತ್ತದೆ. ಹಾಗೆ ನೋಡಿದರೆ ಅಂಬೇಡ್ಕರ್ ವಾದಕ್ಕೇ ನೀವು ಹೆಚ್ಚು ಒತ್ತು ಕೊಡುತ್ತಿದ್ದೀರಿ ಎಂದು ಆಪಾದಿಸಿದ್ದರೆ ಸ್ವಲ್ಪ ಮಟ್ಟಿಗೆ ಒಪ್ಪಬಹುದಿತ್ತೇನೋ.

ನೀವೇ ಹೇಳುವಂತೆ ವಿಚಾರ ಶೂನ್ಯರಾದ ಜನ ಯೋಚಿಸುವುದೇ ಹೀಗೆ ಅನ್ನಿಸುತ್ತದೆ. 'ಅವಕಾಶವಾದ'ವೇ ಅಂಥವರ ಸಿದ್ಧಾಂತವಾಗಿರುತ್ತದೆ ! ಅಧಿಕಾರ ಲಾಲಸೆ, ಸ್ವಜನ ಪಕ್ಷಪಾತ, ಜಾತೀಯತೆ ಇತ್ಯಾದಿಗಳು ಬ್ರಾಹ್ಮಣರಲ್ಲಿದ್ದರೂ ಅಪಾಯವೇ, ಅಸ್ಪೃಶ್ಯರಲ್ಲಿದ್ದರೂ ಅಪಾಯವೇ! ಚಳುವಳಿಗಳು ಜಾಗೃತಿ ಸಂಕೇತ ಅಧಿಕಾರ ದಬ್ಬಾಳಿಕೆಯ ಸಂಕೇತ. ಇಷ್ಟು ಪ್ರಾಥಮಿಕ ಜ್ಞಾನವೂ ಇಲ್ಲದವರ ಪತ್ರಗಳಿಗೆ 'ಸಂವಾದ'ದಲ್ಲೇಕೆ ಜಾಗ?

ಡಿ. ಗೋಪಾಲ ಕೃಷ್ಣ
ಬೆಂಗಳೂರು

ದಾರಿ ತೋರಲಿ ಬುದ್ಧ

ಪ್ರೀತಿಯ ಇಂದೂಧರ,

ವಿಜಯಮಹೇಶ್ ಅವರ ಪತ್ರ ಅವರೆಷ್ಟು ವೈಚಾರಿಕ ದಾರಿದ್ರ್ಯದಿಂದ ನರಳುತ್ತಿದ್ದಾರೆಂಬುದನ್ನು ತೋರಿಸುತ್ತದೆ. ನಿರಂತರವಾಗಿ ಬುದ್ಧ ಮತ್ತು ಅಂಬೇಡ್ಕರ್ ಅವರ ವೈಚಾರಿಕ ನಿಲುವುಗಳನ್ನು ಸಮರ್ಥಿಸುತ್ತಲೇ ಬರುತ್ತಿರುವ 'ಸಂವಾದ'ವನ್ನು ಅವರು ಓದಿಯೇ ಇಲ್ಲ ಎಂದು ಅವರ ಪತ್ರ ಓದಿದ ಯಾರಿಗಾದರೂ ಅನ್ನಿಸುತ್ತದೆ. ಇಲ್ಲ ಕುಚೇಷ್ಟೆಗಾಗಿ ಹೀಗೆ ಪತ್ರ ಬರೆದಿರಬಹುದು ಅನ್ನಿಸುತ್ತದೆ.

ಕರುಣಾಳು ಬುದ್ಧ ಅವರಿಗೆ ದಾರಿ ತೋರಲಿ !

ಕೆ.ವಿ. ನಾಗರಾಜಮೂರ್ತಿ, ಬೆಂಗಳೂರು.

'ಸಂವಾದ'ದೊಂದಿಗೆ 'ಸಂವಾದ'ದ ಆಸೆ

ಇಂದೂಧರ ಹೊನ್ನಾಪುರ ಅವರಿಗೆ

ನಮಸ್ಕಾರ

ಪತ್ರಿಕೆ ನಿಜಕ್ಕೂ ಉತ್ತಮವಾಗಿ ಬರುತ್ತಿದೆ. ಕನ್ನಡ ಸಾಹಿತ್ಯ ಮತ್ತು ವಿಮರ್ಶೆ ಹಾಗೂ ಒಟ್ಟು ಸಾಮಾಜಿಕ ಸಂದರ್ಭದ ಅಧ್ಯಯನ ಸಂಸ್ಕೃತಿ ಅಧ್ಯಯನದ ಕಡೆ ಸಾಗಬೇಕಾಗಿರುವುದನ್ನು 'ಸಂವಾದ' ಸೂಚಿಸುತ್ತಿರುವುದು ನನ್ನಂತವರಿಗೆ ಸಂತೋಷ ನೀಡಿದೆ.

ಹೆಚ್ಚು ಹೇಳಬೇಕಾದ ಅವಶ್ಯಕತೆಯಿಲ್ಲ. ಪತ್ರಿಕೆ ಚೆನ್ನಾಗಿದೆ. 'ಸಂವಾದ'ದೊಂದಿಗೆ ಸಂವಾದಿಸಲು ಸದಾ ಬಯಸುತ್ತೇನೆ.

ವಂದನೆಗಳೊಂದಿಗೆ

ಬಿ. ಕನಕರಾಜು,
ಬೆಂಗಳೂರು.

ಪತ್ರಾಗ್ನಿ

ಅಸಮಾನತೆ ಭಾರತ ವ್ಯಾಧಿ

ಮಾನ್ಯ ಸಂಪಾದಕರೇ,

'ಕುವೆಂಪು ಮಲೆನಾಡಿನಲ್ಲಿ ಕ್ರೌರ್ಯದ ಕೇಕೆ' ಎಂಬ ಲೇಖನವನ್ನು 'ಸಂವಾದ' ಏಪ್ರಿಲ್ ೨೦೦೪ ರ ಸಂಚಿಕೆಯಲ್ಲಿ ರವಿ ಕುಮಾರ್ ಬಾಗಿ ಬರೆದಿದ್ದಾರೆ. ಪ್ರಾಕೃತವಾಗಿ ಅಲ್ಲಿನ ಸಿರಿ ಸಮೃದ್ಧಿಯೇ ಇದ್ದರೂ ಸಾಮಾಜಿಕ ಆರ್ಥಿಕ ಅಸಮಾನತೆ ಎದ್ದು ಕುಣಿಯುತ್ತಿದೆ ಎಂದು ನೊಂದು ನುಡಿದಿದ್ದಾರೆ. ಸಾಮಾಜಿಕ, ಆರ್ಥಿಕ ಸಮಾನತೆ ಮಲೆನಾಡಿಗೆ ಸೀಮಿತವಾದ ಒಂದು ಖಾಯಿಲೆ ಅಲ್ಲ, ಅದು ಭಾರತವ್ಯಾಪಿ. ನಮ್ಮ ಸಮಾಜವನ್ನು ನಾವು ರಚಿಸಿರುವುದೇ ಹಾಗೆ. ಪುಟ್ಟಪ್ಪನವರು ಅದನ್ನೂ ತಮ್ಮ ಕಾವ್ಯಗಳಲ್ಲಿ, ಕಾದಂಬರಿಗಳಲ್ಲಿ, ಕತೆಗಳಲ್ಲಿ, ವೈಚಾರಿಕ ಲೇಖನಗಳಲ್ಲಿ ಗುರುತಿಸಿದ್ದಾರೆ. ಹಾಗೆ ಅವರು ಗುರುತಿಸಿರು ವುದೇ ತಪ್ಪೆ? ಈ ಕೆಲಸ ಸ್ವಾತಂತ್ರ್ಯ ಬಂದ ೫೦ ವರ್ಷಗಳಲ್ಲಿ ಸಮಾಜಶಾಸ್ತ್ರಜ್ಞರು, ಅರ್ಥಶಾಸ್ತ್ರಜ್ಞರು ಇವರುಗಳಿಂದ ಆಗಬೇಕಾಗಿತ್ತು. ನಡೆದು ಬಂದ ಸರ್ಕಾರಗಳು ಈ ಅಂಶವನ್ನೂ ಗಂಭೀರವಾಗಿ ಪರಿಗಣಿಸ ಬೇಕಾಗಿತ್ತು. ಈ ಸಾಮಾಜಿಕ ಆರ್ಥಿಕ ಅಸಮಾನತೆಯನ್ನು ತೊಡೆದು ಹಾಕಲು ಆದ್ಯತೆಯ ಮೇಲೆ ಯೋಜನೆಗಳನ್ನು ಹಾಕಿ ಕೊಳ್ಳಬೇಕಾಗಿತ್ತು. ಒಂದು ಕಾಲಮಿತಿಯೊಳಗೆ ಈ ಅಸಮಾನತೆಯನ್ನು ಸಮಾಜದಿಂದ ತೊಲಗಿಸಬೇಕಾಗಿತ್ತು. ಆದರ ಬದಲು ಸರ್ಕಾರಗಳು ಈ ಅಸಮಾನತೆಯನ್ನು ಬೆಳೆಸುವ ಕೆಲಸವನ್ನೇ ಮಾಡಿದವು. ಪಟ್ಟಭದ್ರಹಿತಾಸಕ್ತಿಗಳಿಗೆ ರಕ್ಷಣೆಕೊಟ್ಟು ಬೆಳೆಸಿದವು. ಕೊನೆಗೆ ಅವರು ಕಾಲ ಕಾಲಕ್ಕೆ ನೀಡಿದ ಆರ್ಥಿಕ ಸಹಕಾರದಿಂದಾಗಿ (ಲಂಚ, ಖುಷುವತ್ತೂ) ರಾಜಕೀಯ ಪಕ್ಷ ಗಳು ಆ ಹಿತಾಸಕ್ತಿಗಳ ದಾಸರಾದವು. ಎಕ್ಸೈಸ್‌ಲಾಬಿ, ಹೈಟೆಕ್ ಲಾಬಿ, ಉದ್ಯೋಗಪತಿಗಳ ಲಾಬಿ ಇವುಗಳು ಆದೇಶ ನೀಡಿದಂತೆ, ಸಾಮಾಜಿಕ ಆರ್ಥಿಕ ವಲಯಗಳನ್ನು ರೂಪಿಸಲು ಸರ್ಕಾರಗಳು, ರಾಜಕೀಯ ಪಕ್ಷಗಳು ಮುಂದಾದವು.

ಇಂದು ಸಮಾಜದಲ್ಲಿ ಬಡವ, ಬಲ್ಲಿದ, ವಿದ್ಯಾವಂತ, ನಿರಕ್ಷರ ಕುಕ್ಷಿ, ಈ ಜಾತಿ, ಆ ಜಾತಿ, ಈ ಪಕ್ಷ, ಆ ಪಕ್ಷ, ಮುಂತಾದ ಭೇದಾಸುರರು ತಾಂಡವನೃತ್ಯ ಮಾಡುತ್ತಿದ್ದಾರೆ. ಈ ದುಸ್ಥಿತಿ ಕುಪ್ಪಹಳ್ಳಿ ಮತ್ತು ಅದರ ಆಸುಪಾಸು ಹಳ್ಳಿಗಳಿಗೆ ಸೀಮಿತವಾಗಿಲ್ಲ, ಇಡಿ ಭಾರತೀಯ ಸಮಾಜದಲ್ಲಿ ಈ ಅಹಿತಕರ ಬೆಳವಣಿಗೆ ಕಾಣಿಸಿಕೊಂಡಿದೆ.

ಜಯಪ್ರಕಾಶರು ಈಗಿನ ಸಮಾಜವನ್ನೂ ಒಂದು Humen Jungle ಎಂದು ಕರೆದಿದ್ದಾರೆ. ನಾಲ್ಕು ಕಾಲಿನ ಕಾಡು ಪ್ರಾಣಿಗಳ ಬದಲಾಗಿ ಈ ಸಮಾಜವೆಂಬ ಅರಣ್ಯದಲ್ಲಿ ಎರಡು ಕಾಲಿನ ಪ್ರಾಣಿಗಳಿವೆ. ಬಲಿಷ್ಠವಾದದ್ದು ದುರ್ಬಲವಾದದ್ದನ್ನು ತಿಂದು ಬದುಕುವುದು ಅರಣ್ಯ ನೀತಿ. ಈ ಅರಣ್ಯ ನೀತಿಯನ್ನೇ ನಮ್ಮ ಸಮಾಜದಲ್ಲೂ ನಾವು ಕಾಣುತ್ತೇವೆ. ಆದರೆ ಒಂದು ವ್ಯತ್ಯಾಸ, ಕಾಡಿನಲ್ಲಿರುವ ಹುಲಿಯನ್ನು, ಸಿಂಹವನ್ನೂ, ನರಿಯನ್ನು, ಹುಲ್ಲೆಯನ್ನು ನಾವು ಗುರುತಿಸಬಲ್ಲೆವು. ನಮ್ಮ ಮಾನವ ಸಮಾಜದಲ್ಲಿರುವ ಎಲ್ಲರೂ ಒಂದೇ ತೆರನಾಗಿ ಕಾಣುತ್ತಾರೆ. ಸಭ್ಯರಂತೆ ಕಾಣಿಸಿಕೊಳ್ಳುತ್ತಾರೆ. ವಿದ್ಯಾವಂತರಂತೆ ಕಾಣಿಸಿಕೊಳ್ಳುತ್ತಾರೆ. ಹೀಗಾಗಿ ಇವರಲ್ಲಿ ಯಾರು ಹುಲಿ, ಯಾರು ಸಿಂಹ ಯಾರು ಹುಲ್ಲೆ, ಯಾರು ನರಿ ಎಂಬುದನ್ನು ಮೇಲ್ನೋಟಕ್ಕೆ ಗುರುತಿಸಲು ಸಾಧ್ಯವಿಲ್ಲ.

ಇಂತಹ ವಿಷವು ಸಮಾಜವನ್ನು ನಾವು ಬೆಳೆಸಿಟ್ಟುಕೊಂಡಿದ್ದೇನೆ.

ಈ ಸಾಮಾಜಿಕ, ಆರ್ಥಿಕ ಅಸಮಾನತೆಯನ್ನು ಬುಡಸಹಿತ ಕಿತ್ತು ಹಾಕಬೇಕಾಗಿದೆ. ಇದನ್ನು ಸಾಧಿಸಲು ಒಂದು ಸಾಮಾಜಿಕ, ಆರ್ಥಿಕ ಕ್ರಾಂತಿಯೇ ಆಗಬೇಕಾಗಿದೆ. ಕ್ರಾಂತಿ ಎಂದರೆ ಮೌಲ್ಯಗಳ ಬದಲಾವಣೆ. ಈಗ ನಾವು ಜಾತಿ ಪದ್ಧತಿ ಒಪ್ಪಿಕೊಂಡಿದ್ದೇವೆ, ಅಸಮಾನತೆ ಒಪ್ಪಿಕೊಂಡಿದ್ದೇವೆ. ಈ ಕೆಟ್ಟ ಚುನಾವಣಾ ಪದ್ಧತಿ ಒಪ್ಪಕೊಂಡಿದ್ದೇವೆ. ಪ್ರಜಾಪ್ರಭುತ್ವದ ಬದಲು ಪ್ರಜಾತ್ರಿ ಪ್ರಭುತ್ವವನ್ನು ಒಪ್ಪಿಕೊಂಡಿದ್ದೇವೆ. ಬಡವ ಮತ್ತಷ್ಟು ಬಡವನಾಗುವ, ಶ್ರೀಮಂತ ಅತಿ ಶ್ರೀಮಂತನಾಗುವ ವ್ಯವಸ್ಥೆಯನ್ನು ಒಪ್ಪಿಕೊಂಡಿದ್ದೇವೆ. ಒಬ್ಬನಿಗೆ ಒಂದು ಎಕರೆ ಜಮೀನು, ಇನ್ನೊಬ್ಬನಿಗೆ ನೂರು ಎಕರೆ, ಮತ್ತೊಬ್ಬನಿಗೆ ಬರಿಗೈ ಈ ವ್ಯವಸ್ಥೆಯನ್ನೂ ಒಪ್ಪಿಕೊಂಡಿದ್ದೇವೆ.

ಎಲ್ಲಿಯವರೆಗೆ ಈ ಮೇಲ್ಕಂಡ ವ್ಯವಸ್ಥೆಯನ್ನುಬಾಯಿಮುಚ್ಚಿಕೊಂಡು ಒಪ್ಪಿಕೊಂಡು ಕುಳಿತಿರುತ್ತೇವೆಯೋ ಅಲ್ಲಿಯವರೆಗೂ ಆರ್ಥಿಕ ಸಾಮಾಜಿಕ ಅಸಮಾನತೆಯನ್ನು ಅನುಭವಿಸಬೇಕಾದ್ದು ಅನಿವಾರ್ಯ.

ಈ ದುಷ್ಟ ಸಮಾಜದಿಂದ ಪಾರಾಗಬೇಕೆಂಬ ಉತ್ಕಟೇಚ್ಛೆ ಇದ್ದಲ್ಲಿ ಕ್ರಾಂತಿಗೆ ನಾವು ಆಹ್ವಾನ ನೀಡಬೇಕು. ಈ ವ್ಯವಸ್ಥೆಯನ್ನು ಸಂಪೂರ್ಣವಾಗಿ ಮರಿಯುವವರೆಗೆ ನಾವು ಹೋರಾಡುತ್ತೇವೆಂದು ತೀರ್ಮಾನ ಕೈಗೊಳ್ಳಬೇಕು. ಕ್ರಾಂತಿ ಕಾರ್ಯಕ್ಕೆ ತೊಡಗುವ ಮೊದಲು ಪ್ರತಿಯೊಬ್ಬರ ಮನದಲ್ಲೂ ವಿಚಾರ ಕ್ರಾಂತಿ ಆಗಬೇಕು. ಇದಕ್ಕಾಗಿ ಎಲ್ಲರ ಮನಸ್ಸಿನಲ್ಲಿ ಈ ವಿಚಾರ ಕ್ರಾಂತಿಯ ಬೀಜ ಬಿತ್ತಬೇಕು. ಆ ಬೀಜ ಬಿತ್ತಿದಲ್ಲಿ ಮೊಳಕೆಯೊಡೆಯಬೇಕು. ಆಗ ಜನತೆ ಕ್ರಾಂತಿಗೆ ಸಿದ್ಧವಾದಂತೆ ಮುಂದಿನ ಹೆಜ್ಜೆ ಸಂಘಟನೆ, ಸಂಘರ್ಷ.

ಎಚ್. ಎಸ್. ದೊರೆಸ್ವಾಮಿ,
ಬೆಂಗಳೂರು

ಸಂಪಾದಕೀಯ



ಅಂತರಂಗ

ಬರಲಿ ನೂರು ಬುದ್ಧರು!

ಬುದ್ಧ ಪೂರ್ಣಿಮೆ ಬರುತ್ತಿದೆ. ಅಂಬೇಡ್ಕರ್, ಬಸವಣ್ಣ ಮತ್ತು ಬುದ್ಧರ ಜನ್ಮದಿನಗಳು ಪ್ರತಿ ವರ್ಷ ಹೆಚ್ಚು ಕಡಿಮೆ ಒಂದೇ ಸಮಯದಲ್ಲಿ ಬರುತ್ತವೆ. ಮಾಗಿಯ ಜಂಜಡ ಕಳೆದು ವೈಶಾಖದ ಉರಿಬಿಸಿಲು ನೆತ್ತಿಯ ಮೇಲೆ ಸುರಿಯುವ ಸಂದರ್ಭ ಅದು. ಅದೇ ಸಮಯಕ್ಕೆ ಮರಗಿಡಗಳು ಹೊಸ ಜೀವಕಳೆ ತುಂಬಿಕೊಳ್ಳುತ್ತವೆ. ಎಲ್ಲ ಮರಗಿಡಗಳಲ್ಲೂ ಹೊಸ ಎಲೆ, ಹೊಸ ಹೂವು, ಹೊಸ ಹುರುಪು, ಹೊಸ ಹುಟ್ಟು ಸುಡುಬಿಸಿಲಿಗೆ ಮನುಷ್ಯ ಮುದುಡಿ ಮನೆ ಸೇರಬೇಕೆಂದಾಗ ಮರಗಿಡಗಳು ಉರಿಬಿಸಿಲಿಗೆ ಮೈಯೊಡ್ಡಿ ಸುಖಿಸುತ್ತವೆ. ಬಳಲಿ ಬೆಂಡಾದ ಮನುಷ್ಯನಿಗೆ ಸುಖದ ನೆರಳು ನೀಡುತ್ತವೆ.

ಬುದ್ಧ-ಬಸವ-ಅಂಬೇಡ್ಕರ್ ಇವರುಗಳೆಲ್ಲ ಇಂಥ ಮರಗಳಿದ್ದ ಹಾಗೆ. ಜಗದ ಜಂಜಡಗಳನ್ನೆಲ್ಲ ಉಂಡು ನೆಮ್ಮದಿಯ ನೆರಳನ್ನು ನೀಡಿದವರು. ಯಾವುದೇ ಲಾಭಕ್ಕಾಗಿ, ಸ್ವಾರ್ಥಕ್ಕಾಗಿ ಏನನ್ನೂ ಮಾಡಿದವರಲ್ಲ. ತಮಗಿದ್ದ ಅಥವಾ ಒದಗಿಬಂದ ಸಕಲ ಸೌಭಾಗ್ಯಗಳನ್ನು ತೊರೆದ ಜಂಗಮರು. ಮನುಕುಲದ ಕಷ್ಟಕಾರ್ಪಣ್ಯಗಳಿಗಾಗಿ ಮರುಗಿದವರು. ನೆಮ್ಮದಿಯ ಸಮಾಜಕ್ಕಾಗಿ ಹಂಬಲಿಸಿದವರು. ಶೋಷಣೆಯಿಲ್ಲದ ಸಮ ಸಮಾಜಕ್ಕಾಗಿ-ಸಮಬಾಳಿಗಾಗಿ ಕನಸಿದವರು. ಅದಕ್ಕಾಗಿ ಜೀವಮಾನವಿಡೀ ಹೋರಾಡಿದವರು.

ನಿಜವಾದ ಜೀವನ ಅಂದರೆ ನಿರಂತರ ಹೋರಾಟವೇ. ಹೋರಾಟವಿಲ್ಲದ ಬದುಕು ಅರ್ಥಹೀನ. ಬೀಜವೊಂದಕ್ಕೆ ಮೊಳೆತು ಮರವಾಗುವ ಅದಮ್ಯ ಚೈತನ್ಯವಿದ್ದರೂ ನೀರು ಗೊಬ್ಬರವಿಲ್ಲದಿದ್ದರೆ ಅದು ನಿಷ್ಪ್ರಯೋಜಕ. ಮನುಷ್ಯನ ಬದುಕೂ ಅಂಥದ್ದೆ. ಅರಿವು ಮತ್ತು ಹೋರಾಟ ಎರಡೂ ಇಲ್ಲದಿದ್ದರೆ ಮನುಷ್ಯನೂ ನಿಷ್ಪ್ರಯೋಜಕ. ಬುದ್ಧ ಹುಡುಕ ಹೊರಟಿದ್ದೂ ಇದನ್ನೇ. ಬಸವ-ಅಂಬೇಡ್ಕರ್ ಹೋರಾಡಿದ್ದುದೂ ಇದಕ್ಕಾಗಿಯೇ. ಬುದ್ಧನ ಮುಂದುವರಿಕೆಯಾಗಿ ಬಸವಣ್ಣ ಬಸವನ ಮುಂದುವರಿಕೆಯಾಗಿ ಅಂಬೇಡ್ಕರ್ ಹೋರಾಟವನ್ನು ಮುಂದುವರಿಸಿದರು.

ನಿಂತ ನೀರಾಗಿದ್ದ ಭಾರತೀಯ ಸಮಾಜವನ್ನು ಚಲನಶೀಲಗೊಳಿಸಿದ್ದೇ ಈ ಮಹಾನುಭಾವರ ಹೋರಾಟ. ನಿರಂತರ ಹಿಂಸೆ, ದೌರ್ಜನ್ಯದಿಂದ ತುಂಬಿಹೋಗಿದ್ದ ಬುದ್ಧ ಪೂರ್ವದ ಭಾರತೀಯ ಸಮಾಜ ಬುದ್ಧನ ಪ್ರೀತಿ-ಕರುಣೆಯ ಹೋರಾಟಕ್ಕೆ ಮಣಿಯಿತು. ಪುರೋಹಿತಶಾಹಿಯ ಅಟ್ಟಹಾಸ-ಹಿಂಸೆಗೆ ಕೊನೆ ಹಾಡಿತು. ಯುದ್ಧಗಳು ನಿಂತವು. ರಾಜ-ಮಹಾರಾಜರು ಯುದ್ಧೋನ್ಮಾದದಿಂದ ವಿಮುಖರಾಗಿ ಪ್ರೀತಿ-ಕರುಣೆಯ ಪ್ರಸಾರಕರಾದರು. ಕಿತ್ತು ತಿನ್ನುವ ಪುರೋಹಿತ ವರ್ಗವೂ ಬುದ್ಧನ ಕಾರುಣ್ಯದ ಎದುರು ಶರಣಾಯಿತು. ಸಮ ಸಮಾಜದ ಕನಸು ಸಾಕಾರಗೊಂಡಿತು.

ಬುದ್ಧನ ಕಾಲಾನಂತರ ಪುರೋಹಿತ ವರ್ಗದ ಪಿತೂರಿ ಮತ್ತೆ ಬೆಳೆಯಲಾರಂಭಿಸಿತು. ಶಂಕರಾಚಾರ್ಯ ಮೊದಲಾದ ಪುರೋಹಿತಶಾಹಿಯ ವಾರಸುದಾರರು ಮತ್ತೆ ಸಮಾಜವನ್ನು ದಿಕ್ಕುಗೆಡಿಸಿದರು. ಹಿಂಸೆ-ದೌರ್ಜನ್ಯಗಳು ಮತ್ತೆ ಪ್ರಾಬಲ್ಯವನ್ನು ಗಳಿಸಿದವು. ಬೌದ್ಧಾನುಯಾಯಿಗಳಲ್ಲಿ ಪುರೋಹಿತಶಾಹಿ ನುಸುಳಿತು. ಬುದ್ಧ ಸಂಘ ಒಡೆಯಿತು. ಶಾಖೆಗಳಾಯಿತು. ಬೌದ್ಧ ಪುರೋಹಿತರು ಹುಟ್ಟಿಕೊಂಡರು. ಸಮಾಜ ವಿಘಟನೆಯತ್ತ ಮುಖ ಮಾಡಿತು. ಮನುಷ್ಯ ಮನುಷ್ಯರನ್ನು ಕಿತ್ತು ತಿನ್ನುವ ಚಾಳಿ ಆರಂಭವಾಯಿತು. ಶ್ರೇಷ್ಠ ಕನಿಷ್ಠರೆಂಬ ಸಿದ್ಧಾಂತ ಮತ್ತೆ ಸಮಾಜದಲ್ಲಿ ಮೈದಾಳಿ ಇಡೀ ಭಾರತೀಯ ಬದುಕು ಅಧಃಪತನಕ್ಕೆ ಗುರಿಯಾಯಿತು.

೧೭೦೦ ವರ್ಷಗಳ ನಂತರ ಬಸವಣ್ಣ ಕುತ್ಸಿತ ಸಮಾಜದ ವಿಮುಕ್ತಿಗಾಗಿ ಹೋರಾಟ ರೂಪಿಸಿದರು. ದುಡಿಮೆಯೇ ದೇವರು ಅಂದರು. ಅಸಮಾನತೆಯ ದಳ್ಳುರಿಯಲ್ಲಿ ಬೆಂದು ಬಸವಳಿದು ಹೋಗಿದ್ದ ಸಮಾಜಕ್ಕೆ ಸಮಾನತೆಯ ತಂಪನ್ನು ಎರೆದರು. ಶರಣಧರ್ಮ ರೂಪಿಸಿದರು. ಹುಟ್ಟಿನಿಂದ ನಿರ್ಧಾರವಾಗುತ್ತಿದ್ದ ಮನುಷ್ಯನ ಅರ್ಹತೆಗೆ ಕೊಡಲಿ ಪೆಟ್ಟು ನೀಡಿದರು. ಪುರೋಹಿತರ ಅಡ್ಡೆಗಳಾಗಿದ್ದ ದೇವಾಲಯಗಳನ್ನು ತಿರಸ್ಕರಿಸಿ 'ದೇಹವೇ ದೇಗುಲ' ಎಂದರು. ಹೊಟ್ಟೆಪಾಡಿನ ಪೂಜಾರಿಗಳಿಗೆ ಶ್ರಮ ಜೀವನದ ಮೂಲಪಾಠ ಹೇಳಿಕೊಟ್ಟರು. ಶ್ರಮ ಸಂಸ್ಕೃತಿಯ ಹೊಸ ಸಮತಾ ಸಮಾಜವನ್ನೇ ಕಟ್ಟಿದರು.

ಕ್ರಮೇಣ ಬಸವಣ್ಣ ಪುರೋಹಿತರ ಕುತಂತ್ರಕ್ಕೆ ಬಲಿಯಾಗಬೇಕಾಯಿತು. ಬಸವಣ್ಣ ಕಟ್ಟಿದ ಶರಣ ಸಮಾಜ ವೀರಶೈವರಾಗಿ-ಲಿಂಗಾಯಿತರಾಗಿ- ಪುರೋಹಿತಶಾಹಿಯ ಮಂತ್ರಗಳಿಗೆ ಮರುಳಾಗಿ ಮತ್ತೆ ಕುರೂಪಿ ಸಮಾಜದಲ್ಲಿ ಕರಗಿಹೋಯಿತು.

೨೫೦೦ ವರ್ಷಗಳ ನಂತರ ಅಂಬೇಡ್ಕರ್ ಹುಟ್ಟಿದರು. ಹುಟ್ಟಿನಿಂದಲೇ ಅಸ್ಪೃಶ್ಯರಾದ ಅಂಬೇಡ್ಕರ್‌ಗೆ ಬುದ್ಧ, ಬಸವಣ್ಣನವರಿಗಿದ್ದ ಸಾಮಾಜಿಕ ಅನುಕೂಲತೆಗಳು ಇರಲಿಲ್ಲ. ಆದರೂ ಅವರು ತಮ್ಮ ಸುತ್ತ ಕವಿದಿದ್ದ ಕರಾಳ ಮುಸುಕುಗಳನ್ನೆಲ್ಲ ಕಿತ್ತೆಸೆದು ಎದ್ದರು. ಅಪ್ರತಿಮ ಅರಿವು-ಪಾಂಡಿತ್ಯ ಗಳಿಸಿ ಭಾರತೀಯ ಸಮಾಜವನ್ನು ಅಸಮಾನತೆಯ, ಅಮಾನವೀಯ ಸ್ಥಿತಿಯಿಂದ ಮೇಲೆತ್ತಲು ನಿರಂತರ ಹೋರಾಟವನ್ನು ರೂಪಿಸಿದರು. ಕೋಟಿ ಕೋಟಿ ಮೂಕ ಬಾಯಿಗಳಲ್ಲಿ ಮಾತು ಹೊರಡಿಸಿದರು! ಮಾನಸಿಕ ಅಸಮತೋಲನದಿಂದ ನರಳುತ್ತಿದ್ದ ಭಾರತೀಯ ಸಮಾಜಕ್ಕೆ ಅರಿವು-ಜಾಗೃತಿ ಮತ್ತು ಹೋರಾಟದ ಮಹಾಚಿಕಿತ್ಸೆಯನ್ನು ನೀಡಿದರು. ಭಾರತೀಯ ಸಮಾಜಕ್ಕೆ ನಾಗರಿಕರಂತೆ ಬದುಕಲು ಸಂವಿಧಾನ ರಚಿಸಿಕೊಟ್ಟರು.

೨೫೪೮ ವರ್ಷಗಳ ನಂತರ ೨೧ನೇ ಶತಮಾನದ ಹೊಸ್ತಿಲಲ್ಲಿರುವ ಈ ಕ್ಷಣ, ಈ ಮೂರೂ ಜನ ಮಹಾತ್ಮರ ಆದರ್ಶ ಹೋರಾಟಗಳನ್ನು ನುಂಗಿ ನಾಶಪಡಿಸುವ ಹುನ್ನಾರಗಳನ್ನು ನಾವು ಕಾಣುತ್ತಿದ್ದೇವೆ. ಬುದ್ಧಪೂರ್ವ ಭಾರತೀಯ ಸಮಾಜದಲ್ಲಿದ್ದ ಅಮಾನವೀಯ ಬದುಕು ಮತ್ತೆ ಕಾಣಿಸಿಕೊಳ್ಳತೊಡಗಿದೆ. ಪುರೋಹಿತರ ದರ್ಬಾರು ಬೆಳೆಯುತ್ತಿದೆ. ಜನರೆಲ್ಲ ಅವಕಾಶವಾದಿಗಳಾಗತೊಡಗಿದ್ದಾರೆ. ಎಲ್ಲ ಪ್ರತಿಭಟನೆ-ಹೋರಾಟಗಳನ್ನು ನುಂಗಿ ನೀರು ಕುಡಿದು ಅರಗಿಸಿಕೊಳ್ಳುವ ಪುರೋಹಿತಶಾಹಿ ಮನೋಧರ್ಮ ಸಮಾಜದ ಆದರ್ಶವಾಗುವ ಅಪಾಯ ಎದುರಾಗುತ್ತಿದೆ. ಇಡೀ ಸಮಾಜ ಹತಾಶೆ ಮತ್ತು ಸಿನಿಕತನದಿಂದ ನರಳುತ್ತಿದೆ. ನಾಗರಿಕ ಬದುಕು ವಿನಾಶದ ಅಂಚಿಗೆ ಬಂದು ನಿಂತಿದೆ.

ಈಗ ಬುದ್ಧರು ಹುಟ್ಟಿ ಬರಬೇಕಾಗಿದೆ. ಬಸವಣ್ಣ-ಅಂಬೇಡ್ಕರರು ಹುಟ್ಟಿ ಬರಬೇಕಾಗಿದೆ. ಬೌದ್ಧರು-ಶರಣರು-ಅಂಬೇಡ್ಕರ್‌ವಾದಿಗಳೂ ಅವಕಾಶವಾದಿಗಳಾಗುತ್ತಿರುವ ಈ ಸಂದರ್ಭದಲ್ಲಿ ನಮ್ಮೊಳಗೇ ಬುದ್ಧ-ಬಸವ-ಅಂಬೇಡ್ಕರರು ಬೆಳೆಯಬೇಕಾಗಿದೆ. ಬೌದ್ಧರಾಗುವುದಕ್ಕಿಂತ ಬುದ್ಧರಾಗುವುದು ಇಂದಿನ ಅನಿವಾರ್ಯವಾಗಿದೆ. ಶರಣರಾಗುವುದಕ್ಕಿಂತ ಬಸವರಾಗುವುದು ಇಂದಿನ ತುರ್ತಾಗಿದೆ. ಅಂಬೇಡ್ಕರ್‌ವಾದಿಗಳಿಗಿಂತ ಅಂಬೇಡ್ಕರ್ ಆಗುವುದೇ ಸಮಸ್ಯೆಗೆ ಸೂಕ್ತ ಪರಿಹಾರವಾಗಲಿದೆ.

ಬರಲಿ ನೂರು ಬುದ್ಧರು!
ಬರಲಿ ನೂರು ಬಸವರು!!
ಬರಲಿ ನೂರು ಅಂಬೇಡ್ಕರರು!!!

○ ಇಂದೂಧರ ಹೊನ್ನಾಪುರ

ಅಸಹನೆ, ಅತೃಪ್ತಿಯಲ್ಲ; ನೋವಿನ ಅಭಿವ್ಯಕ್ತಿ

ಪ್ರತಿಕ್ರಿಯೆ

'ಅಂಬೇಡ್ಕರ್ ಗಾಂಧೀಕರಣದ ಅಪಾಯಗಳು' ಕುರಿತಂತೆ ಏಪ್ರಿಲ್ ಸಂಚಿಕೆಯಲ್ಲಿ ಪ್ರಕಟವಾದ ಲೇಖನಕ್ಕೆ ಅರವಿಂದ ಚೊಕ್ಕಾಡಿಯವರು ಪ್ರತಿಕ್ರಿಯಿಸಿದ್ದರು. ಚೊಕ್ಕಾಡಿಯವರ ಪ್ರತಿಕ್ರಿಯೆ ವಸ್ತುನಿಷ್ಠ ನಿಲುವಾಗಿದ್ದರೂ ಅವರು ವ್ಯಕ್ತಪಡಿಸುವ ಕೆಲವು ವಿಚಾರಗಳು ಈ ಲೇಖಕರ ಅಸಮಾಧಾನಕ್ಕೆ ಕಾರಣವಾಗಿವೆ. ದಲಿತರ ಅಸಹನೆಯನ್ನು ಅತೃಪ್ತಿಯ ಪ್ರತಿಕ್ರಿಯೆ ಎನ್ನದೆ ಅದು ಐತಿಹಾಸಿಕವಾದ ನೋವಿನ ಅಭಿವ್ಯಕ್ತಿ ಎಂದು ಲೇಖಕರು ಇಲ್ಲಿ ವಾದಿಸಿದ್ದಾರೆ.

○ನಾಗರಾಜ್ ಹೆತ್ತೂರು

ಏಪ್ರಿಲ್ ಸಂಚಿಕೆಯಲ್ಲಿ 'ಸಣ್ಣಂಗಿ ರಾಜ'ರ 'ಅಂಬೇಡ್ಕರ್ ಗಾಂಧೀಕರಣದ ಅಪಾಯಗಳು ಇದಕ್ಕೆ ಅರವಿಂದ ಚೊಕ್ಕಾಡಿ ಪ್ರತಿಕ್ರಿಯಿಸಿದ್ದಕ್ಕೆ ಪ್ರತಿಕ್ರಿಯೆ. ಇವರ ಕೆಲವು ವಸ್ತುನಿಷ್ಠತೆಯ ನಿಲುವುಗಳಿಗೆ ಕೃತಜ್ಞತೆಗಳು. ಆದರೆ ಇವರ ಕೆಲವು ವಿಚಾರಗಳು ನಮ್ಮಲ್ಲಿ ಕೆಲವು ಅಸಮಾಧಾನಕ್ಕೆ ಕಾರಣವಾಗಿದೆ.

ಇವರು ಜನಾಂಗೀಯ ಅಸಹನೆಯನ್ನು ಹೇಳುತ್ತ ಸಣ್ಣಂಗಿ ರಾಜ, ಮೊಗಳ್ಳಿ ಗಣೇಶ್‌ರವರನ್ನು ಕೂಡ ಜನಾಂಗೀಯ ಅಸಹನೆಯಲ್ಲಿಯೇ ನೋಡಿದ್ದಾರೆ. ಇದಕ್ಕೆ ದಲಿತರು ಎಂಬ ಕಾರಣ ಹೌದು. ದಲಿತರು ಬ್ರಾಹ್ಮಣರೆಲ್ಲರನ್ನು ಬ್ರಾಹ್ಮಣಶಾಹಿ ಎಂದು ದೂರತ್ತಾರೆಂದು ಹಾಗೆ ದಲಿತರನ್ನು ಕೂಡ ಬ್ರಾಹ್ಮಣರು ಬ್ರಾಹ್ಮಣ ವಿರೋಧಿ ಎಂದು ಗುರುತಿಸುವ ಪ್ರವೃತ್ತಿ ಕೆಲವು ಮಂದಿಗೆ ಬಿಟ್ಟು ಉಳಿದೆಲ್ಲ ಬ್ರಾಹ್ಮಣರಲ್ಲಿದೆ. ಈ ರೀತಿಯ ಕಿರುಕುಳವನ್ನು ಪ್ರತಿಯೊಂದು ಕ್ಷೇತ್ರದಲ್ಲೂ ದಲಿತರು ಅನುಭವಿಸಿದ್ದಾರೆ.

ನೀವು ಹೇಳಿರುವ ಚಿಂತನೆಯ ವ್ಯಾಪ್ತಿ ಕಿರಿದಾಗಿದ್ದಷ್ಟೂ ಹೆಚ್ಚು ಖಚಿತ ವ್ಯಾಖ್ಯಾನ ಕೊಡಬಹುದು ಅಂದಿದ್ದೀರಿ ಇದು ಹೇಗೆ? ವಿಶಾಲ ಚಿಂತನೆಗಳು ಖಚಿತತೆ ವಸ್ತು ನಿಷ್ಠವಾಗಿರುತ್ತದೆಂದು ತಿಳಿದಿದವರು ಹಾಗೆ ದಲಿತರಿಗೆ ಬೇರೆಯ ಜಾತಿಯ ಜನರ ಅನುಕಂಪ ವಾಸ್ತವದ ಬದುಕಿನ ಕಷ್ಟಗಳಿಗೆ ಮಾರ್ಗದರ್ಶನ ಸಹಾಯವಾಗದ, ಆ ರೀತಿಯ ಅನುಕಂಪ ಬೇಡ. ಆ ರೀತಿಯ ಅನುಕಂಪವೇ ದಲಿತ ಹೆಣ್ಣುಮಕ್ಕಳ ಮಾನಹರಣ, ಜೀತ, ದೌರ್ಜನ್ಯಕ್ಕೆ ಕಾರಣವಾಗಿರುವುದು ಸತ್ಯ. ಈ ರೀತಿಯ ಅನುಕಂಪವೇ ಗಾಂಧೀಜಿಯ ಅನುಕಂಪ. ನೀವು ಹೇಳಿದಂತೆ ದಲಿತರ ನಿರುದ್ಯೋಗ ತಲ್ಲಣಗಳು ಅದರ ನೂರು ಪಟ್ಟು ಹೆಚ್ಚಿವೆ. ಇದೇಕೆ ನಿಮಗೆ ಅಷ್ಟು ಪ್ರಮಾಣದಲ್ಲಿ ಪರಿಣಾಮ ಬೀರುವುದಿಲ್ಲ. ಇಂದು ದಲಿತರು ವಿದ್ಯಾವಂತರಾಗಿದ್ದರೂ, ನೌಕರಿ ಸಿಗದಿದ್ದಾಗ ಅತ್ತ ಉಳಲು ಭೂಮಿಯೂ ಇಲ್ಲದೆ, ಸ್ವಂತ ಬಂಡವಾಳವು ಇಲ್ಲದಿರುವ ಸ್ಥಿತಿ ಇದೆ. ನೀವೆ ಹೇಳಿರುವಂತೆ ಖಾಸಗಿ ಕ್ಷೇತ್ರದಲ್ಲಿ ಬಂಡವಾಳದ ಒಡೆತನ ಮೇಲು ಜಾತಿಯವರ ಕೈಯಲ್ಲಿದೆ. ಅವರು ದಲಿತ ಯುವಕರನ್ನು ಯುವತಿಯರನ್ನು ಕೆಲಸಕ್ಕೆ ತೆಗೆದುಕೊಳ್ಳಲು ಸಿದ್ದರಿಲ್ಲ ಅಂದಿರುವುದು ಇಂತಹ ಸ್ಥಿತಿಯಲ್ಲಿ ಯಾರ ತಲ್ಲಣಗಳು ಭಯಾನಕವಾಗಿರುವುವು, ಗಂಭೀರ ವಾಗಿರುವುದು ಬದುಕಿನ ಅಸ್ಥಿತ್ವಕ್ಕೆ ಒಂದು ಸವಾಲಾಗಿರುವುದು ನೀವೆ ಯೋಚಿಸಿ.

ದಲಿತರದು ದುಷ್ಟತನದ ವಿರುದ್ದದ ಹೋರಾಟವೇ ಹೊರತು ಜನಾಂಗದ ವಿರುದ್ದವಲ್ಲ ಅಂದಿರುವುದು. ಇದು ದಲಿತರಿಗಷ್ಟೇ ಅಲ್ಲ ಈ ದೇಶದ ಪ್ರತಿಯೊಬ್ಬ ನಾಗರೀಕನ ಹಕ್ಕು ಕೂಡ. ಇದನ್ನು ನೀವು ಸೀಮಿತ ಜನಾಂಗಕ್ಕೆಂದು ಗುರುತಿಸುತ್ತಿದ್ದೀರಿ. ಇಂತಹ ನಿಮ್ಮ ಊಹೆ ತಪ್ಪಲ್ಲವೇ?

ಮನಃ ಪರಿವರ್ತನೆ ದಲಿತರಿಗಿಂತ ಮೇಲ್ವರ್ಗದ ಜನರಲ್ಲಿ ಆಗಬೇಕು. ಶೋಷಿಸುವವರು ಮೇಲ್ವರ್ಗದವರು. ಅದೇ ರೀತಿ ಕೆಲವರಿಗೆ ದಲಿತರ ಮೇಲೆ ಪ್ರೀತಿ ಇರುತ್ತದೆ. ಆದರೆ ಅವರಿಟ್ಟುಕೊಂಡ ಸಂಪ್ರದಾಯ ಅಸ್ಪೃಶ್ಯತೆಯನ್ನು ಆಚರಿಸುವಂತೆ ಮಾಡುತ್ತದೆ. ಇದ್ಯಾವ ರೀತಿಯ ಒಪ್ಪುವಂತಹ ಮಾತು ನೀವೆ ಹೇಳಿ? ಇಂತಹವುಗಳ ವಿರುದ್ದ ದಲಿತರು ಧ್ವನಿ ಎತ್ತುವುದು ದಲಿತರ ತಪ್ಪೆ?

ನೀವು ಸಂಪ್ರದಾಯ ವ್ಯವಸ್ಥೆಯ ವಿರುದ್ಧ ಹೋರಾಡಬೇಕು ವ್ಯಕ್ತಿ ವಿರುದ್ಧವಲ್ಲ. ಒಂದು ವ್ಯವಸ್ಥೆಯಾಗಲಿ ಸಂಪ್ರದಾಯವಾಗಲಿ ಬೇರೊಂದು ಲೋಕದಿಂದ ಬಂದಿರುವುದಿಲ್ಲ. ವ್ಯಕ್ತಿ ಈ ಸಮಾಜದ ಮೇಲೆ ನಿರಂತರ ಸುಳ್ಳಿನ ಕಂತೆಗಳ ಮೂಲಕ ಹೇರಿರುವುದು. ವ್ಯಕ್ತಿ ಸಂಪ್ರದಾಯವನ್ನು ಉಳಿಸಿಕೊಂಡು ಬಂದಿದ್ದಾನೆ ಹೊರತು, ಸಂಪ್ರದಾಯ ವ್ಯಕ್ತಿಯನ್ನು ಉಳಿಸಿಕೊಂಡು ಬಂದಿಲ್ಲ. ಆದ್ದರಿಂದ ಸಂಪ್ರದಾಯವನ್ನು ವಿರೋಧಿಸುವ ಹೋರಾಟವು ದಲಿತರದಾಗಿದೆ.

ವಾಸ್ತವವಾಗಿ ಬ್ರಾಹ್ಮಣೇತರರೆಲ್ಲರೂ ದಲಿತರನ್ನು ಸರಿಸಮನಾಗಿ ನೋಡಿಕೊಳ್ಳುತ್ತಿದ್ದಾರೆಯೇ ಎಂದು ಪ್ರಶ್ನಿಸಿದ್ದೀರಿ? ಇಲ್ಲ. ನೋಡಿಕೊಳ್ಳದ ರೀತಿ ವ್ಯವಸ್ಥಿತ ಕುತಂತ್ರ ಹುನ್ನಾರಗಳನ್ನು ಬ್ರಾಹ್ಮಣರು ಚಾತುರ್ವರ್ಣ ವ್ಯವಸ್ಥೆಯ ಮೂಲಕ ತಂದಿದ್ದಾರೆ. ಶೂದ್ರರಾದವರು ಒಂದುಗೂಡಬಾರದೆಂದು ದಲಿತರನ್ನು ಅಸ್ಪೃಶ್ಯರ ಹೆಸರಿನಲ್ಲಿ ಶೂದ್ರರಿಗಿಂತ ಸ್ವಲ್ಪ ಕೆಳಗಿಟ್ಟಿರುವುದು. ಕೆಲವು ಶೂದ್ರ ಜಾತಿಗಳಿಗೆ ಹೋಲಿಸಿದಾಗ ದಲಿತರಿಗೆ ಆರ್ಥಿಕ, ಸಾಮಾಜಿಕವಾಗಿ ಅವರಷ್ಟು ಸ್ಥಾನಮಾನಗಳಿಲ್ಲ ಮತ್ತು ಬ್ರಾಹ್ಮಣರಿಗೆ ಜಾಡಿಸಿದಂತೆ ಶೂದ್ರರಿಗೆ ಜಾಡಿಸಲು ಆಗುವುದಿಲ್ಲ ಅಂದಿದ್ದೀರಿ. ಹಾಗೆಯೇ ಬ್ರಾಹ್ಮಣರು ಕೂಡ ದಲಿತರೊಂದಿಗೆ ನೇರವಾಗಿ ಕಿತ್ತಾಡುವುದಿಲ್ಲ. ಆದರೆ ತಮ್ಮ ಗೋಸುಂಬೆ ಬುದ್ದಿಯ ಮೂಲಕ ದಲಿತರ ವಿರುದ್ಧ ಶೂದ್ರರನ್ನು ಎತ್ತಿಕಟ್ಟುವ ಕೆಲಸವನ್ನು ಶತಮಾನಗಳಿಂದ ಆಚರಿಸಿಕೊಂಡು ಅದು ಅಳಿಯದಂತೆ ಕಾಪಾಡಿಕೊಂಡು ಬಂದಿದ್ದಾರೆ. ಇಲ್ಲಿ ಯಾರು ಗೋಸುಂಬೆ ಬುದ್ದಿಯವರು ನೀವೆ ಹೇಳಿ?

ಬೌದ್ಧಿಕವಾಗಿ ಜನಾಂಗಿಯ ಅಸಹನೆ ವ್ಯಕ್ತಪಡಿಸಿದವರು ನಾಳೆ ಪೂರ್ಣಾಧಿಕಾರಕ್ಕೆ ಬಂದರೆ ಬ್ರಾಹ್ಮಣರನ್ನೆಲ್ಲ ಕೂಲ್ಲಿ ಎಂದು ಆದೇಶಿಸಲಾರರೆಂಬುದಕ್ಕೆ ಖಾತ್ರಿ ಏನು? ಎಂದು ಕೇಳಿದ್ದರಿ. ಏಕೆ ನಿಮಗೆ ಈ ರೀತಿಯ ಗಾಬರಿ ಮತ್ತು ಊಹೆ. ಶತಮಾನಗಳಿಂದ ದಲಿತರು ಎಲ್ಲ

ಅಂಬೇಡ್ಕರ್ ವಿಚಾರ ಹೇಳುವಾಗ ಗಾಂಧೀಜಿಯನ್ನು ಟೀಕಿಸಬೇಕಾಗಿಲ್ಲ ಅಂದಿದ್ದು ಸತ್ಯ. ಇದರ ಅಗತ್ಯವೂ ಕೂಡ ದಲಿತರಿಗೆ ಯಾವಾಗಲೂ ಬೇಕಾಗಿಲ್ಲ.

ಆದರೆ ಎಷ್ಟೇ ವಿಶಾಲವಾಗಿ ನೋಡಿದರೂ ಇತಿಹಾಸದ ಘಟನೆಗಳನ್ನು ಮರೆಯಲಾಗುವುದಿಲ್ಲ. ಅವುಗಳನ್ನು ಕೆದಕುತ್ತ ಕೂರುವುದು ವರ್ತಮಾನಕ್ಕೆ ಭವಿಷ್ಯತ್‌ಗೆ ಸರಿಯೂ ಅಲ್ಲ. ಆದರೆ ಗಾಂಧೀಜಿಯವರ ಒಂದು ತಪ್ಪು ನಿರ್ಧಾರ ದಲಿತರ ಪಾಲಿಗೆ ನೂರು ತಪ್ಪು ನಿರ್ಧಾರಗಳಿಗೆ ಸಮ. ಆದ್ದರಿಂದ ದಲಿತರು ಗಾಂಧೀಜಿಯನ್ನು ಒಬ್ಬ ಥಿಂಕರ್ ಬದಲಾಗಿ ಒಬ್ಬ ಸವರ್ಣಿಯನ್ನಾಗಿ ನೋಡುತ್ತಿದ್ದಾರೆ ಅನ್ನಿಸುತ್ತದೆ.

ಲೋಹಿಯಾ ಕೂಡ ಒಂದು ಕಡೆ ಹೇಳುತ್ತಾರೆ. 'ಗಾಂಧೀಜಿ ಈ ದೇಶದ ವಿಭಜನೆಯ ಸಂದರ್ಭದಲ್ಲಿ ದಲಿತರಿಗೆ ಪ್ರತ್ಯೇಕ ರಾಜಕೀಯ ಹಕ್ಕು ನೀಡುವಲ್ಲಿ ಸರಿಯಾಗಿ ನಡೆದುಕೊಂಡಿದ್ದರೆ ಏಸುಗಿಂತ ಸ್ವಲ್ಪ ಮೇಲ್ಮಟ್ಟದಲ್ಲಿರುತ್ತಿದ್ದರು ಎಂದಿದ್ದಾರೆ'. ಈ ದೃಷ್ಟಿಯಲ್ಲಿ ಗಾಂಧೀಜಿಯ ಸಮಗ್ರ ದೃಷ್ಟಿ ಮತ್ತು ಅಸ್ಪೃಶ್ಯತೆ ನಿವಾರಣೆ ಬಗ್ಗೆ ಗೊಂದಲಗಳಿವೆ. ದಲಿತರ ಆರ್ಥಿಕ, ರಾಜಕೀಯ, ಸಾಮಾಜಿಕ ನಿಲುವುಗಳನ್ನು ಏಕೆ ವಿರೋಧಿಸಿದರು? ಗಾಂಧೀಜಿಗೆ ಪ್ರಾಮಾಣಿಕವಾಗಿ ಅಸ್ಪೃಶ್ಯತೆ, ಜಾತಿ ನಿವಾರಣೆಯ ದೃಷ್ಟಿಯಿದ್ದರೆ ದಲಿತರ ಪ್ರತ್ಯೇಕ ರಾಜಕೀಯ ಮತದಾನದ ಹಕ್ಕು, ಅವರಿಗೆ ನ್ಯಾಯ ಒದಗಿಸುತ್ತದೆ ಎಂದು ಏಕೆ ತಿಳಿಯಲಿಲ್ಲ? ಏಕೆ ವಿರೋಧಿಸಿದರು? ಇಂತಹ ನಿಲುವುಗಳಿಗೆ ಇಂದಿನ ಗಾಂಧೀವಾದಿಗಳಾಗಲಿ, ಅಂಬೇಡ್ಕರ್‌ವಾದಿಗಳಾಗಲಿ ಸ್ಪಷ್ಟ ಉತ್ತರ ಕಂಡುಕೊಳ್ಳುವವರೆಗೂ ದಲಿತರಿಗೆ ಗಾಂಧೀಜಿ ವಿರೋಧಿಯಾಗಿ ಕಾಣುತ್ತಾರೆ.

ಇನ್ನೊಂದು ಬ್ರಾಹ್ಮಣ, ಯುವಕ / ಯುವತಿಯರಿಗೂ ಅವರ ತಲ್ಲಣಗಳನ್ನು ಹೇಳಿಕೊಳ್ಳಲು ಅವಕಾಶ ಕೊಡಿ ಅಂದದ್ದು ಸರಿ. ಆದರೆ

ಜನರಿಂದ ತುಳಿಸಿಕೊಂಡಿದ್ದಾರೆ. ಇವರಿಗೆ ತುಳಿಯುವವನ ಮನಸ್ಥಿತಿ, ತುಳಿಸಿಕೊಂಡವನ ಮನಸ್ಥಿತಿಗಳೆರಡೂ ಗೊತ್ತು. ಆದರೆ ಬ್ರಾಹ್ಮಣರಿಗೆ ತುಳಿಯುವ ಮನಸ್ಥಿತಿ ಮಾತ್ರ ಗೊತ್ತಿದೆ. ಆದ್ದರಿಂದಲೇ ದಲಿತರು ಮಾನಸಿಕವಾಗಿ ಇತರರಿಗಿಂತ ಬಲಿಷ್ಠರು. ಅವರಿಗೆ ಈ ರೀತಿಯ ವಿಕೃತ ಭಾವನೆಗಳು ಬರುವುದಿಲ್ಲ. ಅದು ಬುದ್ಧನ ತತ್ವದಲ್ಲಾಗಲಿ, ಅಂಬೇಡ್ಕರ್ ವಿಚಾರಗಳಲ್ಲಾಗಲಿ, ನಮ್ಮ ವಚನಕಾರರ ಆಶಯಗಳಲ್ಲಾಗಲಿ ಬಿಂಬಿತವಾಗಿಲ್ಲ. ದಲಿತರು ಕೂಡ ಹಾಗೆ ಬಿಂಬಿಸಿಕೊಳ್ಳುವುದಿಲ್ಲ. ಇಂತಹ ಕಲ್ಪನೆಗಳು ಮಾನಸಿಕವಾಗಿ ಗೊಂದಲಗಳಿದ್ದಾಗ ಮಾತ್ರ ಬರುತ್ತವೆ ಅನ್ನಿಸುತ್ತದೆ. ದಲಿತರದು ತಾಯತ್ತನದ ಹೃದಯ. ಈ ನಿಟ್ಟಿನಲ್ಲಿ ನಾವು ಮೊಗಳ್ಳಿಯವರ ವಿಚಾರಗಳನ್ನು ಗ್ರಹಿಸಿಕೊಂಡಿದ್ದೇವೆ. ಅದನ್ನು ನೀವು ಅಸಮಾನತೆ, ಅತೃಪ್ತಿ ಎಂದಿದ್ದೀರಿ ಇದು ಹೇಗೆ? ಒಬ್ಬ ತಾಯಿಯಾದವಳು ಎಲ್ಲ ಮಕ್ಕಳನ್ನು ಸಮಾನವಾಗಿ ಕಾಣುತ್ತಾಳೆ, ಹಾಲುಣ್ಣಿಸುತ್ತಾಳೆ. ಆದರೆ ಒಂದು ಮಗು ಎಲ್ಲರಿಗಿಂತ ಸ್ವಲ್ಪ ದುರ್ಬಲವಾದಾಗ ತಾಯಿಯಾದವಳು ದುರ್ಬಲ ಮಗುವಿನ ಯೋಗ ಕ್ಷೇಮ ಪಾಲನೆ ಪೋಷಣೆಗೆ ಹೆಚ್ಚು ಒತ್ತು ಕೊಡುತ್ತಾಳೆ. ಆ ರೀತಿ ದಲಿತರು ಬದುಕನ್ನು ಗ್ರಹಿಸಿರುವ ಮೊಗಳ್ಳಿಯವರನ್ನು ಅಸಹನೆ ಅತೃಪ್ತಿ ಜನಾಂಗಿಯ ಮನಸ್ಸು ಸಂವೇದನೆ ಎಂದು ಗುರುತಿಸಿದರೆ ಅದು ನಿಮ್ಮ ಗ್ರಹಿಕೆಯ ತಪ್ಪೆಂದು ಭಾವಿಸಿಕೊಳ್ಳುತ್ತೇವೆ.

ನಿಮ್ಮ ಊಹೆಯ ನೆಲೆಗಟ್ಟಿನಲ್ಲಿ ಇನ್ನೊಂದು ರೀತಿ ನೋಡಲು ಪ್ರಯತ್ನಿಸುವೆ. ಈ ದೇಶದಲ್ಲಿ ಬದಲಾವಣೆಗೆ ಅಗತ್ಯವಾಗಿ 'ಫ್ರಾನ್ಸ್‌ನಂತಹ ಕ್ರಾಂತಿ' ಈ ನೆಲಕ್ಕೆ ಬೇಕು ಅಂದಾಗ ಇಲ್ಲಿ ದಲಿತರು ಏನೂ ಮಾಡಲಾಗುವುದಿಲ್ಲ. ಅದು ಕಾಲದ ಒತ್ತಡ, ಪರಿಸ್ಥಿತಿ ಸನ್ನಿವೇಶ. ಆ ರೀತಿ ಪರಿವರ್ತನೆಗೆ ನಿಮ್ಮ ಊಹೆ ನಿಜವಾಗಬಹುದೇನೋ? ಅಂದುಕೊಂಡಿದ್ದೇವೆ. ಆಗ ಬ್ರಾಹ್ಮಣರಿಗೆ ಅಂಬೇಡ್ಕರ್ ಸಿದ್ಧಾಂತ ಅರ್ಥವಾಗುತ್ತದೆ. ನಿಮ್ಮ ಊಹೆಯಂತೆ ಆಗ ದಲಿತರು ಬ್ರಾಹ್ಮಣರಾಗಿರುತ್ತಾರೆ. ಬ್ರಾಹ್ಮಣರು ದಲಿತರಾಗಿರುತ್ತಾರೆ. ಅಲ್ಲವೆ? ಆಗ ಗೊತ್ತಾಗುತ್ತದೆ. ಏಕೆ ಈ ವ್ಯಕ್ತಿ ತನ್ನ ಸರ್ವಸ್ವವನ್ನು ದಲಿತ ಜನಾಂಗದ ಹಿಂದುಳಿದವರ ಏಳಿಗೆಗೆ ಸವೆಸಿದರು ಅದರಂತೆ ಬದುಕಿ ಕೊನೆಯುಸಿರೆಳೆದರು ಎಂದು.

ಇನ್ನೊಂದು, ಬ್ರಾಹ್ಮಣರು ಮತ್ತು ಮುಸ್ಲಿಂರ ಜನಸಂಖ್ಯೆ ಹೆಚ್ಚಾಗುತ್ತಿದೆ ಎಂಬುದು ಎರಡೂ ಸುಳ್ಳು ಸಂಗತಿಯಾಗಿದೆ. ೨೦೦೨-೦೩ರ ಒಂದು ಅಂಶದ ಪ್ರಕಾರ ೧೯೪೭ ರವರೆಗೆ ಹಿಂದೂ ದೇವಾಲಯಗಳು ಈ ದೇಶದಲ್ಲಿ ೯ ಸಾವಿರ ಇದ್ದವು. ೧೯೪೭ ರಿಂದ ಬಾಬರಿ ಮಸೀದಿ ಧ್ವಂಸದ ನಂತರ ೨೭ ಸಾವಿರ ಸಂಖ್ಯೆಗೆ ದೇವಾಲಯಗಳನ್ನು ಕಟ್ಟಿಕೊಂಡಿದ್ದಾರೆ. ಇದನ್ನು ನೀವು ಒಪ್ಪುತ್ತೀರಾ? ಈ ದೇವಾಲಯಗಳ ಆದಾಯ. ಇವುಗಳ ಎಲ್ಲಾ ಲಾಭಗಳು ಯಾವ ವರ್ಗದವರ ಹಿಡಿತದಲ್ಲಿವೆ, ಯಾರ ಜೀವನಕ್ಕೆ ಉದ್ಯೋಗ ಕಲ್ಪಿಸುತ್ತವೆ ನೀವೆ ಹೇಳಿ.

ನೀವು ಹೇಳುವ ಮಾತು ಒಪ್ಪುತ್ತೇವೆ. ಎಲ್ಲಾ ಜಾತಿಯ ಜನರಲ್ಲೂ ಸ್ವಲ್ಪ ಮಟ್ಟಿಗಾದರೂ ಬಡತನ ಇದೆ. ಅದು ದಲಿತರಿಗೆ ಹೋಲಿಸಿದಾಗ ಏನೂ ಅಲ್ಲ. ಅದಕ್ಕೆ ಅಂಬೇಡ್ಕರ್ ಈ ರೀತಿ ಹೇಳಿದ್ದು 'ಪ್ರಪಂಚದಲ್ಲಿ ಎಲ್ಲಾ ಕಾಲದಲ್ಲೂ ಎಲ್ಲಾ ಜಾತಿಗಳಲ್ಲಿಯೂ ಒಂದಲ್ಲ ಒಂದು ರೀತಿ ಬಡತನ ಉಳಿದಿರುತ್ತದೆ. ಆದರೆ ಅದನ್ನು ಒಂದೇ ವರ್ಗಕ್ಕೆ ದೂಡುವುದು ಅಪರಾಧವೆಂದು.''

ನಿಮ್ಮ ವಾದದ ಇನ್ನೊಂದು ಬಗೆಯಾದ ಪತ್ರಿಕೆ ಉದಾಹರಣೆ ಕೊಟ್ಟು ಹೇಳಿರುವುದು. ಈ ದೇಶದ ಬಂಡವಾಳ, ಕಾಲಕ್ಕೆ, ಸಮಯಕ್ಕೆ ತಕ್ಕಂತೆ ಅವಕಾಶವಾದಿತನದ ಗುಣಗಳು ೩% ಇರುವ ಬ್ರಾಹ್ಮಣರಿಗಲ್ಲದೆ ಬೇರೆ ಯಾರಿಗೂ ಬರುವುದಿಲ್ಲ ಎಂದು ಒಪ್ಪಿಕೊಂಡಿದ್ದೀರಿ. ಆದ್ದರಿಂದ ಅವರು ದಲಿತರು ಕೆಳವರ್ಗದವರನ್ನು ಮೆಚ್ಚಿಸಲು ಬರೆಯುತ್ತಾರೆ ವಿನಃ ಅದು ವಾಸ್ತವದಲ್ಲಿ ಯಾವ ಪರಿಣಾಮವನ್ನು ಮಾಡುವುದಿಲ್ಲ. ಈ ರೀತಿ ಪತ್ರಿಕಾ ಅಭಿವ್ಯಕ್ತಿ ಸ್ವಾತಂತ್ರ ದಲಿತರಿಗೆ ಬೇಡ. ಅದರಿಂದ ಆಗುವ ಪ್ರಯೋಜನಕ್ಕಿಂತ ನಷ್ಟವೇ ಜಾಸ್ತಿಯೆಂದು ಭಾವಿಸಿರುತ್ತೇವೆ. ೩% ರನ್ನು ಮೆಚ್ಚಿಸಲು ಬರೆಯುವುದಕ್ಕಿಂತ ಉಳಿದ ಬಹುಜನರ ಆಶೋತ್ತರಗಳನ್ನು ಅದು ಎತ್ತಿಹಿಡಿಯಬೇಕು. ಅದೇ ಸ್ವಾಭಿಮಾನ ೩% ಜನ ದಲಿತರು ತರುವ ಪತ್ರಿಕೆ ಓದಿದಾಗ ದೇಶ ಏನು ಮುಳುಗಿ ಹೋಗುವುದಿಲ್ಲ. ಬಹುಜನರು ಬ್ರಾಹ್ಮಣರ ಪತ್ರಿಕೆ ಓದದಿದ್ದಾಗ ಅವರ ವ್ಯಾಪಾರ ವರ್ಚಸ್ಸು ಕುಸಿಯುತ್ತದೆ ಹೊರತು ನಮಗಲ್ಲ.

ಮೊಗಳ್ಳಿಯವರ ಜಾಗತೀಕರಣದ ವಿಚಾರದ ಬಗ್ಗೆ ಹೇಳಿದ್ದೀರಿ ಅದೇ ಅಂತಿಮವೆಂದು ಭಾವಿಸಬೇಕಾಗಿಲ್ಲ. ತೇಜಸ್ವಿ ಕೂಡ ಜಾಗತೀಕರಣದ ಪರವಾಗಿ ವಾದಿಸಿದ್ದಾರೆ. ಇಷ್ಟು ಚಿಂತಿಸುವ ಪ್ರಗತಿಪರರು. ಬುದ್ಧಿಜೀವಿಗಳು ಎನಿಸಿಕೊಂಡವರು ಚರ್ಚೆ, ಗೋಷ್ಠಿಗಳನ್ನು ನಡೆಸುತ್ತಾರೆ. ಇಂದಿಗೂ ಒಂದು ಸ್ಪಷ್ಟ ನಿಲುವಿಗೆ ಬರಲಾಗುತ್ತಿಲ್ಲ. ಜಾಗತೀಕರಣ ಹಾಗೆ ಹೀಗೆ ಎಂದು ದೂರುತ್ತಾರೆ. ಅದನ್ನು ತಡೆಗಟ್ಟುವ ನೆಲೆಯಲ್ಲಿ ಒಂದು ಹುಲ್ಲುಕಡ್ಡಿಯಷ್ಟು ಪರಿಹಾರ ಕಂಡು ಬಂದಿಲ್ಲ. ಪ್ರಪಂಚದ ಸ್ಥಿತಿಗತಿಗಳಲ್ಲಿ, ಜಾಗತೀಕರಣ ಅಸ್ತಿತ್ವದಲ್ಲಿರುವಾಗ ಅದನ್ನು ವಿರೋಧಿಸುತ್ತಲೇ ಹೊಂದಿಕೊಳ್ಳಬೇಕೆಂಬ ಜಾಣ್ಮೆಯನ್ನು ಬೆಳೆಸಿಕೊಳ್ಳಬೇಕು. ಇಲ್ಲದಿದ್ದರೆ ಪರ್ಯಾಯವಾಗಿ ಬೇಗ ಪರಿಹಾರ ಕಂಡುಕೊಳ್ಳಬೇಕು. ಖಾಸಗೀಕರಣದ ವಿಚಾರದಲ್ಲೂ ಅಷ್ಟೆ. ಮುಂದೆ ಅದನ್ನು ಬದಲಾಯಿಸುವ ಹಂತಕ್ಕೆ ಬೆಳೆಯಬೇಕು ಅಷ್ಟೇ.

ಹಾಗೆಯೇ ಬ್ರಾಹ್ಮಣರು ಯಾವ ಕಾಲಕ್ಕೂ ಜಾತಿವ್ಯವಸ್ಥೆ ಹೋಗಲಾಡಿಸದಂತ ಸ್ಥಿತಿಗೆ ತಂದಿದ್ದಾರೆ. ಆದ್ದರಿಂದ ಸ್ಥಾನಾಂತರ ಮುಖ್ಯ ಹೊರತು ಸಮಾನತೆಯಲ್ಲ ಅಂದಿದ್ದೀರಿ. ಯಾವ ರೀತಿಯ ಸ್ಥಾನಾಂತರವೆಂದು ಗೊತ್ತಾಗುವುದಿಲ್ಲ. ಆರ್ಥಿಕವಾಗಿ ದಲಿತರಿಗೆ ಸಮಾನತೆ ಹಕ್ಕು ಸಿಗದಿರಬಹುದು. ನಮಗೆ ಮೊದಲು ಧಾರ್ಮಿಕ, ಸಾಮಾಜಿಕ, ರಾಜಕೀಯ, ಶೈಕ್ಷಣಿಕ ಸಮಾನತೆ ಬೇಕು, ನಂತರ ಆರ್ಥಿಕತೆ ಅದೇ ಸರಿಯಾಗುತ್ತದೆ. ಆದ್ದರಿಂದ ಇಂದು ಬ್ರಾಹ್ಮಣರು ದಲಿತರಿಗೆ ಹೋಲಿಸಿಕೊಂಡಾಗ ಹಾಲು ಅನ್ನ ಉಣ್ಣಬಹುದು. ಬಹುಮಂದಿ ದಲಿತರು ನಿರ್ಗತಿಕವಾಗಿ ಗಂಜಿಯನ್ನೇ ಕುಡಿಯುತ್ತಿರಬಹುದು. ನಮ್ಮ ಸ್ಥಿತಿಗತಿ, ನಮ್ಮ ಬದಲಾವಣೆ, ನಮ್ಮ ಕೈಯಲ್ಲಿಯೇ ಇದೆ ಎಂದು ನಂಬಿದ್ದೇವೆ. ಅಂಬೇಡ್ಕರ್ ಹೇಳಿದಂತೆ 'ಯಾವೊಬ್ಬ ಮಹಾತ್ಮ ಜನ್ಮ ತಾಳುವುದರಿಂದ ನಿಮ್ಮ ಕಷ್ಟ ಪರಿಹಾರವಾಗುವುದಿಲ್ಲ, ಅದು ಆ ಜನರ ಕೈಯಲ್ಲಿಯೇ ಇರುತ್ತದೆಂದು ಹೇಳಿದ್ದಾರೆ'. ಅದರಂತೆ ಇನ್ನು ಮುಂದೆಯೂ ಅಷ್ಟೆ ಗಂಜಿ ಕುಡಿದರೂ ಸ್ವಾಭಿಮಾನದಿಂದ ಬದುಕುತ್ತೇವೆ. ಇನ್ನೊಬ್ಬರ ಅನುಕಂಪಬೇಕೆಂದು ನಮ್ಮತನವನ್ನು (ದಲಿತರು) ನಾವು ಮಾರಿಕೊಳ್ಳಲು ಸಿದ್ಧವಿಲ್ಲ. □

ನೀ ಜೀವನೊಲುಮೆಯ ನೆರಳು



ನೆಟ್ಟ ಕಾಳಿಗೆ ಕರುಳ ಕರುಣೆ ಎರೆದು
ಎದೆಮಟ್ಟಕೆ ಬೆಳಸಿ ಹೆಮ್ಮರವಾಗಿದೆ
ಹಂಬಲಿಸಿ ಹಪಹಪಿಸಿ
ದುಃಖಿಸಿ ನೆರಳ ಕನಸಲೆ,
ಮನೆಯ ಮಾಡಿಗೆ ಬಾಗಿಲ ವಾಡಕ್ಕೆ
ಮಲಗೊ ಮಂಚಕೆ ಕೊನೆಗೆ
ಕೂರೊ ಬೆಂಚಿಗೆ ಅಲ್ಲದಿದ್ದರು
ಅಂಡಿನ ಮಣೆಗೆ ಆಗದಿದ್ದರು
ಬೆಳೆದು ಕುಡಿ ಕನಸುಗಳ ಮೀರಿ
ತನ್ನೆತ್ತರದಾಚೆ ಏರಿ,

ಎಲ್ಲಿಂದಲೋ ಬಂದ ಪಕ್ಷಿಗೆ
ಗೂಡು ನೀಡಿ! ಹಕ್ಕಿ ಹಾಡು ಹಾಡಿ
ನಲಿವ ಕಂಡು ಹಾಡು ಸಾವಿರ.........
ಆಗಲಿ ಎಂದು ನಿರಾಶ್ರಿತ
ನಿರಂತರತೆಯಲಿ ಆಶ್ರಿತತೆಯ
ಬಗ್ಗೆ ಹೆಮ್ಮೆಯ ಬುಗ್ಗೆ
ಕಂಡ ಜೀವವೆ,

ಹುಟ್ಟಿಗೆ ನೀ ಕಾರಣವಿರಬಹುದು
ನೆರಳ ಸೃಷ್ಟಿಗೆ ನೀ ಕಾರಣವೆ
ಬೆಟ್ಟ ಬಯಲುಗಳು, ಗುಡ್ಡ ಕಂದರಗಳು
ನದಿ ಸಾಗರ ಅವುಗಳ ಹೆತ್ತ
ನೀರ ಬೇರುಗಳು, ಅನಂತದೆದೆಯ
ನೀಲ ನಗೆಯ ಗಗನ ತಾರೆಯ
ಹಗಲ ಚಾದರದ ಬೆಳಕಿನಂದರದ
ಸೂರ್ಯ ಚಂದಿರರು ನಿನ್ನ ಸೋದರರು
ಅಷ್ಟೊಂದು ನೀ ಮಹಾ ಪೂರ್ವಿಕ

○ ಹರೀಶ್‌ಕಟ್ಟೆ ಬೆಳಗುಲಿ

ವಾಗ್ವಾದ

ತೊಗಾಡಿಯಾ,ಅಡ್ವಾನಿ, ಮೋದಿ ಮತ್ತು ಪೇಜಾವರರು ವ್ಯಾಖ್ಯಾನಿಸುತ್ತಿರುವ 'ಹಿಂದುತ್ವ' ಈ ದೇಶದಲ್ಲಿರುವ ಶೇಕಡ ೮೦ಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿರುವ ಹಿಂದೂಗಳ 'ಹಿಂದುತ್ವ' ಅಲ್ಲ. ಮುಸ್ಲಿಂ ಮೂಲಭೂತವಾದಿಗಳ 'ಜೆಹಾದ್' ಎಲ್ಲಾ ಮುಸಲ್ಮಾನರ ಪ್ರಾತಿನಿಧಿಕ ಸ್ವರೂಪವಲ್ಲ. ಅದೇ ರೀತಿ 'ದಲಿತ ಮೂಲಭೂತವಾದ' ಎಲ್ಲಾ ದಲಿತರ ಪ್ರಾತಿನಿಧಿಕ ಸ್ವರೂಪವಲ್ಲ. ಆದರೆ, ದಲಿತ ಮೂಲಭೂತವಾದ ಕೆಲವು ದಲಿತ ಸಮುದಾಯ ದಿಂದಲೇ ಬರುತ್ತಿದೆ. ಆದ್ದರಿಂದ ನನ್ನ ಚರ್ಚೆ, ಶೋಷಣೆಯ ವಿರುದ್ಧವಾದ ದಲಿತತ್ವದ ಬಗ್ಗೆ ಅಲ್ಲ. ಬದಲಾಗಿ ಶೋಷಣೆ ಪರವಾದ ದಲಿತ ಮೂಲಭೂತವಾದದ ಬಗ್ಗೆ.

○ ನಾರಾಯಣ ತಿರುಮಲಾಪುರ

ದಲಿತತ್ವ - ಮೂಲಭೂತವಾದ ಒಂದೇ ಅಲ್ಲ

ಇತ್ತೀಚೆಗೆ 'ಸಂವಾದ' ಮಾಸಪತ್ರಿಕೆ ಹೊರ ತಂದಿದ್ದ ವಾರ್ಷಿಕ ವಿಶೇಷಾಂಕ ಸಂಚಿಕೆಯಲ್ಲಿ ನಾನು ಬರೆದಿದ್ದ 'ದಲಿತ ಮೂಲಭೂತವಾದ: ಒಂದು ಚಿಂತನೆ' ಎಂಬ ಲೇಖನದ ಬಗ್ಗೆ ಶ್ರೀ ಎನ್.ಎಸ್. ಚಂದ್ರಣ್ಣ ರವರು ಪ್ರತಿಕ್ರಿಯೆ ನೀಡಿ ದಲಿತ ಚಿಂತನೆಗೂ ಮತ್ತು ಮೂಲಭೂತ ವಾದಕ್ಕೆ ಸಂಬಂಧವೆ ಇಲ್ಲ ಎಂದು ಪ್ರತಿಕ್ರಿಯೆ ನೀಡಿದ್ದಾರೆ.

ತೊಗಾಡಿಯಾ,ಅಡ್ವಾನಿ, ಮೋದಿ ಮತ್ತು ಪೇಜಾವರರು ವ್ಯಾಖ್ಯಾನಿಸುತ್ತಿರುವ 'ಹಿಂದುತ್ವ' ಈ ದೇಶದಲ್ಲಿರುವ ಶೇಕಡ ೮೦ ಕ್ಕಿಂತಲೂ ಹೆಚ್ಚಾದ ಸಂಖ್ಯೆ ಇರುವ ಹಿಂದೂಗಳ 'ಹಿಂದುತ್ವ' ಅಲ್ಲ. ಮುಸ್ಲಿಂ ಮೂಲಭೂತವಾದಿಗಳ 'ಜೆಹಾದ್' ಎಲ್ಲಾ ಮುಸಲ್ಮಾನರ ಪ್ರಾತಿನಿಧಿಕ ಸ್ವರೂಪವಲ್ಲ. ಆದರೆ ಅದು ಮುಸ್ಲಿಂ ಸಮಾಜದಿಂದಲೇ ಬೆಳೆಯುತ್ತಿದೆ. ಅದೇ ರೀತಿ 'ದಲಿತ ಮೂಲಭೂತವಾದ' ಎಲ್ಲಾ ಪ್ರಾತಿನಿಧಿಕ ಸ್ವರೂಪ ವಲ್ಲ. ಆದರೆ, ದಲಿತ ಮೂಲಭೂತವಾದ ಕೆಲವು ದಲಿತದಿಂದಲೇ ಸಮುದಾಯದಿಂದಲೇ ಬರುತ್ತಿದೆ. ಆದ್ದರಿಂದ ನನ್ನ ಚರ್ಚೆ ಚಂದ್ರಣ್ಣ ಹೇಳಿರುವಂತೆ ಶೋಷಣೆಯ ವಿರುದ್ಧವಾದ ದಲಿತ್ವದ ಬಗ್ಗೆ ಅಲ್ಲ. ಬದಲಾಗಿ ಶೋಷಣೆ ಪರವಾದ ದಲಿತ ಮೂಲಭೂತವಾದದ ಬಗ್ಗೆ ಮಾತ್ರವೇ ಹೊರತು ಆ ಸಂಪೂರ್ಣ ಸಮುದಾಯಗಳ ಬಗ್ಗೆ ಅಲ್ಲ. ಅಲ್ಲದೆ ಯಾವುದೇ ಸಮುದಾಯವನ್ನು ಬಿಟ್ಟು ಯಾವುದೇ ಸಂಸ್ಕೃತಿ ಅಥವಾ ಚಿಂತನೆ ಇರಲು ಸಾಧ್ಯವಿಲ್ಲ.

ಶ್ರೀಯುತ ಚಂದ್ರಣ್ಣ ಅವರು ಹೇಳಿರುವಂತೆ ಶೂದ್ರ, ಅತಿ ಶೂದ್ರ, ಹಿಂದುಳಿದ ಮತ್ತು ಅಸ್ಪೃಶ್ಯ ಜಾತಿಗಳೆಲ್ಲವೂ ದಲಿತತ್ವದ ಬದುಕಲ್ಲೇ ಇರುವುದಾದರೆ, ಅವರೆಲ್ಲರೂ ಸಾಮಾನ್ಯ ಶೋಷಣೆಯ ಸ್ವರೂಪದಲ್ಲಿ ದಲಿತರೇ ಆಗಿದ್ದರೆ ಇವರು ಈ ದೇಶದ ಜನಸಂಖ್ಯೆಯಲ್ಲಿ ಶೆ.೮೦ ರಷ್ಟಿರುವ ಹಿಂದುಗಳಲ್ಲಿ ಶೇ. ೯೦ ಭಾಗದಷ್ಟು ಬಹುಸಂಖ್ಯಾತರಾಗುತ್ತಾರೆ. ಆದರೆ ಬಹುತೇಕ ಈ ಜನರು ನಾವು ಎಲ್ಲಾ ದಲಿತರ ಅಥವಾ ನಮ್ಮದು ದಲಿತತ್ವ ಎಂದು ಹೇಳಲಾರರು. ಆದರೂ ಚಂದ್ರಣ್ಣ ಹೇಳಿದಂತೆ ದಲಿತತ್ವ ಮನುಷ್ಯ ಪರ ಸಂಸ್ಕೃತಿಯಾಗಿದ್ದರೆ ಈ ಎಲ್ಲರನ್ನೂ ಅದು ಪ್ರತಿನಿಧಿಸಲೇಬೇಕು.

ಆದರೆ, ಹಿಂದಿನಿಂದಲೂ ಈವರೆಗೆ ಶೂದ್ರರು, ಅತೀ ಶೂದ್ರರು ಅಂತ್ಯಜರು-ಅಸ್ಪೃಶ್ಯರ ಮೇಲೆ ಜಾತಿಯ ಹೆಸರಿನಲ್ಲಿ ನಡೆದ ಮತ್ತು ನಡೆಯುತ್ತಿರುವ ಜಾತಿ ಸಂಘರ್ಷ, ಜಾತಿ ದಬ್ಬಾಳಿಕೆ, ಕ್ರೌರ್ಯ, ದೌರ್ಜನ್ಯ ಮತ್ತು ಜಾತಿಯ ಪ್ರತಿಪಾದನೆ ಹಾಗೂ ಅಮಾನುಷ ಆಚರಣೆ ಈ ದೇಶದಲ್ಲಿ ಹೆಚ್ಚಾಗಿ ಇಂದಿಗೂ ಬ್ರಾಹ್ಮಣೇತರ ಜಾತಿ ಜನಾಂಗಗಳಲ್ಲೇ ಹೆಚ್ಚು. ನಿಜ, ಈ ಅಸಮಾನತೆ, ಶೋಷಣೆಯ ವ್ಯವಸ್ಥೆ ಬ್ರಾಹ್ಮಣಶಾಹಿ ಮತ್ತು ವೈದಿಕಶಾಹಿ ವರ್ಗ ಅಥವಾ ಜನಾಂಗದಿಂದಲೇ ನಿರ್ಮಾಣವಾದದ್ದು. ಈ ದೇಶದ ಜನಸಂಖ್ಯೆಯಲ್ಲಿ ಶೇ. ೩-೪ ಭಾಗದಷ್ಟಿರುವ ಜನಾಂಗ ಅಥವಾ ವರ್ಗ ಸಾವಿರಾರು ವರ್ಷಗಳ ಹಿಂದಿನಿಂದಲೂ ಈ ಅಸಮತೋಲಿತ ಶೋಷಕ ವ್ಯವಸ್ಥೆಯನ್ನು ಕಾಪಾಡಿ ಮಿಕ್ಕುಳಿದ ಶೇ. ೯೬-೯೭ ರಷ್ಟು ಪ್ರಮಾಣದ ಜನರ ಮೇಲೆ ಪ್ರಭಾವ ಬೀರಿ ಭದ್ರವಾಗಿ ಬೇರು ಬಿಡುವಂತೆ ಮಾಡಿದ್ದು ಚಾರಿತ್ರಿಕ ಸತ್ಯ.

ಆದರೆ, ಅದನ್ನು ಎಲ್ಲೂ ಕೈಬಿಡದೆ ಇಷ್ಟು ದೀರ್ಘಕಾಲ ಘಟ್ಟದಲ್ಲಿ ಬದುಕಿನ ಆಳಕ್ಕೆ ಬೇರು ಬಿಡುವಂತೆ ಘೋಷಿಸಿ, ಬೆಳೆಸಿ ಮತ್ತು ಆಚರಿಸಿ ಅದನ್ನೇ ಜೀವನ ವಿಧಾನವನ್ನಾಗಿಸಿಕೊಂಡು ಇಂದಿಗೂ ಬರುತ್ತಿರುವುದು ಇದೇ ಬ್ರಾಹ್ಮಣೇತರ ಶೇ ೯೬-೯೭ ಜನಸಂಖ್ಯೆಯ ಅವೈದಿಕ ಭಾರತೀಯ ಸಮುದಾಯ ಮತ್ತು ಜನಾಂಗಗಳು.

ಈ ವರ್ಗ ಮತ್ತು ಈ ಕೆಟ್ಟ ವ್ಯವಸ್ಥೆಗೆ ಪರ್ಯಾಯವಾದ ಸಮರ್ಥ ವ್ಯವಸ್ಥೆಯನ್ನು ರೂಪಿಸಿ ವೈದಿಕಶಾಹಿಯ ಶೋಷಕ ಮಾಯಾಜಾಲ ದಿಂದ ಹೊರಬರಲು ಸಾಧ್ಯವಾಗಿಲ್ಲ ಏಕೆ? ಆ ಬೇರುಗಳ ಕಿತ್ತು ಸುಡಲಾಗ ಲಿಲ್ಲ ಕಾರಣಗಳೇನು? ಈ ರೀತಿಯ ಚಿಂತನೆ ಮತ್ತು ಜೀವನ ವಿಧಾನಗಳ ಅದೆಷ್ಟರ ಮಟ್ಟಿಗೆ ಈ ಅವೈದಿಕ ವರ್ಗ, ಕಾಯಾ ವಾಚಾ ಮನಸ್ಸಾ ಪಾಲನೆ ಮಾಡುತ್ತಿದೆ? ದಲಿತತ್ವದ ಸಂಸ್ಕೃತಿ, ಚಿಂತನೆ ಮತ್ತು ಜೀವನ ವಿಧಾನ ನಿಜವಾಗಿಯೂ ಈ ಅಮಾನವೀಯ. 'ಜಾತಿ' ವಿರೋಧಿಯಾಗಿದ್ದರೆ, ಮಾನವೀಯ ತುಡಿತಗಳ ತತ್ವವಾಗಿದ್ದರೆ, ಮನುಜ ಮತ-ವಿಶ್ವಪಥ ಎಂದು ಜಗತ್ತಿನ ಎಲ್ಲಾ ಮಾನವರು ಸರ್ವ ಸಮಾನರು ಮತ್ತು ಸಹೋದರರು ಎಂಬುವುದಾದರೆ, ಮನುಷ್ಯನಿಂದ ಮನುಷ್ಯನ ಮೇಲೆ ನಡೆಯುವ ಎಲ್ಲಾ ದಬ್ಬಾಳಿಕೆ-ದೌರ್ಜನ್ಯ ಶೋಷಣೆಗಳ ಧಿಕ್ಕರಿಸುತ್ತದೆ ಎಂಬುವುದಾದರೆ ಈ ಇಂಡಿಯಾ ದೇಶದ ಬಹುಸಂಖ್ಯಾತ ಹಿಂದೂ ಧರ್ಮದಲ್ಲಿ ಬಹುಸಂಖ್ಯಾತರಾದ ದಲಿತರು ಅಥವಾ ಬಹುಜನರು (ಚಂದ್ರಣ್ಣ ಅವರ ಪ್ರಕಾರ ಎಲ್ಲಾ ಶೂದ್ರ, ಅತಿ ಶೂದ್ರ, ಹಿಂದುಳಿದ ಮತ್ತು ಅಸ್ಪೃಶ್ಯ ಜನಾಂಗಗಳು) ಏಕೆ ಈ 'ದಲಿತತ್ವ'ವನ್ನು ಪಾಲಿಸುತ್ತಿಲ್ಲ?

ಇದೇ ಹಿಂದುತ್ವದ ಜಾತಿ, ಅಸ್ಪೃಶ್ಯತೆ, ವರ್ಣಾಶ್ರಮ ವ್ಯವಸ್ಥೆ ಆಚಾರ-ವಿಚಾರ, ಕಂದಾಚಾರ, ಸಂಪ್ರದಾಯ ಮತ್ತು ಧರ್ಮಾಚರಣೆ ಈ ಎಲ್ಲವನ್ನು ಏಕೆ ಇಂದಿಗೂ ಜೀವನ ವಿಧಾನವೆಂದು ಒಪ್ಪಿದ್ದಾರೆ? ಈ ದಲಿತತ್ವ ನಿಜವಾಗಿಯೂ ಈ ದೇಶದ ಕೀಳು ಸಂಸ್ಕೃತಿ, ಆಚಾರ-ವಿಚಾರ ಮತ್ತು ಚಿಂತನೆಗಳಿಂದ ತಪ್ಪಿಸಿಕೊಂಡು ಪ್ರತ್ಯೇಕವಾಗಿ ಬೆಳೆದಿದಿಯೇ? ಒಂದು ವೇಳೆ ಈ ದೇಶದಲ್ಲಿ ನೀವು ಹೇಳಿರುವಂತೆ ದಲಿತತ್ವ ಈ ಬಹುಸಂಖ್ಯಾತರಲ್ಲಿ ತುಂಬಿಕೊಂಡಿದ್ದರೆ ಬುದ್ಧ-ಬಸವರ ಕನಸುಗಳು, ಸೂಫಿ-ಶರಣರ ಸದಾಶಯಗಳು, ಮಾರ್ಕ್ಸ್-ಮಾವುಗಳ ಸರ್ವ ಸಮಾನ, ಶೋಷಣೆರಹಿತ ಗುರಿಗಳು; ಗಾಂಧಿ, ಅಂಬೇಡ್ಕರ್‌ರ ಜೀವನದ ಬೇಡಿಕೆಗಳು, ಲೋಹಿಯಾ-ಪೆರಿಯಾರರ ಕನವರಿಕೆಗಳು ಈ ಎಲ್ಲವೂ ಈ ನೆಲದಲ್ಲಿ ಇಷ್ಟೊತ್ತಿಗೆ ಸಾಧಿತವಾಗಬಿಡಬೇಕಾಗಿತ್ತು. ಆದರೆ, ಈ ದೇಶದ ವಾಸ್ತವ ಏನು? 'ದಲಿತರ' ಎಂಬ ಪದವನ್ನು ಹೇಳಿದೂಡನೆಯೇ ಕೆಂಡು ಮಂಡಲವಾಗುವವರು, ಅವರ ಬಗ್ಗೆ ಅಸೂಹೆ, ಅಸಹನೆ, ಮತ್ತು ಕೀಳುತನದ ನೋಟ ಬೀರುವವರು ಇದೇ ಬಹುಸಂಖ್ಯಾತ ಬ್ರಾಹ್ಮಣೇತರ ಭಾರತೀಯರು. (ಬ್ರಾಹ್ಮಣ ಜನಾಂಗದ ದೃಷ್ಟಿ ಅದು ಬೇರೆ ಚರ್ಚೆ) ಆದರೂ ಈ ಎಲ್ಲಾ ವರ್ಗಗಳು ಇದೇ ರೀತಿ ಸಂಪೂರ್ಣವಾಗಿ ದಲಿತ ವಿರೋಧಿ ಭಾವನೆ ಹೊಂದಿದ್ದಾರೆ ಎಂಬುದನ್ನು ಹೇಳುವುದು ಸರಿಯಲ್ಲ.

ಕಂಬಾಲಪಲ್ಲಿಯಲ್ಲಿ ದಲಿತರನ್ನು ಜೀವಂತವಾಗಿ ಸುಟ್ಟವರು ಯಾರು? ಬದನವಾಳಿನಲ್ಲಿ ಅಮಾನುಷವಾಗಿ ದಲಿತರಿಗೆ ಮಲ ತಿನ್ನಿಸಿದವರು ಯಾರು? ಅಸ್ಪೃಶ್ಯರನ್ನು ಇಂದಿಗೂ ಊರ ಒಳಕ್ಕೆ ಬಾರದಂತೆ ತಡೆಯುತ್ತಿರುವವರು ಯಾರು? ನಿತ್ಯವೂ ದಲಿತ ಮಹಿಳೆಯರನ್ನು / ನಿರ್ದಯವಾಗಿ ಅತ್ಯಾಚಾರವೆಸಗುತ್ತಿರುವವರು ಯಾರು? ನನ್ನೂರಿನ ಮೇಲೆ ಇಂದಿಗೂ ಗೌಡಿಕೆಯನ್ನು ಪ್ರತಿಷ್ಠಾಪಿಸಲು ದಬ್ಬಾಳಿಕೆ ಮಾಡುತ್ತಿರುವವರು ಯಾರು? ಈ ಪ್ರಶ್ನೆಗಳಿಗೆ ಮೊದಲು ನಾವು ಉತ್ತರವನ್ನು ಕಂಡುಕೊಳ್ಳಬೇಕು. ಇದು ಎಲ್ಲಾ ಕೇವಲ ಬ್ರಾಹ್ಮಣ್ಯದ ಕುಲದಲ್ಲಿ ಹುಟ್ಟಿದ ಬ್ರಾಹ್ಮಣರಿಂದಲೇ ನಡೆ ಯುತ್ತಿರುವುದೇ?

ಬ್ರಾಹ್ಮಣ ಜನಾಂಗ ಇಂದು ಈ ವ್ಯವಸ್ಥೆಯ ಮೇಲೆ ನೇರವಾದ ತನ್ನ ಹಿಡಿತವನ್ನು ಕಳೆದುಕೊಂಡರೂ ಕೂಡ 'ಬ್ರಾಹ್ಮಣ್ಯ' ಈ ದೇಶದ ಎಲ್ಲಾ

ಜಾತಿ -ಜನಾಂಗಗಳ ಮೇಲೆ ಮತ್ತು ವರ್ಣಗಳ ಮೇಲೆ ತನ್ನ ಪ್ರಾಬಲ್ಯವನ್ನು ಇಂದಿಗೂ ಉಳಿಸಿಕೊಂಡಿರುವುದಷ್ಟೇ ಅಲ್ಲ ಜಾತಿಗಳಿಂದಾಗಿರಬಹುದು, ಪ್ರಬಲವಾಗುತ್ತಿರುವ ಜಾತಿವಾದಿ, ಧರ್ಮಗುರುಗಳಿಂದಾಗಿರಬಹುದು, ಅಳುಕಿಲ್ಲದೆ ಪ್ರತಿಪಾದಿಸುವ ಜಾತಿವಾದದಿಂದರಬಹುದು ಅಥವಾ ಪ್ರಚಲಿತವಾಗುತ್ತಿರುವ ಜಾತಿ ರಾಜಕರಣ, ಜಾತಿ ಸಂಸ್ಕೃತಿ ಮತ್ತು ಸಾಹಿತ್ಯದಿಂದರಬಹುದು. ಅದಕ್ಕೆ ಇರುವ ಹಲವು ರೂಪಗಳನ್ನು ಗುರುತಿಸುವುದೂ ಕೂಡ ಕಷ್ಟ

ಒಂದು ವೇಳೆ ಚಂದ್ರಣ್ಣ ಅವರು ಹೇಳುವಂತೆ ಬಹುಸಂಖ್ಯಾತರಾಗಿರುವ ಹಲವು ಜಾತಿ ಜನಾಂಗಗಳ ಸ್ವಾಭಿಮಾನ, ಏಳಿಗೆ ಮತ್ತು ಶ್ರೇಷ್ಠತೆಯ ಸಾಧನೆಯೇ ದಲಿತತ್ವದ ಪರಮಧ್ಯೇಯವಾಗಿರುವ, ಎಲ್ಲವನ್ನು ಐಕ್ಯೀಕರಿಸಿ ಪ್ರಜ್ಞಾಪೂರ್ವಕವಾಗಿ ಶೋಷಣೆರಹಿತ, ಮಾನವೀಯ ಸಮಸಮಾಜವನ್ನು ಗುರಿಯಾಗಿಟ್ಟುಕೊಂಡು ಇದನ್ನೇ ಕಾಯಾ ವಾಚಾ ಮನಸ್ಸಾ ಜೀವನ ವಿಧಾನವಾಗಿಸಲು ಹಿಂಜರಿಯುವ ಮತ್ತು ಈ ವಿಷಯದಲ್ಲಿ ದ್ವಂಧ್ವ ಸಂಸ್ಕೃತಿ, ಸಿದ್ಧಾಂತ ಮತ್ತು ಆಚಾರಗಳ ಅನುಸರಿಸುವ ಹಾಗೂ ಆ ನಿಟ್ಟಿನಲ್ಲಿ ಸಂಘಟನಾ ಸಂವಿಧಾನ ರಚಿಸುವ 'ದಲಿತತ್ವ'ವನ್ನು ನಾನು ಸಂಪೂರ್ಣವಾಗಿ ಮನುಷ್ಯ ಪರವಾದ 'ದಲಿತತ್ವ' ಎಂದು ಒಪ್ಪಲಾರೆ.

ಒಂದು ವೇಳೆ ಅದರೊಳಗೇ ಹುಟ್ಟಿ ಬರುವ ದಲಿತ ಪ್ರಜ್ಞೆಯ, ದಲಿತ ಸಂಸ್ಕೃತಿಯ ಅಥವಾ ದಲಿತ ಸಿದ್ಧಾಂತಗಳ 'ವೈಭವೀಕರಣ' ಅಥವಾ 'ನಾ ಮೇಲಿನವನು' ಅಥವಾ 'ನಾ ಹೇಳುವಂತೆ ಕೇಳು ಅದಷ್ಟೇ ಸತ್ಯ' ಎಂಬ ಈ ಮದ ಮೆದುಳಿಗಿಳಿದರೆ ಆಗ ಅದು ಖಂಡಿತ ಪ್ರಶ್ನಾತೀತವಾಗಿ ಬಿಡುತ್ತದೆ. ಆಗ ಅದನ್ನು ನಾವು ಮೂಲಭೂತವಾದವೆಂತಲೇ ಕರೆಯಬಹುದು. ಬಹುಶಃ ಬೇರೆ ಯಾವುದೇ ಪದಗಳು ಇದಕ್ಕೆ ಹೊಂದಿಕೆಯಾಗದು. ಆದ್ದರಿಂದಲೇ ನಾನು ಈ ಎಲ್ಲಾ ಲಕ್ಷಣಗಳಿರುವ ಈ ರೀತಿಯ ದಲಿತ ಪ್ರಜ್ಞೆಯನ್ನು, ಆಚಾರವನ್ನು ದಲಿತ ಮೂಲಭೂತವಾದವೆಂದು ಗುರುತಿಸಿದ್ದೇನೆ. ಆದರೆ, ನಿಜವಾದ 'ದಲಿತತ್ವ' ಮೂಲಭೂತವಾದ ಖಂಡಿತ ಅಲ್ಲ ಅದನ್ನು ನಾನು ಒಪ್ಪುತ್ತೇನೆ. ಜಗತ್ತಿನ ಯಾವುದೇ ಆದರ್ಶ, ಧರ್ಮ, ತತ್ವ-ಪಂಥ, ಚಿಂತನೆ ಮೂಲಭೂತವಾಗಲೆಂದು ಬಂದದ್ದಲ್ಲ, ಆದರೆ, ವಾಸ್ತವವೇ ಬೇರೆಯಾಗಿ ಉದ್ದೇಶ ದಾರಿ ತಪ್ಪಿ ಮೂಲಭೂತವಾದಗಳಾಗಿವೆ.

ನಿಜವಾದ ದಲಿತತ್ವಕ್ಕೂ ಮತ್ತು ಮೂಲಭೂತವಾದಕ್ಕೂ ವ್ಯತ್ಯಾಸವನ್ನು ಶ್ರೀಯುತರು ಗುರುತಿಸಲಾಗದಿರುವುದು ಆಶ್ಚರ್ಯಕರ. ಈ ಜಗತ್ತಿನಲ್ಲಿ ಯಾವುದೇ ಚಿಂತನೆ, ಆದರ್ಶ ವ್ಯಕ್ತಿ ಸಿದ್ಧಾಂತ, ವ್ಯವಸ್ಥೆ ಮತ್ತು ಪಂಥ ಕಾಲಕ್ಕನುಗುಣವಾಗಿ ಯಾವುದೇ ಮಾರ್ಪಾಟಿಲ್ಲದೆ ಮತ್ತು ಸುಧಾರಣೆಯಿಲ್ಲದೆ ನೂರಕ್ಕೆ ನೂರರಷ್ಟು ಯಶಸ್ವಿಯಾಗಿ ಸಾರ್ವಕಾಲಿಕ ಸತ್ಯ ಮತ್ತು ಒಪ್ಪಿಗೆಯನ್ನು ಹೊಂದಿರಲು ಸಾಧ್ಯವೇ ಇಲ್ಲ. ಅದು ಎಂತಹ ಶುದ್ದ ನೀರೇ ಆಗಿದ್ದರೂ ಚಲನೆಯಿಲ್ಲದಿದ್ದರೆ ಅಥವಾ ಬದಲಾವಣೆಯಿಲ್ಲದಿದ್ದರೆ ಕಾಲಾಂತರದಲ್ಲಿ ಕೊಳಕು ನೀರಾಗಿ ಬದಲಾಗಿ ಬಿಡುತ್ತದೆ. ಯಾವಾಗ ಯಾವುದೇ ಒಂದು ಚಿಂತನೆ, ಸಿದ್ಧಾಂತ ಅಥವಾ ವ್ಯವಸ್ಥೆ ತನ್ನನ್ನು ತಾನು ವೈಭವೀಕರಿಸಿಕೊಂಡು ಇತರ ಸಿದ್ಧಾಂತ-ಚಿಂತನೆ ಮತ್ತು ವ್ಯವಸ್ಥೆಗಳ ಮಟ್ಟ ಹಾಕಿ ಅವುಗಳ ಮೇಲೆ ಪ್ರಾಬಲ್ಯ ಸಾಧಿಸಿ ಅಧೀನತೆ ಸೃಷ್ಟಿ ಮಾಡಿ ಸರ್ವರನ್ನೂ ಸಮನಾಗಿ ಕಾಣಲು ಒಪ್ಪದೆ; ಇತರರ ರಕ್ತದಲ್ಲಿ ತನ್ನ ಹೆಸರು ಮತ್ತು ಚಿತ್ರ-ಚಿತ್ತಾರಗಳನ್ನು ಬೃಹದಾಕಾರವಾಗಿ ಚಿತ್ರಿಸಲು ಹೋಗುವ ಅತಿರೇಕ ವನ್ನು ನಾನು ಮೂಲಭೂತವಾದವೆಂತಲೇ ಕರೆಯುತ್ತೇನೆ.

ಅದು ಈಗ ನೇರವಾಗಿ ತ್ರಿಶೂಲದಿಂದ ಗರ್ಭ ಸೀಳದಿರಬಹುದು, ಜೀವಂತವಾಗಿ ಸುಡದಿರಬಹುದು, ರೈಲು ಬೋಗಿಗೆ ಜನರನ್ನು ಕೂಡಿ ಹಾಕಿ ಬೆಂಕಿ ಹಚ್ಚದಿರಬಹುದು; ಬಂದೂಕ ಕೈಯಲ್ಲಿ ಹಿಡಿದು ಕಣ್ಣು ಮುಚ್ಚಿ ಗುಂಡುಗಳಾರಿಸಿ ನಿಮಿಷ ಒಂದರಲ್ಲಿ ನೂರಾರು ರಕ್ತ ಸಿಕ್ತ ದೇಹಗಳ ನೆಲಕ್ಕುರುಳಿಸದಿರಬಹುದು. ಆದರೆ, ಇಂದು ತನ್ನ ಶ್ರೇಷ್ಠತೆಗಾಗಿ ಇತರರ ಕೀಳಾಗಿ ಕಾಣುವ, ಇತರರ ತುಳಿಯುವ ಮತ್ತು 'ಶೋಷಣೆ ಮಾಡಲು ನನಗೂ ಒಂದು ಅವಕಾಶ ಕೊಡಿ' ಎನ್ನುವ ದಲಿತ ಮೂಲಭೂತವಾದದ (ಇದನ್ನು ದಲಿತತ್ವ ಎಂದು ತಪ್ಪಾಗಿ ತಿಳಿಯಲಾರದು) ಚಿಂತನೆ ಮತ್ತು ಬೆಳವಣಿಗೆ ಇಂದು ಪಿಸುಮಾತಾಗಿರಬಹುದು. ಆದರೆ, ಮುಂದೆ ಅವಕಾಶ ಮಾಡಿಕೊಂಡು ದೊಡ್ಡ ಧ್ವನಿಯಲ್ಲಿ ಕಿರುಚುವುದಿಲ್ಲವೆಂದು ಹೇಗೆ ಹೇಳುವುದು? ಈ ಪ್ರಶ್ನೆಗೆ ಇತಿಹಾಸವೇ ಬೆತ್ತಲಾಗಿ ನಮ್ಮ ಮುಂದೆ ಉತ್ತರವಾಗಿ ಬಿದ್ದಿದೆ.

ಜಾತಿಯನ್ನು ವಿರೋಧಿಸುತ್ತಲೇ ಜಾತಿಯನ್ನು ಅಪ್ಪಿ ಮುದ್ದಾಡಿ ತಬ್ಬಿಕೊಳ್ಳುವ ಸರ್ಕಾರಗಳು, ಕಾನೂನುಗಳು, ಸಂಘಟನೆಗಳು, ರಾಜಕೀಯ ಪಕ್ಷಗಳು, ಸಮಾಜವಾದಿಗಳು ದಲಿತತ್ವವಾದಿಗಳು, ರಾಜಕಾರಣಿಗಳು, ಧರ್ಮ ಗುರುಗಳು ಮತ್ತು ಮಠಾಧೀಶರು, ಸಮಾಜ ಸುಧಾರಕರು, ವಿಚಾರವಾದಿಗಳು, ಬಹುಜನ ನಾಯಕರು, ಲೇಖಕರು-ಬರಹಗಾರರು ಮತ್ತು ಪತ್ರಿಕೆಗಳು ಈ ಎಲ್ಲರೂ 'ಬ್ರಾಹ್ಮಣ್ಯ'ವನ್ನು ವಿರೋಧಿಸುತ್ತಾರೆ.

ಈ ದೇಶದ ಅಮಾನವೀಯ ಜಾತಿ ವ್ಯವಸ್ಥೆಯ ವಿರುದ್ಧ ೧೨ನೇ ಶತಮಾನದಲ್ಲೇ ತನ್ನ ಪ್ರಾಣ, ಮಾನ ಎಲ್ಲವನ್ನೂ ಪಣಕ್ಕಿಟ್ಟು ಮಾನವೀಯ ಸಮಾಜ ಕಟ್ಟಲಿಕ್ಕಾಗಿ ಕ್ರಾಂತಿಜ್ಯೋತಿ ಬಸವಣ್ಣ ಬೆಳಸಿ ಪ್ರಚಲಿತಕ್ಕೆ ತಂದ 'ವೀರಶೈವ ಪಂಥ' ಇಂದು ಏನಾಗಿದೆ? ಅದು ಮತ್ತೆ ಹೇಗೆ ವೈದಿಕಶಾಹಿಯಂತೆ ಒಂದು ಜಾತಿ ಪಂಥವಾಗಿ ಬದಲಾಯಿತು? ಬಸವಣ್ಣನ ಫೋಟೋ ಮುಂದಿಟ್ಟುಕೊಂಡು ಅದೇ ಶರಣ ಸಂಕೇತದ ಲಿಂಗಾಧಾರರಾಗಿ ಬಸವಣ್ಣನ ಮೆದುಳು-ಹೃದಯದಲ್ಲಿಲ್ಲಾ ಪೂಜಿಸಲ್ಪಟ್ಟ ಸಮಾನತೆ, ಮನುಷ್ಯತ್ವ, ಜಾತ್ಯಾತೀತತೆ, ದಯೆ-ಪ್ರೀತಿ ಎಲ್ಲೋದೂ? ಏನಾದೋ? ಅದಕ್ಕೆ ಕಾರಣ ಏನು?. 'ಕುಲ ಕುಲ ಕುಲವೆಂದು ಹೊಡೆದಾಡದಿರಿ ನೀವು, ಕುಲದ ನೆಲೆಯ ಏನಾದರೂ ಬಲ್ಲಿರಾ? 'ಬಲ್ಲಿರಾ' ಎಂದು ಸಾರಿದ ಕನಕದಾಸರ ಗತಿ ಏನಾಯಿತು? ಪಾಪ ಯಾವುದೋ ಒಂದು ಕುಲದ ಪಾಲಾಗಿ ಹೋದರು.

ಇಂದು ಬಹುತೇಕ ವಿಚಾರವಾದಿಗಳು ಬ್ರಾಹ್ಮಣರನ್ನು ಅಸ್ಪೃಶ್ಯರನ್ನಾಗಿ ಕಾಣುತ್ತಾರೆ. ಆದರೆ, ಅವರಲ್ಲೂ ಮೂಡುತ್ತಿರುವ ಬದಲಾವಣೆಯ ಆಲೋಚನೆಗಳು, ಸಡಿಲತೆಗಳು, ಮತ್ತು ಮುಖ್ಯವಾಹಿನಿಯಲ್ಲಿ ಮಿಲನವಾಗಿ ಮನುಷ್ಯರಾಗಬೇಕೆಂಬ ಚಿಂತನೆಗಳು, ಮಾನಸಿಕವಾಗಿ ಅವರನ್ನು ಕಾಡುತ್ತಿರುವ 'ಪಾಪ ಪ್ರಜ್ಞೆಗಳು' ಈ ವಿಚಾರ ವಾ(ವ್ಯಾ)ದಿಗಳಿಗೆ ಅರ್ಥವಾಗುತ್ತಿಲ್ಲ. 'ಬ್ರಾಹ್ಮಣ್ಯ'ವನ್ನು ಧಿಕ್ಕರಿಸುವ ಬ್ರಾಹ್ಮಣರನ್ನು ನಾವು ಏಕೆ ಸೃಷ್ಟಿಸಬಾರದು? ಆ ಕಾರ್ಯದಲ್ಲಿ ನಮ್ಮ ಜವಾಬ್ದಾರಿ ಅಥವಾ ಕೆಲಸ ಏನೂ ಇಲ್ಲವೆ? ಈ ಬ್ರಾಹ್ಮಣರೆಂಬ ಪ್ರತ್ಯೇಕ ವರ್ಗವನ್ನೇಕೆ ನಾವು ನಮ್ಮ ಮುಖ್ಯವಾಹಿನಿಗೆ ಕರೆ ತರಬಾರದು? ಅಥವಾ ಸೇರಿಸಿಕೊಳ್ಳಬಾರದು? ಅದು ಅಸಾಧ್ಯವಾದ ವಿಚಾರವೇ?

ಇಪ್ಪತ್ತನೇ ಶತಮಾನದಲ್ಲಿ ಯಹೂದಿಗಳೇ ಇಲ್ಲದ ಜರ್ಮನಿಯನ್ನು ನಾನು ನಿರ್ಮಿಸುತ್ತೇನೆ ಎಂದ ಅಮಾನುಷ ಮೃಗ ಹಿಟ್ಲರ್‌ನ ಆಲೋಚನೆ, ಸೇಡು ಇದೇ ತರಹ ತಾನೆ? ಕೊನೆಗೆ ಏನಾದ? ರಣಹೇಡಿಯಂತೆ ಆತ್ಮಹತ್ಯೆ ಮಾಡಿಕೊಂಡ! ಇದನ್ನೇ ನಾನು ಮೂಲಭೂತವಾದ ಎಂದು ಕರೆದಿದ್ದೇನೆ. ಅಂದು ಹಿಟ್ಲರ್ ಇರಬಹುದು, ಇಂದು ಲಾಡೆನ್-ಬುಕಾರಿ, ತೊಗಾಡಿಯಾ-ಮೋದಿಗಳಿರಬಹುದು ನಾಳೆ ಮತ್ಯಾವುದೋ ಮೂಲಭೂತವಾದ ಮತ್ತು ಮೂಲಭೂತವಾದಿ ಬರಬಹುದು. ಇದಕ್ಕೆ ಸಾಧ್ಯತೆ ಇದೆ ತಾನೆ?

ಜಾತಿಯನ್ನು ವಿರೋಧಿಸುತ್ತಲೇ ಜಾತಿಯನ್ನು ಅಪ್ಪಿ ಮುದ್ದಾಡಿ ತಬ್ಬಿಕೊಳ್ಳುವ ಸರ್ಕಾರಗಳು, ಕಾನೂನುಗಳು, ಸಂಘಟನೆಗಳು, ರಾಜಕೀಯ ಪಕ್ಷಗಳು, ಸಮಾಜವಾದಿಗಳು ದಲಿತತ್ವವಾದಿಗಳು, ರಾಜಕಾರಣಿಗಳು, ಧರ್ಮ ಗುರುಗಳು ಮತ್ತು ಮಠಾಧೀಶರು, ಸಮಾಜ ಸುಧಾರಕರು, ವಿಚಾರವಾದಿಗಳು, ಬಹುಜನ ನಾಯಕರು, ಲೇಖಕರು-ಬರಹಗಾರರು ಮತ್ತು ಪತ್ರಿಕೆಗಳು ಈ ಎಲ್ಲರೂ 'ಬ್ರಾಹ್ಮಣ್ಯ'ವನ್ನು ವಿರೋಧಿಸುತ್ತಾರೆ. ಜೊತೆಗೆ ಅಷ್ಟೇ ಜಾಗೃತರಾಗಿ ವೈದಿಕ ಶಾಹಿ ಜಾತಿ ಆಚಾರಗಳನ್ನು ಜಾಣ ಕುರುಡರಂತೆ ಪಾಲಿಸುತ್ತಾರೆ. ಹೇಳಿದರೆ ಅವರು ಜಾತಿಗೆ ವಿರುದ್ಧ ನಿಂತು ಬದುಕುವುದು, ವ್ಯವಹರಿಸುವುದು ಜೀವನ ವಿಧಾನ ಮತ್ತು ಸಂಬಂಧಗಳನ್ನು ಪಾಲಿಸುವುದು ಸಾಧ್ಯವಿಲ್ಲವಂತೆ.

ಈ ಸಮ ಸಮಾಜದ ಮಾನವೀಯ ಚಿಂತನೆಯ ಪರವಾಗಿ ನಿಲ್ಲುವ ತತ್ವ ವಿಚಾರವನ್ನು ನೀವು ದಲಿತತ್ವ, ಸಮಾಜವಾದ, ಮಾನವತಾವಾದ, ಸಮತಾವಾದ, ಆದರ್ಶವಾದ ಯುಟೋಪಿಯಾ, ಸುಖೀ ರಾಜ್ಯ, ಕಲ್ಯಾಣ ರಾಜ್ಯ, ಪ್ರಜಾಪ್ರಭುತ್ವ ಈ ರೀತಿಯ ಯಾವ ಹೆಸರಿನಿಂದ ಬೇಕಾದರೂ ಕರೆದುಕೊಳ್ಳಿ. ಅದನ್ನು ನಾನು ಜೀವ ತುಂಬಿ ಒಪ್ಪುತ್ತೇನೆ ಮತ್ತು ಪರವಾಗಿ ನಿಲ್ಲುತ್ತೇನೆ.

ಆದರೆ ಈ ಆಶಯಗಳಿಗೆ ವಿರುದ್ಧವಾಗಿ ಕಾರ್ಯವೆಸಗುವ ಯಾವುದೇ ತತ್ವ ಚಿಂತನೆ, ವಾದ ಮತ್ತು ಆಚಾರವನ್ನು ನಾನು ಧಿಕ್ಕರಿಸುತ್ತೇನೆ. ಅದನ್ನು ನಾನು ಮನುಷ್ಯ ವಿರೋಧಿ ಮೂಲಭೂತವಾದ ಎಂತಲೇ ಕರೆಯುತ್ತೇನೆ. ಈ ನವ ನಿರ್ಮಾಣಕ್ಕೆ ಬೇಕಿರುವುದು ಈ ಹಿಂದೆಯೇ ತಿಳಿಸಿದಂತೆ ಎಲ್ಲವನ್ನೂ ಮೆಟ್ಟಿ ನಿಲ್ಲಬಲ್ಲ ವೈಚಾರಿಕತೆಯ ತಾಕತ್ತು, ಪ್ರಾಮಾಣಿಕ ಆಚಾರ ಮತ್ತು ಜಾಗೃತ ಜನಪ್ರವಾಹ. ಜೊತೆಗೆ ಸುಸಂಘಟಿತ ಪ್ರಯತ್ನ, ಜೊತೆಗೆ ಭವಿಷ್ಯದಲ್ಲಿ ಭರವಸೆಯಿಟ್ಟ ಸದಾಶಯದ ಗುರಿ ಹಾಗೂ ಕಾಯಾ ವಾಚಾ ಮನಸ್ಸಾ ಆ ಜೀವನ ವಿಧಾನದ ಪಾಲನೆ ಆಗ ಮಾತ್ರ ಹಲವು ಜ್ಯೋತಿರ್ವರ್ಷಗಳ (Light Years) ದೂರದ ಈ ಸರ್ವಾಂಗ ಸುಂದರ ಕನಸಿನ ನಕ್ಷತ್ರವನ್ನು ನಮ್ಮ ಮನೆಯ ಅಂಗಳದಲ್ಲಿ ಕಾಣಲು ಸಾಧ್ಯ. □



ವ್ಯಾಪಾರದ ಉದ್ದೇಶದಿಂದ ಹಿಂದೆ ಬಂದ ಈಸ್ಟ್ ಇಂಡಿಯಾ ದಂತಹ ಒಂದ ಕಂಪನಿ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸುವಷ್ಟರ ಮಟ್ಟಿಗೆ ಯಶಸ್ವಿಯಾಯಿತು. ಈ ದೇಶದ ಬಹುಮುಖಿ ನೆಲೆಯನ್ನು ಒಡೆದು ಆಳುವ ಮೂಲಕ ತನ್ನದೇ ಆದ ಭದ್ರ ಬುನಾದಿಯನ್ನು ಕಂಡುಕೊಂಡಿತು. ಆದರೆ ಇಂದು ಜಾಗತೀಕರಣದ ನೆವದಲ್ಲಿ ಸದ್ದಿಲ್ಲದೆ ಬರುತ್ತಿರುವ ಸಾವಿರಾರು ಈಸ್ಟ್ ಇಂಡಿಯಾ ಕಂಪನಿಗಳು ಈ ದೇಶಕ್ಕೆ ಹಾಗೂ ಈ ದೇಶದ ಮಹಿಳೆಯರಿಗೆ ನೀಡುತ್ತಿರುವ ಕೊಡುಗೆಯಾದರು ಏನು?

ಗ್ರಾಮೀಣ ಪ್ರದೇಶದಲ್ಲಿ ಬರದ ಕರಿನೆರಳಿಗೆ ಅಂಜಿ ನೂರಾರು ಮಹಿಳೆಯರು ನಗರ ಪ್ರದೇಶಕ್ಕೆ ವಲಸೆ ಬರುತ್ತಿದ್ದಾರೆ. ಉದ್ಯೋಗವನ್ನರಸಿ ಬರುತ್ತಿರುವ ಇಂತಹ ಮಹಿಳೆಯರಿಗೆ ಸಾಮಾಜಿಕವಾದ ಯಾವುದೇ ಭದ್ರತೆಯಿರುವುದಿಲ್ಲ. ಉದಾ: ನಾಮ ಅನೇಕ ಬಾರಿ ದಿನಪತ್ರಿಕೆಯಲ್ಲಿ ಓದಿದಂತಹ ಘಟನೆಗಳು 'ಗಾರ್ಮೆಂಟ್ಸ್ ಫ್ಯಾಕ್ಟರಿಗೆಂದು ಹೋಗುತ್ತಿದ್ದ ಇಬ್ಬರು ಮಹಿಳೆಯರನ್ನು ಬಲತ್ಕಾರವಾಗಿ ಮೆಟಡೋರಿನಲ್ಲಿ ಹಿಡಿದು ಕೊಂಡು ಹೋದರು,'ಫ್ಯಾಕ್ಟರಿ ಸೂಪರ್ ವೈಸರ್‌ನಿಂದ ಮಾನಭಂಗ', ಇವು ಪತ್ರಿಕೆಯ ವರದಿಗಳಾಗಿ ಆ ಕ್ಷಣಕ್ಕೆ ನಮ್ಮನ್ನು disturb ಮಾಡುವಂತಹ ಘಟನೆಗಳಲ್ಲಿ ಒಂದಾಗಿ ಬಿಟ್ಟಿದೆ.

ಈ ರೀತಿಯ ಘಟನೆಗೆ ಕಾರಣವಾಗಿರುವ ನಗರೀಕಣದ ತೀವ್ರತೆ, ಹಾಗೂ ಅದರ ಜೊತೆಯಲ್ಲಿಯೆ ಹೆಚ್ಚುತ್ತಿರುವ ಬಡತನ, ಅಪರಾಧಗಳು ಸಮಾಜದ ಮೌಲ್ಯಗಳನ್ನೆ ಬುಡಮೆಲು ಮಾಡುತ್ತಿರುವ ಸ್ವಾರ್ಥ. ತನ್ನ ಕರಾಳ ಹಸ್ತವನ್ನು ಚಾಚಿರುವುದು ಮಹಿಳೆಯರ ಮೇಲೆ.

ಜಾಗತೀಕರಣದ ಜಾತ್ರೆಯಲ್ಲಿ ಬಿಕರಿಗಿಟ್ಟಿರುವ ಮಹಿಳೆ

ಕಾಂಡೊಂನಿಂದ ಹಿಡಿದು ಕಾಂಡಿಮೆಂಟ್ಸ್‌ನಂತಹ ಜಾಹಿರಾತುಗಳಿಗೂ ಮಹಿಳೆಯೆ ಅನಿವಾರ್ಯ. ಯಾವುದೇ ಅಗತ್ಯವಿಲ್ಲದಿದ್ದರೂ ಕನಿಷ್ಠ ಬಟ್ಟೆಯಲ್ಲಿ ಮಹಿಳೆಯ ಅಂಗಾಂಗ ಪ್ರದರ್ಶನ, ಸರಕಿನ ಮಾರಾಟಕ್ಕೆ ಅನಿವಾರ್ಯವಾಗಿ ಬಿಟ್ಟಿದೆ. ಇಂತಹ ಜಾಹೀರಾತುಗಳು ನಮ್ಮ ಯುವ ಜನತೆಗೆ ನೀಡುತ್ತಿರುವ ಸಂದೇಶವಾದರು ಏನು?

ಬಡತನದ ಬೇಗೆಯಿಂದ ನರಳುತ್ತಿರುವ ಅನೇಕ ಮಹಿಳೆಯರು ಇಂದು ತಮ್ಮನ್ನು ತಾವೇ ಮಾರಿಕೊಳ್ಳುವ ಅನಿವಾರ್ಯತೆಗೆ ತಲುಪುತ್ತಿದ್ದಾರೆ. ಕೆಲಸದ ಆಮಿಷ ತೋರಿಸಿ ಮುಗ್ಧ ಮಹಿಳೆಯರನ್ನು ನಗರ ಪ್ರದೇಶಕ್ಕೆ ಕರೆತರುವ ದಲ್ಲಾಳಿಗಳು ಅವರನ್ನು ವೇಶ್ಯಾವಾಟಿಕೆಗೆ ಮಾರುತ್ತಿದ್ದಾರೆ. ಬೆಂಗಳೂರಿನಂತಹ ಸಂಪ್ರದಾಯಸ್ಥ ನಗರ ಹೈಟೆಕ್ ವೇಶ್ಯಾವಾಟಿಕೆಯ ತವರೂರಾಗುತ್ತದೆ. ಈ ಬಗ್ಗೆ ನಮ್ಮ ಸರ್ಕಾರವೇ ಆಗಲಿ ಸಮಾಜವೆ ಆಗಲಿ ಸಾಕಷ್ಟು ಗಂಭೀರವಾಗಿ ಆಲೋಚಿಸುತ್ತಿಲ್ಲ.

ಸ್ತ್ರೀಶಕ್ತಿಯಂತಹ ಒಂದು ಮಹಿಳಾ ಕಾರ್ಯಕ್ರಮ ಇಡೀ ಸಮಾಜದ ಬಡತನವನ್ನೇ ಹೋಗಲಾಡಿಸುತ್ತಿದೆ ಎಂಬ ಭ್ರಮೆಯಲ್ಲಿ ಸರ್ಕಾರ ತನ್ನನ್ನು ಬೆನ್ನುತಟ್ಟಿಕೊಳ್ಳುತ್ತಿದೆ. ಗ್ರಾಮೀಣ ಪ್ರದೇಶದ ಅನಕ್ಷರಸ್ಥ ಬಡ ಮಹಿಳೆಯರ ಬಗ್ಗೆ ಯಾವುದೇ ಸರ್ಕಾರ ಗಂಭೀರವಾಗಿ ಆಲೋಚಿಸುತ್ತಿರುವ ಸೂಚನೆಗಳೇ ಇಲ್ಲ.

ಆಕೆ ಒಬ್ಬ Sex worker ದಿನಕ್ಕೆ ಸಂಪಾದಿಸುವುದು ಐನೂರರಿಂದ ಸಾವಿರ. ಆದರೆ ಕೈಗೆ ಸಿಗುವುದು ಕೇವಲ ಇನ್ನೂರು. ಅವಳ ದುಡಿಮೆಯ ಶೇ. ೮೦ಭಾಗ ದಲ್ಲಾಳಿ ಹಾಗೂ ಪೊಲೀಸರ ಪಾಲು. ಸದಾ ಭಯದ ವಾತಾವರಣದಲ್ಲಿಯೇ ಸವೆಯುವ ಬದುಕಿನ ದಾರಿ. ಇಂತಹ ಮಹಿಳೆಯರ ಬಗ್ಗೆ ತಿರಸ್ಕಾರ ತೋರುವ ಸಮಾಜ ಅನುಕಂಪವನ್ನು ತೋರಿಸುವ ಮಾತೆಲ್ಲಿಂದ ಹೇಳಿ?

ಮಹಿಳೆಯ ಮೇಲೆ ಮಾನಸಿಕ ಹಾಗೂ ದೈಹಿಕವಾದ ನಿರಂತರ ಅತ್ಯಾಚಾರಗಳು ನಡೆಯುತ್ತಲೇ ಇದೆ. ಈ ಕಾಮುಕದೃಷ್ಠಿ ಇನ್ನೂ ಹದಿಹರೆಯದ ಎಳೆಯ ಹೆಣ್ಣು ಮಕ್ಕಳನ್ನು ಬಿಡುತ್ತಿಲ್ಲ. ಹಾಗಾದರೆ ಇದು ನಾಗರಿಕ ಸಮಾಜ ಒಂದರ ಸಂಸ್ಕೃತಿಯೆ? ದೇಶದ ಸಂಸ್ಕೃತಿಯ ಬಗ್ಗೆ ಬೊಗಳೆ ಬಿಡುವ ಕೇಂದ್ರ ಸರ್ಕಾರ ಕೂಡ ಇಂಥ ಬಡ, ದಲಿತ ಹೆಣ್ಣು ಮಕ್ಕಳ ಜೀವನದ ಬಗ್ಗೆ ಗಂಭೀರವಾಗಿ ಯೋಚಿಸುತ್ತಿಲ್ಲ.

ಇದಕ್ಕೆ ಕಾರಣ ಶಾಸಕಾಂಗದಲ್ಲಿ ಮಹಿಳಾ ಪರವಾದ ಕಾಳಜಿಗಳ ಧ್ವನಿಯೇ ಇಲ್ಲದಿರುವುದು. ರಾಜಕೀಯವಾಗಿ ಮಹಿಳೆಗೆ ಪ್ರಾತಿನಿಧ್ಯ ನೀಡದ ಇಂದಿನ ಪರಿಸ್ಥಿತಿಯನ್ನು ಕೇವಲ feel good factor ಪ್ರಾತಿನಿಧ್ಯದಿಂದ ಹೇಗೆ ತಾನೆ ನಮ್ಮ ಹಳ್ಳಿಗಾಡಿನ ಮಹಿಳೆಯರ ನೋವುಗಳನ್ನು ಧ್ವನಿಸಲು ಸಾಧ್ಯ? ಒಟ್ಟಾರೆ ಜನಸಂಖ್ಯೆಯ ಶೇಕಡ ಅರ್ಧದಷ್ಟಿರುವ ಮಹಿಳೆಗೆ ಚುನಾವಣೆಯಿಂದ ಚುನಾವಣೆಗೆ ನೀಡಲಾಗುತ್ತಿರುವ ಪ್ರಾತಿನಿಧ್ಯ ಕಡಿಮೆಯಾಗುತ್ತಲೇ ಇದೆ.

ಇಂದು ಮಹಿಳೆಯರನ್ನು ಪ್ರತಿನಿಧಿಸುತ್ತಿರುವ ವ್ಯಕ್ತಿಗಳಾದರೂ ಜನಪರ ಕಾಳಜಿಗಳಿಲ್ಲದ ಜಾತಿ ಹಾಗೂ ಹಣದ ಇಲ್ಲವೆ ಯಾವುದೋ ಗಾಡ್ ಫಾದರ್‌ಗಳ ಆಶೀರ್ವಾದದಿಂದ ನೇಮಕಗೊಳ್ಳುವಂತಹವರು ಇವರಿಂದ ನಾವು ನಿರೀಕ್ಷಿಸುವುದಾದರೂ ಏನನ್ನು?

ಸಮಾಜದಲ್ಲಿ ಶೋಷಣೆಗೆ ಒಳಗಾಗುತ್ತಿರುವ ಅನೇಕ ಹಿಂದುಳಿದ ಹಾಗೂ ದಲಿತ ಮಹಿಳೆಯರ ಕಲ್ಯಾಣದ ಬಗ್ಗೆ ಗಂಭೀರವಾಗಿ ಆಲೋಚಿಸುವಂತಹ ಸರ್ಕಾರಗಳು ಅಧಿಕಾರಕ್ಕೆ ಬರುವ ಸಾಧ್ಯತೆಗಳೆ ಕಂಡು ಬರುತ್ತಿಲ್ಲ. ಮಹಿಳಾ ಮತ್ತು ಮಕ್ಕಳ ಕಲ್ಯಾಣದ ಹೆಸರಿನಲ್ಲಿ ಸರ್ಕಾರದಿಂದ ನೀಡಲಾಗುವ ಹಣವನ್ನು ಕೂಡ ಸಮರ್ಥವಾಗಿ ವಿನಿಯೋಗಿಸುವ ಸಾಮಾನ್ಯ ಕನಿಷ್ಠ ಕಾರ್ಯಕ್ರಮಗಳು ಕೂಡ ಸಮರ್ಪಕವಾಗಿರುವುದಿಲ್ಲ.

ಮಹುಕ್ರಿ

ಬಡತನದ ಬೇಗೆಯಿಂದ ನರಳುತ್ತಿರುವ ಅನೇಕ ಮಹಿಳೆಯರು ಇಂದು ತಮ್ಮನ್ನು ತಾವೇ ಮಾರಿಕೊಳ್ಳುವ ಅನಿವಾರ್ಯತೆಗೆ ತಲುಪುತ್ತಿದ್ದಾರೆ. ಕೆಲಸದ ಆಮಿಷ ತೋರಿಸಿ ಮುಗ್ಧ ಮಹಿಳೆಯರನ್ನು ನಗರ ಪ್ರದೇಶಕ್ಕೆ ಕರೆತರುವ ದಲ್ಲಾಳಿಗಳು ಅವರನ್ನು ವೇಶ್ಯಾವಾಟಿಕೆಗೆ ಮಾರುತ್ತಿದ್ದಾರೆ. ಬೆಂಗಳೂರಿ ನಂತಹ ಸಂಪ್ರದಾಯಸ್ಥ ನಗರ ಹೈಟೆಕ್ ವೇಶ್ಯಾವಾಟಿಕೆಯ ತವರೂರಾ ಗುತ್ತದೆ. ಸ್ತ್ರೀಶಕ್ತಿಯಂತಹ ಒಂದು ಮಹಿಳಾ ಕಾರ್ಯಕ್ರಮ ಇಡೀ ಸಮಾಜದ ಬಡತನವನ್ನೇ ಹೋಗಲಾಡಿಸುತ್ತಿದೆ ಎಂಬ ಭ್ರಮೆಯಲ್ಲಿ ಸರ್ಕಾರ ತನ್ನನ್ನು ಬೆನ್ನುತಟ್ಟಿಕೊಳ್ಳುತ್ತಿದೆ. ಗ್ರಾಮೀಣ ಪ್ರದೇಶದ ಅನಕ್ಷರಸ್ಥ ಬಡ ಮಹಿಳೆಯರ ಬಗ್ಗೆ ಯಾವುದೇ ಸರ್ಕಾರ ಗಂಭೀರವಾಗಿ ಆಲೋಚಿಸುತ್ತಿರುವ ಸೂಚನೆಗಳೇ ಇಲ್ಲ.

○ ಸುಜಾತ ಕುಮಟಾ

ಇನ್ನು ಮುಂದುವರೆದ ಹೈಟೆಕ್ ಸಂಸ್ಕೃತಿಯಲ್ಲಿ ಫ್ಯಾಶನ್ ಶೋ ಹೆಸರಿನಲ್ಲಿ ನಡೆಯುವ ಹೆಣ್ಣಿನ ನಗ್ನ ಹಾಗೂ ಅರೆಬೆತ್ತಲೆ ಪ್ರದರ್ಶನ, ಹೊಟ್ಟೆ ಪಾಡಿಗಾಗಿ ಲೈವ್ ಬ್ಯಾಂಡ್‌ಗಳಲ್ಲಿ ಕಾರ್ಯಕ್ರಮ ನೀಡುವಂತಹ ಕಾಯಕ ಮಾಡುವ ಹೆಣ್ಣು ಮಕ್ಕಳಿಗೆ ರಕ್ಷಣೆ ನೀಡಬೇಕಾದ ಪೊಲೀಸರಿಂದಲೇ ಅನೇಕ ರೀತಿಯ ಕಿರುಕುಳ. ಇವುಗಳೆಲ್ಲ ಹಣ್ಣುಮಕ್ಕಳ ಬಿಕರಿಯಲ್ಲದೆ ಮತ್ತೇನು?

ಮಹಿಳಾ ಮೀಸಲಾತಿ ಎಂಬ ಮರೀಚಿಕೆ

ಚುನಾವಣೆ ಹತ್ತಿರವಾಗುತ್ತಿದ್ದ ಹಾಗೆ ಕೆಲವು ರಾಜಕೀಯ ಪಕ್ಷಗಳು ಮಹಿಳಾ ಮೀಸಲಾತಿಯ ಬಗ್ಗೆ ಭರವಸೆಯನ್ನು ನೀಡುತ್ತವೆ. ಕೆಲವು ಪಕ್ಷಗಳು ಸಾಂಕೇತಿಕವಾಗಿ ಕೆಲವು ಮಹಿಳೆಯರಿಗೆ ನೀಡಬೇಕಾದ ಸ್ಥಾನಮಾನ ನೀಡಿ ತನ್ನ ಮಾತನ್ನು ಉಳಿಸಿಕೊಂಡ ಸೋಗು ನೀಡುತ್ತವೆ. ಸ್ವಾತಂತ್ರ ಬಂದು ಐವತ್ತು ವರ್ಷಗಳು ಕಳೆದರೂ ಮಹಿಳಾ ಮೀಸಲಾತಿ ಇಂದಿಗೂ ಮರೀಚಿಕೆಯಾಗಿಯೆ ಉಳಿದಿದೆ.

> **ಹೆಣ್ಣು ದೈಹಿಕವಾಗಿ ತನ್ನ ಅಗತ್ಯಕ್ಕೆ ಮಾತ್ರ ಎನ್ನುವ ಮನೋಭಾವದಿಂದ ಆಕೆಯಲ್ಲಿರುವ ವ್ಯಕ್ತಿಯನ್ನು ಗುರುತಿಸಿ ಆಕೆಯ ಘನತೆಯನ್ನು ಗೌರವಿಸುವ ವಾತಾವರಣದ ನಿರ್ಮಾಣ ಸಾಧ್ಯವೆ ?**

ಈವರೆಗೂ ಜಿಲ್ಲಾಪರಿಷತ್, ತಾಲ್ಲೂಕ ಪಂಚಾಯತಿಗಳಂತಹ ಕಡೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡಿರುವುದೇನೋ ನಿಜ. ಆದರೆ ನಿಜವಾದ ಆಳ್ವಿಕೆ ನಡೆಯುವುದು ಅಂತಹ ಮಹಿಳೆಯರ ಗಂಡ ಅಥವಾ ಆಕೆಯ ಹಿಂದಿರುವ ಪುರುಷನ ಕೈಯಲ್ಲಿ. ಸಮಾಜದ ಒಟ್ಟಾರೆ ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆ ದಲಿತ ವರ್ಗದಷ್ಟೆ ಶೋಷಿತಳು.

ಮೇಲ್ವರ್ಗದ ಹಾಗೂ ಮೇಲ್ಜಾತಿಯ ಮಹಿಳೆಯರ ಹಾಗೂ ಕೆಳ ಜಾತಿಯ, ಕೆಳವರ್ಗದ ಮಹಿಳೆಯರ ನಡುವೆ ಸಾಮಾಜಿಕ ಮೌಲ್ಯಗಳ ಭೇದ ಇತ್ತೀಚಿನ ದಿನಗಳಲ್ಲಿ ನಮ್ಮ ಕಣ್ಣಿಗೆ ರಾಚುವಂತಿದೆ. ಇದಕ್ಕೆ ಜಾಗತೀಕರಣದ ಪ್ರಭಾವವೂ ಕಾರಣವಾಗಿದೆ. ಬದಲಾವಣೆಗೆ ತೆರೆದುಕೊಳ್ಳುವ ಸಿಕ್ಕ ಅವಕಾಶಗಳನ್ನು ತನ್ನ ತೋಳ್ತೆಕ್ಕೆಗೆ ತೆಗೆದುಕೊಳ್ಳುವಲ್ಲಿ ಯಶಸ್ವಿಯಾಗುತ್ತಿದೆ. ಉದಾಹರಣೆಗೆ ಸಾಂಸ್ಕೃತಿಕ ರಂಗವನ್ನೇ ತೆಗೆದುಕೊಳ್ಳಿ. ಕೊನೆಗೂ ಈ ರಂಗದಲ್ಲಿ ಹೆಸರು ಮಾಡುವ ಅಥವಾ ಮೇಲು ಸ್ಥರದಲ್ಲಿ ಗುರುತಿಸಲ್ಪಡುವ ಹೆಚ್ಚಿನ ಮಹಿಳೆಯರು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಮುಂದುವರೆದ ಕುಟುಂಬಗಳವರೇ ಆಗಿರುತ್ತಾರೆ.

ಇಂತಹ ಸನ್ನಿವೇಶದಲ್ಲಿ ನಮ್ಮ ಸಂಸ್ಕೃತಿ ಕೂಡ ತನ್ನ ಹೊಸ ಭಾಷ್ಯಕ್ಕೆ ಒಳಗಾಗುತ್ತಿದೆ.

ಮಹಿಳೆಯರನ್ನು ರಾಜಕೀಯದಲ್ಲಿ ಭಾಗಿಯಾಗುವಂತೆ ಮಾಡುವುದೆಂದರೆ ಅವರ ಸೌಂದರ್ಯವನ್ನೋ, ಹೆಸರನ್ನೋ ಓಟುಗಳಾಗಿ ಪರಿವರ್ತಿಸಲು ಮಾಡುವ ಹುನ್ನಾರವಾಗಿದೆ. ಹೀಗೆ ಬರುತ್ತಿರುವ ಅನೇಕ ಚಲನಚಿತ್ರ ನಟಿಯರಿಗಾಗಲಿ, ಮಾಡೆಲ್‌ಗಳಿಗಾಗಲಿ ಈ ದೇಶದ ಹಳ್ಳಿಗಾಡಿನ ದಲಿತ, ಹಿಂದುಳಿದ ಮಹಿಳೆಯರ ಜೀವನದ ಬಗ್ಗೆ ಯಾವುದೇ ರೀತಿಯ ಮಾಹಿತಿಗಳೇ ಇರುವುದಿಲ್ಲ.

ಇನ್ನು ಮಹಿಳಾ ಮೀಸಲಾತಿ ಮಸೂದೆಯ ಬಗ್ಗೆ ಹೇಳಬೇಕೆಂದರೆ ಲೋಕಸಭೆಯಲ್ಲಿ ತಮ್ಮ ಪಕ್ಷ ಮೀಸಲಾತಿಯ ಪರವಾಗಿದೆ ಎಂದು ಕೊಚ್ಚಿಕೊಳ್ಳುವ ಪಕ್ಷಗಳೂ ಮಸೂದೆಯ ಅಗತ್ಯವಿಲ್ಲದೆ ಸೂಕ್ತ ಮೀಸಲಾತಿಯನ್ನು ಪಕ್ಷದ ಆಂತರಿಕ ಮಟ್ಟದಲ್ಲಿ ಕೂಡ ಜಾರಿಗೊಳಿಸಲೂ ಮನಸ್ಸು ಮಾಡುತ್ತಿಲ್ಲ.

೧೯೫೨ ರಿಮದ ೧೯೯೧ ರವರೆಗೂ ಲೋಕಸಭೆಯಲ್ಲಿ ಪ್ರಾತಿನಿಧ್ಯ ಪಡೆದ ಮಹಿಳೆಯರ ಪ್ರಮಾಣ ಶೇ. ೮.೦೯. ಇದು ಗರಿಷ್ಠ. ವಿಸರ್ಜಿತ ವಿಧಾನಸಭೆಯ ೨೨೪ ಸದಸ್ಯರ ಪೈಕಿ ಶಾಸಕಿಯರು ಕೇವಲ ಏಳು. ಮಹಿಳೆಯರಿಗೆ ಪ್ರಾತಿನಿಧ್ಯ ನೀಡಿರುವ ಯಾವುದೇ ಪಕ್ಷಗಳೂ ಪ್ರಮಾಣವನ್ನು ಶೇ. ೧೦ ರಿಂದ ಆಚೆ ನೀಡಲು ತಯಾರಿಲ್ಲ. ೧೯೯೬ರ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಮಹಿಳೆಯರ ಗೆಲುವು ಶೇ.೬.೭ ರಷ್ಟು ಇದ್ದರೆ ಪುರುಷ ಅಭ್ಯರ್ಥಿಗಳ ಗೆಲುವಿನ ಪ್ರಮಾಣ ೩.೬.

ಪ್ರಸ್ತುತ ಚುನಾವಣೆಯಲ್ಲಿಯೆ ನೋಡಿ ಈಗಾಗಲೇ ಪ್ರಕಟವಾಗಿರುವ ಪಟ್ಟಿಯ ಪ್ರಕಾರ ಟಿಕೇಟ್ ಪಡೆದ ಮಹಿಳೆಯರ ಸಂಖ್ಯೆ ಕೇವಲ ೧೩. ಲೋಕಸಭೆಗೆ ೨. ಉಳಿದಂತೆ ವಿಧಾನ ಸಭೆಗೆ ಕಾಂಗ್ರೆಸ್‌ನಿಂದ ಎರಡು, ಬಿಜೆಪಿಯಿಂದ ಐದು, ಜನತಾದಳ ಮೂರು, ಜನತಾದಳ (ಯು) ತಲಾ ಒಂದು.

ಈ ಹಿನ್ನೆಲೆಯಲ್ಲಿ ಟಿಕೆಟ್ ವಂಚಿತರಾದ ನಾಗಮ್ಮ ಕೇಶವ ಮೂರ್ತಿ ತಮ್ಮ ಅಧ್ಯಕ್ಷ ಸ್ಥಾನಕ್ಕೆ ರಾಜಿನಾಮೆ ನೀಡಿದ್ದಾರೆ, ಪ್ರಮಿಳಾ ನೆಸರ್ಗಿ ಬಂಡಾಯದ ಬೆದರಿಕೆಯನ್ನೊಡ್ಡಿದ್ದಾರೆ.

ಹೀಗಾಗಿ ಜಾಗತೀಕರಣದಂತಹ ನವ ಫ್ಯೂಡಲ್ ವ್ಯವಸ್ಥೆಯಲ್ಲಿ ಹೆಣ್ಣುಗಳು ಧ್ವನಿಯೆತ್ತುವ ಅವಕಾಶವನ್ನು ಅನಿವಾರ್ಯವಾಗಿ ಕಳೆದುಕೊಳ್ಳುತ್ತಿದ್ದಾರೆ. ಇತಿಹಾಸ ಮರುಕಳಿಸುತ್ತಿದೆ. ಹೆಣ್ಣು ಕೇವಲ ಭೋಗದ ವಸ್ತು ಎನ್ನುವ ಗಂಡಿನ ಕಲ್ಪನೆಗೆ ಪೂರಕವಾಗಿಯೆ ಇಂದಿನ ಜಾಗತೀಕರಣದ ವ್ಯವಸ್ಥೆ ನಿರ್ಮಾಣವಾಗುತ್ತಿದೆ. ಹೀಗಾಗಿ ದಲಿತ ಹಾಗೂ ಹಿಂದುಳಿದ ಬಡ ಮಹಿಳೆಯರ ಬದುಕಿನ ಬವಣೆಯನ್ನು ಕೇಳುವವರೆ ಇಲ್ಲದಂತಾಗಿದೆ.

ಈ ಬಗ್ಗೆ ದಲಿತ ಸಂಘಟನೆಗಳು ಗಂಭೀರವಾಗಿ ಆಲೋಚಿಸಬೇಕಾದ ಅನಿವಾರ್ಯತೆ ಎಂದಿಗಿಂತ ಇಂದು ಹೆಚ್ಚಿದೆ. ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಗೆ ರಾಜಕೀಯ ಸಬಲೀಕರಣ ನೀಡದೆ ಹೋದಲ್ಲಿ ಆಕೆಯನ್ನು ರಕ್ಷಿಸುವ ಹಾಗೂ ಪೋಷಿಸುವ ಕಾನೂನುಗಳು ಸರ್ಕಾರದ ಮೂಲಕ ಜಾರಿಗೆ ಬರುವುದಾದರು ಹೇಗೆ? ಈ ದೇಶದಲ್ಲಿ ಅಸ್ಪೃಶ್ಯತೆಯಂತಹ ಸಾಮಾಜಿಕ ಪಿಡುಗನ್ನು ಕಾನೂನಿಂದ ಹೊಡೆದೊಡಿಸಲು ಸಾಧ್ಯವಾದರೆ ಮಹಿಳೆಯರ ಮೇಲಾಗುತ್ತಿರುವ ದೌರ್ಜನ್ಯವನ್ನು ಎದುರಿಸಲು ಕಾನೂನುಗಳೇ ನೆರವಾಗಬೇಕಾಗಿದೆ.

ಬಹುಶಃ ಬಾಬಾ ಅಂಬೇಡ್ಕರ್ ಅವರು ಜೀವಂತವಾಗಿದ್ದರೆ ಪ್ರಸ್ತುತ ಸನ್ನೀವೇಶವನ್ನು ಮನಗಂಡು ಸಂವಿಧಾನ ಬದ್ಧವಾಗಿಯೆ ಮಹಿಳೆಯರಿಗೆ ಮೀಸಲಾತಿ ನೀಡುತ್ತಿದ್ದರೇನೋ?

ಹೆಣ್ಣು ದೈಹಿಕವಾಗಿ ತನ್ನ ಅಗತ್ಯಕ್ಕೆ ಮಾತ್ರ ಎನ್ನುವ ಮನೋಭಾವದಿಂದ ಆಕೆಯಲ್ಲಿರುವ ವ್ಯಕ್ತಿಯನ್ನು ಗುರುತಿಸಿ, ಆಕೆಯ ಘನತೆ ಯನ್ನು ಗೌರವಿಸುವ ವಾತಾವರಣದ ನಿರ್ಮಾಣ ಸಾಧ್ಯವೆ ? □

ಸಂವಾದ



ಚಂದಾದಾರರಲ್ಲಿ ಮನವಿ

'ಸಂವಾದ'ವನ್ನು ಇನ್ನು ಮುಂದೆ ಪ್ರತಿ ತಿಂಗಳ ೨೭ರಂದು ಅಂಚೆಗೆ ಹಾಕಲಾಗುತ್ತದೆ. (ಈ ಹಿಂದೆ ಪ್ರತಿ ತಿಂಗಳ ೧೩ರಂದು ಹಾಕಲಾಗುತ್ತಿತ್ತು.) ಅಂದರೆ ಮೇ ತಿಂಗಳ ಸಂಚಿಕೆ ಏಪ್ರಿಲ್ ೨೭ರಂದು ಅಂಚೆಗೆ ಹೋಗುತ್ತದೆ. ಹಾಗಾಗಿ ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿಯೇ 'ಸಂವಾದ' ತಮಗೆ ತಲುಪುತ್ತದೆ.

ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಛೇರಿಯಲ್ಲಿ ಒಮ್ಮೆ ವಿಚಾರಿಸಿ- ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಛೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ. ನಿಮ್ಮ ದೂರಿನ ಆಧಾರದ ಮೇಲೆ ಇಲ್ಲಿನ ಅಂಚೆ ಕಛೇರಿಯಲ್ಲಿ ನಾವು ವಿಚಾರಿಸಿ ಪತ್ರಿಕೆ ಸಕಾಲಕ್ಕೆ ತಲುಪುವಂತೆ ವ್ಯವಸ್ಥೆ ಮಾಡುತ್ತೇವೆ.

ಸಾಮಾನ್ಯವಾಗಿ ಎಲ್ಲ ಚಂದಾದಾರರಿಗೂ ಸಕಾಲದಲ್ಲಿ ಪತ್ರಿಕೆ ಸಿಗುತ್ತಿದೆಯಾದರೂ ಕೆಲವರಿಗೆ ಕಾರಣಾಂತರದಿಂದ ಪತ್ರಿಕೆ ಕೈ ಸೇರುತ್ತಿಲ್ಲ. ಈ ಅನಾನುಕೂಲಕ್ಕೆ 'ಸಂವಾದ' ಬಳಗ ವಿಷಾದಿಸುತ್ತದೆ. ಚಂದಾದಾರರು ಪತ್ರಿಕೆ ಸಿಗದಿದ್ದಾಗ ಕೂಡಲೇ ಮೇಲೆ ನಾವು ಸೂಚಿಸಿರುವಂತೆ ಅಂಚೆ ಕಛೇರಿಗೆ ದೂರು ನೀಡುವ ಮೂಲಕ ಹಾಗೂ ಆ ಮಾಹಿತಿಯನ್ನು ನಮಗೆ ತಿಳಿಸುವ ಮೂಲಕ ಸಹಕರಿಸಬೇಕೆಂದು ವಿನಂತಿಸುತ್ತೇವೆ. ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

-ವ್ಯವಸ್ಥಾಪಕ

ನಾಡನ್ನು ಪ್ರತಿನಿಧಿಸದ ನಾಡಗೀತೆ

ಚರ್ಚೆ

‘ರಾಷ್ಟ್ರಗೀತೆ, ಶಾಲಾಗೀತೆ, ನಾಡಗೀತೆಗಳನ್ನು ಶಾಲಾಮಕ್ಕಳು ಹಾಡಲು ಹೆಚ್ಚು ಸಮಯಬೇಕು. ಕುವೆಂಪುರವರ ಕವನವು ತುಂಬಾ ದೊಡ್ಡದಾಗಿರುವುದರಿಂದ, ಸಮಯದ ದೃಷ್ಟಿಯಿಂದ ಕೆಲವು ಭಾಗಗಳನ್ನು ತೆಗೆದು ಹಾಕಲು ಸೂಚಿಸಿದ್ದುದಾಗಿ, ತೇಜಸ್ವಿಯವರು ಹೇಳಿದ್ದರು. ಸರ್ಕಾರವು ಪದ್ಯದ ಕೆಲವು ಸಾಲಗಳನ್ನು ಕೈ ಬಿಡುವ, ಅಥವಾ ಸೇರಿಸುವ ಪದ್ಧತಿಯಿಂದಾಗಿ ಇಂತಹ ಸನ್ನಿವೇಶ ನಿರ್ಮಾಣವಾಯಿತು. ಕೆ. ಎಸ್. ನಿಸಾರ್ ಅಹಮದ್‌ರವರ ‘ನಿತ್ಯೋತ್ಸವ’ದ ‘ಜೋಗದ ಸಿರಿ ಬೆಳಕಿನಲ್ಲಿ’ ಪದ್ಯವನ್ನು ನಾಡಗೀತೆಯನ್ನಾಗಿ ಮಾಡಿದ್ದರೆ ಎಲ್ಲಾ ದೃಷ್ಟಿಯಿಂದಲೂ ಸಮರ್ಪಕವಾಗಿತ್ತು.

○ ಮಾಯಣ್ಣ ಸ್ವಾಮಿ. ಕೆ.

ಎಸ್. ಎಂ. ಕೃಷ್ಣ ಸರ್ಕಾರವು ಕುವೆಂಪುರವರ ‘ಜಯಹೇ ಕರ್ನಾಟಕ ಮಾತೇ’ ಎಂಬ ಕವನವನ್ನು ನಾಡಗೀತೆಯನ್ನಾಗಿ ಸ್ವೀಕರಿಸಿ ಆದೇಶ ಹೊರಡಿಸಿದ ಹಿನ್ನೆಲೆಯಲ್ಲಿ ನಡೆದ (ನಡೆಯುತ್ತಿರುವ) ವಿವಾದ, ಚರ್ಚೆಗಳ ಹಿನ್ನೆಲೆಯಲ್ಲಿ ನನ್ನ ಅನಿಸಿಕೆಗಳನ್ನು ವ್ಯಕ್ತಪಡಿಸಲು ಇಚ್ಛಿಸುತ್ತೇನೆ.

ಕುವೆಂಪುರವರ ಕವನದ ಸಾಲುಗಳಾದ

‘ಶಂಕರ ರಾಮಾನುಜ ವಿದ್ಯಾರಣ್ಯ
ಬಸವೇಶ್ವರರಿಹ ದಿವ್ಯಾರಣ್ಯ’

ಎಂಬ ಮಾತುಗಳು ಈ ಚರ್ಚೆ, ವಿವಾದಕ್ಕೆ ಕಾರಣವಾಗಿವೆ. ಕುವೆಂಪುರವರ ಈ ಮಾತುಗಳನ್ನು ಎರಡು ನೆಲೆಗಟ್ಟಿನಲ್ಲಿ ಅರ್ಥಮಾಡಿ ಕೊಳ್ಳಬೇಕಾಗುತ್ತದೆ. ಮೊದಲನೆಯದಾಗಿ, ಕವಿಯವರ ಮನುಜ ಮತ-ವಿಶ್ವಪಥ, ಪಂಚಮಂತ್ರ, ಸಪ್ತಸೂತ್ರ, ಸರ್ವೋದಯ, ಸಮನ್ವಯ, ವಿಶ್ವಮಾನವ ಗೀತೆ, ವಿಶ್ವಮಾನವ ಸಂದೇಶ, ಪೂರ್ಣದೃಷ್ಟಿ, ವೈಚಾರಿಕ ದೃಷ್ಟಿಕೋನ, ವಿಚಾರಕ್ರಾಂತಿಗೆ ಆಹ್ವಾನ, ಪುರೋಹಿತ ಶಾಹಿ ವಿರೋಧಿ ನಿಲುವು ಇತ್ಯಾದಿ, ಕವಿ ವಿಚಾರವಾದಿ ಎಂಬ ಹಿನ್ನೆಲೆಯಲ್ಲಿ ನೋಡಿದಾಗ ಹಿಂದೂಧರ್ಮದ ಪುನರುಜ್ಜೀವನದ ಆಚಾರ್ಯರಾದ ಶಂಕರಾಚಾರ್ಯ, ರಾಮಾನುಜಾಚಾರ್ಯ, ವಿದ್ಯಾರಣ್ಯರ ಹೆಸರುಗಳ್ನು ಪ್ರಸ್ತಾಪಿಸುವುದು ಅನಗತ್ಯವಾಗಿತ್ತು ಎನಿಸುತ್ತದೆ.

ಎರಡನೆಯದಾಗಿ, ಕುವೆಂಪುರವರು ಪುರೋಹಿತಶಾಹಿ, ಹಿಂದೂತ್ವದ ಪರವಾದ ನಿಲುವು ಹೊಂದಿದ್ದವರು ಎಂದುಕೊಂಡು ಗಮನಿಸುವಾಗ ಕವಿಯಲ್ಲಿನ ದ್ವಂದ್ವ ಕಾಣಿಸಿಕೊಳ್ಳುತ್ತದೆ. ಕವಿಯು ಶಂಕರ, ರಾಮಾನುಜ, ವಿದ್ಯಾರಣ್ಯರ ಹೆಸರುಗಳನ್ನು ಸೇರಿಸಿ ಮಧ್ವಾಚಾರ್ಯರ ಹೆಸರನ್ನು ಕೈ ಬಿಡುವ ಅಗತ್ಯವಾದರೂ ಏನಿತ್ತು ಎನಿಸುತ್ತದೆ. ಏಕೆಂದರೆ ಇತಿಹಾಸದ ಪುಟಗಳಲ್ಲಿ ಗಮನಿಸಿರುವಂತೆ ಶಂಕರಾಚಾರ್ಯರು ‘ಅದ್ವೈತ’, ರಾಮಾನುಜಾಚಾರ್ಯರು ‘ವಿಶಿಷ್ಟಾದ್ವೈತ’ ಹಾಗೂ ಮಧ್ವಾಚಾರ್ಯರು ‘ದ್ವೈತ’ ಸಿದ್ಧಾಂತದ ಪ್ರತಿಪಾದಕರಾಗಿರುತ್ತಾರೆ. ವಿದ್ಯಾರಣ್ಯರು ವಿಜಯನಗರ ಸ್ಥಾಪನೆಗೆ ಪ್ರೇರಕ ಶಕ್ತಿಯಾಗಿದ್ದರು. ಲಯ, ಮಾತ್ರೆ, ಗಣ, ಛಂದಸ್ಸಿನ ದೃಷ್ಟಿಯಿಂದ ನೋಡುವಾಗ ಈ ರೀತಿಯಲ್ಲಿ ಸರಿಯೆನಿಸುತ್ತದೆ.

- - U	- -	U U -	- - U	
ಶಂಕರ	ರಾಮಾ	ನುಜವಿ	ದ್ಯಾರಣ್ಯ	೪+೪+೪+೫=೧೭
U U -	U U -	U U -	- - U	
ಬಸವೇ	ಶ್ವರರಿ	ಹದಿ	ವ್ಯಾರಣ್ಯ	೪+೪+೪+೫=೧೭

ಈ ಅಭಿಪ್ರಾಯ ಒಂದು ಕಡೆಗಿರಲಿ, ಅಂದರೆ ಸಮರ್ಥಿಸುತ್ತಿದ್ದೇನೆಂದು ಅರ್ಥವಲ್ಲ.

ಈ ಸಂಬಂಧವಾಗಿ ಕವಿಯು ಮಧ್ವರ ಹೆಸರನ್ನು ಕೈಬಿಟ್ಟಿರುವುದಕ್ಕೆ ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರು ಪ್ರಜಾವಾಣಿಯ ವಾಚಕರವಾಣಿಯಲ್ಲಿ ಸಮರ್ಥಿಸಿ ಪತ್ರ ಬರೆದರು. ಅವರು ಕೊಡುವ ಕಾರಣವೇನೆಂದರೆ ‘ಮಧ್ವಾಚಾರ್ಯರು ನಾಡಿನ ಬಹುಸಂಖ್ಯಾತ ಶೂದ್ರರನ್ನು, ದಲಿತರನ್ನು ನಿತ್ಯನಾರಕಿಗಳೆಂದು, ತಮೋಯೋಗ್ಯರೆಂದೂ ವರ್ಗೀಕರಿಸಿ, ಮುಕ್ತಿ ಭಾಜನರಲ್ಲವೆಂದೂ ತಿರಸ್ಕಾರದಿಂದ ನೋಡಿದರು. ಆದುದರಿಂದ ಅವರು ಹೆಸರು ಸೇರಿಸಬೇಕಾಗಿಲ್ಲವೆಂದು ಸಮರ್ಥನೆ ನೀಡಿದರು. ಇದನ್ನು ಸಮರ್ಥಿಸಿ ಅದಕ್ಕೆ ಆಧಾರ ಮೇಲೆ ಇದೆ ಎಂದೂ ಹಿರಿಯ ವಿಚಾರವಾದಿ ಕೋ. ಚೆನ್ನಬಸಪ್ಪನವರು ಲೇಖನ ಬರೆದಿರುತ್ತಾರೆ. ಇದಕ್ಕೆ ಪ್ರತ್ಯುತ್ತರವಾಗಿ ಉಡುಪಿಯ ಪೇಜಾವರ ಮಠದ ವಿಶ್ವೇಶ್ವರ ತೀರ್ಥ ಸ್ವಾಮಿಯವರು ಮತ್ತು ಇತರರು ಈ ವಾದವನ್ನು ಅಲ್ಲಗಳೆದು, ವಿವರಣೆ ನೀಡಿ, ಮುಕ್ತ ಚರ್ಚೆಗೆ ಆಹ್ವಾನಿಸಿದರು. ತೇಜಸ್ವಿಯವರು ಚರ್ಚೆಗೆ ಹೋಗಬೇಕಾದ ಅಗತ್ಯ ವಿಲ್ಲವೆಂದು ದೇಜಗೌ ಹೇಳಿಕೆ ನೀಡಿದರು.

ಪೇಜಾವರ ಸ್ವಾಮಿಯವರ ಅಭಿಪ್ರಾಯದಂತೆ ಶಂಕರಾಚಾರ್ಯರು ಕೇರಳದವರಾಗಿ, ರಾಮಾನುಜಾಚಾರ್ಯರು ತಮಿಳುನಾಡಿನವರಾಗಿ, ಮಧ್ವಾಚಾರ್ಯರು ಕರ್ನಾಟಕದವರಾಗಿ ಕಂಡು ಬಂದರೂ ಸಹ ಕ್ರಿ.ಶ. ೮-೧೨ನೆಯ ಶತಮಾನಗಳಲ್ಲಿ ಭೌಗೋಳಿಕ ಸೀಮಾರೇಖೆಯಿರಲಿಲ್ಲವೆಂಬುದು ಗಮನಾರ್ಹ.

ಜಿ. ನಾರಾಯಣರವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದಾಗ ಮಧ್ವಾಚಾರ್ಯರು ಹೆಸರನ್ನು ಸೇರಿಸಲು ಕುವೆಂಪು ತಮ್ಮ ಒಪ್ಪಿಗೆಯಿತ್ತಿದ್ದರೆಂದೂ ಮತ್ತು ಅದು ಪ್ರಕಟವಾದ ವರ್ಷವನ್ನು ಉಲ್ಲೇಖಿಸಿ, ಸಂಶೋಧಕ, ಹಿರಿಯ ವಿದ್ವಾಂಸರಾದ ಡಾ॥ ಎಂ. ಚಿದಾನಂದ ಮೂರ್ತಿಯವರು ಸ್ಪಷ್ಟೀಕರಿಸಿ ಪತ್ರ ಬರೆದಿದ್ದಾರೆ.

ಇವುಗಳೆಲ್ಲವನ್ನು ಅವಲೋಕಿಸಿದಾಗ, ಒಂದು ವೇಳೆ ತೇಜಸ್ವಿಯವರ ಮಾತಿನಂತೆ ಮಧ್ವಾಚಾರ್ಯರ ಅನರ್ಹರಾದರೇ, ಶಂಕರಾಚಾರ್ಯ, ರಾಮಾನುಜಾಚಾರ್ಯರು ಶ್ರೇಷ್ಠರೇ? ಎಂಬ ಪ್ರಶ್ನೆ ಎದುರಾಗುತ್ತದೆ.

‘ಶಂಕರಾಚಾರ್ಯರು ಗೂಂಡಾ ಪ್ರವೃತ್ತಿಯುಳ್ಳವರು, ಶೂದ್ರರಿಗೆ ವಿದ್ಯೆಯ ಹಕ್ಕನ್ನು ನಿರಾಕರಿಸಿದವರು, ಹಾಗೂ ಆಚಾರ್ಯರು ತಮ್ಮ ಶಿಷ್ಯರೊಂದಿಗೆ ಆಂಧ್ರಪ್ರದೇಶದ ನಾಗಾರ್ಜುನ ಕೊಂಡಕ್ಕೆ ಹೋಗಿ ಬೌದ್ಧ ವಿಗ್ರಹಗಳನ್ನು ನಾಶಮಾಡಿದರು ಮತ್ತು ಬೌದ್ಧ ಭಿಕ್ಕುಗಳನ್ನು ಸಾಮೂಹಿಕವಾಗಿ ಕೊಲೆ ಮಾಡಿಸಿದರು. ಮತ್ತು ವಿದ್ಯಾರಣ್ಯರು ಐತಿಹಾಸಿಕ ಪುರಷರಲ್ಲವೆಂದು ಪ್ರೊಫೆಸರ್ ಕೆ. ಎಸ್. ಭಗವಾನ್‌ರವರು ‘ಶಂಕರಾಚಾರ್ಯ ಮತ್ತು ಪ್ರತಿಗಾಮಿತನ’, ‘ಬದಲಾವಣೆ’ ಎಂಬ ಪುಸ್ತಕದಲ್ಲಿ ತಿಳಿಸುತ್ತಾರೆ. ಸ್ವಾಮಿ ವಿವೇಕಾನಂದರೂ ಸಹ ಆಚಾರ್ಯರ ಗೂಂಡಾಗಿರಿಯನ್ನು ಪ್ರಶ್ನೆ ಮಾಡಿದ್ದಾರೆ.

ಹಂಪಿಯ ಕನ್ನಡ ವಿಶ್ವವಿದ್ಯಾನಿಲಯವು ಪ್ರಕಟಿಸಿರುವ ‘ದೇವಚಂದ್ರನ ರಾಜಾವಳಿ ಕಥೆ’ಯ ಪುಸ್ತಕದಲ್ಲಿ ಈ ರೀತಿ ಉಲ್ಲೇಖ ಇದೆ. ‘ಶಂಕರಾಚಾರ್ಯರು ಶೃಂಗೇರಿಯ ಜೈನ ಬಸದಿಯನ್ನು ನಾಶಗೊಳಿಸಿ ಶಾರದ ದೇವಸ್ಥಾನವನ್ನಾಗಿ ಪರಿವರ್ತಿಸಿದರು. ರಾಮಾನುಜಚಾರ್ಯರು ಮೇಲುಕೋಟೆಯ ಜೈನ ದೇವಾಲಯವನ್ನು ಚೆಲುವನಾರಾಯಣ ದೇವಸ್ಥಾನವನ್ನಾಗಿ ಪರಿವರ್ತಿಸಿದರು. ತಿರುಪತಿಯಲ್ಲಿದ್ದ ಬೌದ್ಧ ವಿಹಾರವನ್ನು ವೈಷ್ಣವೀಕರಿಸಿ ವೆಂಕಟರಮಣನೆಂದು ನಾಮಕರಣ ಮಾಡಿದರು. ಇದಷ್ಟೇ ಅಲ್ಲದೆ ಬಿಳಿಗಿರಿರಂಗನ ಬೆಟ್ಟ, ಕಾಶಿ ರಾಮೇಶ್ವರ ಇತ್ಯಾದಿ ಜೈನ-ಬೌದ್ಧ ಮಂದಿರಗಳು ವೈಷ್ಣನ ಕೇಂದ್ರಗಳಾಗಿ ಪರಿವರ್ತನೆಯಾದವು.

ಶ್ರೀರಾಮಕೃಷ್ಣ ಪರಮಹಂಸ ಮತ್ತು ಸ್ವಾಮಿ ವಿವೇಕಾನಂದ ಪರಮ ಅನುಯಾಯಿಯಾದ ಕುವೆಂಪುರವರಿಗೆ ಈ ರೀತಿಯ ಯಾವ ವಿಚಾರವು ಗೊತ್ತಿರಲಿಲ್ಲವೆ? ಎಂಬ ಪ್ರಶ್ನೆ ದುತ್ತನೆ ಎದುರಾಗುತ್ತದೆ. ಈ ಎಲ್ಲಾ ಅಂಶಗಳನ್ನು ಗಮನಿಸುವಾಗ ಕುವೆಂಪುರವರ ನಿಲುವುಗಳು, ವಿಚಾರಗಳು ದ್ವಂದ್ವದಲ್ಲಿ ಸಿಲುಕುತ್ತವೆ. ಕುವೆಂಪು ಪುರೋಹಿತಶಾಹಿ ಪರವೋ ಅಥವಾ ವೈಚಾರಿಕ ನೆಲೆಗಟ್ಟುಳ್ಳವರೋ ಎಂದು ಕಾಡುತ್ತದೆ.

ಪ್ರಸಿದ್ಧ ವಿಮರ್ಶಕರಾದ ದಿವಂಗತ ಡಾ॥ ಡಿ. ಆರ್. ನಾಗರಾಜ್‌ರವರು ತಮ್ಮ ‘ಅಮೃತ ಮತ್ತು ಗರುಡ’ದಲ್ಲಿ ಕುವೆಂಪುರವರ ಬಗ್ಗೆ ಗ್ರಹಿಸಿರುವುದು ಹೀಗೆ ‘ಜಾತಿ ಪದ್ಧತಿಯ ಎಲ್ಲ ನೆಲೆಗಳ ಆಯಾಮಗಳ ವಿರುದ್ಧ ಕುವೆಂಪು ಬಂಡಾಯವೆದ್ದಿಲ್ಲ. ಅವರ ಯಾವ ಕೃತಿಗಳನ್ನು ನಾವು ಜಾತಿಪದ್ಧತಿಯ ವಿರುದ್ಧದ ಬಂಡಾಯದ ಕೃತಿಗಳು ಎಂದು ಕರೆಯು

ತ್ತೇವೆಯೋ ಆ ಕೃತಿಗಳಲ್ಲಿಯೇ ಆಳವಾದ ಹಿಂದೂ ಮನಸ್ಸನ್ನು ಕಾಣುತ್ತೇವೆ ಎಂಬ ಮಾತುಗಳು ತುಂಬಾ ಅರ್ಥಪೂರ್ಣ ವಾಗಿವೆ. ಇದೇ ಅಭಿಪ್ರಾಯವನ್ನು ಮೊಗಳ್ಳಿ ಗಣೇಶ್, ಅರವಿಂದ ಮಾಲಗತ್ತಿ ಒಮ್ಮೆ ವ್ಯಕ್ತಪಡಿಸಿದ್ದರು.

ಎರಡು ದಶಕಗಳ ಹಿಂದೆ ದಿವಂಗತ ಬಿ. ಬಸವಲಿಂಗಪ್ಪನವರು ಮೈಸೂರಿನಲ್ಲಿ ಕನ್ನಡ ಸಾಹಿತ್ಯವನ್ನು ಬೂಸಾ ಸಾಹಿತ್ಯವೆಂದು ಹೇಳಿದಾಗ, ಅದನ್ನು ವಿರೋಧಿಸಿ ಕೆಲವು ಸಾಹಿತಿಗಳು, ಕವಿಗಳು ಚಳುವಳಿ ಮಾಡುತ್ತಿದ್ದರು. ಆ ಸಮಯದಲ್ಲಿ ಬಸವಲಿಂಗಪ್ಪನವರನ್ನು ಕುವೆಂಪುರವರು ಸಮರ್ಥಿಸಿದುದನ್ನು ನೋಡುವಾಗ ಕುವೆಂಪು ಬಗ್ಗೆ ಹೆಮ್ಮೆ ಮೂಡುತ್ತದೆ. ಆದರೆ ಅದೇ ಸ್ವಾತಂತ್ರ್ಯ ಪೂರ್ವದಲ್ಲಿ ಗಾಂಧೀ ಮತ್ತು ಕಾಂಗ್ರೆಸ್ ಭಾರತದಾದ್ಯಂತ ಚಳುವಳಿ, ಸತ್ಯಾಗ್ರಹ, ಅಸ್ಪೃಶ್ಯತಾ ನಿವಾರಣೆ, ಇತ್ಯಾದಿ ಗೋಸುಂಬೆ ತಂತ್ರಗಳ ಚಟುವಟಿಕೆಗಳನ್ನು ನಡೆಸುತ್ತಿದ್ದಾಗ, ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಗಾಂಧಿ ಮತ್ತು ಕಾಂಗ್ರೆಸ್‌ನ ಕುತಂತ್ರಗಳನ್ನು ನೇರವಾಗಿ ಖಂಡಿಸುತ್ತಿದ್ದರು. ಕುವೆಂಪುರವರಿಗೆ ಗಾಂಧಿಯವರ ಚಿಂತನೆಗಳು, ನಡವಳಿಕೆಗಳು ಆದರ್ಶವಾಗುತ್ತವೆಯೇ ಹೊರತು, ಬಾಬಾ ಸಾಹೇಬ್ ಅಂಬೇಡ್ಕರರ ದೃಷ್ಟಿಕೋನ, ಹೋರಾಟಗಳು ನೆಪಮಾತ್ರಕ್ಕಾದರೂ ಗೋಚರಿಸುವುದಿಲ್ಲ.

ಈ ರೀತಿಯಾಗಿ ಕುವೆಂಪುರವರ ಸಾಹಿತ್ಯವನ್ನು ಅವಲೋಕಿಸುವಾಗ ಪ್ರಸ್ತುತ ಜನ್ಮಶತಮಾನೋತ್ಸವ ಸಂದರ್ಭದಲ್ಲಿ ಅದರ ಸಮಗ್ರ ಸಾಹಿತ್ಯವು ಮರು ವಿಮರ್ಶೆಯಾಬೇಕಾದ ಅನಿವಾರ್ಯತೆ ಇದೆ ಎನಿಸುತ್ತದೆ.

ಈ ವಿವಾದಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ತೇಜಸ್ವಿ, ಕೋ. ಚೆನ್ನಬಸಪ್ಪ ಪ್ರೊ॥ ದೇಜಗೌ, ಚಿದಾನಂದ ಮೂರ್ತಿ ಇತ್ಯಾದಿ ತಮ್ಮ ಅಭಿಪ್ರಾಯಗಳನ್ನು ಮಂಡಿಸಿ ಸಮರ್ಥಿಸಿದಂತೆ, ಪೇಜಾವರ ಮಠ ವಿಶ್ವೇಶ್ವರ ತೀರ್ಥ ಸ್ವಾಮಿಯವರು, ನನ್ನನ್ನೂ ಒಳಗೊಂಡಂತೆ ಎಲ್ಲರಿಗೂ ಪ್ರಶ್ನಿಸುವ, ಪ್ರತಿಭಟಿಸುವ, ಸಮರ್ಥಿಸುವ ಹಕ್ಕಿದೆ. ಈ ಚರ್ಚೆಯು ಪ್ರಜಾಪ್ರಭುತ್ವದ ಆರೋಗ್ಯಕರ ಬೆಳವಣಿಗೆಯಾಗಿದೆ. ಇದೇ ಸಂದರ್ಭದಲ್ಲಿ ಹಿರಿಯರಾದ ತೇಜಸ್ವಿ ಮತ್ತು ದೇಜಗೌರವರನ್ನು ಒಂದು ಪ್ರಶ್ನೆ ಕೇಳಬೇಕಾಗುತ್ತದೆ.

ಮೊದಲನೆಯದಾಗಿ, ಕಳೆದ ಅಂದರೆ ಡಿಸೆಂಬರ್ ೨೦೦೩ರಲ್ಲಿ ಬಾಬಾ ಬುಡನ್‌ಗಿರಿಯ ದತ್ತ ಪೀಠಕ್ಕೆ ಸಂಬಂಧಿಸಿದಂತೆ ವಿವಾದ ನಡೆಯಿತು. ದತ್ತ ಪೀಠದ ಶೋಭಾಯಾತ್ರೆಗೆ ಸಂಬಂಧಿಸಿದಂತೆ, ಬೆಂಗಳೂರಿನಲ್ಲಿ ನಡೆದ ಹಿಂದೂ ವಿರಾಟ್ ಸಮಾವೇಶದಲ್ಲಿ ಇದೇ ಪೇಜಾವರ ಮಠಾಧೀಶರ ಜೊತೆ ಚುಂಚನಗಿರಿಯ ಮಠಾಧೀಶರಾದ ಬಾಲಗಂಗಾಧರಸ್ವಾಮಿಯವರು ಭಾಗವಹಿಸಿ ಹಿಂದೂ ರಾಷ್ಟ್ರ ನಿರ್ಮಾಣಕ್ಕೆ ಕರೆ ಕೊಟ್ಟರು. ಈ ನಿಟ್ಟಿನಲ್ಲಿ ನೋಡುವಾಗ ಪೇಜಾವರ ಸ್ವಾಮಿ ಮೆದುಳಾದರೆ, ಬಾಲಗಂಗಾಧರಸ್ವಾಮಿ ಹಿಂದೂತ್ವದ ದೇಹವಾಗಿದ್ದಾರೆ. ಅದೇ ಸಮಯದಲ್ಲಿ 'ಉದಯ ನ್ಯೂಸ್' ಚಾನಲ್‌ನ 'ಮುಖಾ-ಮುಖಿ' ಯಲ್ಲಿ ಪೂರ್ಣಚಂದ್ರ ತೇಜಸ್ವಿಯವರು ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಆಗ ಅವರು 'ಪುರೋಹಿತಶಾಹಿಯ ಕುತಂತ್ರ'ವನ್ನು ಖಂಡ ತುಂಡವಾಗಿ ಖಂಡಿಸಿದರು. ಪೇಜಾವರ ಸ್ವಾಮಿಯವರನ್ನು ಪರೋಕ್ಷವಾಗಿ ತೇಜಸ್ವಿಯವರು ಪ್ರಶ್ನಿಸುತ್ತಾರೆ. ಆದರೆ ಇದೇ ಶೂದ್ರ ಸಮುದಾಯದ ಅಂದರೆ ಒಕ್ಕಲಿಗರ ಬಾಲಗಂಗಾಧರ ಸ್ವಾಮಿಯವರು ಪುರೋಹಿತಶಾಹಿಯ ಪರವಾಗಿ ಹೇಳಿಕೆ ಕೊಡುವುದನ್ನು ಮಾತ್ರ ದಿಟ್ಟತನದಿಂದ ಪ್ರತಿಭಟಿಸುವ ನೈತಿಕತೆ ತೋರಲಿಲ್ಲ.

ಎರಡನೆಯದಾಗಿ, ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ದಿನಾಂಕ: ೧೯-೦೧-೨೦೦೪ ರ ಸೋಮವಾರದಂದು ಬಹುಜನ ವಿದ್ಯಾರ್ಥಿ ಸಂಘವು ಕುವೆಂಪು ಜನ್ಮಶತಮಾನೋತ್ಸವ ಅಂಗವಾಗಿ ಪ್ರತಿಭಾ ಮೇಳ ಏರ್ಪಡಿಸಿತ್ತು. ಆ ಸಮಾರಂಭದಲ್ಲಿ ನಾನೂ ಸಹ ಸಭಿಕನಾಗಿದ್ದೆನು. ಸಮಾರಂಭದ ಉದ್ಘಾಟನೆ ಮಾಡಿ ಮಾತನಾಡುತ್ತಾ ಪ್ರೊ॥

ಒಬ್ಬ ಕವಿ ನಿಜವಾಗಿ ಎಲ್ಲಾ ಜಾತಿ ವರ್ಗಗಳ ಅಭಿಯಾನ ಮತ್ತು ಅನುರಾಗವನ್ನು ಗಳಿಸಿದ್ದೇ ಆಗಿದ್ದಲ್ಲಿ ಸಾಹಿತ್ಯಕ್ಕೆ ಮನ್ನಣೆ ನೀಡುವ ಪ್ರಕ್ರಿಯೆಯು ಎಲ್ಲ ವರ್ಗಗಳ ಹೃದಯಾಂತರಾಳದಿಂದ ಹುಟ್ಟಬೇಕಾಗಿತ್ತು. ಅಂದರೆ ಕುವೆಂಪುರವರ ಕವನವನ್ನು ನಾಡಗೀತೆಯಾಗಿ ಕಾನೂನು ಮಾಡಿ ಆದೇಶ ಹೊರಡಿಸುವ ಕೆಲಸವನ್ನು ಬೇರೆ ಜಾತಿಯ ಮುಖ್ಯಮಂತ್ರಿಗಳು ಮಾಡಿದ್ದರೇ ಅದು ಅರ್ಥಪೂರ್ಣವಾಗುತ್ತಿತ್ತು. ಕಾಕತಾಳೀಯವೆಂದರೆ, ವಿಶ್ವಮಾನವನ ಬದಲಾಗಿ ಒಕ್ಕಲಿಗ ಸಮುದಾಯದ ಕುವೆಂಪುರವರ ಕವನವನ್ನು ಒಕ್ಕಲಿಗ ಮುಖ್ಯಮಂತ್ರಿಯೇ ನಾಡಗೀತೆ ಮಾಡುವ ಹುನ್ನಾರ ಏಕೆ? ಒಕ್ಕಲಿಗ ಸಾಹಿತಿಗಳು ಮಾತ್ರವೇ ಅದರ ವಕಾಲತ್ತು ವಹಿಸುವ ಪರಿಸ್ಥಿತಿ ನಿರ್ಮಾಣವಾಗಿರುವುದು ತೀರಾ ದುರದೃಷ್ಟಕರ. ಇದೇ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಹರಿಕೃಷ್ಣ ಪುನರೂರು ಮೇಲೆ ಹಲ್ಲೆ ನಡೆಯಿತು. ಇಂತಹ ಹಲ್ಲೆ ಮಾಡುವ ಪ್ರವೃತ್ತಿಯು ನಿಜವಾದ ಜಾತ್ಯತೀತ ಪರಿಸರದ ನಿರ್ಮಾಣಕ್ಕೆ ಪೂರಕವಾಗಲಾರದು.

ದೇಜಗೌರವರು ಪರೋಕ್ಷವಾಗಿ ಬ್ರಾಹ್ಮಣ, ಲಿಂಗಾಯಿತ ಮಠಾಧೀಶರಿಗೆ ಹಲವು ಸವಾಲುಗಳನ್ನು ಹಾಕಿದರು. ಆ ಸವಾಲುಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ, ಆದರೆ ಅದೇ ಶೂದ್ರ ಸಮುದಾಯದ ಅಂದರೆ ಒಕ್ಕಲಿಗರ ಮಠಾಧಿಪತಿಯಾದ ಚುಂಚನಗಿರಿಯ ಬಾಲಗಂಗಾಧರಸ್ವಾಮಿಯವರನ್ನು ಪ್ರಶ್ನೆಗೆ ಎಳೆಯಲಿಲ್ಲ, ಬ್ರಾಹ್ಮಣ, ಲಿಂಗಾಯಿತ ಮಠಗಳು ಶೂದ್ರರಿಗೆ ಅಧಿಕಾರ ಬಿಟ್ಟುಕೊಡಲು ಕೇಳಿದಂತೆ, ಚುಂಚನಗಿರಿಯ ಮಠವು ಹಿಂದುಳಿದ ಅಂದರೆ ಒಕ್ಕಲಿಗೇತರರಿಗೆ, ದಲಿತರಿಗೆ ಬಿಟ್ಟು ಕೊಡಬೇಕೆಂದು ಹೇಳುವ ನೈತಿಕತೆ ಪ್ರದರ್ಶಿಸಲಿಲ್ಲ ಎಂಬುದನ್ನು ಈ ಇಬ್ಬರು ಹಿರಿಯರಿಗೆ ಪ್ರೀತಿಯಿಂದಲೇ ಕೇಳ ಬಯಸುತ್ತೇನೆ.

ಒಬ್ಬ ಕವಿ ನಿಜವಾಗಿ ಎಲ್ಲಾ ಜಾತಿ ವರ್ಗಗಳ ಅಭಿಯಾನ ಮತ್ತು ಅನುರಾಗವನ್ನು ಗಳಿಸಿದ್ದೇ ಆಗಿದ್ದಲ್ಲಿ ಸಾಹಿತ್ಯಕ್ಕೆ ಮನ್ನಣೆ ನೀಡುವ ಪ್ರಕ್ರಿಯೆಯು ಎಲ್ಲ ವರ್ಗಗಳ ಹೃದಯಾಂತರಾಳ ದಿಂದ ಹುಟ್ಟಬೇಕಾಗಿತ್ತು. ಅಂದರೆ ಕುವೆಂಪುರವರ ಕವನವನ್ನು ನಾಡಗೀತೆಯಾಗಿ ಕಾನೂನು ಮಾಡಿ ಆದೇಶ ಹೊರಡಿಸುವ ಕೆಲಸವನ್ನು ಬೇರೆ ಜಾತಿಯ ಮುಖ್ಯಮಂತ್ರಿಗಳು ಮಾಡಿದ್ದರೇ ಅದು ಅರ್ಥಪೂರ್ಣವಾಗುತ್ತಿತ್ತು. ಕಾಕತಾಳೀಯವೆಂದರೆ, ವಿಶ್ವಮಾನವನ ಬದಲಾಗಿ ಒಕ್ಕಲಿಗ ಸಮುದಾಯದ ಕುವೆಂಪುರವರ ಕವನವನ್ನು ಒಕ್ಕಲಿಗ ಮುಖ್ಯಮಂತ್ರಿಯೇ ನಾಡಗೀತೆ ಮಾಡುವ ಹುನ್ನಾರ ಏಕೆ? ಒಕ್ಕಲಿಗ ಸಾಹಿತಿಗಳು ಮಾತ್ರವೇ ಅದರ ವಕಾಲತ್ತು ವಹಿಸುವ ಪರಿಸ್ಥಿತಿ ನಿರ್ಮಾಣವಾಗಿರುವುದು ತೀರಾ ದುರದೃಷ್ಟಕರ. ಇದೇ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಹರಿಕೃಷ್ಣ ಪುನರೂರು ಮೇಲೆ ಹಲ್ಲೆ ನಡೆಯಿತು. ಇಂತಹ ಹಲ್ಲೆ ಮಾಡುವ ಪ್ರವೃತ್ತಿಯು ನಿಜವಾದ ಜಾತ್ಯತೀತ ಪರಿಸರದ ನಿರ್ಮಾಣಕ್ಕೆ ಪೂರಕವಾಗಲಾರದು.

ಪ್ರಸ್ತುತ ಪರಿಸ್ಥಿತಿಯು ತಾತ್ವಿಕ ದೃಷ್ಟಿಯಿಂದ ಚರ್ಚೆಯಂತೆ ಕಂಡರೂ ಸಹ ಒಕ್ಕಲಿಗರ ಮತ್ತು ಮಧ್ವ ಬ್ರಾಹ್ಮಣರ ನಡುವಣ ಶೀತಲ ಸಮರವಿದ್ದಿರಬಹುದೇ ಎಂಬ ಅನುಮಾನ ಕಾಡುತ್ತದೆ.

ನಡೆಯುತ್ತಿರುವ (ನಡೆದ) ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಒಂದು ಅಭಿಪ್ರಾಯ ಮನದಟ್ಟಾಗುತ್ತದೆ. ಅದೇನೆಂದರೆ, ಪೇಜಾವರ ಸ್ವಾಮಿ, ಬಾಲಗಂಗಾಧರ ಸ್ವಾಮಿಯವರೂ ಒಂದೇ ವೇದಿಕೆಯಲ್ಲಿ ಕುಳಿತು ಹಿಂದೂ ರಾಷ್ಟ್ರ ನಿರ್ಮಾಣಕ್ಕೆ ಕರೆ ಕೊಡುತ್ತಾರೆ. ಅದೇ ಬಾಲಗಂಗಾಧರ ಸ್ವಾಮಿ, ಎಸ್.ಎಂ. ಕೃಷ್ಣರವರು ಒಂದೇ ವೇದಿಕೆಯಲ್ಲಿ ಕುಳಿತು ಸಭೆ, ಸಮಾರಂಭ ನಡೆಸುತ್ತಾರೆ. ಇತ್ತೀಚೆಗೆ ಪೇಜಾವರ ಸ್ವಾಮಿಯವರು, ಎಸ್. ಎಂ. ಕೃಷ್ಣರ ಮನೆಯಲ್ಲಿ ಪೂಜೆ ನಡೆಸಿ ಆಶೀರ್ವಾದ ನೀಡಿದರೆಂದು ವರದಿಯಾಗಿದೆ. ಇವೆಲ್ಲವನ್ನು ಗಮನಿಸುವಾಗ ಪೇಜಾವರರು, ಬಾಲಗಂಗಾಧರರ ಮೂಲಕ ಕೃಷ್ಣರ ಮೇಲೆ ಪ್ರಭಾವ ಬೀರಿ ಮಧ್ವರ ಹೆಸರನ್ನು ನಾಡಗೀತೆ ಯಲ್ಲಿ ಸೇರಿಸಿರಬಹುದೇ? ಅಥವಾ ಪೇಜಾವರ ಮತ್ತು ಕೃಷ್ಣರ ನಡುವೆ ರಾಜಿಯಾಗಿರಬಹುದೇ ಎಂಬ ಅನುಮಾನಗಳು ಕಾಡುತ್ತವೆ?

ಪೂರ್ಣಚಂದ್ರ ತೇಜಸ್ವಿಯವರು ಮಧ್ವರ ಹೆಸರನ್ನು ಸೇರಿಸಿರುವುದಕ್ಕೆ ತಮ್ಮ ವಿರೋಧವಿದೆಯೆಂದು ಈಗಲೂ ಹೇಳುತ್ತಿದ್ದಾರೆ. ಆದರೆ ಚಿದಾನಂದ ಮೂರ್ತಿಯವರು, ಅದಕ್ಕೆ ಕುವೆಂಪುರವರ ಒಪ್ಪಿಗೆಯಿತ್ತೆಂದು ಹೇಳಿಕೆ ನೀಡುತ್ತಾರೆ. ಪರಿಸ್ಥಿತಿ ಇನ್ನೂ ಗೊಂದಲದಲ್ಲಿಯೇ ಇದೆಯೆನಿಸುತ್ತದೆ.

ಕೊನೆಯದಾಗಿ ಹೇಳುವುದೇನೆಂದರೆ 'ರಾಷ್ಟ್ರಗೀತೆ, ಶಾಲಾಗೀತೆ, ನಾಡಗೀತೆಗಳನ್ನು ಶಾಲಾಮಕ್ಕಳು ಹಾಡಲು ಹೆಚ್ಚು ಸಮಯಬೇಕು. ಕುವೆಂಪುರವರ ಕವನವು ತುಂಬಾ ದೊಡ್ಡದಾಗಿರುವುದರಿಂದ, ಸಮಯದ ದೃಷ್ಟಿಯಿಂದ ಕೆಲವು ಭಾಗ 'ಗಳನ್ನು ತೆಗೆದು ಹಾಕಲು ಸೂಚಿಸಿದ್ದುದಾಗಿ, ತೇಜಸ್ವಿಯವರು ಹೇಳಿದ್ದರು. ಸರ್ಕಾರವು ಪದ್ಯದ ಕೆಲವು ಸಾಲಗಳನ್ನು ಕೈಬಿಡುವ, ಅಥವಾ ಸೇರಿಸುವ ಪದ್ಧತಿಯಿಂದಾಗಿ ಇಂತಹ ಸನ್ನಿವೇಶ ನಿರ್ಮಾಣವಾಯಿತು. ಕೆ. ಎಸ್. ನಿಸಾರ್ ಅಹಮದ್ ರವರ 'ನಿತ್ಯೋತ್ಸವ'ದ 'ಜೋಗದ ಸಿರಿ ಬೆಳಕಿನಲ್ಲಿ' ಪದ್ಯವನ್ನು ನಾಡಗೀತೆಯನ್ನಾಗಿ ಮಾಡಿದ್ದರೆ ಎಲ್ಲಾ ದೃಷ್ಟಿಯಿಂದಲೂ ಸಮರ್ಪಕವಾಗಿತ್ತು. □

ಅಯೋಧ್ಯೆಯ ಹಿಂದೂ ಮುಸಲ್ಮಾನ ಸೌಹಾರ್ದತೆ

ಸುಮಾರು ಎರಡು ದಶಕಗಳ ಹಿಂದೆ ಅಯೋಧ್ಯೆಯ ರಾಮಜನ್ಮ ಭೂಮಿ ವಿವಾದ ಸಂಘಪರಿವಾರದ ಹಿಂದೂ ಕೋಮುವಾದಿಗಳ ಕೈಗೆ ಸಿಕ್ಕಿ ರಾಜಕೀಯ ಅಸ್ತ್ರವಾಗಿ ಬಳಸಲ್ಪಟ್ಟಿತು. ಈ ಪರಿವಾರದ ರಾಜಕೀಯ ಪಕ್ಷವಾದ ಬಿಜೆಪಿಗೆ ಅದು ಹೇರಳ ರಾಜಕೀಯ ಲಾಭಗಳನ್ನು ನೀಡಿತು. ಲೋಕಸಭೆಯಲ್ಲಿ ಕೇವಲ ಎರಡು ಸ್ಥಾನಗಳನ್ನು ಪಡೆದಿದ್ದ ಈ ಪಕ್ಷ ಈಗ ಅಧಿಕಾರದ ಗದ್ದುಗೆಯಲ್ಲಿದೆ. ಧರ್ಮ ಹಾಗೂ ರಾಜಕಾರಣ ಮಿಶ್ರಣದ ಘಾತುಕ ಉತ್ಪನ್ನದ ಈ ಪ್ರಕ್ರಿಯೆ ಈಗ ರಾಷ್ಟ್ರದ ಬಹುಮುಖಿ ಸಂಸ್ಕೃತಿಗೆ ಒಂದು ದೊಡ್ಡ ಸವಾಲಾಗಿ ಪರಿಣಮಿಸಿದೆ.

ಕಳೆದ ಎರಡು ದಶಕಗಳಲ್ಲಿ ಅಯೋಧ್ಯೆಯ ಸರಯೂ ನದಿಯಲ್ಲಿ ಸಾಕಷ್ಟು ನೀರು ಹರಿದಿದೆ. ಸಂಘ ಪರಿವಾರದ ಸಂಸ್ಥೆಗಳಿಂದ ಇಲ್ಲಿ ಹಲವು ಉಗ್ರರೂಪದ ಕಾರ್ಯಕ್ರಮಗಳು ಜರುಗಿವೆ. ಇವು ಜರಗುವಾಗ ಅಯೋಧ್ಯೆಯ ಜನರಿಗೆ ಉಸಿರು ಕಟ್ಟುವಂಥ ಪರಿಸ್ಥಿತಿ. ಕಾನೂನು ಹಾಗೂ ಸುವ್ಯವಸ್ಥೆಯನ್ನು ಕಾಪಾಡುವ ದೃಷ್ಟಿಯಿಂದ ಮಾಡುವ ಬಂದೋಬಸ್ತ್‌ನಿಂದ ಜನರಿಗೆ ತೀವ್ರ ಕಿರಿಕಿರಿ ಎಷ್ಟೇ ಪ್ರಚೋದನಾಕಾರಿ ಕಾರ್ಯಕ್ರಮಗಳು ಜರುಗಿದರೂ, ಅಯೋಧ್ಯೆಯ ಸಾಮಾನ್ಯ ಹಿಂದೂ ಹಾಗೂ ಮುಸಲ್ಮಾನ ನಾಗರೀಕರು ಎಂದಿನಂತೆ ತಮ್ಮ ದೈನಂದಿನ ಜೀವನ ನಡೆಸುತ್ತಿದ್ದಾರೆ. ಅವರಲ್ಲಿ ಹೆಚ್ಚಿನವರು ರಾಮಜನ್ಮ ಭೂಮಿ ಬಾಬ್ರಿ ಮಸೀದಿ ವಿವಾದವನ್ನು ಹೊರಗಡೆಯ ಸ್ಥಾಪಿತ ಹಿತಾಸಕ್ತಿಗಳು ಹುಟ್ಟುಹಾಕಿದವೆಂದು ಅಭಿಪ್ರಾಯಪಡುತ್ತಾರೆ. ಅವರು ಅಯೋಧ್ಯೆಯಲ್ಲಿ ಶತಮಾನಗಳಿಂದ ವಿವಿಧ ಧರ್ಮಗಳ ನಡುವೆ ನೆಲೆಸಿರುವ ಸೌಹಾರ್ದ ಪರಂಪರೆಯನ್ನು ಬೊಟ್ಟುಮಾಡಿ ತೋರಿಸುತ್ತಾರೆ. ಇತಿಹಾಸದ ಪುಟಗಳನ್ನು ತಿರುಗಿಸಿದರೆ ಅನೇಕ ದೃಷ್ಟಾಂತಗಳು ಇದಕ್ಕೆ ಪೂರಕವಾಗಿ ದೊರಕುತ್ತವೆ,

ಆದರೆ ಸಂಘ ಪರಿವಾರದ ಶಕ್ತಿಗಳು ಈ ಇತ್ಯಾತ್ಮಕ ಅಂಶಗಳ ಬಗ್ಗೆ ಚಕಾರವೆತ್ತುವುದಿಲ್ಲ. ಏಕೆಂದರೆ, ಅವು ಅವರ ದೃಷ್ಟಿಕೋನಕ್ಕೆ, ಹುನ್ನಾರಗಳಿಗೆ ಪುಷ್ಟಿ ನೀಡುವುದಿಲ್ಲ. ಭಾರತಾದ್ಯಂತ ಎಷ್ಟು ಜನರು ಈ ಗಹನ ವಿಚಾರಗಳ ಬಗ್ಗೆ ಗಮನ ಹರಿಸುತ್ತಾರೆ? ಧಾರ್ಮಿಕ ವಿಷಯಗಳಲ್ಲಿ ಭಾವನಾತ್ಮಕಯದ್ದೇ ಮೇಲ್ಗೈ. ಅದು ಸೃಷ್ಟಿಸುವ ಭ್ರಾಮಕ ಸ್ಥಿತಿಯ ಆಳ, ವಿಸ್ತಾರ ಹಾಗೂ ಪ್ರಭಾವ ಅಪಾರ. ಇದನ್ನು ಬಂಡವಾಳವನ್ನಾಗಿಸಿಕೊಂಡೇ ಈ ಶಕ್ತಿಗಳು ಅಧಿಕಾರವನ್ನು ಪಡೆದದ್ದು. ಅದರ ಸಹಾಯದಿಂದಲೇ ಅವು ಇನ್ನೂ ಹೆಚ್ಚಿನ ರೀತಿಯಲ್ಲಿ ಬೆಳೆಯಲು ಯತ್ನಿಸುತ್ತಿರುವುದು. ಬನ್ನಿ..... ಅಯೋಧ್ಯೆಯ ಸೌಹಾರ್ದ ಪರಂಪರೆಯನ್ನು ಪ್ರತಿನಿಧಿಸುವ ಕೆಲವು ಸಂಗತಿಗಳನ್ನು ಅರಿಯೋಣ...........

ಅಯೋಧ್ಯೆಯಲ್ಲಿ ರಾಮನಾಮಗಳುಳ್ಳ ಶಾಲುಗಳನ್ನು ನೇಯುವುದು, ದೇವಸ್ಥಾನಗಳಿಗೆ ಹೂಗಳನ್ನು ಬೆಳೆದು, ವಿತರಿಸುವುದು, ರಾಮನ ಮದುವೆ ಹಾಗೂ ರಾಮ್‌ಲೀಲಾಗೆ ಕುದುರೆಗಳನ್ನು ಹಾಗೂ ರಥಗಳ ವ್ಯವಸ್ಥೆ ಮಾಡುವುದು, ಪೂಜೆಗಳಿಗೆ ಚಂದನ ಹಾಗೂ ತುಳಸಿ ಹಾರಗಳನ್ನು ತಯಾರಿಸುವುದು ಮುಂತಾದ ಕೆಲಸಗಳೆಲ್ಲಾ ಜರಗುವುದು ಮುಸಲ್ಮಾನರಿಂದಲೇ ಇಷ್ಟೇಕೇ, ವಿಶ್ವ ಹಿಂದೂ ಪರಿಷತ್ ಹಮ್ಮಿಕೊಂಡಿದ್ದ ಒಂದು ಲಕ್ಷ ಅಭಿಯಾನ ವಿಫಲವಾಯಿತು. ಹೆಚ್ಚಿನ ಮುಸಲ್ಮಾನ ಬಡಗಿಗಳು ಕೆಲಸ ಹುಡುಕಿಕೊಂಡು ಅಯೋಧ್ಯೆಯನ್ನು ತೊರೆದಿದ್ದರಿಂದ ಹೀಗಾಯಿತು ಎಂಬುದು ಗಮನಾರ್ಹ. ಡಿಸೆಂಬರ್ ೬, ೧೯೯೨ ರಂದು ಬಾಬ್ರಿ ಮಸೀದಿ ಧ್ವಂಸದ ನಂತರ ಮುಸಲ್ಮಾನರ ಮನೆಗಳು, ಅಂಗಡಿಗಳು ಹಾಗೂ ಕುಟುಂಬಗಳ ಮೇಲೆ ಹೊರಗಡೆಯ ಕರಸೇವಕರಿಂದ ಧಾಳಿಯಾದಾಗ ಸಂತರು ಮುಸಲ್ಮಾನರ ರಕ್ಷಣೆಗೆ ಮುಂದಾದದ್ದು.

ಹನುಮಾನ ಗಢಿ ಮಂದಿರ, ಅಯೋಧ್ಯೆ

ಚಿತ್ರಗಳು : ಲೇಖಕ

ಅಯೋಧ್ಯೆಯಲ್ಲಿ ರಾಮಜನ್ಮ ಸ್ಥಾನವೆಂದು ಕರೆಯಲ್ಪಡುವ ದೇಗುಲ ಕಟ್ಟಿದ್ದು ಮುಸಲ್ಮಾನನೊಬ್ಬ ದಾನ ಮಾಡಿದ ಭೂಮಿಯಲ್ಲಿ ಅಲ್ಲದೆ ಈ ನಗರದಲ್ಲಿ ಸುಮಾರು ೨೮ ದೇಗುಲಗಳು, ಹಿಂದೂ ಅಖಾರಗಳನ್ನು ಕಟ್ಟುವುದರಲ್ಲಿ ಮುಸಲ್ಮಾರು ಪ್ರಮುಖ ಪಾತ್ರ ವಹಿಸಿದ್ದಾರೆ. ಮುಸಲ್ಮಾನ ರಾಜರು, ನವಾಬರು, ರಾಜ್ಯಪಾಲರು ಹಾಗೂ ಸ್ಥಳೀಯರು ದೇಗುಲಗಳನ್ನು ಕಟ್ಟಲು ಹಾಗೂ ಅವುಗಳ ನಿರ್ವಹಣೆಗಾಗಿ ಭೂಮಿ ಹಾಗೂ ಧನ ಸಹಾಯ ನೀಡಿರುವುದಕ್ಕೆ ದಾಖಲೆಗಳಿವೆ. ಖಾಕಿ ಅಖಾರ, ಬಡಾ ಭಕ್ತಮಲ್ ಮುಂತಾದ ಮಂದಿರಗಳಿಗಾಗಿ ಭೂಮಿಯನ್ನು ಉಂಬಳಿಯಾಗಿ ಮುಸಲ್ಮಾನರು ದಾನ ಮಾಡಿದ್ದಾರೆ.

ಅಯೋಧ್ಯೆಯಲ್ಲಿ ಹಿಂದೂ ಧರ್ಮದ ಮುಖ್ಯ ಪೂಜಾ ವಿಧಿಗಳಲ್ಲಿ 'ಠಾಕೂರ್‌ಜಿ ಕೀ ಭೋಗ್ ಆರತಿ'ಯೂ ಒಂದು. ದೇವಾಲಯಗಳಲ್ಲಿ ಜರಗುವ ಈ ಪೂಜೆಗಾಗಿ ಮುಸಲ್ಮಾನರು ಭೂಮಿಯನ್ನು ದಾನವಾಗಿ ನೀಡಿದ್ದಾರೆ. ನವಾಬರ ಆಸ್ಥಾನಗಳಲ್ಲಿದ್ದ ಮುಸಲ್ಮಾನ ಅಧಿಕಾರಿಗಳು ದೇಗುಲಗಳ ಹಿಂದೂ ಧಾರ್ಮಿಕ ವಿಧಿಗಳನ್ನು ಪ್ರೋತ್ಸಾಹಿಸುತ್ತಿದ್ದರೆಂಬುದಕ್ಕೆ ಅಯೋಧ್ಯೆಯ ದೇಗುಲಗಳಲ್ಲಿರುವ ಪಾಂಡಾಗಳ ಬಳಿ ಪುರಾವೆಗಳಿವೆ.

ಅಯೋಧ್ಯೆಯಲ್ಲಿ ಇಂತಹ ಸಮ್ಮಿಶ್ರ ಸಂಸ್ಕೃತಿಯ ಅನೇಕ ಪರಂಪರೆಗಳಿವೆ. ಕ್ರಿ.ಶ. ೧೮೭೦ರಲ್ಲಿ ಫೈಜಾಬಾದ್ ಜಿಲ್ಲೆಯ ಅಂದಿನ ಕಾರ್ಯವಾಹಿ ಕಮೀಷನರ್ ಆಗಿದ್ದ ಪಿ. ಕಾರ್ನೆಗಿ ಅಂತಹ ಕೆಲವು ದೃಷ್ಟಾಂತಗಳನ್ನು ದಾಖಲಿಸಿದ್ದಾನೆ. 'ಫೈಜಾಬಾದ್'ನ ಜಿಲ್ಲಾ ಐತಿಹಾಸಿಕ ರೇಖಾಚಿತ್ರ' ಎಂಬ ಅವನ ಕೃತಿಯಲ್ಲಿ ಮುಸಲ್ಮಾನರು ಹಿಂದೂ ಪೂಜಾ ಸ್ಥಳಗಳಿಗೆ ಮುಸಲ್ಮಾನರು ನೀಡಿದ ದಾನಗಳ ಉಲ್ಲೇಖಗಳಿವೆ.

ಒಳನೋಟ

ಕಳೆದ ಎರಡು ದಶಕಗಳಲ್ಲಿ ಅಯೋಧ್ಯೆಯ ಸರಯೂ ನದಿಯಲ್ಲಿ ಸಾಕಷ್ಟು ನೀರು ಹರಿದಿದೆ. ಸಂಘ ಪರಿವಾರದ ಸಂಸ್ಥೆಗಳಿಂದ ಇಲ್ಲಿ ಹಲವು ಉಗ್ರರೂಪದ ಕಾರ್ಯಕ್ರಮಗಳು ಜರುಗಿವೆ. ಇವು ಜರಗುವಾಗ ಅಯೋಧ್ಯೆಯ ಜನರಿಗೆ ಉಸಿರು ಕಟ್ಟುವಂಥ ಪರಿಸ್ಥಿತಿ. ಕಾನೂನು ಹಾಗೂ ಸುವ್ಯವಸ್ಥೆಯನ್ನು ಕಾಪಾಡುವ ದೃಷ್ಟಿಯಿಂದ ಮಾಡುವ ಬಂದೋಬಸ್ತ್‌ನಿಂದ ಜನರಿಗೆ ತೀವ್ರ ಕಿರಿಕಿರಿ ಎಷ್ಟೇ ಪ್ರಚೋದನಾಕಾರಿ ಕಾರ್ಯಕ್ರಮಗಳು ಜರುಗಿದರೂ, ಅಯೋಧ್ಯೆಯ ಸಾಮಾನ್ಯ ಹಿಂದೂ ಹಾಗೂ ಮುಸಲ್ಮಾನ ನಾಗರಿಕರು ಎಂದಿನಂತೆ ತಮ್ಮ ದೈನಂದಿನ ಜೀವನ ನಡೆಸುತ್ತಿದ್ದಾರೆ. ಅವರಲ್ಲಿ ಹೆಚ್ಚಿನವರು ರಾಮಜನ್ಮ ಭೂಮಿ ಬಾಬ್ರಿ ಮಸೀದಿ ವಿವಾದವನ್ನು ಹೊರಗಡೆಯ ಸ್ಥಾಪಿತ ಹಿತಾಸಕ್ತಿಗಳು ಹುಟ್ಟುಹಾಕಿದವೆಂದು ಅಭಿಪ್ರಾಯಪಡುತ್ತಾರೆ.

○ ಮ. ಶ್ರೀ ಮುರಳಿ ಕೃಷ್ಣ

ಫೈಜಾಬಾದ್ ಗೆಜೆಟಿಯರ್ (೧೯೦೫) ಹಾಗೂ ಕಾರ್ನಗಿಯ ದಾಖಲೆಗಳು (೧೮೬೭ರ ನಂತರ) ಮುಸಲ್ಮಾನ ದೊರೆಗಳು ಹಿಂದೂ ದೇಗುಲಗಳನ್ನು ಕಟ್ಟಿದ್ದು ಭೂಮಿಯನ್ನು ದಾನ ನೀಡಿದ್ದು ದೇವಾಲಯಗಳ ಸಂರಕ್ಷಣೆಗಾಗಿ ಮತ್ತು ಹಬ್ಬಗಳಿಗೆ ಸಹಾಯ ಹಸ್ತ ಚಾಚಿದ್ದರ ಬಗ್ಗೆ ಸಾರಿ ಹೇಳುತ್ತವೆ.

ಗೆಜೆಟಿಯರ್ ಪ್ರಕಾರ ಅಯೋಧ್ಯೆಯಲ್ಲಿ ಮಹಾರಾಜನ ಅರಮನೆ ಹಾಗೂ ರಾಣಿ ಬಜಾರ್‌ನ ಆಚೆ ೬೫ ಅಡಿ ಎತ್ತರದ ಮಣಿ ಪರ್ವತವೆಂಬ ಸಣ್ಣ ಗುಡ್ಡವಿತ್ತು. ಬಹುಶಃ ಅದರಲ್ಲಿ ಬುದ್ಧ ಸ್ತೂಪದ ಪಳೆಯುಳಿಕೆಗಳು ಇದ್ದಿರಬಹುದು. ಬುದ್ಧ ಇಲ್ಲಿ ಹಲವು ವರ್ಷಗಳ ಕಾಲ ಧ್ಯಾನದಲ್ಲಿದ್ದ ಎಂದು ಸ್ಥಳೀಯರು ನಂಬುತ್ತಾರೆ. ಜೈನ ತೀರ್ಥಂಕರರು ಇಲ್ಲಿ ಧರ್ಮೋಪದೇಶ ಮಾಡಿದರೆಂದು ಹೇಳುತ್ತಾರೆ. ಆದ್ದರಿಂದ 'ಸರ್ವ ಧರ್ಮ ಸಮಭಾವ' ಈ ಪುರಾತನ ನಗರಕ್ಕೆ ಹೊಸತೇನಲ್ಲ.

ಅಯೋಧ್ಯೆಯ ಈ ಕೆಳಕಂಡ ಕೆಲವು ದೇಗುಲಗಳನ್ನು ಕಟ್ಟುವುದರಲ್ಲಿ ಮುಸಲ್ಮಾನರು ಸಹಾಯಹಸ್ತ ನೀಡಿದ್ದಾರೆ.

೧) ರಾಮ್‌ಕೋಟ್‌ನಲ್ಲಿರುವ ಜನ್ಮಸ್ಥಾನ್ ಮಂದಿರ್-೧೬೬ ವರ್ಷಗಳು
೨) ಹನುಮಾನ್‌ಗರ್ಹಿ-೧೯೦೦ ವರ್ಷಗಳು
೩) ಆಚಾರಿ ಮಂದಿರ್
೪) ರಾನೋಪಾಲಿ ನಾನಕ್‌ಶಾಹಿ ಮಂದಿರ್
೫) ಖಾಕಿ ಅಬಾರ-೨೩೮ ವರ್ಷಗಳು
೬) ಸಂತೋಷಿ ಅಬಾರ-೩೩೬ ವರ್ಷಗಳು
೭) ಸ್ಥಾನ್ ರಾಮ್‌ಪ್ರಸಾದ್-ಅಜಹರ್ ಹುಸೈನ್ ಭೂಮಿಯನ್ನು ದಾನ ಮಾಡಿದ್ದು.
೮) ಅಬಾರ ಮಿರ್ ಅಲಂಭಿ-೩೩೬ ವರ್ಷಗಳು- ಮೊಘಲರು ಉಂಬಳಿ ನೀಡಿದರು.
೯) ದಿಗಂಬರ್ ಅಬಾರ ಮಂದಿರ್ (ಲಕ್ಷ್ಮಣ್ ಘಾಟ್‌ನಲ್ಲಿರುವ) -೨೮೮ ವರ್ಷಗಳು-ನವಾಬ ಅಸಫ್-ಉದ್-ದೌಲ ನೀಡಿದ ಉಂಬಳಿ.
೧೦) ಸ್ಥಾನ್ ಸರಯೂದಾಸ್-೨೫೧ ವರ್ಷಗಳು
೧೧) ಠಾಕುರ್ ದ್ವಾರ ರಾಮಚರಣ್ ದಾಸ್ -೨೨೬ ವರ್ಷಗಳು -ಉಂಬಳಿ ನೀಡಿದ್ದು ಉಮ್ಮೆದ್ ಅಲಿ ಜಮೀನ್‌ದಾರ್
೧೨) ಕುಟಿಯ ರಾಮಾನಂದದಾಸ್ -"-
೧೩) ಠಾಕುರ್ ದ್ವಾರ ದೇವಿದೀನ್ -"-
೧೪) ಶ್ರವಣ್‌ದಾಸ್‌ನ ಕುಟಿ -"-
೧೫) ಲಶ್ಕರಿ ರಾಮ್‌ದಾಸ್ ಭಕ್ತ್‌ಮಾಲ್ಜಿ -೧೯೪ ವರ್ಷಗಳು
೧೬) ಸ್ಥಾನ್ ಪುರಷೋತ್ತಮ್ ದಾಸ್.
೧೭) ಆಚಾರಿ ನಾಥು ಮಹಜನ್ ಕಾ ಮಂದಿರ್
೧೮) ಕೌಸಲ್ಯದಾಸ್‌ನ ಗದ್ದಿ-೪೩೬ ವರ್ಷಗಳ ದತ್ತಿ.
೧೯) ಜಾರ್ಖಂಡೀ ಮಹದೇವ್ -೨೩೬ ವರ್ಷಗಳ ದತ್ತಿ.
೨೦) ಕಲೇಶ್ವರ್ ನಾಥ್-೨೩೬ ವರ್ಷಗಳು
೨೧) ಮಾಧವ್ ರಾಮ್‌ಸ್ಥಾನ್-ನಾನಕ್‌ಶಾಹಿಯಿಂದ ೧೮೦ ವರ್ಷಗಳ ದತ್ತಿ.
೨೨) ನಾಗೇಶ್ವರನಾಥ್ ಮಹಾದೇವ್

ದಂತಧಾವನ್ ಆಚಾರಿ ಮಂದಿರ್ ಅಯೋಧ್ಯ

ಕೋಮು ಸಾಮರಸ್ಯ ಸಾರುವ ಅನೇಕ ಕ್ಷೇತ್ರಗಳು ಭಾರತ ಉದ್ದಗಲಗಳಲ್ಲಿದೆ. ಅವುಗಳಿಗೆ ಶತಮಾನಗಳಿಂದ ಹಿಂದೂಗಳು ಹಾಗೂ ಮುಸಲ್ಮಾನರು ನಡೆದುಕೊಂಡು ಬರುತ್ತಿದ್ದಾರೆ. ಆದರೆ ಸಂಘಪರಿವಾರದ ಕೋಮುವಾದಿಗಳು ಇಂತಹ ಕ್ಷೇತ್ರಗಳ ಬಗ್ಗೆ ಗಮನ ಹರಿಸಿ ರಾಜಕೀಯ ಲಾಭ ಪಡೆದುಕೊಳ್ಳಲು ಹುನ್ನಾರ ಹೂಡಿದ್ದಾರೆ.

ಅಯೋಧ್ಯೆಯ ಹನುಮಾನ್‌ರೆಡ್ಡಿ ದೇಗುಲದ ೫೭ (57) ವರ್ಷದ ಮಹಂತ ಗ್ಯಾನ್‌ದಾಸ್ ಉತ್ತರ ಭಾರತದ ಸಮ್ಮಿಶ್ರ ಪರಂಪರೆಯ ಒಂದು ಉತ್ತಮ ಪ್ರತೀಕ. ಅವರು ಡಿಸೆಂಬರ್ ೨೦೦೩ ರಲ್ಲಿ ರಂಜಾನ್ ಅವಧಿಯಲ್ಲಿ ತಮ್ಮ ದೇಗುಲದ ಒಳಗೆ ರೋಜಾ ಇಫ್ತಾರ್‌ನ್ನು ಆಯೋಜಿಸಿದ್ದರು. ವಿವಾದಗ್ರಸ್ಥ ನಿವೇಶನದಲ್ಲಿರುವ ರಾಮ್ ಲಲ್ಲಾ ದೇಗುಲದ ಮುಖ್ಯ ಅರ್ಚಕ ಸತ್ಯೇಂದ್ರ ದಾಸ್, ಬಾಬ್ರಿ ಮಸೀದಿ ಕ್ರಿಯಾ ಸಮಿತಿಯ ಅಧ್ಯಕ್ಷ ಯೂನಸ್ ಸಿದ್ದಬಿ, ಬಾಬ್ರಿ ಮಸೀದಿ ಹಕ್ಕಿನ ದಾವೆಯ ಮುಖ್ಯವಾದಿ ಹಷೀಮ್ ಅನ್ಸಾರಿ ಮುಂತಾದವರು ಈ ಸಮಾರಂಭದಲ್ಲಿ ಭಾಗವಹಿಸಿದ್ದರು. ನಂತರ ಪ್ರಮುಖ ಮುಸಲ್ಮಾನ ನಾಯಕರೊಬ್ಬರು ಮಸೀದಿಯ ಸಮೀಪ ಹನುಮಾನ್ ಚಾಲೀಸ್ ಹಾಗೂ ರಾಮಾಯಣದ ಸುಂದರಖಾಂಡದ ಪಾರಾಯಣವನ್ನು ಏರ್ಪಡಿಸಿದ್ದರು.

ವಿಶ್ವ ಹಿಂದೂ ಪರಿಷತ್‌ನವರು ಜ್ಞಾನ್‌ದಾಸ್‌ರ ಮೇಲೆ ಕೆಂಡ ಕಾರುತ್ತಾರೆ. ಮೊದಲು ರಾಮಜನ್ಮಭೂಮಿ ಪರವಿದ್ದ ಈ ಮಹಂತ ಈಗ ಜಾತ್ಯತೀತರಾಗಿ ಪರಿವರ್ತಿತರಾಗಿರುವ ದ್ರೋಹಿ ಎಂದು ಅವರು ಆಪಾದಿಸುತ್ತಾರೆ. ಈ ವಿ. ಎಚ್.ಪಿ. ಭಯೋತ್ಪಾದಕರಿಂದ ಹಿಂದೂ ಧರ್ಮವನ್ನು ರಕ್ಷಿಸುವುದು ಪ್ರತಿಯೊಬ್ಬ ಒಳ್ಳೆಯ ಹಿಂದುವಿನ ಕರ್ತವ್ಯ. ಅಯೋಧ್ಯೆಯ ವಿವಾದವನ್ನು ಅಲ್ಲಿನ ಹಿಂದೂಗಳು ಹಾಗೂ ಮುಸಲ್ಮಾನರೇ ಬಗೆಹರಿಸಿಕೊಳ್ಳಬೇಕು. ಅಯೋಧ್ಯೆಯಲ್ಲಿ ಸಾಮರಸ್ಯವಿದೆ. ಅಲ್ಲಿ ಮಂದಿರ ಹಾಗೂ ಮಸೀದಿ ಒಟ್ಟಿಗೆ ಇರಬೇಕು. ಇಲ್ಲದಿದ್ದರೆ ನ್ಯಾಯಾಲಯದ ತೀರ್ಪಿಗಾಗಿ ಕಾಯಬೇಕು ಎಂಬುದು ಜ್ಞಾನದಾಸರ ಸ್ಪಷ್ಟ ಅಭಿಪ್ರಾಯ.

ಕೋಮು ಸಾಮರಸ್ಯ ಸಾರುವ ಅನೇಕ ಕ್ಷೇತ್ರಗಳು ಭಾರತ ಉದ್ದಗಲಗಳಲ್ಲಿದೆ. ಅವುಗಳಿಗೆ ಶತಮಾನಗಳಿಂದ ಹಿಂದೂಗಳು ಹಾಗೂ ಮುಸಲ್ಮಾನರು ನಡೆದುಕೊಂಡು ಬರುತ್ತಿದ್ದಾರೆ. ಆದರೆ ಸಂಘ ಪರಿವಾರದ ಕೋಮುವಾದಿಗಳು ಇಂತಹ ಕೆಲವು ಕ್ಷೇತ್ರಗಳ ಬಗ್ಗೆ ಗಮನ ಹರಿಸಿ ರಾಜಕೀಯ ಲಾಭ ಪಡೆದುಕೊಳ್ಳಲು ಹುನ್ನಾರ ಹೂಡಿದ್ದಾರೆ. ಇದಕ್ಕೆ ನಮ್ಮ ರಾಜ್ಯದ ಬಾಬಾ-ಬುಡನ್‌ಗಿರಿ ಒಂದು ಉತ್ತಮ ಉದಾಹರಣೆ. ಆದರೆ ಈ ವಿಷಯದಲ್ಲಿ ಕರ್ನಾಟಕ ಜಾತ್ಯಾತೀತ ಶಕ್ತಿಗಳು ಒಗ್ಗಟ್ಟಾಗಿ ಸರಿಯಾದ ಉತ್ತರ ನೀಡಿದ್ದಾರೆ. ಈ ಶಕ್ತಿಗಳು ಇನ್ನೂ ಸಶಕ್ತವಾಗುವುದು ಇಂದಿನ ತುರ್ತು. ಧರ್ಮಗಳು ಕೋಮುವಾದಿ, ಉಗ್ರವಾದಿ ಹಾಗೂ ಮೂಲಭೂತವಾದಿಗಳ ಪಗಡೆಕಾಯಿಗಳಾಗದಿರುವಂತೆ ಸಾಮಾನ್ಯ ಜನರು ನಿಗಾ ವಹಿಸಬೇಕು. ಆಗ ಮಾತ್ರ ನೆಮ್ಮದಿಯ ಜೀವನ ಸಾಧ್ಯ. □



ರಣೋಪಾಲಿ ನಾನಕ್‌ಶಾಹಿ ಮಂದಿರ್, ಅಯೋಧ್ಯೆ

ಏಕರೂಪಿ ಮತ್ತು ಬಹುರೂಪಿ ಸಂಸ್ಕೃತಿಗಳ ಮುಖಾಮುಖಿ

ಎ.ಚಂದ್ರಶೇಖರ ನಂಗಲಿ

ದೃಷ್ಟಿಕೋನ

ಇಂದಿನ ಜಗತ್ತು ದುಡಿಮೆ-ಉತ್ಪಾದನೆ-ಬಳಕೆ ಎಂಬ ತ್ರಿಮುಖ ಸಂಬಂಧವನ್ನು ಆಧರಿಸಿದ ಜೀವನಕ್ರಮಗಳಿಂದಾಗಿ ಏಕರೂಪಿ ಸಂಸ್ಕೃತಿ ಮತ್ತು ಬಹುರೂಪಿ ಸಂಸ್ಕೃತಿಗಳಲ್ಲಿ ಹಂಚಿಹೋಗಿದ್ದು ಇವೆರಡರ ಹೊಕ್ಕು ಬಳಕೆ, ಸಮ್ಮಿಶ್ರಣ, ಸಂಘರ್ಷ, ಮುಖಾಮುಖಿಗಳು ಏಕಕಾಲಕ್ಕೆ ಸ್ಥಳೀಯವೂ ಜಾಗತಿಕವೂ ಆಗಿವೆ. ಆದ್ದರಿಂದಲೇ ಏಕರೂಪಿ ಸಂಸ್ಕೃತಿ ಮತ್ತು ಬಹರೂಪಿ ಸಂಸ್ಕೃತಿಗಳನ್ನು ಕೇವಲ ಎರಡು ವಿರುದ್ಧ ಧ್ರುವಗಳೆಂಬಂತೆ, ಅಥವಾ ಎರಡು ಪ್ರತ್ಯೇಕ ದ್ವೀಪಗಳಂತೆ ಗ್ರಹಿಸುವುದು ಉಚಿತವಲ್ಲ. ಹಾಗೆಯೇ, ಪಾಶ್ಚಾತ್ಯ ಸಂಸ್ಕೃತಿಯು ಏಕರೂಪಿ, ಪೌರ್ವಾತ್ಯ ಸಂಸ್ಕೃತಿಯು ಬಹುರೂಪಿ ಎಂಬ 'ಪೂರ್ವ' (ಮೊದಲೇ ತಿಳಿದ) ತತ್ವವೂ ಸಾಧುವಲ್ಲ.

ಸಾಹಿತ್ಯ ಅಕಾಡೆಮಿ, ದಕ್ಷಿಣ ಪ್ರಾದೇಶಿಕ ಕಚೇರಿ, ಬೆಂಗಳೂರು ಹಾಗೂ ಕೋಲಾರ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು, ಕೋಲಾರ-ಸಹಯೋಗದಲ್ಲಿ ದಿನಾಂಕ: ೧೭.೨.೨೦೦೩ ರಂದು ಕೋಲಾರದಲ್ಲಿ 'ಏಕರೂಪಿ ಸಂಸ್ಕೃತಿ ಮತ್ತು ಬಹುರೂಪಿ ಸಂಸ್ಕೃತಿ'ಗಳ ಮುಖಾಮುಖಿ ಕುರಿತು ಸಂವಾದ ಗೋಷ್ಠಿಯನ್ನು ಏರ್ಪಡಿಸಲಾಗಿತ್ತು. ಈ ಗೋಷ್ಠಿಯಲ್ಲಿ ಮಂಡಿಸಿದ ಅಧ್ಯಕ್ಷ ಭಾಷಣವನ್ನಾಧರಿಸಿದ ಲೇಖನವಿದು. ಇದರಲ್ಲಿ ಭಾಗ ವಹಿಸಿದ್ದ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಲ್ಲಿ ಕೆಲವರು ಕೇಳಿದ ಪ್ರಶ್ನೆ ಗಳಲ್ಲಿ ಕೆಲವನ್ನು ಇಲ್ಲಿ ಆಯ್ದು ಕೊಡಲಾಗಿದೆ.

೧. ಏಕರೂಪಿ ಸಂಸ್ಕೃತಿ ಮತ್ತು ಬಹುರೂಪಿ ಸಂಸ್ಕೃತಿಗಳಲ್ಲಿ ಯಾವುದು ಯೋಗ್ಯ?

೨. ಏಕರೂಪಿ ಸಂಸ್ಕೃತಿಗೂ ಜಾಗತೀಕರಣಕ್ಕೂ ಸಂಬಂಧವೇನು?

೩. ನಶಿಸುತ್ತಿರುವ ಬಹುಮುಖಿ ಸಂಸ್ಕೃತಿಯ ನಾಶದಿಂದ ಪರಿಸರ-ಭೌಗೋಳಿಕ-ಮಾನವ ಜನಾಂಗದ ಮೇಲೆ ಎರಗುವ ಬಲತ್ಕಾರದ ಸನ್ನಿವೇಶಗಳನ್ನು ವಿಶದ ಪಡಿಸಿ.

೪. ಏಕಮುಖಿ ಸಂಸ್ಕೃತಿಯಿಂದ ಜಗತ್ತಿನ ಮೇಲೆ ಅತ್ಯಾಚಾರ ಮಾಡುತ್ತಿರುವ ಅಮೆರಿಕಾದ ತರ್ಕವಾದರೂ ಏನು? ಸಮಂಜಸವೆ?

೫. ನಮ್ಮ ಸಾಹಿತ್ಯ, ಕವನ, ಪದ್ಯ ಇತ್ಯಾದಿಗಳ ಪ್ರಭಾವ ಏಕಮುಖಿ ಸಂಸ್ಕೃತಿಯ ದುಷ್ಕೃತ್ಯಗಾರರ ಮೇಲೆ ಏನು ಪರಿಣಾಮ ಬೀರಿದೆ?

೬. ಆದಿವಾಸಿ ಮತ್ತು ಬುಡಕಟ್ಟು ಜನರ ಬದುಕು ತನ್ನದೇ ಆದ ಏಕತ್ವವನ್ನು ಹೊಂದಿರುವುದರಿಂದ ಇಂಥ ಏಕತೆಯು ಒಳ್ಳೆಯದೇ ಅಲ್ಲವೆ?

೭. ನನ್ನದೇ ಆದ ಮುಜುಗರ, ಸಂಕೋಚಗಳು ನನಗಿರುತ್ತವೆ. ಇದನ್ನು ಇತರರೊಂದಿಗೆ ಹೇಳಿಕೊಳ್ಳಲಾಗುವುದಿಲ್ಲ. ಇಂಥ ಏಕತೆಯು ನಮಗೆ ಬೇಡವೆ?

೮. 'ಏಕರೂಪಿ ಸಂಸ್ಕೃತಿ' ಹುಸಿಯಾದುದು. ಒಂದು ಭಾಷೆ, ಒಂದು ಧರ್ಮ, ಒಂದು ಜನಾಂಗ ಎಂಬುದಿಲ್ಲ. ಬಹುರೂಪಿ ಸಂಸ್ಕೃತಿಯೇ ಎಲ್ಲ ಕಡೆಗಿದೆ. ಇದನ್ನರಿತು ನಾವೆಲ್ಲರು ಬಹುರೂಪಿ ಸಂಸ್ಕೃತಿಯೊಂದಿಗೆ ಬದುಕಬೇಕಾಗಿದೆ.

ಮೇಲಿನ ಪ್ರಶ್ನೆಗಳು ಮತ್ತು ಅಭಿಪ್ರಾಯಗಳ ಹಿಂದಿರುವ ಗೊಂದಲ, ಅಸ್ಪಷ್ಟತೆ, ಗ್ರಹಿಕೆಯಲ್ಲಿನ ದೋಷಗಳನ್ನು ಉಪೇಕ್ಷಿಸುವಂತಿಲ್ಲ. ಏಕೆಂದರೆ, ಇವೆಲ್ಲ ನಮ್ಮ ಇಂದಿನ ಯುವ ಪೀಳಿಗೆ ಮತ್ತು ಸಾರ್ವಜನಿಕರಲ್ಲಿರುವ ತಾತ್ಪರ್ಯಗಳಾಗಿವೆ. ಇವು ಓದು-ಕಲಿಕೆ ಮತ್ತು ಸಮೂಹ ಮಾಧ್ಯಮ ಗಳು ಹಾಗೂ ಕಂಡುಂಡ ಬದುಕಿನ ಫಲಿತಗಳೂ ಆಗಿರಬಹುದು. ಮೇಲಿನ ಎಲ್ಲ ಪ್ರಶ್ನೆಗಳಿಗೆ ಇವತ್ತೆ ಉತ್ತರ ಕಂಡುಕೊಳ್ಳಬೇಕೆಂಬ ಹಠ, ನಾನು ತಿಳಿದಿರುವುದೇ ಸರಿಯಾದದ್ದು ಎಂಬ ವ್ಯಸನಗಳನ್ನು ತ್ಯಜಿಸಿ, ಪರಸ್ಪರರನ್ನು ಅರ್ಥಮಾಡಿಕೊಳ್ಳುವ, ಮತ್ತೊಬ್ಬರ ಅಂತರಂಗವನ್ನು ಒಳ ಹೊಕ್ಕು ನೋಡುವ, ಹಾಗೂ ನಮ್ಮ ಡೊಂಕುಗಳನ್ನು ನಾವೇ ತಿದ್ದಿ ಕೊಳ್ಳುವ-ಸಹೃದಯ ಪ್ರಜ್ಞೆಯಿಂದ ಪ್ರವೇಶಿಸಬೇಕಾಗಿದೆ. ಈ ನಿಟ್ಟಿನಿಂದ ಮುಂದಿನ ಮಾತುಗಳನ್ನು ಮನನ ಮಾಡಿಕೊಳ್ಳಬೇಕೆಂದು ಕೋರುತ್ತೇನೆ.

ಇಂದಿನ ಜಗತ್ತು ದುಡಿಮೆ-ಉತ್ಪಾದನೆ-ಬಳಕೆ ಎಂಬ ತ್ರಿಮುಖ ಸಂಬಂಧವನ್ನು ಆಧರಿಸಿದ ಜೀವನಕ್ರಮಗಳಿಂದಾಗಿ ಏಕರೂಪಿ ಸಂಸ್ಕೃತಿ ಮತ್ತು ಬಹುರೂಪಿ ಸಂಸ್ಕೃತಿಗಳಲ್ಲಿ ಹಂಚಿಹೋಗಿದ್ದು ಇವೆರಡರ ಹೊಕ್ಕು ಬಳಕೆ, ಸಮ್ಮಿಶ್ರಣ, ಸಂಘರ್ಷ, ಮುಖಾಮುಖಿಗಳು ಏಕಕಾಲಕ್ಕೆ ಸ್ಥಳೀಯವೂ ಜಾಗತಿಕವೂ ಆಗಿವೆ. ಆದ್ದರಿಂದಲೇ ಏಕರೂಪಿ ಸಂಸ್ಕೃತಿ ಮತ್ತು ಬಹರೂಪಿ ಸಂಸ್ಕೃತಿಗಳನ್ನು ಕೇವಲ ಎರಡು ವಿರುದ್ಧ ಧ್ರುವ ಗಳೆಂಬಂತೆ, ಅಥವಾ ಎರಡು ಪ್ರತ್ಯೇಕ ದ್ವೀಪಗಳಂತೆ ಗ್ರಹಿಸುವುದು ಉಚಿತವಲ್ಲ. ಹಾಗೆಯೇ, ಪಾಶ್ಚಾತ್ಯ ಸಂಸ್ಕೃತಿಯು ಏಕರೂಪಿ, ಪೌರ್ವಾತ್ಯ ಸಂಸ್ಕೃತಿಯು ಬಹುರೂಪಿ ಎಂಬ 'ಪೂರ್ವ' (ಮೊದಲೇ ತಿಳಿದ) ತತ್ವವೂ ಸಾಧುವಲ್ಲ.

ಏಕ, ಏಕಾಕಿ, ಏಕಾಂತ, ಪ್ರತ್ಯೇಕ, ಏಕರೂಪಿ, ಏಕಮುಖಿ, ಏಕತ್ವ, ಐಕ್ಯತೆ ಎಂಬ ಪದಪುಂಜಗಳೆಲ್ಲ ಏಕಾರ್ಥ ಬೋಧಕಗಳಲ್ಲವೆಂಬುದನ್ನು ಅರ್ಥಮಾಡಿಕೊಳ್ಳಬೇಕು. ಇವನ್ನು ಖಚಿತವಾಗಿ ಗ್ರಹಿಸುವ ದೃಷ್ಟಿ ಯಿಂದ ಇದೇ ಪದಪುಂಜಗಳನ್ನು ಗಮನಿಸಿ ಕೆಲವೊಂದು ಪದಜೋಡಿ ಗಳನ್ನಿಲ್ಲಿ ಕೊಡಲಾಗಿದೆ.

ಏಕ	-	ಅನೇಕ
ಏಕಾಂತ	-	ಲೋಕಾಂತ
ಏಕರೂಪಿ	-	ಬಹುರೂಪಿ
ಏಕಮುಖಿ	-	ಬಹುಮುಖಿ
ಏಕತ್ವ	-	ಬಹುತ್ವ
ಅನೈಕ್ಯತೆ	-	ಐಕ್ಯತೆ

ಮೇಲಿನ ಪದಜೋಡಿಗಳಲ್ಲಿ ಸಂಸ್ಕೃತಿ ಚರ್ಚೆಯ ದೃಷ್ಟಿಯಿಂದ ಏಕತ್ವ-ಬಹುತ್ವ, ಏಕರೂಪ-ಬಹುರೂಪಿ, ಏಕಮುಖಿ-ಬಹುಮುಖಿ ಎಂಬ ತ್ರಿವಳಿಗಳನ್ನು ವಿಶೇಷವಾಗಿ ಗಮನಿಸಬೇಕಾಗಿದೆ. ಏಕಾಕಿ, ಏಕಾಂತ ಇವು ವ್ಯಕ್ತಿ ನಿಷ್ಠವಾದ, ಅಂತರಂಗಕ್ಕೆ ಸಂಬಂಧಪಟ್ಟ ಸಂಗತಿಗಳಾಗಿರು ವುದರಿಂದ ಈ ಸಂದರ್ಭದಲ್ಲಿ ಹೊರಗಿಡಲಾಗಿದೆ. ಇವನ್ನು ಸಂಸ್ಕೃತಿ ಚರ್ಚೆಗೆ ಎಳೆದು ತಂದು ಅನಗತ್ಯ ಗೊಂದಲ ನಿರ್ಮಾಣ ಮಾಡಿಕೊಳ್ಳಬಾರದೆಂಬ ಸದಾಶಯ ಇಲ್ಲಿದೆ.

ಪ್ರಪಂಚದ ಇತರ ದೇಶಗಳಿಗೆ ಹೋಲಿಸಿದರೆ ಭಾರತವು 'ಬಹುಭಾಷಾ' ಪರ್ಯಾಯ ದ್ವೀಪವಾಗಿದೆ. ಕೇವಲ ಒಂದೇ ಒಂದು ಭಾಷೆ ಮಾತನಾಡುವ ವ್ಯಕ್ತಿ ನಿಜವಾದ ಅರ್ಥದಲ್ಲಿ 'ಭಾರತೀಯ' ನಾಗಲಾರ! ಈ ಮಾತನ್ನು ವಿದ್ವಾಂಸರು, ಬುದ್ಧಿ ಜೀವಿಗಳು, ಸಾಹಿತಿಗಳನ್ನು ಲಕ್ಷಿಸಿ ಹೇಳುತ್ತಿಲ್ಲ. ನಮ್ಮ ದೇಶದ ಸಾಮಾನ್ಯ ಜನರು, ವರ್ತಕರು, ವಿವಿಧ ವೃತ್ತಿಗಳಲ್ಲಿ ನಿರತರಾದವರು ಮೂರ್‍ನಾಲ್ಕು ಭಾಷೆಗಳನ್ನು ಬಲ್ಲವರಾಗಿ ರುತ್ತಾರೆ. ಬಹುಭಾಷೆಗಳು, ಬಹುಧರ್ಮಗಳು, ಬಹುಕೃಷಿಗಳು, ಬಹುವಿಧ ಆಹಾರಗಳು, ಬಹುವಿಧ ವೈದ್ಯಕೀಯ ಪದ್ಧತಿಗಳು, ಬಹು ವಿಧ ಕ್ರೀಡೆಗಳು-ಹೀಗೆ ಬಾಹುಳ್ಯವೇ ಜೀವದುಸಿರಾಗಿರುವ ಸಾಮಾಜಿಕ ಪರಿಸ್ಥಿತಿ ನಮ್ಮ ದೇಶದಲ್ಲಿದೆ. 'ಬಹುಸುತೆ' ಎಂಬುದೊಂದು ಸಸ್ಯದ ಹೆಸರಾಗಿದೆ. ಬಹುಸುತೆಯನ್ನು 'ಶತಾವರಿ' ಅಥವಾ 'ಹಲವು ಮಕ್ಕಳ ತಾಯಿ' ಎಂದು ಕರೆಯುತ್ತಾರೆ..

ಸಂವತ್ಸರಗಳಲ್ಲಿ 'ಬಹುಧಾನ್ಯ' ಸಂವತ್ಸರವೂ ಒಂದು. ಬಹುತ್ವವನ್ನು ಸಸ್ಯಗಳಿಗೆ, ಧಾನ್ಯಗಳಿಗೆ, ಸಂವತ್ಸರಕ್ಕೆ ನಾಮಕರಣ ಮಾಡಿರುವ ನಮ್ಮ ದೇಶದಲ್ಲಿ ಬಹುರೂಪಿ ಜೀವನ ಕ್ರಮಕ್ಕೆ, ಬಹುರೂಪಿ ಸಂವೇದನೆಗಳಿಗೆ ಸಹಜವಾದ ಮನ್ನಣೆಯಿದೆ. ಆದರೆ, ಆಗಲೇ ಹೇಳಿದಂತೆ ದುಡಿಮೆ ಉತ್ಪಾದನೆ-ಬಳಕೆಯನ್ನಾಧರಿಸಿದ ಯಜಮಾನ್ಯದ ನೆಲೆಗಳು, ತನ್ನ ಆಕ್ರಮಣಕಾರಿ ಪ್ರವೃತ್ತಿಯಿಂದ ಎಲ್ಲೆಡೆಗಳಲ್ಲಿ ಪ್ರಭಾವ ಬೀರುತ್ತಾ ಬಹು ರೂಪಿ ಜೀವನಕ್ರಮ ಮತ್ತು ಬಹುಮುಖಿ ಸಂವೇದನೆಗಳನ್ನು ಘಾಸಿ ಗೊಳಿಸುತ್ತಾ ತಾನೇ 'ಪ್ರಗತಿ ಶೀಲ' ವೆಂಬ ಭ್ರಮೆಯನ್ನು ವ್ಯವಸ್ಥಿತವಾಗಿ ಜನರೆದೆಯಲ್ಲಿ ಬಿತ್ತನೆ ಮಾಡುತ್ತಿರುತ್ತದೆ.

'ಏಕರೂಪಿ ಸಂಸ್ಕೃತಿ' ಯೊಂದು ಹುಟ್ಟಿಕೊಳ್ಳಲು ಕಾರಣಗಳೇನು?

ಯಾವ ಬಗೆಯ ಸಾಮಾಜಿಕ ಪರಿಸ್ಥಿತಿಯಲ್ಲಿ ಬಹುರೂಪಿ ಸಂಸ್ಕೃತಿಗಳು ತಮ್ಮ ಚಹರೆಗಳನ್ನು ಕಳೆದುಕೊಳ್ಳುತ್ತವೆ? ಏಕರೂಪಿ ಸಂಸ್ಕೃತಿ ಮತ್ತು

ಬಹುರೂಪಿ ಸಂಸ್ಕೃತಿಗಳ ಸೃಷ್ಟಿ-ಸ್ಥಿತಿ-ಲಯಗಳ ಸ್ವರೂಪ ವೇನು? ಇವು ಗಳ ಅಸ್ತಿತ್ವ ಮತ್ತು ಕಣ್ಮರೆಗಳನ್ನು ನಿಯಂತ್ರಿಸುತ್ತಿರುವ ಸ್ಥಳೀಯ ಹಾಗೂ ಜಾಗತಿಕ ಕಾರಣಗಳಾವುವು?-ಮುಂತಾದ ಪ್ರಶ್ನೆಗಳನ್ನಿಲ್ಲಿ ಎತ್ತಿಕೊಂಡು ಪೂರ್ಣ ದೃಷ್ಟಿಯಿಂದ ವಿವೇಚಿಸಬೇಕಾಗಿದೆ.

ಯಾವುದೇ ಜೀವನ ಕ್ರಮದ ತಳಹದಿಯೆಂದರೆ ದುಡಿಮೆ ಉತ್ಪಾದನೆ-ಬಳಕೆ ಎನ್ನಬಹುದು. ಈ ತ್ರಿಮುಖ ಸಂಬಂಧದಲ್ಲಿ ಆಗುವ ಮಾರ್ಪಾಟುಗಳು ಮತ್ತು ಪರಿವರ್ತನೆಗಳು ಬಹುಮುಖ್ಯವಾದವು. ತಳಹದಿ ಮತ್ತು ಕಟ್ಟಡಗಳ ನಡುವಣ ಅವಿಭಾಜ್ಯ ಸಂಬಂಧವನ್ನು ಮನಸ್ಸಿನಲ್ಲಿಟ್ಟು ಕೊಂಡರೆ, ದುಡಿಮೆ-ಉತ್ಪಾದನೆ-ಬಳಕೆಗಳಿಗೆ ಅನುಗುಣವಾದ 'ಜೀವನ ಶೈಲಿಗಳು' ನಿರ್ಮಾಣಗೊಳ್ಳುವುದರ ಅರಿವಾಗುತ್ತದೆ. ಪ್ರಸ್ತುತ, ಮನುಷ್ಯ ಸಮುದಾಯಗಳಲ್ಲಿ ಅಸ್ತಿತ್ವದಲ್ಲಿರುವ ಸಕಲ ವಿಧವಾದ ದುಡಿಮೆಗಳು-ಸಕಲ ವಿಧವಾದ ಉತ್ಪಾದನೆಗಳು-ಸಕಲ ವಿಧವಾದ ಬಳಕೆಗಳನ್ನು ಅಖಂಡ ದೃಷ್ಟಿಯಿಂದ ಗ್ರಹಿಸಬೇಕು.

ದುಡಿಮೆಗಾರ-ಉತ್ಪಾದಿತ ವಸ್ತು-ಬಳಕೆದಾರ ಎಂಬ ತ್ರಿಮುಖ ಸಂಬಂಧವು ಕಣ್ಣಳತೆಯಲ್ಲಿದ್ದಾಗ ಬಹುರೂಪಿ ಸಂಸ್ಕೃತಿಯು ಅಸ್ತಿತ್ವದಲ್ಲಿರುತ್ತದೆ..

ಇಲ್ಲಿ ದುಡಿಮೆಗಾರನ ಮುಖವನ್ನು ಬಳಕೆದಾರನನೂ, ಬಳಕೆದಾರನ ಮುಖವನ್ನು ದುಡಿಮೆಗಾರನೂ ನೋಡುತ್ತಿರುತ್ತಾನೆ. ಉತ್ಪಾದಿತ ವಸ್ತುವಿನೊಂದಿಗೆ ಆತ್ಮೀಯವಾದ ಸಂಬಂಧವೊಂದು ದುಡಿಮೆಗಾರರ ಮತ್ತು ಬಳಕೆದಾರರಿಬ್ಬರಿಗೂ ಇರುತ್ತದೆ. ಇದಕ್ಕೆ ನಮ್ಮ ಹಳ್ಳಿಯ ಸಂತೆಗಳು ಉತ್ತಮವಾದ ಉದಾಹರಣೆ. ಕರಿಮೀನು-ಹಗ್ಗ-ಸುಣ್ಣ-ಮಡಕೆ-ಕೃಷಿ ಉಪಕರಣಗಳು, ಸೊಪ್ಪು, ತರಕಾರಿ,-ಹೀಗೆ 'ಉತ್ಪಾದಿತ ವಸ್ತು' ಯಾವುದೇ ಇರಲಿ ದುಡಿಮೆಗಾರ ಮತ್ತು ಬಳಕೆದಾರ ಒಬ್ಬರ ಮುಖವನ್ನು ಒಬ್ಬರು ನೋಡಿಕೊಳ್ಳುತ್ತಾರೆ. ಇಲ್ಲಿನ ಪ್ರಮುಖ ಸಂಬಂಧವು ಕಣ್ಣಳತೆಯಲ್ಲಿದ್ದು ಮುಖಸಹಿತವಾಗಿರುತ್ತದೆ. ಇಲ್ಲಿ ಸ್ಥಳೀಯವಾದ ಅಥವಾ ಜಾಗತಿಕವಾದ ದಲ್ಲಾಳಿಗಳು, ಏಜೆನ್ಸಿಗಳು ತಲೆ ಹಾಕುವುದಿಲ್ಲ.

ದುಡಿಮೆಗಾರ ಮತ್ತು ಬಳಕೆದಾರರ ನಡುವೆ ದಲ್ಲಾಳಿಗಳು, ಏಜೆನ್ಸಿಗಳು ತಲೆ ಹಾಕಿದಂತೆಲ್ಲ ಪರಿಸ್ಥಿತಿ ಹದಗೆಡುತ್ತಾ ಸಾಗುತ್ತದೆ. ಉತ್ಪಾದಿತ ವಸ್ತುಗಳ ಬೆಲೆ ಏರು ಪೇರಾಗುತ್ತದೆ. ದುಡಿಮೆ ಗಾರ ಪಡೆದುಕೊಳ್ಳುವ ಹಣಕ್ಕೂ ಬಳಕೆದಾರ ಕೊಡುವ ಹಣಕ್ಕೂ ಅಜಗಜಾಂತರ ವ್ಯತ್ಯಾಸಗಳು ಸೃಷ್ಟಿಯಾಗುತ್ತವೆ. ಉತ್ಪಾದಿತ ವಸ್ತುಗಳನ್ನು ಬಹುಕಾಲ ಸಂಗ್ರಹಿಸಲು, ಕೆಡದಂತೆ ರಕ್ಷಿಸಲು ತಂತ್ರ ಜ್ಞಾನದ ಆಗಮನವಾಗುತ್ತದೆ. ಇದರಲ್ಲಿ ಶ್ರೇಷ್ಠತೆಯ ವ್ಯಸನ ಮತ್ತು ಬಲಿಷ್ಠತೆಯ ಆಗಮನವಾಗುತ್ತದೆ.

ಇದರಲ್ಲಿ ಶ್ರೇಷ್ಠತೆಯ ವ್ಯಸನ ಮತ್ತು ಬಲಿಷ್ಠತೆಯ ವ್ಯಸನಗಳೂ ಪ್ರವೇಶ ಪಡೆದು ಸ್ಪರ್ಧೆ ಅಥವಾ ಪೈಪೋಟಿ ಹೆಚ್ಚುತ್ತದೆ..

ಯುಗಯುಗಾಂತರಗಳಿಂದ ಬೀಜ - ಗೊಬ್ಬರ- ಕ್ರಿಮಿನಾಶಕಗಳಲ್ಲಿ ಸ್ವಾವಲಂಬನೆಯನ್ನು ಗಳಿಸಿದ್ದ ರೈತರು, ನಿಧನಿಧಾನವಾಗಿ ಶಾಶ್ವತವಾಗಿ ಪರಾವಲಂಬನೆಗೊಳಗಾಗುತ್ತಾರೆ. ದುಡಿಮೆಗಾರ-ಉತ್ಪಾದಿತವಸ್ತು-ಬಳಕೆದಾರ ಎಂಬ ತ್ರಿಮುಖ ಸಂಬಂಧವು ಕಣ್ಮರೆಯಾದಂತೆಲ್ಲ ಏಕರೂಪಿ ಸಂಸ್ಕೃತಿಯು ರೂಪುಗೊಳ್ಳುತ್ತಾ ಬರುತ್ತದೆ. ಇಲ್ಲಿ ದುಡಿಮೆಗಾರನ ಮುಖವನ್ನು ಬಳಕೆದಾರನೂ, ಬಳಕೆದಾರಿನ ಮುಖವನ್ನು ದುಡಿಮೆಗಾರನೂ ನೋಡಲು ಸಾಧ್ಯವಿಲ್ಲ. ಶೀಘ್ರಫಲದಾಯಕ ಅಥವಾ ಶೀಘ್ರ ಲಾಭದಾಯಕವಾದ ಉತ್ಪಾದಿತ ವಸ್ತುವಿನೊಂದಿಗೆ ಆತ್ಮೀಯವಾದ ಸಂಬಂಧವು ದುಡಿಮೆಗಾರ ಮತ್ತು ಬಳಕೆದಾರರಿಬ್ಬರಿಗೂ ತಪ್ಪಿಹೋಗುತ್ತದೆ. ಇದಕ್ಕೆ ಜಾಗತಿಕ ಮುಕ್ತ ಮಾರುಕಟ್ಟೆ ಸುಸ್ಪಷ್ಟ ಉದಾಹರಣೆ. ಏಕರೂಪಾತ್ಮಕ ತಳಿಗಳು, ಚಾಕಲೇಟುಗಳು, ಟಿನ್ ಮತ್ತು ಪ್ಯಾಕೇಟು ಪದಾರ್ಥಗಳು, ಸಂರಕ್ಷಿತಗೊಳಿಸಿದ ಪಾನೀಯಗಳು, ವೈಭವದ ವಿಲಾಸಿ ವಸ್ತುಗಳು ಹೀಗೆ 'ಉತ್ಪಾದಿತ ವಸ್ತು' ಯಾವುದೇ ಇರಲಿ ದುಡಿಮೆಗಾರ ಮತ್ತು ಬಳಕೆದಾರರು ಒಬ್ಬರ ಮುಖವನ್ನು ಒಬ್ಬರು ನೋಡಿಕೊಳ್ಳಲು ಸಾಧ್ಯವೇ ಇರುವುದಿಲ್ಲ. ಇಲ್ಲಿನ ತ್ರಿಮುಖ ಸಂಬಂಧವು ಕಣ್ಮರೆಯಾಗಿದ್ದು ಮುಖರಹಿತವಾಗಿರುತ್ತದೆ. ರಾಷ್ಟ್ರೀಯ ಜಾಲದ ಏಜೆನ್ಸಿಗಳು ಮತ್ತು ಬಹುರಾಷ್ಟ್ರೀಯ ಕಂಪೆನಿಗಳ ಜಾಗತಿಕ ಜಾಲದಿಂದಾಗಿ 'ಮುಖಹೀನ' ಪರಿಸ್ಥಿತಿಯೊಂದು ನೆಲೆಗೊಳ್ಳುತ್ತದೆ.

೨

ಏಕರೂಪಿ ಸಂಸ್ಕೃತಿ ಮತ್ತು ಬಹುರೂಪಿ ಸಂಸ್ಕೃತಿಗಳ ಸೃಷ್ಟಿ-ಸ್ಥಿತಿ-ಲಯಗಳಲ್ಲಿ ಸಾಮಾಜಿಕ ಪರಿಸರಗಳ ಪಾತ್ರವನ್ನು ನಿರಾಕರಿಸುವಂತಿಲ್ಲ. ಎಷ್ಟೋ ವೇಳೆ ನಾವು ವಾಸಮಾಡುವ ಪರಿಸರಕ್ಕೂ ನಮ್ಮ ಜೀವನ ಶೈಲಿಗೂ ಬಿಡಿಸಲಾರದ ಸಂಬಂಧವಿರುತ್ತದೆ. ಬೆಂಗಳೂರಿನಲ್ಲಿ ವಾಸಮಾಡುವ ಜನರು (ರಾಜ ವೈಭವದ ಜೀವನವನ್ನು ನಡೆಸಬಲ್ಲವರೂ ಸೇರಿದಂತೆ) ಕುಡಿಯುವ ಗಾಳಿ ಕಲುಷಿತವಾಗಿದೆ. ಒಂದು ಹೊಂಗೆಮರ ಅಥವಾ ಬೇವಿನ ಮರದ ಕೆಳಗೆ ಸಿಕ್ಕುವ ಸಹಜ ಗಾಳಿಯು, ಬೆಂಗಳೂರು ಮಹಾನಗರದ ಯಾವೊಂದು ಎ.ಸಿ. ಚೇಂಬರಿನಲ್ಲಾಗಲಿ ಅಥವಾ ಎ.ಸಿ. ಕಾರಿನಲ್ಲಾಗಲಿ ಸಿಗುವುದಿಲ್ಲ. ಅದೇ ಹಳ್ಳಿಗಾಡುಗಳಲ್ಲಿ ಮತ್ತು ಅರಣ್ಯಾಧಾರಿತ ಜೀವನ ನಡೆಸುತ್ತಿರುವ ಬುಡಕಟ್ಟು ಜನರು ಋತು ಚಕ್ರಕ್ಕೆ ಅನುಗುಣವಾದ ಗಂಧ ಹೊತ್ತ ಮಂದ ಗಾಳಿಯನ್ನು ಸೇವನೆ ಮಾಡುತ್ತಿರುತ್ತಾರೆ. ಇಂಥ ಸಹಜಗಾಳಿಯನ್ನು ಮಹಾನಗರಗಳಲ್ಲಿರುವ ಆಕ್ಸಿಜನ್ ಬಾರ್‌ಗಳು ಕೊಡಬಲ್ಲುವೇನು?

ನಗರ ಪ್ರದೇಶಗಳಲ್ಲಿ ಬೃಹತ್ ಟ್ಯಾಂಕುಗಳು ಮತ್ತು ಮನೆಯ ಮೇಲಣ ಓವರ್ ಹೆಡ್ ಟ್ಯಾಂಕುಗಳು ಸಾಮಾನ್ಯ ದೃಶ್ಯ. ವಿವಿಧ ಹಂತಗಳಲ್ಲಿ ಸಂಸ್ಕರಿಸಲ್ಪಟ್ಟು ಕೊಳವೆಗಳ ಅಸಂಖ್ಯಾತ ಜಾಲಗಳಲ್ಲಿ ಹಾಯ್ದು ಅಲ್ಲಲ್ಲಿನ ಬಿರುಕು-ರಂಧ್ರಗಳ ಮೂಲಕ ಮತ್ತೆ ಕಲುಷಿತಗೊಂಡು, ಸಂಪುಗಳಲ್ಲಿ ಸಂಗ್ರಹಗೊಂಡು ಗೃಹಬಳಕೆಗೆ ಸಿಗುವ ನೀರು ಏಕರೂಪಾತ್ಮಕವಾದದು. ಅದೇ ಹಳ್ಳಿ ಗಾಡುಗಳಲ್ಲಿನ ಬಾವಿಗಳು, ಅರಣ್ಯಗಳಲ್ಲಿ ಹರಿವ ಹಳ್ಳಗಳು, ಗಿರಿಝರಿಗಳು-ಇವುಗಳನ್ನೇ ಆದರಿಸಿದ ಜನರು ಸೇವಿಸುವ ನೀರು ಬಹುರೂಪಾತ್ಮಕವಾದುದು. ಗಾಳಿ-ನೀರುಗಳ ಉದಾ ಹರಣೆಗಳನ್ನು ಲಕ್ಷಿಸಿ, ನಗರ ಜೀವನ ಏಕರೂಪಿ ಸಂಸ್ಕೃತಿ ಯೆಂದೂ, ಗ್ರಾಮ ಜೀವನ ಬಹುರೂಪಿ ಸಂಸ್ಕೃತಿಯೆಂದೂ ಭ್ರಮಿಸಿಬಿಡುವ ಆತುರದ ತೀರ್ಮಾನಕ್ಕೆ ಬರಬಾರದು, ಒಬ್ಬ ವ್ಯಕ್ತಿ ನಗರದಲ್ಲಿದ್ದೂ ತನ್ನ ಹಳ್ಳಿಯೊಂದಿಗೆ ಏರ್ಪಡಿಸಿಕೊಳ್ಳುವ ನಿಕಟಮೈತ್ರಿ ಮತ್ತು ಬಹುರೂಪಿ ಸಂವೇದನೆಗಳ ಕಣ್ಣು-ಕಿವಿ-ನೆನಪುಗಳನ್ನುಳಿಸಿಕೊಂಡು ಬಾಳುತ್ತಿರಬಹುದು.. ಹಾಗೆಯೇ, ಹಳ್ಳಿಯಲ್ಲಿರುವ ಒಬ್ಬ ವ್ಯಕ್ತಿ ಮಹಾನಗರದೊಂದಿಗೆ ಏರ್ಪಡಿಸಿಕೊಳ್ಳುವ ನಿಕಟ ಮೈತ್ರಿ ಮತ್ತು ಏಕರೂಪಿ ಸಂವೇದನೆಗಳಿಂದಾಗಿ ತನ್ನ ಪರಿಸರಕ್ಕೆ ಸಹಜವಾದ ಕಣ್ಣು-ಕಿವಿ-ನೆನಪುಗಳನ್ನು ಕಳೆದುಕೊಂಡು ಬಾಳುತ್ತಿರಬಹುದು. ಆದ್ದರಿಂದಲೇ ಏಕರೂಪಿ ಸಂಸ್ಕೃತಿ ಮತ್ತು ಬಹುರೂಪಿ ಸಂಸ್ಕೃತಿಗಳನ್ನು ಪ್ರತ್ಯೇಕ ದಡಗಳೆಂದು ತಿಳಿಯಬಾರದು, ಇವು ಇಂದಿನ ಸಂಕೀರ್ಣ-ಸಮಾವಿಷ್ಟ ಜೀವನ ಶೈಲಿಗಳಿಂದಾಗಿ ಒಂದರೊಳಗೊಂದು ಬೆರೆತು ಹೋಗಿರುವ ವಿದ್ಯಮಾನಗಳೂ ಹೌದು! ಮುಖ್ಯವಾಗಿ ಗಮನಿಸಬೇಕಾದ ಸಂಗತಿಯೆಂದರೆ, ನಾವು ಎಲ್ಲೇ ವಾಸಿಸುತ್ತಿರಲಿ ಬಹುರೂಪಿ ಸಂವೇದನೆಯ ಕಣ್ಣು-ಕಿವಿ-ನೆನಪುಗಳನ್ನು ಬಲಿಗೊಡದೆ ಬಾಳುವ ಕಲೆಯನ್ನು ಪ್ರಜ್ಞಾಪೂರ್ವಕವಾಗಿ ಅಳವಡಿಸಿ ಕೊಳ್ಳಬೇಕು.

೩

ಯಾವುದೇ ವ್ಯಕ್ತಿಯ ಜೀವನ ಮತ್ತು ವ್ಯಕ್ತಿತ್ವಗಳಿಗೆ ಸಂಬಂಧಪಟ್ಟಂತೆ ನಿರ್ಣಾಯಕ ಸಂಗತಿಗಳನ್ನು ಗುರುತಿಸುವುದಾದರೆ 'ರುಚಿ' ಮತ್ತು 'ಅಭಿರುಚಿ' ಎಂದು ಹೇಳಬಹುದು. ರುಚಿಯು ಒಡಲಿಗೆ ಸಂಬಂಧಪಟ್ಟದ್ದಾದರೆ, ಅಭಿರುಚಿಯು ಮನಸ್ಸಿಗೆ ಸಂಬಂಧಪಟ್ಟದ್ದಾಗಿದೆ. ಈ ರುಚಿ ಮತ್ತು ಅಭಿರುಚಿಗಳು ಜೀವನ ಕ್ರಮಗಳ ಬದಲಾವಣೆಗೆ ತಕ್ಕಂತೆ ಬದಲಾವಣೆಗೊಳಗಾಗುವಂಥವು. ಇಂಥ ಸಂದರ್ಭಗಳಲ್ಲಿ ರುಚಿಯ ಪರಂಪರೆಯಾಗಲಿ ಅಥವಾ ಅಭಿರುಚಿಯ ಪರಂಪರೆಯಾಗಲಿ ಸುಸ್ಥಿರವಾಗಿರುತ್ತದೆ ಎನ್ನಲಾಗದು. ರುಚಿಯ ಬಹುತ್ವ ಮತ್ತು ಅಭಿರುಚಿಯ ಬಹುತ್ವಗಳನ್ನು ಪ್ರಜ್ಞಾಪೂರ್ವಕವಾಗಿ ಕಾಯ್ದುಕೊಳ್ಳದಿದ್ದರೆ, ನಮ್ಮ ವ್ಯಕ್ತಿತ್ವ ಏಕರೂಪಾತ್ಮಕ ಜೀವನ ಶೈಲಿಯ ಬಲಿಪಶುವಾಗಿ ಬಿಡುತ್ತದೆ. ಬಹುರೂಪಾತ್ಮಕ ಸಂಸ್ಕೃತಿಯ ಶಿಶುವಾಗಿರುವ ರುಚಿ ಮತ್ತು ಅಭಿರುಚಿ ಪರಂಪರೆಗಳು ಏಕಕಾಲಕ್ಕೆ ಭೂತ-ವರ್ತಮಾನ-ಭವಿಷ್ಯಕಾಲಗಳನ್ನು ತನ್ನಲ್ಲಿ ಗರ್ಭೀಕರಿಸಿಕೊಂಡಿರುತ್ತವೆ. ಆದರೆ, ಏಕರೂಪಾತ್ಮಕ ಸಂಸ್ಕೃತಿಯ ಕೊಡುಗೆಗಳೆನ್ನಬಹುದಾದ ರುಚಿಯ ಏಕತ್ವ ಮತ್ತು

ಅಭಿರುಚಿಯ ಏಕತ್ವಗಳು ದೀರ್ಘ ದೃಷ್ಟಿಯನ್ನಾಗಲಿ ಅಥವಾ ದೂರದರ್ಶಿತ್ವವನ್ನಾಗಲಿ ಹೊಂದಿರದೆ, ಕೇವಲ ವರ್ತಮಾನ ಬದ್ಧವಾಗಿರುತ್ತವೆ. ಇದನ್ನು ವಸ್ತು ಸಮೃದ್ಧಿ ಕೃಷಿ ಕ್ಷೇತ್ರಗಳಲ್ಲಿ ಮಾತ್ರವಲ್ಲದೆ ಸಾಹಿತ್ಯ ಮತ್ತು ಆಧ್ಯಾತ್ಮ ಕ್ಷೇತ್ರಗಳಲ್ಲೂ ಗಮನಿಸಬಹುದು. ಇಲ್ಲೆಲ್ಲ ಕಲಾಪ್ರಜ್ಞೆ ಮತ್ತು ಆಧ್ಯಾತ್ಮ ಪ್ರಜ್ಞೆಗಳ ಸಂಕೀಕರಣವನ್ನು ಗಮನಿಸಬಹುದು. ಏಕ ರೂಪಾತ್ಮಕ ಸಂಸ್ಕೃತಿಯ ಆತ್ಯಂತಿಕ ಪರಿಣಾಮವೆಂದರೆ 'ರುಚಿ' ಮತ್ತು 'ಅಭಿರುಚಿ'ಗಳ ಬಹುತ್ವವನ್ನು ಸಮಾಧಿ ಮಾಡಿ 'ಏಕ'ರುಚಿ ಮತ್ತು 'ಏಕ' ಅಭಿರುಚಿಗಳೆರಡನ್ನೂ ಸಂಕೀಕರಣಗೊಳಿಸಿ ಮೆರೆಸುವುದು. ಇದಕ್ಕೆ ಪೂರಕವಾಗಿ ಇಂದು ಮನೆ-ಮನಗಳೆರಡರಲ್ಲೂ ತುಂಬಿಕೊಂಡಿರುವ ಟಿ.ವಿ. ಲೋಕವನ್ನು ಉದಾಹರಿಸಬಹುದು.

ಬಹುರುಚಿ ಮತ್ತು ಬಹು ಅಭಿರುಚಿಗಳ ಪರಂಪರೆಯು ವೃದ್ಧಿಗೊಳ್ಳುವುದು ಕಲೆ-ಕ್ರೀಡೆಗಳ ಪ್ರಜ್ಞಾಪೂರ್ವಕವಾದ ಅಳವಡಿಕೆಯಿಂದ. ಕಲೆ ಮತ್ತು ಕ್ರೀಡೆಗಳನ್ನು ಈ ಕಾರಣದಿಂದಲೆ ಅಂತರಂಗದ ಕಣ್ಣುಗಳೆಂದು ಕರೆಯುವರು. ಮಾನವನ ಹೊರಗಣ್ಣುಗಳನ್ನು ಮಾಂಸನೇತ್ರಗಳೆಂದು ಕರೆಯುವುದುಂಟು. ಮನುಷ್ಯನ ಮನಸ್ಸು ಮತ್ತು ಒಡಲುಗಳು ಗಟ್ಟಿಯಾಗಬೇಕಾದರೆ ಕಲೆ ಮತ್ತು ಕ್ರೀಡೆಗಳನ್ನು ಒಳಗೊಳ್ಳಬೇಕು. ಅತ್ಯುತ್ತಮ ಕಲಾವಿದರಿಂದ ಮತ್ತು ಅತ್ಯುತ್ತಮ ಕ್ರೀಡಾಪಟುಗಳಿಂದ ಕೂಡಿದ ಸಮಾಜವು ಆರೋಗ್ಯವಂತ ಸಮಾಜವಾಗಿರುತ್ತದೆ. ಕ್ರೀಡೆಗಳು ನಮ್ಮೊಡಲಿನ ಕಾವು; ಕಲೆಗಳು ನಮ್ಮಾತ್ಮದ ಮೇವು ಎಂಬುದನ್ನು ಮರೆಯಬಾರದು. ಕ್ರೀಡೆಗಳಲ್ಲಿ ಸ್ವತಃ ತೊಡಗುವುದರಿಂದ ನಮ್ಮ ಒಡಲಿನ ಕಾವು ಹೆಚ್ಚುತ್ತದೆ. ಕಲೆಗಳಲ್ಲಿ ಮುಳುಗಿ ಮೀಯುವುದರಿಂದ ನಮ್ಮ ಆತ್ಮದ ಪ್ರಭೆ ವೃದ್ಧಿಯಾಗುತ್ತದೆ. ಕಲೆ ಮತ್ತು ಕ್ರೀಡೆಗಳಿಂದ ದೂರವಾದ ಜನತೆಯು ತಣ್ಣನೆ ಮನಸು, ತಣ್ಣನೆ ಒಡಲುಗಳಿಂದ ಕೂಡಿದ್ದು ವ್ಯವಸ್ಥೆಯ ಪಾಲಿಗೆ ಹರಕೆಯ ಕುರಿಗಳಂತಿರುತ್ತಾರೆ. ಇಂಥವರನ್ನು 'ಒಳಗಿನವರು' ಮತ್ತು 'ಹೊರಗಿನವರು' ಸುಲಭವಾಗಿ ವಶಪಡಿಸಿಕೊಂಡು ಆಳಬಹುದಾಗಿದೆ.

ಟೊಳ್ಳುಗಳಾಗದೆ, ಗಟ್ಟಿಯಾಗಿರುವ ತಲೆ ಮಾರುಗಳನ್ನು ನಿರ್ಮಾಣ ಮಾಡಬೇಕಾದರೆ ಶಾಲಾ ಕಾಲೇಜುಗಳಲ್ಲಿ ಬಹುರುಚಿಯ ಮನೋಧರ್ಮ, ಬಹು ಅಭಿರುಚಿಯ ವ್ಯಕ್ತಿತ್ವ ನಿರ್ಮಾಣಕ್ಕೆ ಆದ್ಯತೆ ಕೊಡಬೇಕು. ಆದರೆ, ಪರಿಸ್ಥಿತಿ ಹೀಗಿಲ್ಲವೆಂಬುದು ನಮ್ಮ ದುರದೃಷ್ಟವಾಗಿದೆ. ಶಾಲೆಗಳಲ್ಲಿ ಮೌಖಿಕ ಭಾಷೆಯ ಕಲಿಕೆಯ ಬಗ್ಗೆ ಹೆಚ್ಚಿನ ಎಚ್ಚರ ವಹಿಸುತ್ತಾರೆ. ಈ ಭಾಷೆಯನ್ನು ಬರೆಯಲು, ಕಲಿಯಲು ಬೆರಳುಗಳಿಗೆ ಹೆಚ್ಚಿನ ಶಿಕ್ಷೆಯನ್ನು ನೀಡುತ್ತಿದ್ದಾರೆ. ಆದರೆ, ಕಣ್ಣಿನ ಭಾಷೆ, ಕಿವಿಯ ಭಾಷೆ, ಹೃದಯದ ಭಾಷೆಗಳ ಕಡೆ ಲಕ್ಷ್ಯ ನೀಡುತ್ತಿಲ್ಲ. ಚಿತ್ರ ಕಲೆ-ಸಿನಿಮಾಗಳ ಕಣ್ಣಿನ ಭಾಷೆ ಎಂತಹುದು? ನಾದ-ಸಂಗೀತಗಳ ಕಿವಿಯ ಭಾಷೆ ಎಂತಹುದು? ಸಾಹಿತ್ಯ ಕಲೆಯನ್ನು ಅರ್ಥಮಾಡಿಕೊಳ್ಳುವ 'ಇಂಗಿತ ಜ್ಞಾನ' ಅಥವಾ ಹೃದಯ ಭಾಷೆಯು ಎಂತಹುದು? -ಎಂಬುದರ ಪರಿವೆಯೇ ಇಲ್ಲದಂತೆ ಕೇವಲ ತಂತ್ರಜ್ಞಾನದ ಬಿಡಿಭಾಗಗಳಂತೆ ಬೆಳೆಯುತ್ತಿರುವ ಯುವ ಜನತೆ ಮುಂದೆ ಏನಾಗಬಹುದು?- ಈ ಗಂಭೀರ ಪ್ರಶ್ನೆಗಳನ್ನು ಎದುರಿಸದ ಶಿಕ್ಷಣ ವ್ಯವಸ್ಥೆಯನ್ನು ಕಂಡು ಹೆಣವೊದ್ದು ನಗುತ್ತಿದೆ ಎಂದರೆ ಉತ್ಪ್ರೇಕ್ಷೆಯಲ್ಲ. □

ಕಂದರ



ಮೊರೆಯುವ ಸಂಗೀತ,
ಅಬ್ಬರ, ಆದರೂ ಇಲ್ಲಿ
ಅಮ್ಮನ ಗರ್ಭದಲ್ಲಿದ್ದಂತೆ
ನಿಶ್ಚಿಂತಳಾಗಿರುವೆ....
ನದಿಯಾಗಿ ಹರಿದು
ಹಾಡಾಗಿ ಕರಗಿ ಹೋಗುವೆ

ಮಧು ಪಾತ್ರೆಯ ಮೇಲೆ
ಹನಿ ಹನಿಯಾಗಿ ಜಾರುತಿದೆ ಮಂಜು
ಉರುಳುವ ಕಣ್ಣೀರಿನ ಬಿಂದುಗಳು

ಸುಡುವ ಬದುಕಿನಿಂದ
ನೋವನು ಕೊಡವಿ
ಪ್ರೀತಿಯ ಕಿಡಿ ಮಿನುಗುವಂತೆ
ಉರಿಯುತಿದೆ ಸಿಗರೇಟಿನ ತುಂಡು

ಹೊಂಬಣ್ಣದ ದ್ರವದಲಿ
ತೇಲುತ್ತಾ, ಸುಳಿಯಲಿ ಸಿಲುಕಿ
ಕಾಣೆಯಾಗಿವೆ ನನ್ನ, ನಿನ್ನ
ಹೆಸರುಗಳು, ಕುಲಗಳು, ಹಿನ್ನೆಲೆಗಳು
ನಾನು ಈವ್, ನೀನು ಆದಂ
ಅಷ್ಟೇ.........?

ಪ್ರತಿ ಗುಟುಕಿನಲೂ ಎರಡರಷ್ಟು
ಮತ್ತಿದೆ, ಆದರೂ ನೆನಪಿದೆ
ವಾಸ್ತವ, ಆಗಸದಲಿ ಬೀಡು ಬಿಟ್ಟಿವೆ
ಸೂರ್ಯ, ಚಂದ್ರ, ತಾರೆ, ನೀಹಾರಿಕೆಗಳು
ಮಧುಶಾಲೆಯಲಿ ಕಂಡು ಬಾರದು
ಹೊಸ ದಿಗಂತ.........

ಸುತ್ತಲೂ ಮುಬ್ಬುಗತ್ತಲು
ಅಂಜಿಕೆಯೇನಿಲ್ಲ ನನಗೆ
ಕತ್ತಲು ಮುಸುಕಾಗಿಸಿದೆ-
ಕೇಸರಿ, ಹಸಿರು ಬಣ್ಣಗಳ
ಹೊಳಪು ಕಳೆದುಕೊಂಡು ಮರೆಯಾಗಿವೆ
ನನ್ನ-ನನಿನ್ನ ನಡುವೆ ಕಂದರ ತೋಡುವ
ಖಡ್ಗಗಳೂ, ತ್ರಿಶೂಲಗಳೂ........

ನಶೆ ಇಳಿಯುವ ತನಕ ಕಾಯಬೇಕಿಲ್ಲ
ನಿನ್ನ ಸಾಮಿಪ್ಯದ ಮುತ್ತಿನಲ್ಲೂ
ನೆನಪಿದೆ ನನಗೆ,
ನಮ್ಮಿಬ್ಬರ ಜೋಡಿ ಹೆಜ್ಜೆಗಳ
ಸಹಿಸುವ ಹಾದಿಯಿಲ್ಲ.....

○ ಸಮೀನ ಮೇರಾಜ್

ಆಧ್ಯಾತ್ಮ – ಒಂದು ಚಿಂತನೆ

ಭಾರತೀಯ ಇತಿಹಾಸದ ಕಾಲಗರ್ಭದಲ್ಲಿ ಭಗ್ನಗೊಂಡ ಅವಶೇಷಗಳಡಿಯಲ್ಲಿ ದಲಿತ ಅಧ್ಯಾತ್ಮಿಕ ಸಂಸ್ಕೃತಿ ನುಚ್ಚು ನೂರಾಯಿತು ತದನಂತರ ಬ್ರಾಹ್ಮಣ ಸಾಹಿತ್ಯವು ಸಂಸ್ಕೃತ ಭಾಷೆಗೆ ಹಸ್ತಾಂತರಿಸಿ ಕೊಳ್ಳುವುದರ ಮೂಲಕ 'ದಲಿತ ವಿವೇಕ'ವನ್ನು ಆಪಹರಿಸ ಲ್ಪಟ್ಟಿತೆಂಬುದು ಚಾರಿತ್ರಿಕ ಸತ್ಯ ; ಅನಂತರದ ಯುಗದಲ್ಲಿ ದಾಸರ ಪದ, ಜಾನಪದ ಗಾದೆ, ಹಾಡು, ಸಂತರ ತತ್ತ್ವಪದಗಳಲ್ಲಿ ಮೂಲಸಂಸ್ಕೃತಿ ಮರುಜೀವ ಪಡೆಯಿತು. ಅಧ್ಯಾತ್ಮ ವೆಂಬುದು ಒಂದು ನಿಖರಪಡಿಸಿದ ಶಾಸ್ತ್ರಗ್ರಂಥವಲ್ಲ ಬದಲಾಗಿ ಹಸಿವು, ದುಃಖ, ನಿರಾಶೆ, ನೋವು, ಅನ್ಯಾಯ ಮತ್ತು ಅಸಹಾಯಕತೆ ತೀವ್ರವಾಗತೊಡಗಿದಾಗ, ತನ್ನ ಇತಿಮಿತಿಗಳ ಚೌಕಟ್ಟಿನಲ್ಲಿ ಬದುಕುವ ಅನಿವಾರ್ಯತೆಗಳನ್ನು ಕಂಡುಕೊಂಡಾಗ ಎದುರಿ ಸಲ್ಪಟ್ಟ ಅನುಭವಗಳೇ ಅನುಭಾಗಳಾಗಿ ಅಧ್ಯಾತ್ಮಿಕ ತತ್ತ್ವಗಳಾಗಿ ಹೊರ ಬಿದ್ದವು. ಈ ರೀತಿಯ ಬದುಕಿನ ಸಾಫಲ್ಯತೆಗಳನ್ನು ನಮ್ಮ ತಂದೆ ತಾತಂದಿ ರಲ್ಲೂ ಕಾಣಬಹುದಾಗಿತ್ತು.

ಸಾಕ್ಷರಯುಗ, ವಿದ್ಯಾವಂತಯುಗ, ವೈಜ್ಞಾನಿಕಯುಗವೆಂದು ಕರೆ ಯಿಸಿಕೊಳ್ಳುವ ಇಂದು ಮನುಷ್ಯ ಬದಕನ್ನು ದ್ವಂದ್ವಗಳಲ್ಲೇ ಸಾಗಿಸುವ ಅಪಾಯಕ್ಕೆ ಸಿಲುಕಿದ್ದಾನೆ. ಈ ರೀತಿಯಾಗಿ ಮನುಷ್ಯನ ಹೃದಯ ಸಂಕುಚಿತವಾಗಿದೆ. ಅಶಾಂತಿ, ದ್ವೇಷ, ಅಸೂಯೆ, ಸ್ವಾರ್ಥಪರ ಆಲೋ ಚನೆಗಳು ತೀವ್ರವಾಗುತ್ತಾ ಮನುಷ್ಯ ಜೀವಿಯನ್ನು ದಿಕ್ಕೆಡಿಸುತ್ತಿವೆ. ಬದುಕಿನ ಆಲೋಚನೆಗಳು ದಿನೇ ದಿನೇ ಸಂಕೀರ್ಣವಾಗತೊಡಗಿವೆ.

ಇಂದು ಆಧ್ಯಾತ್ಮಿಕವಾಗಿ ಪರಿವರ್ತನೆಯಾಗಬೇಕೆಂದು ಬಯಸಿ ದರೂ ಧ್ಯಾನ, ಪಾರಮಾರ್ಥಿಕ, ಆಧ್ಯಾತ್ಮಿಕ ಈ ಶಬ್ದಗಳು ಪುರೋಹಿತ ಶಾಹಿಯ ದಬ್ಬಾಳಿಕೆಯಿಂದಾಗಿ ದೈವೀಸಂಬಂಧಿ ಪದಗಳೇನೋ ಎಂಬ ದೃಢ ಅಭಿಪ್ರಾಯವನ್ನು ನಮ್ಮಲ್ಲಿ ಬಲವಾಗಿ ಬಿತ್ತಿವೆ. ಧಾರ್ಮಿಕ ಸಂಸ್ಥೆಗಳ ನಾಯಕ ಮತ್ತು ಮಠಾಧಿಪತಿಗಳಂತೂ ಈ ಪದಗಳನ್ನು ನಾವೇ ಕಂಡು ಹಿಡಿದೆವೆಂಬಂತೆ ಕೊಚ್ಚಿಕೊಳ್ಳುತ್ತಿದ್ದಾರೆ. ಧ್ಯಾನ ತರಬೇತಿ, ಈ ಸಂಬಂಧದ ವಿಧವಿಧವಾದ ಪುಸ್ತಕಗಳನ್ನು ಮುದ್ರಿಸುತ್ತಾ ಅದನ್ನು ಓದುತ್ತಾ ಮನುಷ್ಯ ತನ್ನ ಆರೋಗ್ಯದ ಕಾಳಜಿಗೆ ಮಾತ್ರ ಅದನ್ನು ದುರುಪಯೋಗ ಪಡಿಸಿಕೊಳ್ಳುವ ಅವಿವೇಕಿಗಳ ಪಟ್ಟಿ ಬೆಳೆದು ಹೋಗುತ್ತಿದೆ. ನಿರಪೇಕ್ಷವಾದ ದಯೆ, ಮೈತ್ರಿ, ಅಂತಃಕರಣೆ ಇಲ್ಲದವನಿಗೆ ಧ್ಯಾನದಿಂದೇನು ಪ್ರಯೋಜನ ?

ಮುಖ್ಯವಾಗಿ ಧ್ಯಾನ, ಪಾರಮಾರ್ಥಿಕ ಚಿಂತನೆ, ಅಧ್ಯಾತ್ಮ ಇವು ದೈವ ಅಥವಾ ಆತ್ಮ ಸಂಬಂಧಿಗಳಲ್ಲ ಎಂಬ ಪ್ರಾಥಮಿಕ ಸತ್ಯಗಳನ್ನು ಹೇಳುವುದರ ಜೊತೆಗೆ ಬದುಕಿಗೆ, ಪ್ರೇಮಕ್ಕೆ ಸಂಬಂಧಿಸಿದವು ಎಂಬ ಮಹತ್ವವನ್ನು ತಿಳಿಹೇಳುವುದು ನಮ್ಮ ಮುಖ್ಯ ಕರ್ತವ್ಯವಾಗಿದೆ.

ಯಥಾರ್ಥದಲ್ಲಿ ಧ್ಯಾನದ ಉದ್ದೇಶ ಎಷ್ಟು ಶ್ರೇಷ್ಠ ರೀತಿಯ ದಾಗಿದೆ ಎಂದರೆ ಬಂಧನ ಮತ್ತು ಬಿಡುಗಡೆಗೆ ನಮ್ಮ ಮನಸ್ಸೇ ಕಾರಣ. ಇಂತಹ ಚಂಚಲವಾದ ಹರಿಣಿಯಂತಹ ನಮ್ಮ ಮನಸ್ಸು ಸ್ವಭಾವ ಜನ್ಯ ವಾದದ್ದು ಮತ್ತು ಅಂತರ್ಮುಖಿ, ಪ್ರಾಪಂಚಿಕ ಪ್ರಭಾವದಿಂದಾಗಿ ಅಂತರ್ಮುಖಿವು ಲೋಭ, ದುರಾಸೆ, ದುರ್ಭಾವನೆ, ಜಡತೆ, ಚಂಚಲತೆ ಉತ್ಸಾಹ, ಸಂಶಯಾದಿಗಳಿಂದ ದೋಷ ಪೂರಿತವಾಗಿದೆ. ಇವುಗಳಿಂದ ಪಾರಾಗುವ ಉಪಾಯವೇ ಮೌನ.....! ಮೌನವೆಂದರೆ ನಿಶ್ಯಬ್ದವಲ್ಲ ! ನಿಶ್ಯಬ್ದದಲ್ಲಿ ನಾವು ಮಾತನಾಡದಿದ್ದರೂ ಮನಸ್ಸಿನ ಮಾತು ನಿರಾತಂಕವಾಗಿ ಅಡಚಣೆ ಇಲ್ಲದೆ ಮಾತನಾಡುತ್ತಲೇ ಇರುತ್ತದೆ. ಆ ಮಾತು...... ಆ ಮನಸ್ಸು ಮೌನವಾದಾಗ ಸ್ವಭಾವವು ನಿರ್ಭಾವ ವಾಗುತ್ತದೆ. ಆ ನಿರ್ಭಾವದಲ್ಲಿ ನಾವು ಹೆಚ್ಚು ಹೆಚ್ಚು ಇರತೊಡಗಿದಾಗ ಆದು ವಿಕಾಸವಾಗುತ್ತಾ ಅನಂತವಾಗುತ್ತಾ ಮಹಾಭಾವಾಗುತ್ತದೆ. ಆ ಮಹಾಭಾವವೇ ಮಹಾಪ್ರೇಮ, ಮಹಾವಿವೇಕ ಇದುವೇ ಧ್ಯಾನದ ತುತ್ತತುದಿ ಇದರ ಮತ್ತೊಂದು ಹೆಸರು ಸಮಾಧಿ. ಡಾ|| ಅಂಬೇಡ್ಕರರು 'ಜೀವನದ ಗಂಭೀರ ವಿಷಯಗಳ ಕುರಿತು ಗಾಢ ಚಿಂತನೆ' ಎಂದು ಇದನ್ನು ಕರೆದರು.

ಬುದ್ಧನು- ''ಧ್ಯಾನದಲ್ಲಿ ಪ್ರಾಪಂಚಿಕವನ್ನು ಕಳೆದುಕೊಂಡು ಪರಮಾರ್ಥವನ್ನು ಪಡೆಯುತ್ತೇವೆ'' ಎಂದರು.

ಸ್ವಾಮಿ ವಿವೇಕಾನಂದರು ಇದನ್ನು ಪುನುಗಿನ ಬೆಕ್ಕಿಗೆ ಹೋಲಿಸು ತ್ತಾರೆ. ಪುನುಗಿನ ಬೆಕ್ಕಿ (ಕಾಡಿನಲ್ಲಿರುವ ಒಂದು ಜಾತಿ)ನ ಬಾಲದ ಬುಡದಲ್ಲಿ ತುಂಬಾ ಪರಿಮಳವನ್ನುಂಟು ಮಾಡುವ ಸುಗಂಧ ದ್ರವ್ಯವಿದೆ. ಆದರೆ ಪಾಪ! ಅದು ಬೇರೆಲ್ಲಿಂದಲೋ ವಾಸನೆ ಬರುತ್ತಿದೆಯಲ್ಲಾ ? ಎಂದು ಭ್ರಮಿಸುತ್ತಾ ನಿಂತಲ್ಲಿಯೇ ಸುತ್ತು ಹಾಕುತ್ತಿರುತ್ತದೆಯಂತೆ, ಅದಕ್ಕೆ ಮಾತ್ರ ಆ ಪರಿಮಳ ತನ್ನದೆಂದು ಇದುವರಿಗೂ ಗೊತ್ತಿಲ್ಲ. ಹಾಗೆಯೇ..... ಬದುಕು ಬರೀ ದುಸ್ತರ. ಪ್ರೀತಿ ಇಲ್ಲ ಯಾವ ಶಾಶ್ವತ ಎಂದು ಮಾತ ನಾಡುವ ಮನುಜರಿಗೆ ತನ್ನಲ್ಲೇ ಇರುವ ಸತ್ಯದ ಬಗ್ಗೆ ಹೇಗೆ ಅರಿವುಂಟಾ ಗಲು ಬುದ್ಧನ 'ಸ್ವಯಂ ಪ್ರಕಾಶ' ತತ್ತ್ವವೂ ಈ ಮೂಲದಿಂದಲೇ ಹುಟ್ಟಿತು.

ಈ ಅಖಂಡ ವಿಶ್ವವು, ಅನಂತ ಭೌತಿಕ ಮೂಲವಸ್ತುಗಳಿಂದ ಅಭೌತಿಕ ವಸ್ತು ವಿಚಾರಗಳಿಂದಾಗಿದೆ. ಇಂತಹ ವಸ್ತುಗಳ ಪ್ರತಿರೂಪವೇ ನಾವಾಗಿದ್ದೇವೆ. ಈ ವಿಧದಲ್ಲಿ ನಾವು ಈ ವಿಶ್ವದ ಒಂದು ಭಾಗವಾಗಿ ಅಥವಾ ಈ ಅನಂತ ವಿಶ್ವವೇ ನಾವಾಗಿದ್ದೇವೆಂಬುದು ಸತ್ಯ. ಒಂದು ಸೌರಮಂಡಲವು ಯಾವ ನಿಯಮದ ಮೇಲಿದೆಯೋ ನಮ್ಮಲ್ಲಿನ ಒಂದು ಜೀವಕೋಶವೂ ಅದೇ ನಿಯಮದ ಮೇಲಿದೆ. ಇಲ್ಲಿ ಜೀವಿಗಳು ಹುಟ್ಟುತ್ತಾ...... ಸಾಯುತ್ತಾ........ ಮಾನವ ಸಾವಿನ ಕುರಿತು ಭ್ರಮನಿರಸನಾಗುತ್ತಾ.... ಇದುವೆ ಅಜ್ಞಾನ, ಕತ್ತಲು ಎನ್ನುತ್ತದೆ ಪಾರಮಾರ್ಥಿಕ ಚಿಂತನೆ. ಏಕೆಂದರೆ ಯಥಾರ್ಥದಲ್ಲಿ ಈ ವಿಶ್ವದ ಸೃಷ್ಟಿಗೆ ಕಾರಣವಾದ ಮೂಲವಸ್ತುಗಳು ತಮ್ಮ ಇರುವಿಕೆಯಲ್ಲಿ ಬದಲಾಗುವುದು ಹುಟ್ಟು ಸಾವಿಗೆ ಕಾರಣವಾಗಿವೆ ಯಾದರೂ, ಜೀವಿಗಳು ಸತ್ತರೂ ಮೂಲವಸ್ತುಗಳು ಸಾಯಲಾರವು. ಆ ಮೂಲ ವಸ್ತುಗಳೇ ನನ್ನ ಮೂಲವೆಂದು, ಸಾವು ಭ್ರಮೆ ಎಂದು, ಬದಲಾವಣೆ ಎಂದು ತನ್ಮೂಲಕ ಈ ಅನಂತ ವಿಶ್ವವೇ ನಾನೆನ್ನುವ 'ಅನುಭಾವವೇ' ಪರಮಾರ್ಥಿಕ ತತ್ತ್ವ. ಇದು ಸತ್ಯವನ್ನು ಸ್ವಾಸ್ಥ್ಯವಾಗಿ ಆಲೋಚಿಸುವ ಏಕೈಕ ಮಾರ್ಗವಾಗಿ ದೆಯೇ (ಇಲ್ಲಿ ಪರಿಸರ ಮಾಲಿನ್ಯ ಅರ್ಥಮಾಡಿಕೊಳ್ಳಿ) ಹೊರತು ಆತ್ಮ ಪರಮಾತ್ಮ ಸಂಬಂಧಿ ಊಹೆಯಲ್ಲ.

ವೇಳಾಕೋಳಲುಲೇಕ ವೆಲಿಗೇಟ ಜ್ಯೋತಿನಿ
ವೇಡುಕೋರಾ! ನೀಲೋನೆ ವುನ್ನಾದಿ
ನಿಖಿಲಾಂಡ ಪಟ್ಟಣಮು ಚೂಚು ಕೋರಾ...... (ಕೈವಾರ ತಾತಯ್ಯ)

ನಿನ್ನಲ್ಲಿರುವ ಜ್ಞಾನದ (ಜ್ಯೋತಿ) ಒಳಹೋಗು ಇಡೀ ಬ್ರಹ್ಮಾಂಡವೇ ನಿನ್ನಲ್ಲಿಹುದು. ಇದುವೇ ನಿನ್ನ ಮೂಲ 'ಮುಗ್ಗುರು ಮೂರ್ತುಲು ಜೂಟ ಮೂಲಮೆರುಗುವ ಬಾಟ' ಬ್ರಹ್ಮಾದಿ ದೇವತೆಗಳೆಲ್ಲಾ ಸುಳ್ಳು ! ಎಲ್ಲಕ್ಕೂ ಮೂಲವನ್ನರಿತುಕೊಳ್ಳುವುದನ್ನು ಅಭ್ಯಾಸ ಮಾಡುವೆಯಾದರೆ ನಿನಗೆ ವಿಮೋಚನೆ ಖಂಡಿತ ಎಂದು ಸಾರಿ ದರು. ತಾತಯ್ಯನವರು ಬದುಕನ್ನು ನ್ಯಾಯಬದ್ಧವಾಗಿ ನಡೆಸಿ ಕೊಂಡು ಹೋಗಲು ಪ್ರಯತ್ನಪಡುತ್ತಿರುವವನಿಗೆ ಅಧ್ಯಾತ್ಮಿಕ ಮತ್ತು ಪಾರಮಾರ್ಥಿಕ ಚಿಂತನೆಗಳು ವೈಜ್ಞಾನಿಕ ತಿಳಿವನ್ನು ಕೊಡುವ ಆಪ್ತಮಿತ್ರರು. □

ವ್ಯಾಖ್ಯಾನ

ಸಾಕ್ಷರಯುಗ, ವಿದ್ಯಾವಂತಯುಗ, ವೈಜ್ಞಾನಿಕಯುಗವೆಂದು ಕರೆ ಯಿಸಿಕೊಳ್ಳುವ ಇಂದು ಮನುಷ್ಯ ಬದುಕನ್ನು ದ್ವಂದ್ವಗಳಲ್ಲೇ ಸಾಗಿಸುವ ಅಪಾಯಕ್ಕೆ ಸಿಲುಕಿದ್ದಾನೆ. ಈ ರೀತಿಯಾಗಿ ಮನುಷ್ಯನ ಹೃದಯ ಸಂಕುಚಿತವಾಗಿದೆ. ಅಶಾಂತಿ, ದ್ವೇಷ, ಅಸೂಯೆ, ಸ್ವಾರ್ಥಪರ ಆಲೋ ಚನೆಗಳು ತೀವ್ರವಾಗುತ್ತಾ ಮನುಷ್ಯ ಜೀವಿಯನ್ನು ದಿಕ್ಕೆಡಿಸುತ್ತಿವೆ. ಬದುಕಿನ ಆಲೋಚನೆಗಳು ದಿನೇ ದಿನೇ ಸಂಕೀರ್ಣವಾಗತೊಡಗಿವೆ. ಇಂದು ಆಧ್ಯಾತ್ಮಿಕವಾಗಿ ಪರಿವರ್ತನೆಯಾಗಬೇಕೆಂದು ಬಯಸಿದರೂ ಧ್ಯಾನ, ಪಾರಮಾರ್ಥಿಕ, ಅಧ್ಯಾತ್ಮಿಕ ಈ ಶಬ್ದಗಳು ಪುರೋಹಿತ ಶಾಹಿಯ ದಬ್ಬಾಳಿಕೆಯಿಂದಾಗಿ ದೈವೀಸಂಭಂದಿ ಪದಗಳೇನೋ ಎಂಬ ದೃಢ ಅಭಿಪ್ರಾಯವನ್ನು ನಮ್ಮಲ್ಲಿ ಬಲವಾಗಿ ಬಿತ್ತಿವೆ.

❍ ಪದ್ಮಾಲಯ ನಾಗರಾಜ್

ಆಡಳಿತ ಪಾಲುದಾರಿಕೆಯಲ್ಲಿ ಹಿಂದುಳಿದ ಜಾತಿಗಳಿಗೆ ಅನ್ಯಾಯ.

ಚಿಂತನೆ

ಆಡಳಿದಲ್ಲಿ ಪಾಲುದಾರಿಕೆ ಎಂಬುದು ಹಿಂದುಳಿದ ಜಾತಿಗಳಿಗೆ ಯಾವುದೇ ಅಂಗಡಿಯಲ್ಲಿ ಸಿಗುವ ವಸ್ತುವಲ್ಲ, ಅಥವಾ ಉನ್ನತ ಜಾತಿಗಳು ಕೊಡುವ ಭಿಕ್ಷೆಯೂ ಅಲ್ಲ. ಏಕೆಂದರೆ ಸಾಮಾಜಿಕ ಸ್ಥಾನ ಮಾನಗಳ ಮೂಲಕ ಬರುವ ಇಲ್ಲವೇ ಸಂವಿಧಾನಾತ್ಮಕ ರೂಪದಲ್ಲಿ ಪಡೆಯುವ ಎರಡೇ ಸಾಧ್ಯತೆಗಳು ನಮ್ಮೆದುರಿಗಿರುವುದು. ಸಾಮಾಜಿಕ ಬದುಕು ಜಾತಿ ಪದ್ದತಿಯಲ್ಲಿ ದಿನೇದಿನೇ ಬಿಗಿಯಾಗುತ್ತಿದೆ. ಇದರಿಂದಾಗಿ ಜಾತಿ ಪ್ರಾಬಲ್ಯ ಬಿಡಿಬಿಡಿಯಾಗಿ ಪ್ರಾಬಲ್ಯ ಹೊಂದಿದ ಕೂಡಲೆ ಅಸಂಘಟಿತ ಜಾತಿಗಳನ್ನು ಸುಲಭವಾಗಿ ತಮ್ಮ ಅಭಿಪ್ರಾಯಗಳನ್ನು ಹೇರಲು ಬಳಸಿಕೊಳ್ಳುತ್ತದೆ. ಇಲ್ಲವೇ ಕೆಳ ಜಾತಿಗಳು ತಾವೇ ಮೇಲಿನವರ ಅಭಿಪ್ರಾಯಗಳು ಒಳ್ಳೆಯ ವೆಂದು ಒಪ್ಪಿಬಿಡುತ್ತವೆ. ಇದರಿಂದ ಸಾಮಾಜಿಕ ಅಸಮಾನತೆಗಳ ಸ್ಥಿತಿ ಯಥಾವತ್ತಾಗುತ್ತದೆ.

○ ರಾಜಪ್ಪ ದಳವಾಯಿ

ಜಾತಿ ಪದ್ದತಿ ನಮ್ಮ ಸಮಾಜದಲ್ಲಿ ಪ್ರಬಲವಾದ ಒಂದು ಜಾತಿ ಪ್ರಬಲವಲ್ಲದ ನೂರಾರು, ಸಾವಿರಾರು ಜಾತಿಗಳಿಗೆ ಸಮ. ಎಷ್ಟೋ ಬಾರಿ ಉಳಿದೆಲ್ಲಾ ಜಾತಿಗಳನ್ನೂ ನಿಯಂತ್ರಿಸುವ ಶಕ್ತಿ ಪ್ರಬಲವಾದ ಒಂದು ಜಾತಿಗೆ ಇರುತ್ತದೆ. ಈ ''ಪ್ರಬಲತೆ'' ಹಲವು ಕಾರಣಗಳಿಂದ ಕೂಡಿರುತ್ತದೆ. ಮುಖ್ಯವಾಗಿ ಪ್ರಬಲತೆ ಎಂಬುದು ಸಾಮಾಜಿಕ ಸ್ತರದಲ್ಲಿ ಮೇಲಿನ ಸ್ತರದಲ್ಲಿರುವ ಸ್ಥಾನವನ್ನು ಕಲ್ಪಿಸಿರುತ್ತದೆ. ಉಳಿದವರೆಲ್ಲಾ ಕೆಳಸ್ತರದಲ್ಲಿ ಬರುವ ಜಾತಿಗಳಾಗಿರುತ್ತವೆ, ಮೇಲುಸ್ತರದಲ್ಲಿರುವ ಜಾತಿಯ ಬಗ್ಗೆ ಕೆಳ ಸ್ತರದ ಜಾತಿಗಳ ಜನರಲ್ಲಿ ಒಪ್ಪಿತ ಮೌಲ್ಯಗಳ ನೆಲೆ ಸ್ಥಾಯಿಯಾಗಿರುತ್ತದೆ, ಅವರ ಮನಸ್ಸು ಈ ಸ್ತರಗಳ ಶ್ರೇಣಿಯನ್ನು ಒಪ್ಪಿಕೊಂಡಿರುತ್ತದೆ, ಇದರಿಂದ ಮೇಲಿನವರಿಗೆ ಅನು ಕೂಲವು ಸಹಜವಾಗಿಯೇ ಆಗುತ್ತಿರುತ್ತದೆ, ಈ ತೊಂದರೆಗೆ ಕಾರಣಗಳನ್ನು ಹುಡುಕುವಲ್ಲಿ, ತಮ್ಮ ಸ್ತರದ ನೆಲೆಯನ್ನು ಕಂಡುಕೊಳ್ಳುವಲ್ಲಿ ವ್ಯಕ್ತಿಗಳು ಸೋಲುತ್ತಾರೆ, ಇಲ್ಲವೇ ಕಂಡುಕೊಂಡರೂ ಸಾಮೂಹಿಕ ಹೋರಾಟಗಳನ್ನು ನಿರ್ಮಿಸುವಲ್ಲಿ ಅಸಂಘಟಿತ ಸ್ಥಿತಿ ಒದಗಿ ಸದಾ ಮೇಲುಸ್ತರದ ಜಾತಿಗಳ ಪ್ರಾಬಲ್ಯ ದಿನೇ ದಿನೇ ಅಧಿಕವಾಗುವ ಸ್ವರೂಪವೇ ಬೆಳೆಯಬಹುದು, ಅಲ್ಲದೆ ಎಲ್ಲಾ ಬಗೆಯ ಸಂಪನ್ಮೂಲಗಳು ಮಾನವ ಮತ್ತು ಆರ್ಥಿಕ ಸಂಪನ್ಮೂಲಗಳನ್ನು ಮೇಲುಸ್ತರದವರಿಗೆ ಸಾಮಾಜಿಕ ಸ್ಥಾನಮಾನವನ್ನು ಒದಗಿಸಿಕೊಡುತ್ತದೆ. ಕಾರಣ ಅವರು ವ್ಯವಸ್ಥಿತವಾದ ಸಂಘಟಿತ ವಲಯದಲ್ಲಿ ಬದುಕುತ್ತಿರುತ್ತಾರೆ. ಈ ಸಂಘಟನೆಯ ಸ್ವರೂಪವೇ ಅವರ ಸಂಘಟಿತವಾದ ಅನಿವಾರ್ಯತೆ ಮತ್ತು ಅದರ ಶಕ್ತಿ ಸಾಧ್ಯತೆಗಳೆರಡನ್ನೂ ತೋರ್ಪಡಿಸುತ್ತದೆ.

ವಾಸ್ತವವಾಗಿ ಕೇವಲ ಆಡಳಿದಲ್ಲಿ ಪಾಲುದಾರಿಕೆ ಎಂಬುದು ಹಿಂದುಳಿದ ಜಾತಿಗಳಿಗೆ ಯಾವುದೇ ಅಂಗಡಿಯಲ್ಲಿ ಸಿಗುವ ವಸ್ತುವಲ್ಲ, ಅಥವಾ ಉನ್ನತ ಜಾತಿಗಳು ಕೊಡುವ ಭಿಕ್ಷೆಯೂ ಅಲ್ಲ, ಏಕೆಂದರೆ ಸಾಮಾಜಿಕ ಸ್ಥಾನಮಾನಗಳ ಮೂಲಕ ಬರುವ ಇಲ್ಲವೇ ಸಂವಿಧಾನಾತ್ಮಕ ರೂಪದಲ್ಲಿ ಪಡೆಯುವ ಎರಡೇ ಸಾಧ್ಯತೆಗಳು ನಮ್ಮೆದುರಿಗಿರುವುದು. ಸಾಮಾಜಿಕ ಬದುಕು ಜಾತಿಪದ್ದತಿಯಲ್ಲಿ ದಿನೇದಿನೇ ಬಿಗಿಯಾಗುತ್ತಿದೆ. ಇದರಿಂದಾಗಿ ಜಾತಿ ಪ್ರಾಬಲ್ಯ ಬಿಡಿಬಿಡಿಯಾಗಿ ಪ್ರಾಬಲ್ಯ ಹೊಂದಿದ ಕೂಡಲೆ ಅಸಂಘಟಿತ ಜಾತಿಗಳನ್ನು ಸುಲಭವಾಗಿ ತಮ್ಮ ಅಭಿಪ್ರಾಯಗಳನ್ನು ಹೇರಲು ಬಳಸಿಕೊಳ್ಳುತ್ತದೆ. ಇಲ್ಲವೇ ಕೆಳ ಜಾತಿಗಳು ತಾವೇ ಮೇಲಿನವರ ಅಭಿಪ್ರಾಯಗಳು ಒಳ್ಳೆಯವೆಂದು ಒಪ್ಪಿಬಿಡುತ್ತವೆ. ಇದರಿಂದ ಸಾಮಾಜಿಕ ಅಸಮಾತೆಗಳ ಸ್ಥಿತಿ ಯಥಾವತ್ತಾಗುತ್ತದೆ. ಸಾಮಾಜಿಕ ಬದಲಾವಣೆ ಕಾಳಜಿ ಇಲ್ಲದೆ ಹೋದಲ್ಲಿ ಯಾವುದೇ ಜಾತಿ ತನ್ನ ಅಧಃಪತನವನ್ನು ತಿಳಿದು ಕೊಳ್ಳುವಲ್ಲಿ ಸೋಲುತ್ತದೆ. ಇಂಥ ಸೋಲೆ ಮತ್ತೊಂದು ಜಾತಿಗೆ 'ಪ್ರಾಬಲ್ಯತೆ'ಯನ್ನು ತಂದು ಕೊಡುತ್ತದೆ.

ಕರ್ನಾಟಕದಲ್ಲಿ ಹಿಂದುಳಿದ ಜಾತಿಗಳ ಸ್ಥಿತಿ ಇನ್ನೂ ಮಠ, ಜಾತಿ ಸಮ್ಮೇಳನ, ಒಬ್ಬ ನಾಯಕನಿಗೆ ಅಧಿಕಾರದ ಒತ್ತಾಯಕ್ಕಾಗಿ ಜೈಕಾರ ಹಾಕುವುದು, ಸಮಾವೇಶದಲ್ಲಿ ಒಬ್ಬಬ್ಬರನ್ನು ನಾಯಕರನ್ನಾಗಿ ಮಂಚೂಣಿಗೆ ತರುವ ತರಬೇತಿ ಶಾಲೆಗಳಂತಿವೆ. ವಾಸ್ತವವಾಗಿ ಇವು 'ದಲಿತ ಸಂಘರ್ಷ ಸಮಿತಿ'ಯ ಸ್ವರೂಪದಲ್ಲಿ ಕಾನೂನಿನ ನಡುವೆ ತಮ್ಮ ಅಸ್ತಿತ್ವ ಕಂಡುಕೊಳ್ಳುವ ಬದಲು ಪ್ರಬಲ ಜಾತಿಗಳು ಪ್ರಬಲವಾಗಿರುವುದು ಮಠಗಳಿರುವುದರಿಂದ ಎಂದು ತಪ್ಪಾಗಿ ತಿಳಿದು ಮಠ ಪರಂಪರೆಯಲ್ಲಿ ಜನರನ್ನೆಲ್ಲ ಮಠದ ಸ್ವಾಮಿಗಳತ್ತ ಯಾತ್ರೆ ಹೊರಡಿಸಿದರು. ವಾಸ್ತವವಾಗಿ ಇವರೆಲ್ಲ ವಿಧಾನಸೌಧ ಮುತ್ತಿಗೆ ಹಾಕಬೇಕಾಗಿದ್ದವರು. ಆದರೆ ಹಿಂದುಳಿದ ನಾಯಕರು ಮಾಡಿದ್ದೇನು? ಮಠ, ಅದಕ್ಕೆ ಹಲವು ಸ್ವಾಮಿಗಳು, ಹಲವು ಶಾಖೆಗಳು ಮುಂತಾಗಿ. ಪ್ರಜಾಪ್ರಭುತ್ವವಾದಿಗಳಾಗಿ ಜನ ವಿಚಾರವಂತರಾದಲ್ಲಿ ತಮ್ಮ ಅಧಿಕಾರಕ್ಕೆ ಕುತ್ತು ಬರುತ್ತದೆಂದು ಜನಶಕ್ತಿಯನ್ನು ಮಠಗಳತ್ತ ಡೈವೋರ್ಟ್ ಮಾಡಿ ತಾವು ತಮ್ಮ ಅಧಿಕಾರವನ್ನು ವಂಶ ಪಾರಂಪರ್ಯವಾಗಿ ಅನುಭವಿಸುವ ಹುನ್ನಾರದಲ್ಲಿದ್ದಾರೆ. ಆಡಳಿತ ಮಾಡುತ್ತಿರುವ ರಾಜಕಾರಣಿ ಅಥವಾ ಅಧಿಕಾರಿಗಳಲ್ಲಿ ಇವನು ಪ್ರಬಲ ಜಾತಿಯವರನ್ನು ಇವನು ಪ್ರಬಲ ಜಾತಿಯವರಲ್ಲ ಎಂದು ನಾವು ವಿಭಾಗ ಮಾಡಲು ಸಾಧ್ಯವೇ ಇಲ್ಲ, ಕಾರಣ ಅಧಿಕಾರ ಸಿಕ್ಕ ತಕ್ಷಣ ನಾಯಕರು, ಅಧಿಕಾರಿಗಳು ಪ್ರಬಲವಾಗುವ ಕಡೆಗಷ್ಟೇ ನಡೆಯುತ್ತಿರುತ್ತಾರೆ. ಇದರಿಂದಾಗಿ ಹಿಂದುಳಿದ ಜಾತಿಗಳೂ ಜಾತಿಗಳಾಗಿ ಒಂದೊಂದು ಪ್ರಬಲ ಗೋಡೆಕಟ್ಟಿಕೊಂಡವು. ವಾಸ್ತವವಾಗಿ ಹಿಂದುಳಿದ ಜಾತಿಗಳು ಆರ್ಥಿಕವಾಗಿ ತುಂಬಾ ದುರ್ಬಲವಾದವು.

ಜೊತೆಗೆ ಶಿಕ್ಷಣದ ಕೊರತೆ ಆ ಮೂಲಕವಾಗಿ ಬೌದ್ಧಿಕ ಕೊರತೆ, ಸ್ಪಷ್ಟ ಜೀವನ ಕಾಳಜಿ, ಧೋರಣೆ, ಬದ್ಧತೆ ಇಲ್ಲದಿರುವುದು. ಬೇರೆಯವರ ಅಭಿಪ್ರಾಯಕ್ಕೆ ಬಹುಬೇಗ ತಲೆಕೊಡುವುದು. ಅಪಾರ ಜನಸಂಖ್ಯೆ ಇದ್ದೂ ಪ್ರಯೋಜನವಿಲ್ಲದ ಸ್ಥಿತಿಗೆ ಕಾರಣಗಳು ಹಲವು. ಜೊತೆಗೆ ಈ ಜಾತಿಗಳು ನಿರಂತರ ಶ್ರಮವನ್ನವಲಂಬಿಸಿ ಬದುಕಬೇಕಾದ ಆರ್ಥಿಕತೆಯನ್ನೊಳಗೊಂಡವು? ಕುಳಿತು ತಿನ್ನುವ, ಯೋಚಿಸುವ ಸ್ಥಿತಿ ಇವುಗಳಿಗಿಲ್ಲ. ಜಾತಿಯ ಕೀಳರಿಮೆಯಲ್ಲಿ ನರಳುತ್ತಿವೆ. ಮತ್ತು ನಾವು ಹುಟ್ಟಿರುವ ಜಾತಿಯ ಸಂಸ್ಕೃತಿಯ ನೆಲೆಗಳು ಸರಿಯಿಲ್ಲ ಎಂದು ಪ್ರಬಲ ಜಾತಿಗಳ ಬದುಕನ್ನು ನಿರಂತರವಾಗಿ ಅನುಕರಿಸುತ್ತಾ ಸಾಗಿವೆ. ಸಾಂಸ್ಕೃತಿಕವಾಗಿ ತನ್ನ ಬೇರುಗಳನ್ನು ಕಳೆದುಕೊಂಡು ಯಾವುದೇ ಸಮುದಾಯ ಮುಂದಿನ ಪ್ರಗತಿಯನ್ನು ಕಾಣಲು ಸಾಧ್ಯವಿಲ್ಲ. ಬದುಕಿನ ಬದ್ಧತೆಯೇ ಅಧಿಕಾರ, ಆಡಳಿತ ಪಾಲುದಾರಿಕೆ ಸಂದರ್ಭದಲ್ಲಿ ಮುಖ್ಯ ಪಾತ್ರವನ್ನೂ ವಹಿಸುತ್ತದೆ. ಹಿಂದುಳಿದವರ ಮೀಸಲಾತಿಯ ಒತ್ತಾಯಗಳು ಕೇವಲ ಬೇಡಿಕೆಗಳಾಗಿ ಉಳಿದಿವೆ. ಪರಿಶಿಷ್ಟರಿಗೆ ಸಿಕ್ಕ ಸ್ವರೂಪದಲ್ಲಿ ಹಿಂದುಳಿದವರಿಗೆ ಮೀಸಲಾತಿ ಸಿಗುತ್ತಿಲ್ಲ ಎಂಬುದು ಸ್ಪಷ್ಟ. ಮತ್ತು ಕೊಟ್ಟಿರುವ ಮೀಸಲಾತಿಯಲ್ಲಿ ಪ್ರಬಲ ಜಾತಿಗಳ ಕಬಳಿಕೆಯೇ ಅತಿಯಾಗಿದೆ. ಬೋಗಸ್ ಸರ್ಟಿಫಿಕೇಟ್ ಹಗರಣಗಳು ಹಿಂದುಳಿದವರ ಮೀಸಲಾತಿಗೆ ಮತ್ತು ಹಿಂದುಳಿದ ಪ್ರಬಲರಲ್ಲಿ ಅಧಿಕವಾಗಿದೆ. ಇದರಿಂದಾಗಿ ಸವಲತ್ತುಗಳ ಪಡೆಯುವಲ್ಲಿ ಆಗುತ್ತಿರುವ ಅನ್ಯಾಯಗಳು ಒಂದು ಮುಖವಾದರೆ, ನಮ್ಮ ಸವಲತ್ತನ್ನು ಮತ್ತಾರೋ ಕಬಳಿಸುತ್ತಿರುವ ಸ್ಥಿತಿಯಿಂದ ಮುಕ್ತರಾಗುವ ನೆಲೆ ಯಾವುದು? ರಾಜಕಾರಣವೊಂದೇ ನಮ್ಮ ಸವಲತ್ತುಗಳ ಸೌಭಾಗ್ಯವಲ್ಲ, ನಮ್ಮ ದೃಷ್ಟಿ ರಾಜಕಾರಣದ ಸವಲತ್ತುಗಳನ್ನು ಮೂಲಕ ಸಮಾನತೆ ಕೇಳುವಂತಹದ್ದಾಗಬಾರದು. ಬದಲಿಗೆ ಬದುಕಿನ ಸಮಾನತೆಯ ಮೇಲೆ ರಾಜಕೀಯ ಮೀಸಲಾತಿ ಕೇಳುವಂತಿರಬೇಕು. ನನಗೆ ತಿಳಿದ ಮಟ್ಟಿಗೆ ಹಿಂದುಳಿದವರ ಬಗ್ಗೆ ಆಲೋಚಿಸುವ ಹಿಂದುಳಿದ ನಾಯಕರೇ ಇಲ್ಲ, ಬಹುತೇಕರು 'ಸ್ವಂತದ' ಬಗ್ಗೆ ಚಿಂತಿಸುತ್ತಾರೆ. ನಂತರ ಪ್ರಬಲರ ಬಗ್ಗೆ ಚಿಂತಿಸುತ್ತಾರೆ. ತಮಗೆ ವೈಯುಕ್ತಿಕವಾಗಿ ಸ್ಥಾನಗಳಿಗೆ ತೊಂದರೆಯಾದಾಗ ಮಾತ್ರ ಹಿಂದುಳಿದವರ ನೇತಾರರಂತೆ ಮಾತಾಡುತ್ತಾರೆ.

'ಸಾಮಾಜಿಕ ಹಿಂದುಳಿದಿರುವಿಕೆ' ಎಂಬುದು ರಾಜ್ಯ ಮತ್ತು ರಾಷ್ಟ್ರ ರಾಜಕಾರಣದ ಬಹುದೊಡ್ಡ ಅಸ್ತ್ರವಾಗಬಹುದಿತ್ತು. ಆದರೆ 'ಸಾಮಾಜಿಕ ಹಿಂದುಳಿದಿರುವಿಕೆ' ಎಂಬುದನ್ನು ಒಂದು ಅಸ್ತ್ರವನ್ನಾಗಿ ನಮ್ಮ ರಾಜ್ಯದಲ್ಲಿ ದಿ|| ಡಿ. ದೇವರಾಜು ಅರಸು ಅವರನ್ನು ಬಿಟ್ಟು ಯಾರೂ ಬಳಸಲಿಲ್ಲ. ಆದರೆ ಅರಸು ಅವರಿಗೇ ಹಿಂದುಳಿದವರು ಮಾಡಿದ್ದೇನು? ಎಂಬುದೇ ನನ್ನ ಈ ಮಾತಿಗೆ ಉತ್ತಮ ವ್ಯಾಖ್ಯಾನ. ಈ ಬಗೆಯ ಹಿಂದುಳಿದಿರುವಿಕೆಯನ್ನು ಒಂದು ತತ್ವವನ್ನು ಮಾಡಿಕೊಳ್ಳುವ ಜಾಣ್ಮೆ, ಮುಗ್ಧತೆ, ಸಂಘಟನೆ ನಮ್ಮಲ್ಲಿಲ್ಲ. ಏಕೆಂದರೆ ನಾವು ಮಾನಸಿಕವಾಗಿ ಮೇಲ್ ಜಾತಿಯವರ ರೀತಿಯೇ ಯೋಚಿಸುತ್ತೇವೆ. ಈ ದೇಶ ದುಃಸ್ಥಿತಿಗೆ ಬರಲು ಕಾರಣ ನಾವಲ್ಲ ಎಂದೂ ಮುಸ್ಲಿಮರು ನಮ್ಮ ಶತ್ರುಗಳೆಂದೂ ಕ್ರಿಶ್ಚಿಯನ್ನರಿಂದ, ಬ್ರಿಟಿಷರಿಂದ ನಮಗೆ ಅನ್ಯಾಯವಾಗಿದೆಯೆಂದೂ ಪರಿಶಿಷ್ಟರು ನಮ್ಮ ಅವಕಾಶವನ್ನೂ ಕಬಳಿಸುತ್ತಿದ್ದಾರೆ ಎಂದು ಮೂರ್ಖರಾಗಿ ಚಿಂತಿಸುತ್ತೇವೆ. ಆದರೆ ಇವ್ಯಾವೂ ಸಹ ಸತ್ಯ ಅಲ್ಲ. ಒಬ್ಬ ಕುರುಬರವನಿಗೂ, ಸವಿತಾ ಸಮಾಜದವನಿಗೂ ಮತ್ತು ರಾಮ ಮಂದಿರಕ್ಕೂ ಏನು ಸಂಬಂಧ? ಖಂಡಿತವಾಗಿಯೂ ಇಲ್ಲ. ಆದರೆ 'ಇದೆ' ಎಂದು ಎಲ್ಲ ಹಿಂದುಳಿದವರೂ ಭ್ರಮಿಸಿದ್ದಾರೆ. ತಮ್ಮ ನಿಜವಾದ ಶತ್ರುವನ್ನು ಗುರುತಿಸಿಕೊಳ್ಳುವಲ್ಲಿ ಅವರು ಸೋತಿದ್ದಾರೆ. ಹುಸಿ ಶತ್ರುವಿನ ಬಗ್ಗೆ ವಿಪರೀತ ಎಚ್ಚರ ವಹಿಸಿ ದೇಶದ್ರೋಹಿ ಕೆಲಸಗಳಲ್ಲಿ ಸದಾ ಕ್ರಿಯಾಶೀಲರಾಗುವ ದಾಖಲೆಗಳು ದಿನೇ ದಿನೇ ಅಧಿಕ ಆಗುತ್ತಿವೆ.

ಇವರಿಗೆ ಪರಿಶಿಷ್ಟರಂತೆ ಹೋರಾಟದ ಮೂಲಕ ನಮ್ಮ ಸವಲತ್ತುಗಳನ್ನು ಪಡೆಯಬೇಕೆಂಬ ಹೋರಾಟವೂ ಇಲ್ಲ, ಮೇಲ್ ಸ್ಥರದವರ ರೀತಿ ಸವಲತ್ತೂ ಇಲ್ಲ. ಆದರೆ ಹಪಹಪಿಸುವುದನ್ನಂತೂ ಬಿಟ್ಟಿಲ್ಲ; ಬಿಡಲಾಗುವುದಿಲ್ಲ. ಇಂಥ ಸಂದರ್ಭದಲ್ಲಿ ನಾವು ಮಾಡಬಹುದಾದ ಕೆಲಸಗಳಾದರೂ ಏನು?

ವಾಸ್ತವವಾಗಿ ಪಕ್ಷ ರಾಜಕಾರಣ ನಂಬಿರುವ ಎಲ್ಲ ರಾಜಕಾರಣಿಗಳು ಚುನಾವಣೆಗೆ 'ಜಾತಿ' ನಂತರ 'ಜಾತ್ಯತೀತತೆ'ಯನ್ನು ಪ್ರಾಮಾಣಿಕವಾಗಿ ಅವಲಂಬಿಸಿರುವುದರಿಂದ ಹಿಂದುಳಿದವರು ಬಹುತೇಕ ಓಟಿನ ಕಣಜಗಳಷ್ಟೆ. ಆ ಮೇಲೆ ಜಾತಿವಾರು ಸನ್ಮಾನ, ಸಭೆ, ಬಿನ್ನವತ್ತಳೆಗಳು. ಒಂದು ಜಾತಿ ಸಂಘಕ್ಕೆ ಸೈಟು, ಕಾಲೇಜು, ಎಂಜಿನಿಯರ್, ಮೆಡಿಕಲ್, ಟಿ.ಸಿ.ಎಚ್., ಬಿ.ಎಡ್., ಮುಂತಾಗಿ ಶೈಕ್ಷಣಿಕ ಕೈಗಾರಿಕೋದ್ಯಮಗೊಳಿಸುವತ್ತ ಜಾತಿ ಸಂಘಟನೆಗಳು ಕ್ರಿಯಾಶೀಲವಾಗುತ್ತವೆ. 'ಪ್ರಬಲತೆ' ಎಂಬುದು ಆರ್ಥಿಕವಾಗಿ ಬಂದ ತಕ್ಷಣವೆ 'ಹಿಂದುಳಿದಿರುವಿಕೆ' ಎಂಬುದು ಮಾಯವಾಗಿ ಹಿಂದುಳಿದವರ ಬಗೆಗಿನ ಕಾಳಜಿಯೂ ಮಾಯವಾಗುತ್ತದೆ. ಹಿಂದುಳಿದವರ ಹಿತ ಕಾಪಾಡುವ ಸರ್ಕಾರಗಳು ಈಗ ಎಲ್ಲಿವೆ? ಈಗ ಬಂಡವಾಳವಿರುವ ಕಂಪನಿಗಳನ್ನು, ಶ್ರೀಮಂತರನ್ನು ಕಾಪಾಡುವ ನಾಯಕರೇ ಅಧಿಕ. ಅಂಥವರು ಪ್ರಬಲರಾದರೂ ಅಷ್ಟೆ ಹಿಂದುಳಿದವರಾದರೂ ಅಷ್ಟೆ. ನಮಗೆ ಬಂದ ಭಾಗ್ಯವೇನೂ ಇಲ್ಲ. ವಾಸ್ತವವಾಗಿ ಸಾಮಾಜಿಕ ಹಿಂದುಳಿದಿರುವಿಕೆ ಎಂಬುದು ಒಗ್ಗಟ್ಟಿನ ಸಾಧ್ಯತೆಯನ್ನು ಒಳಗೊಳ್ಳುವ ಶಕ್ತಿ ಇಲ್ಲದ್ದು. ಏಕೆಂದರೆ ಅದನ್ನು ಒಗ್ಗೂಡಿಸುವ ಕೆಲಸವನ್ನು ವ್ಯಾಪಕವಾಗಿ ಮಾಡಿರುವುದು ಕಡಿಮೆ.

ಹಿಂದುಳಿದವರ ಚಟುವಟಿಕೆ ಕೇವಲ ಚುನಾವಣೆ ಗಮನದಲ್ಲಿಟ್ಟುಕೊಂಡಿರಬಾರದು. ಪ್ರತಿ ತಿಂಗಳು ಹಿಂದುಳಿದವರ ಸಭೆ, ಸದಸ್ಯತ್ವದ ಬೆಳವಣಿಗೆ, ಶಿಬಿರಾರ್ಥಿಗಳಿಗೆ ಕಮ್ಮಟ, ಉಪನ್ಯಾಸ, ಸಮಾರಂಭಗಳು ನಿರಂತರವಾಗಿ ನಡೆಯಬೇಕು. ಸೈದ್ಧಾಂತಿಕವಾಗಿ ಸ್ಪಷ್ಟತೆ, ಸಾಂಸ್ಕೃತಿಕವಾಗಿ ಚೈತನ್ಯಶೀಲತೆ ಎರಡೂ ಒಟ್ಟಾಗಬೇಕು. ನಮ್ಮ ಬದುಕಿನ ವಿಧಾನ ಮಹತ್ವದೆಂದು ತಿಳಿಸಬೇಕು. ನಾವು ಇನ್ನೊಬ್ಬರ ಬದುಕನ್ನು, ಇನ್ನೊಬ್ಬರ ಅಭಿಪ್ರಾಯದಲ್ಲಿ ಬದುಕುವುದನ್ನು ಬಿಡಬೇಕು.

ಶಿವಮೊಗ್ಗದಲ್ಲಿ ಹಿಂದೆ ಜಾತಿವಾರು ಗಣನೆ ಬೇಡಿಕೆ ಮುಂದಿಟ್ಟ ಒಂದ ಸಮಾವೇಶ ಕರ್ನಾಟಕ ಸಂಘದಲ್ಲಿ ಹಿಂದಿನ ವರ್ಷ ನೀವು ನಡೆಸಿದ್ದೀರಿ. ತುಂಬಾ ಅರ್ಥಪೂರ್ಣವಾದ ಸಮಾವೇಶ. ಈಗ ಈ ಸಮಾವೇಶ ಹಮ್ಮಿಕೊಂಡಿದ್ದೀರಿ. ಇದು ಇಡೀ ದೇಶ ಚುನಾವಣಾ ಜ್ವರದಲ್ಲಿರುವ ಸಮಯ. ಹಿಂದುಳಿದವರು ಲೆಕ್ಕಕ್ಕಿದ್ದಾರೆ ಎಂದು ಯಾರೂ ತಿಳಿದಂತಿಲ್ಲ. ಜನ ಇರೋದೆ ನಮಗೆ ಓಟು ಹಾಕಲಿಕ್ಕೆ ಎಂದು ಭಾವಿಸಿದಂತಿದೆ. ಮಳೆಯಿಲ್ಲ, ಬೆಳೆಯಿಲ್ಲ ಹೊತ್ತಿನ ಊಟಕ್ಕೂ ಕಷ್ಟ ಜನರಲ್ಲಿ ಆದರೆ ಒಂದೆರಡು ದಿನಕ್ಕಾದರೂ ಹಣದ ಹೊಳೆ ಹರಿದು ಮಳೆಯನ್ನು, ಒಣ ಭೂಮಿಯನ್ನು ಕಾಲುವೆಗಳನ್ನು, ಬಡಕಲಾಗಿರುವ ದನ ಕರುಗಳನ್ನು ಮತ್ತು ಇತರ ಎಲ್ಲ ಬಾಧೆಗಳನ್ನು ಮರೆಸಿ ಮಾಯಾಂಗನಾ ಸ್ವರೂಪದಲ್ಲಿ ಓಟಿನ ನಾಟಕದ ಅಂಕ ಮುಗಿಯುತ್ತದೆ. ಸಣ್ಣದೊಂದು ಪ್ರಶ್ನೆಯೆಂದರೆ ಎಲ್ಲಿಂದ ಬಂತು ಈ ದುಡ್ಡು?

ಉತ್ತರಿಸುವವರು ಯಾರಿದ್ದಾರೆ? ಆದರೆ ಎಲ್ಲರಿಗೂ ಗೊತ್ತು ಆ ದುಡ್ಡು ಈಗ ಮಾತ್ರ ಚಲಾವಣೆಗೊಳ್ಳುವ ಶಕ್ತಿ ಇರುವುದೆಂದು. ರೈತರು ಆತ್ಮಹತ್ಯೆ ಮಾಡಿಕೊಳ್ಳುವಾಗ ಈ ದುಡ್ಡು ಏಕೆ ನಿರ್ದಯಿ ಆಗಿತ್ತು. ಮೇವಿಲ್ಲದೆ ತನ್ನೊಂದಿಗಿರುವ ದನಕರುಗಳ ಮೇವಿಗೆ ರೈತ ಕಳ್ಳನಾಗುವಾಗ ಈ ದುಡ್ಡು ಎಲ್ಲಿತ್ತು? ಹೀಗೆ ಎಷ್ಟೊ ಪ್ರಶ್ನೆಗಳು ಹಿಂದುಳಿದವರವೂ ಆಗುತ್ತವೆ. ಒಟ್ಟಾರೆ ಮನುಷ್ಯತ್ವದ ಪ್ರಶ್ನೆಗಳೂ ಆಗುತ್ತವೆ. ಆದ್ದರಿಂದ ನಾವು ಈ ಸಮಸ್ಯೆ ಕುರಿತು ಬೇರೆಯದೇ ರೀತಿ ಚಿಂತಿಸಬೇಕಾಗಿದೆ.

ಈಗ ಹದಿನೆಂಟು ಜಾತಿಗಳೆಲ್ಲ ಒಟ್ಟಿಗೆ ಸೇರಿ ಈ ಸಮಾವೇಶ ಮಾಡುತ್ತಿದ್ದೀರಿ. ಎಲ್ಲಾ ಜಾತಿ ಆಧಾರಿತ ಸಂಘಟನೆಗಳು. ಶಿವಮೊಗ್ಗದಿಂದ ಹಿಂದುಳಿದ ಜಾತಿಗಳೇ ಒಗ್ಗಟ್ಟಾಗಿ ಚುನಾವಣೆಯಲ್ಲಿ ತಮ್ಮ ಸ್ಪರ್ಧಿಯನ್ನು ಚುನಾವಣೆಗೆ ಕಣಕ್ಕಿಳಿಸಿ. ನಿಮ್ಮ ಹಿತಾಸಕ್ತಿಗಳನ್ನು ಕಾಪಾಡುವ ಪ್ರತಿನಿಧಿಯಾಗಿ ವಿಧಾನಸಭೆ ಮತ್ತು ಲೋಕಸಭೆ ಚುನಾಯಿಸಿ ಕಳಿಸಿಕೊಡಿ. ಪ್ರಬಲ ಜಾತಿಯ ಓಟುಗಳಿಗಿಂತ ನೀವೇ ಅಧಿಕವಾಗಿದ್ದೀರಿ. ಈ ಸಮಾವೇಶವೇ ಹಿಂದುಳಿದವರ ರಾಜಕೀಯ ಅಧಿಕಾರದ ಭಿನ್ನ ತಂತ್ರವಾಗಿ ಆರಂಭಗೊಳ್ಳಲಿ. ಇದರಿಂದ ಇಡೀ ರಾಜ್ಯದಲ್ಲಿ ಹೊಸ ಸಾಧ್ಯತೆಗಳು ಸಾಧ್ಯ.

ಅಲ್ಲದೆ ಹಿಂದುಳಿದವರ ಚಟುವಟಿಕೆ ಕೇವಲ ಚುನಾವಣೆ ಗಮನದಲ್ಲಿಟ್ಟುಕೊಂಡಿರಬಾರದು. ಪ್ರತಿ ತಿಂಗಳು ಹಿಂದುಳಿದವರ ಸಭೆ, ಸದಸ್ಯತ್ವದ ಬೆಳವಣಿಗೆ, ಶಿಬಿರಾರ್ಥಿಗಳಿಗೆ ಕಮ್ಮಟ, ಉಪನ್ಯಾಸ, ಸಮಾರಂಭಗಳು ನಿರಂತರವಾಗಿ ನಡೆಯಬೇಕು. ಸೈದ್ಧಾಂತಿಕವಾಗಿ ಸ್ಪಷ್ಟತೆ, ಸಾಂಸ್ಕೃತಿಕವಾಗಿ ಚೈತನ್ಯಶೀಲತೆ ಎರಡೂ ಒಟ್ಟಾಗಬೇಕು. ನಮ್ಮ ಬದುಕಿನ ವಿಧಾನ ಮಹತ್ವದೆಂದು ತಿಳಿಸಬೇಕು. ನಾವು ಇನ್ನೊಬ್ಬರ ಬದುಕನ್ನು ಇನ್ನೊಬ್ಬರ ಅಭಿಪ್ರಾಯದಲ್ಲಿ ಬದುಕುವುದನ್ನು ಬಿಡಬೇಕು. ವಿವಾಹ ಸರಳವಾಗಿ ಮಾಡಿ ಉಳಿಸಿದ ಹಣದಲ್ಲಿ ಸಮುದಾಯದ ಚಟುವಟಿಕೆಗೆ ಬಳಸುವ ಆಲೋಚನೆ ಉಳ್ಳವರಲ್ಲಿ ಬರಬೇಕು. ಹಿಂದುಳಿದವರಿಗೆ ಪರಸ್ಪರ ಸಹಾಯ, ವೈಯುಕ್ತಿಕ ಕಷ್ಟ ಸುಖಗಳಿಗೆ ಭಾಗವಹಿಸುವ ಸ್ಥಿತಿಗಳಿಲ್ಲದೆ ಹಿಂದುಳಿದವರ ಏಳಿಗೆ ಹೇಗೆ ಸಾಧ್ಯ?

ಹಿಂದುಳಿದವರ ಬಗ್ಗೆ ಶಿವಮೊಗ್ಗ ಹೆಚ್ಚು ಕ್ರಿಯಾಶೀಲವಾಗಿದೆ. ಇದೇ ಕ್ರಿಯಾಶೀಲತೆ ರಾಜ್ಯದ ಉಳಿದ ಜಿಲ್ಲೆಗಳಲ್ಲೂ ಆಗಬೇಕು. ದಲಿತ ಸಂಘರ್ಷ ಸಮಿತಿಯ ಚೈತನ್ಯಶೀಲತೆ ಅದಕ್ಕೆ ಬರಬೇಕು. ಬೀದಿಗಿಳಿವ ಶಕ್ತಿಯೂ ಇಲ್ಲದೆ ಮನೆಯಲ್ಲೂ ಹಿಂಸೆ ಅನುಭವಿಸದೆ ಮನದಲ್ಲೆ ಮಂಡಿಗೆ ತಿನ್ನುತ್ತಿರುವ ಹಿಂದುಳಿದ ವರ್ಗ ಒಗ್ಗಟ್ಟಾಗಲು ಇರುವ ಸಮಸ್ಯೆಗಳೇ ಅದಕ್ಕೆ ಮಾರಕವಾಗಿದೆ. ಭಿನ್ನತೆಯನ್ನುಳಿಸಿಕೊಂಡು ಸಮಾನ ಶತ್ರುವನ್ನು ಹಿಮ್ಮೆಟ್ಟಿಸಲು ಒಂದಾಗದಿದ್ದರೆ ಜನಸಂಖ್ಯೆ ಎಷ್ಟೇ ದೊಡ್ಡದಾಗಿದ್ದರೂ ಹಿಂದುಳಿದ ವರ್ಗವೆಂಬ ಗಜವನ್ನು ಸಣ್ಣ ಕಬ್ಬಿಣ ತುಂಡು ಅಂಕುಶದಿಂದ ನಿಯಂತ್ರಿಸಿದಂತೆ ಪ್ರಬಲರೆನಿಸಿದ ಜನಸಂಖ್ಯೆಯಲ್ಲಿ ಕಡಿಮೆ ಇರುವವರು ಸಾಮಾಜಿಕ ಸ್ಥಾನಮಾನಗಳಿಂದ, ಮುನ್ನಡೆಸಿಕೊಂಡೇ ಹೋಗುತ್ತಿರುತ್ತಾರೆ. ಆ ಬಗ್ಗೆ ನಾವು ಸದಾ ಎಚ್ಚರವಾಗಿರಬೇಕಾಗಿರುವುದೇ ನಮ್ಮ ಅಸ್ತಿತ್ವ.

(ದಿನಾಂಕ: ೭.೩.೨೦೦೪ ರಂದು ಶಿವಮೊಗ್ಗ ಡಿವಿಎಸ್ ರಂಗಮಂದಿರದಲ್ಲಿ ಬಹುಮತ ಸಂಘಟನೆ ಏರ್ಪಡಿಸಿದ್ದ 'ಹಿಂದುಳಿದ ಜಾತಿಗಳ ಜಾಗೃತಿ ಸಮಾವೇಶ'ದಲ್ಲಿ ಮಂಡಿಸಿದ ಲೇಖನ) □

ಕೋಮುವಾದವನ್ನು ಹಿಮ್ಮೆಟ್ಟಿಸುವತ್ತ...

ಮತಾಂಧತೆ ದೇವರ ವಿರುದ್ಧವಾದುದು

ಕಾಳಜಿ

ಭಾರತ ಹಿಂದೆಂದೂ ಕಂಡರಿಯದಂತಹ ಬಿಕ್ಕಟ್ಟಿಗೆ ಇಂದು ಸಿಲುಕಿದೆ. ದೇಶದ ಬಹುಜನರ ಭಾವನೆ ಮತ್ತು ಬದುಕಿಗೆ ತೀವ್ರ ಸವಾಲೊಡ್ಡಿರುವ ಕೋಮುವಾದ ವ್ಯಾಪಕವಾಗುತ್ತಿದೆ. ಪರಸ್ಪರ ಸ್ನೇಹ-ಸಹಬಾಳ್ವೆ ಮತ್ತು ಶಾಂತಿಯುತ ಬದುಕಿಗೆ ಹೆಸರಾಗಿದ್ದ ಭಾರತೀಯ ಸಮಾಜ ಈಗ ಕ್ಷೋಭೆಗೊಳಗಾಗಿ ನರಳುತ್ತಿದೆ. ಧರ್ಮದ ಹೆಸರಿನಲ್ಲಿ ಜನರನ್ನು ಒಡೆದು ಛಿದ್ರಗೊಳಿಸಲಾಗುತ್ತಿದೆ. ಅಧಿಕಾರದ ಆಸೆಗಾಗಿ ಕೋಮುವಾದಿ ರಾಜಕೀಯ ಪಕ್ಷಗಳು ದೇವರು ಮತ್ತು ಧರ್ಮದ ಹೆಸರಿನಲ್ಲಿ ಜನರನ್ನು ಪರಸ್ಪರ ಎತ್ತಿಕಟ್ಟಿ ತಮ್ಮ ಅಧಿಕಾರ ದಾಹವನ್ನು ತೀರಿಸಿಕೊಳ್ಳುವ ಹವಣಿಕೆಯಲ್ಲಿದ್ದಾರೆ. ಇಂಥ ಸಂದರ್ಭದಲ್ಲಿ ಪ್ರಜ್ಞಾವಂತ ನಾಗರಿಕರು ದೇಶದ ಈ ಘೋರ ದುರಂತವನ್ನು ತಡೆಯಲೇಬೇಕಾದ ಅನಿವಾರ್ಯತೆ ಮೂಡಿದೆ. ಸಾಹಿತಿ ಕಲಾವಿದರ ಒಕ್ಕೂಟ ಈ ಸಂದರ್ಭದಲ್ಲಿ ಹೊರತಂದಿರುವ ಧ್ವನಿಮುದ್ರಿಕೆಗಾಗಿ ನಾಡಿನ ಖ್ಯಾತ ಚಿಂತಕರು ನೀಡಿದ ಸಂದೇಶಗಳು ಇಲ್ಲಿವೆ.

ಎಲ್ಲ ಮತಾಂಧತೆಯು ನಿಜವಾಗಿಯೂ ದೇವರ ವಿರುದ್ಧವಾದುದು. ದೇವರ ಹೆಸರನ್ನು ರಾಜಕೀಯಕ್ಕೆ ಉಪಯೋಗಿಸುವವರು ದೇವರಿಗೆ ವಿರೋಧವಾದವರು. ನಿಜವಾಗಿಯೂ ದೈವಭಕ್ತರಾದವರು ದೇವರ ಜೊತೆ ಒಂದು ಸಂವಾದವನ್ನು ಹೂಡಿರುತ್ತಾರೆ. ಹಾಗೆ ಸಂವಾದವನ್ನು ಹೂಡಿದ ಎಲ್ಲ ಸಂತರಿಗೂ, ಎಲ್ಲ ಮನುಷ್ಯರು ಒಂದೇ ಆಗಿ ಕಾಣುತ್ತಾರೆ. ಅದು ತುಕಾರಾಂ ಇರಬಹುದು, ಅದು ಬಸವ ಇರಬಹುದು, ಅದು ಅಲ್ಲಮ ಇರಬಹುದು. ರಾಮ ಎಂಬುವನು ಅಯೋಧ್ಯೆಯಲ್ಲಿ ಇಂತಹ ತಾರೀಖು ಹುಟ್ಟಿದ ಎನ್ನುವುದು ಹಿಂದೂಗಳು ಯೋಚನೆ ಮಾಡುವ ಕ್ರಮವೇ ಅಲ್ಲ. ನನಗೆ ನೆನಪಿದೆ. ನಾನು ಆಗ ಕೇರಳದಲ್ಲಿದ್ದೆ. ನಾಯನಾರ್ ಅವರು ಅಲ್ಲಿ ಮುಖ್ಯಮಂತ್ರಿಯಾಗಿದ್ದರು, ಕಮ್ಯೂನಿಸ್ಟ್ ಮುಖ್ಯಮಂತ್ರಿ. ಅವರು ಈ

ಜನ್ಮಭೂಮಿಯ ವಿವಾದ ಎದ್ದಾಗ ಅರೆರೇ, ರಾಮ ಹುಟ್ಟಿದ್ದು ಕೇರಳದಲ್ಲಿ ಅಂತ ತಿಳಿದಿದ್ದೆ ಅಂದರು.

ಯಾರು ಯಾರು ರಾಮ ಹುಟ್ಟಿದ್ದು ನಮ್ಮೂರಲ್ಲಿ ಎಂದು ತಿಳಿಯುತ್ತಾರೋ ಅವರು ರಾಮನನ್ನು ನಿಜವಾಗಿಯೂ ಪಡೆದವರು. ರಾಮ ಹುಟ್ಟಿದ್ದು ಅಯೋಧ್ಯೆಯಲ್ಲಿ ಮಾತ್ರ ಎನ್ನುವವರು ಅವನನ್ನು ಒಬ್ಬ ಇತಿಹಾಸ ಪುರುಷನನ್ನಾಗಿ ನೋಡಿದಂತಾಗುತ್ತದೆ. ನಾವು ರಾಮನನ್ನು ಪುರಾಣ ಪುರುಷನನ್ನಾಗಿ ನೋಡುತ್ತೇವೆ. ಒಬ್ಬ ಮನುಷ್ಯನಾಗಿದ್ದು ದೇವತೆಯಾದಂತಹ, ದೇವರ ಯೋಗ್ಯತೆಯನ್ನು ಪಡೆದ ಮನುಷ್ಯನನ್ನಾಗಿ ನೋಡುತ್ತೇವೆ. ಅಷ್ಟೇ ಅಲ್ಲ, ಇವತ್ತಿಗೂ ಅವನ ಬಗ್ಗೆ ಜಗಳವನ್ನೂ ಆಡುತ್ತೇವೆ. ನೀನು ಸೀತೆಯನ್ನು ಬೆಂಕಿ ಮೇಲೆ ನಡೆಸಿದ್ದು ಸರಿಯೇನಪ್ಪಾ ? ಅವಳನ್ನ ಕಾಡಿಗೆ ಕಳಿಸಿದ್ದು ಸರಿಯಾ ? ಶಂಭೂಕನನ್ನು ನೀನು ಶಿಕ್ಷೆ ಮಾಡುವುದಕ್ಕೆ ಹೊರಟಿದ್ದು ಸರಿಯಾ ? ಅಂತ ನಾವು ನಮ್ಮ ದೇವರನ್ನು ಪ್ರಶ್ನೆ ಮಾಡುತ್ತೇವೆ. ಯಾವ ದೇವರನ್ನು ನಾವು ಪ್ರಶ್ನೆ ಮಾಡುತ್ತೇವೆಯೋ ಆ ದೇವರ ಜತೆ ನಮಗೆ ಒಂದು ಸಾಮೀಪ್ಯವಿದೆ ಎಂದು ಅರ್ಥ.

ಒಂದು ಅನ್ಯೂನ್ಯತೆ ಇದೆ ಎಂದು ಅರ್ಥ. ನಮ್ಮನ್ನೇ ನಾವು ಪ್ರಶ್ನೆ ಮಾಡಿಕೊಳ್ಳುವಂತಹ ಅರ್ಥ. ನಮ್ಮ ದೇವತಾ ಕಲ್ಪನೆ, ನಮ್ಮ ಕಲ್ಪನೆಯ ಮೇಲೆ ಹೋಗಿರುತ್ತದೆ. ನಮ್ಮ ಕಲ್ಪನೆ ಯಲ್ಲಿ ಇರುವ ಎಲ್ಲಾ ದೋಷಗಳು ನಮ್ಮ ದೇವತಾ ಕಲ್ಪನೆಯಲ್ಲೂ ಇರುತ್ತದೆ. ಅದಕ್ಕೆ ಗಾಂಧೀಜಿ ಅಷ್ಟೂ, ದೇವರ ಜತೆ ಸಂಭಾಷಣೆಯನ್ನು ನಡೆಸಿದವರು ಎಲ್ಲ ಧರ್ಮಗಳು ಅಪರಿಪೂರ್ಣ ಎಂದರು. ಯಾವ ಧರ್ಮವೂ ಪರಿಪೂರ್ಣವಲ್ಲ. ಆದ್ದರಿಂದ ಎಲ್ಲ ಧರ್ಮವೂ ಬೇಕು. ಪ್ರತಿಯೊಂದು ಧರ್ಮವೂ ಒಂದಲ್ಲ ಒಂದು ಕಾರಣದಿಂದ ಅಪರಿಪೂರ್ಣವಾಗಿರುತ್ತದೆ. ಆದ್ದರಿಂದ ಮತೀಯತೆ ಎನ್ನುವುದು ಏನು ಮಾಡುತ್ತದ ಎಂದರೆ ನಮ್ಮ ಧರ್ಮ ಎಲ್ಲದಕ್ಕೂ ಶ್ರೇಷ್ಠವಾದುದು, ಇದನ್ನು ಮೀರಿದರೆ ಇನ್ನೊಂದು ಧರ್ಮವೇ ಇಲ್ಲ, ಇದನ್ನು ಯಾರು ಪಾಲಿಸುವುದಿಲ್ಲವೋ, ಅವರು ಈ ದೇಶದಲ್ಲಿ ಪ್ರಜೆಗಳಾಗಿರುವುದಕ್ಕೆ ಅಯೋಗ್ಯರು. ಇತ್ಯಾದಿಗಳೆಲ್ಲ ನಾವು ಮಾತಾಡಲಿಕ್ಕೆ ಶುರು ಮಾಡುತ್ತೇವೆ. ಚುನಾವಣೆಯಲ್ಲಿ ನಾವು ಯಾವ ಯಾವ ಪ್ರಶ್ನೆಯನ್ನು ಎದುರಿಸಬೇಕೋ ಅದನ್ನು ಎದುರಿಸುತ್ತಿಲ್ಲ.

ಈಗೆಲ್ಲ ಕಡೆ ಏನು ಹೇಳುತ್ತಾರೆ ಎಂದರೆ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾಗಾಂಧಿ ಇಟಲಿಯಲ್ಲಿ ಹುಟ್ಟಿದವಳು. ಇಲ್ಲಿ ಪ್ರಧಾನಿ ಆಗಬಾರದು ಎಂದು. ನನಗಿದು ತಮಾಷೆ ಎಂದೆನಿಸುತ್ತದೆ. ಈ ಕಾಂಗ್ರೆಸ್ ಎ.ಓ. ಹ್ಯೂಂ ನೇತೃತ್ವದಲ್ಲಿ ಹುಟ್ಟಿದ್ದು. ಅವನೊಬ್ಬ ಇಂಗ್ಲಿಷ್ ಮನ್. ಮತ್ತೆ ಅನಿಬೆಸೆಂಟ್ ಕೂಡ ಇದ್ದಳು. ಒಬ್ಬ ಫಾರಿನರ್ ಎನ್ನುವುದು Issue ಆಗಬಾರದು. ಏಕೆಂದರೆ ನಾನು ಎಲ್ಲೋ ಒಂದು ಕಡೆ ತಮಾಷೆಗೆ ಹೇಳಿದೆ. ಈಗ ಉದಾಹರಣೆಗೆ ಸೋನಿಯಾಗಾಂಧಿ ತೆಗೆದುಕೊಳ್ಳೋಣ. ಅವರು ಹುಟ್ಟಿದ್ದು ಇಟಲಿ ಯಲ್ಲಿಯೇ ಆದರೂ ತಾನು ಹುಟ್ಟಿದ್ದು ಅಲಹಾಬಾದ್‌ನಲ್ಲಿ ಎನ್ನುವ ರೀತಿ ವರ್ತಿಸುತ್ತಾರೆ. ಹಿಂದಿ ಭಾಷೆಯನ್ನೂ ಕಲಿತುಕೊಂಡಿದ್ದಾರೆ. ಆದರೆ ನಮ್ಮ ಬೆಂಗಳೂರಿನಲ್ಲಿ ಹುಟ್ಟಿದವರು ಇಂಡಿಯಾ ಶೈನಿಂಗ್ ಎಂಬ ಈ ಕಾಲದಲ್ಲಿ ನಾವು ಹುಟ್ಟಿದ್ದು ನ್ಯೂಯಾರ್ಕ್‌ನಲ್ಲಿ ಅಂತ ತಿಳಿಯುತ್ತಾರೆ. ತಮ್ಮ ಧ್ವನಿಯನ್ನು ಬದಲಾಯಿಸಿಕೊಂಡು ಕಾಲ್ ಸೆಂಟರ್‌ನಲ್ಲಿ ಮಾತನಾಡುತ್ತಾರೆ. ತಮ್ಮ ಹೆಸರನ್ನು ಬದಲಾವಣೆ ಮಾಡಿಕೊಳ್ಳುತ್ತಾರೆ. ಇಲ್ಲಿಯೇ ಇದ್ದು ತಾನು ಎಂದಾದರೂ ಒಂದು ದಿನ ನ್ಯೂಯಾರ್ಕ್‌ಗೆ ಹೋಗಿ ಅಲ್ಲಿ ಅಮೇರಿಕನ್ ಸಿಟಿಜನ್ ಆಗುವ ಕನಸನ್ನು ಕಾಣುವ ಭಾರತೀಯರೆ ಇಂದು ಹೆಚ್ಚು. ಈಗ ಅವರೇ ಹೇಳುತ್ತಿದ್ದಾರೆ. ಸೋನಿಯಾಗಾಂಧಿ ನಮ್ಮ ದೇಶದವಳು ಅಲ್ಲ ಎಂದು.

ಸೋನಿಯಾಗಾಂಧಿಯ ಯೋಗ್ಯತೆ ರಾಜಕಾರಣಿಯಾಗಿ ಏನು ಎಂಬುದು ಬೇರೆ ಪ್ರಶ್ನೆ. ಆ ಪ್ರಶ್ನೆಗೆ ಬಂದಾಗ ನಾನು ಚರ್ಚೆ ಮಾಡಲು ಸಿದ್ಧನಿದ್ದೇನೆ. ಆದರೆ ಈ ಫಾರಿನರ್ ಅನ್ನೋ Issue ಏಕೆ ಎತ್ತುತ್ತಿದ್ದಾರೆ ಎಂದರೆ ಈ ಮತಾಂಧತೆಯನ್ನು ಮತ್ತು ನಮ್ಮೆಲ್ಲರ ಒಳಮನಸ್ಸಿನಲ್ಲಿ ಹುದುಗಿರಬಹುದಾದ ಜಾತೀಯತೆಯನ್ನು ಪ್ರಕ್ಷುಬ್ಧಗೊಳಿಸುವುದಕ್ಕೋಸ್ಕರ. ಇದೊಂದು ಅಪಾಯ. ಇವರು ಹೇಳುವುದು ಹಿಂದುತ್ವ ಮಾಡುವುದು ಸಂಪೂರ್ಣವಾಗಿ ಅಮೇರಿಕಾಕ್ಕೆ ದಾಸಾನುದಾಸರಾಗಿ ನಡೆದುಕೊಳ್ಳುವುದು. ಅದರಿಂದ ಯಾರಿಗೆ ಸ್ವದೇಶ ಪ್ರೇಮ ಇದೆ ಮತ್ತು ಹಿಂದೂ ಧರ್ಮದಲ್ಲಿ ಉದಾತ್ತವಾದ ತತ್ವಗಳಿದ್ದಲ್ಲಿ ಅದು ಎಷ್ಟು ಉದಾತ್ತವಾದುದು ಅಂದರೆ, ನೀವು ಹಿಂದೂ ಧರ್ಮ ಅಂತೇನಾದ್ರೂ ಕರೆಯುವುದಾದರೆ ಆ ಶಬ್ದವೇ ತಪ್ಪು. ಕರೆಯುವ ಹಾಗಿದ್ದರೆ ದೇವರ ಅಗತ್ಯವೇ ಇಲ್ಲದ ಜೈನಧರ್ಮ ಇದೆ. ದೇವರ ಬಗ್ಗೆ ಏನೂ ಮಾತನಾಡದಂತಹ ಬೌದ್ಧ ಧರ್ಮ ಇದೆ. ಮತ್ತು ದೇವರೇ ಇಲ್ಲ ಎನ್ನುವ ವಾದಕ್ಕೂ ಹಿಂದೂ ಧರ್ಮದಲ್ಲೇ ಅವಕಾಶ ಇದೆ. ಎಲ್ಲವನ್ನೂ ಪ್ರಶ್ನೆ

ಮಾಡುವಂತಹ ಅಲ್ಲಮ ಇದ್ದಾನೆ. ಇಷ್ಟು ವೈವಿಧ್ಯಮಯ ಸಂಸ್ಕೃತಿಯನ್ನು ಏಕ ಸಂಸ್ಕೃತಿಯನ್ನಾಗಿ ಮಾಡಿ, ನಮ್ಮ ಜನರ ಮನಸ್ಸಿನಲ್ಲಿ ವಿಷ ಬೀಜವನ್ನು ಬಿತ್ತಿ ಈ ಬಿಜೆಪಿ ನಮ್ಮ ಮನಸ್ಸನ್ನು ಕೆಡಿಸುತ್ತಾ ಇದೆ. ಇದು ಬಹು ದೊಡ್ಡ ಒಳಗಿನ ಭ್ರಷ್ಟಾಚಾರ. ಎಲ್ಲ ಭ್ರಷ್ಟಾಚಾರದ ನಿರ್ಮೂಲನೆ ಆಗಬೇಕು. ಏಕೆಂದರೆ ನಮ್ಮ ಮನಸ್ಸನ್ನೇ ಭ್ರಷ್ಟಗೊಳಿಸುವ ಈ ಭ್ರಷ್ಟಾಚಾರವನ್ನು ನಾವು ಮೊದಲು ನಿರ್ಮೂಲನೆ ಮಾಡಬೇಕು. ನೋಡಿ, ಬಿಜೆಪಿಯು ದೇಶದಲ್ಲಿ ತನ್ನ ಸರ್ಕಾರವನ್ನು ಸ್ಥಾಪಿಸುವುದಕ್ಕೋಸ್ಕರ ಹಿಂದೆ ಕಾಂಗ್ರೆಸ್ ಎಲ್ಲರನ್ನೂ ಸೇರಿಸಿಕೊಂಡು ಹೇಗೆ ಬೆಳೆಯುತ್ತಾ ಇತ್ತೋ ಹಾಗೆ ಬಿಜೆಪಿ ಕೂಡ ಎಲ್ಲರನ್ನೂ ಸೇರಿಸಿಕೊಳ್ಳುತ್ತಾ ಇದೆ. ಬಹಳ ಜನ ಕಾಂಗ್ರೆಸ್‌ನವರನ್ನೂ ಕೂಡ ಸೇರಿಸಿಕೊಳ್ಳುತ್ತಾ ಇದ್ದಾರೆ. ಕಾಂಗ್ರೆಸ್‌ನ ರೀತಿಯೇ ಆಗುತ್ತಾ ಇರುತ್ತಾರೆ. ಆದರೆ ಬಿಜೆಪಿ ಕಾಂಗ್ರೆಸ್ ರೀತಿ ಆದರೂ, ಕಾಂಗ್ರೆಸ್ ಆಗುವುದಿಲ್ಲ. ಆದರೆ

> ವೈವಿಧ್ಯಮಯ ಸಂಸ್ಕೃತಿಯನ್ನು ಏಕ ಸಂಸ್ಕೃತಿಯನ್ನಾಗಿ ಮಾಡಿ, ನಮ್ಮ ಜನರ ಮನಸ್ಸಿನಲ್ಲಿ ವಿಷ ಬೀಜವನ್ನು ಬಿತ್ತಿ ಈ ಬಿಜೆಪಿ ನಮ್ಮ ಮನಸ್ಸನ್ನು ಕೆಡಿಸುತ್ತಾ ಇದೆ. ಇದು ಬಹು ದೊಡ್ಡ ಒಳಗಿನ ಭ್ರಷ್ಟಾಚಾರ. ಏಕೆಂದರೆ ನಮ್ಮ ಮನಸ್ಸನ್ನೇ ಭ್ರಷ್ಟಗೊಳಿಸುವ ಈ ಭ್ರಷ್ಟಾಚಾರವನ್ನು ನಾವು ಮೊದಲು ನಿರ್ಮೂಲನೆ ಮಾಡಬೇಕು.

ಅದಕ್ಕೆ ಒಂದು ತಿರುಳಿದೆ. ಅದಕ್ಕೊಂದು ಕೋರ್ ಇದೆ. ಅದರಲ್ಲಿ ಆರ್ ಎಸ್ ಎಸ್ ಇದೆ. ಸಂಘ ಪರಿವಾರ ಇದೆ. ಸಾತ್ವಿಕವಾದ ವಾಜಪೇಯಿ ಮುಖ ಇದೆ. ಬಹಳ ಕ್ರೂರವಾದ ಮೋದಿ ಮುಖ ಇದೆ. ಇನ್ನೂ ಕ್ರೂರವಾದ ತೊಗಾಡಿಯಾ ಮುಖ ಇದೆ. ಇವೆಲ್ಲವುದರ ಮುಖಾಂತರ ಅವರು ಮತವನ್ನು ಯಾಚಿಸುತ್ತಾರೆ. ಅದಕ್ಕೆ ಅವರು ಬಹಳ ಅಪಾಯಕಾರಿಯಾದವರು. ಬಹಳ ದುಃಖದ ಸಂಗತಿಯೆಂದರೆ ಹೆಣ್ಣು ಮಕ್ಕಳಿಗೆ ಬಡ ಹೆಣ್ಣುಮಕ್ಕಳಿಗೆ ಸೀರೆ ಕೊಡಿಸುತ್ತೇವೆ ಎಂದು, ಅವರನ್ನು ಸಾವಿರಾರು ಸಂಖ್ಯೆಯಲ್ಲಿ ಸೇರಿಸಿ, ವಾಜಪೇಯಿಯನ್ನು ಗೆಲ್ಲಿಸುವುದಕ್ಕೆ ಹೊರಟಂತಹ ಒಬ್ಬ ಬಿಜೆಪಿ ನಾಯಕ ಟಂಡನ್ ಎಂಬುವವನು, ಆ ಸೀರೆಗಳನ್ನು ಬಡಜನರ ನಡುವೆ ಎಸೆದು ನೂಕು ನುಗ್ಗಲಾಗಿ ೨೫ ಜನ ಸತ್ತರು ಎಂದು ಪತ್ರಿಕೆಯಲ್ಲಿ ಬಂದಿದೆ. ವಾಜಪೇಯಿ ಅವರಿಗೇನಾದರೂ ಕವಿ ಹೃದಯ ಇದ್ದರೆ, ನಾನು ಈ ಸಾರಿ ಎಲೆಕ್ಷನ್‌ಗೆ ನಿಲ್ಲುವುದಿಲ್ಲ ಎಂದು ಹೇಳಬೇಕಾದಂತಹ ಬಲಿ ಅಲ್ಲಿ ಆಗಿದೆ. ಬಹಳ ದುಃಖದ ಸಂಗತಿ ಇದು. ನಾವು ದ್ರೌಪದಿಯ ಮಾನಾಪಹರಣ ಓದುತ್ತೇವೆ. ಸೀರೆಯನ್ನು ಎಳೆದು ಅವಳ ಮಾನ ಕಳೆಯುವುದಕ್ಕೆ ನೋಡಿದರು. ಇವರು ಸೀರೆಯನ್ನು ಕೊಡಲು ಹೋಗಿ ಪ್ರಾಣವನ್ನು ಕಳೆದಿದ್ದಾರೆ. ಅಲ್ಲಿ ಮಾನಹಾನಿ ಇತ್ತಷ್ಟೆ. ಈ ಪ್ರಾಣಹಾನಿ ಶಿಕ್ಷಾರ್ಹವಾದುದು. ಇಂತಹ ಸ್ಥಿತಿಯಲ್ಲಿ ನಾವು ಜನಾಂದೋಲನವನ್ನು ಮಾಡಬೇಕು ಎಂದು ನನ್ನ ಪ್ರಾರ್ಥನೆ.

❍ ಡಾ॥ ಯು.ಆರ್. ಅನಂತಮೂರ್ತಿ

ಮಾನವತೆಯನ್ನು ತಿಂದು ಹಾಕುವ ಮತಾಂಧತೆ

ಮತಾಂಧತೆಯು ತಿಂದು ಹಾಕುವುದು ಮಾನವತೆಯನ್ನು ಮಾತ್ರ ಎಂಬುದನ್ನು ನಾವು ಮನಗಾಣಬೇಕು. ಇಳೆಯಷ್ಟು ಇರುವ ಮತಾಂಧತೆಗೆ ಸುಮ್ಮನೆ ವೀಕ್ಷಕರಾಗಿ ಜನ ಸಮುದಾಯ ಕುಳಿತಿದೆ. ಮತಾಂಧತೆಯ ಕೆಲಸ ಏನೆಂದರೆ ಹುಳಿ ಹಿಂಡುವ ಕೆಲಸ. ಒಡಕು ಉಂಟು ಮಾಡೋ ಕೆಲಸ. ಅದು ಕಡಿಮೆ ಇದ್ದರೂ ಇಡೀ ಸಮುದಾಯಕ್ಕೆ ಆವರಿಸಿಕೊಳ್ಳುತ್ತದೆ. ಇದು ಯಾವ ರೀತಿ ಎಂದರೆ 'ಖಂಡುಗ ಹಾಲಿಗೆ ಸಟುಗ ಹೆಪ್ಪು' ಎನ್ನುತ್ತಾರಲ್ಲ ಹಾಗೆ. ಈಗಲಾದರೂ ಸುಮ್ಮನೆ ಕುಳಿತಿರುವ ಜನ ಸಮುದಾಯ ಬೆಚ್ಚಿ ಅಸಹಕಾರ ತೋರಿಸಿದರೆ ಮಾತ್ರ ನಮಗೆ ಉಳಿಗಾಲ ಇದೆ. ಇಲ್ಲದಿದ್ದರೆ ಯಾವುದೇ ಮತಾಂಧತೆಯೂ, ಯಾರದೇ ಮತಾಂಧತೆಯೂ ಮೊದಲು ಮಾಡುವುದು ತನ್ನವರ, ತನಗೆ ಸೇರಿದವರ ಕಣ್ಣುಗಳನ್ನು ಕಿತ್ತು ಕುರುಡರನ್ನಾಗಿಸುವುದು. ಆಮೇಲೆ ಮೆದುಳು ಕಿತ್ತು ವಿವೇಕ ಶೂನ್ಯರನ್ನಾಗಿಸುವುದು. ನಂತರ ಹೃದಯ ಕಿತ್ತು ಕ್ರೂರಿಗಳನ್ನಾಗಿಸುವುದು. ಆಮೇಲೆ ನರಬಲಿ ಕೇಳುವುದು. ಇದು ಮತಾಂಧತೆಯ ಲಕ್ಷಣ. ಇದು ದಿನದಿನಕ್ಕೂ ಹೆಚ್ಚುತ್ತಿದೆ. ಇಂದು ಬಹಳ ತುರ್ತಾಗಿ ನಮ್ಮ ಮಕ್ಕಳ ಕಣ್ಣು, ಹೃದಯ, ಮಿದುಳುಗಳನ್ನಾದರೂ ಮತಾಂಧತೆಯ ದವಡೆಯಿಂದ ರಕ್ಷಿಸಬೇಕಾಗಿದೆ. ಕಾಪಾಡಬೇಕಾಗಿದೆ. ಇದಕ್ಕೆ ಎಂದಿಗಿಂತ ಎಚ್ಚರ ಹೆಚ್ಚು ಬೇಕಾಗಿದೆ. ಈ ಎಚ್ಚರ ನಮ್ಮನ್ನು ಕಾಪಾಡಲಿ.

❍ ದೇವನೂರ ಮಹಾದೇವ

ರಾಜಕೀಯ ಪಕ್ಷ ರಾಮಮಂದಿರ ಕಟ್ಟುವುದು ಅಪಾಯಕಾರಿ

ಈ ಸಲದ ಚುನಾವಣೆಯಲ್ಲಿ ಪಕ್ಷಗಳು ತಮ್ಮ ಪ್ರಚಾರದಲ್ಲಿ ಅಪಾಯಕಾರಿ ಮಟ್ಟವನ್ನು ಮುಟ್ಟಿವೆ ಎಂದೆನಿಸುತ್ತದೆ. ಈಗಾಗಲೇ ತಮ್ಮ ಚುನಾವಣೆಯ ಪ್ರಣಾಳಿಕೆಯನ್ನು ಅವರು ಬಿಡುಗಡೆ ಮಾಡಿದ್ದಾರೆ. ಅದನ್ನು ನೋಡಿದರೆ ಇವರು ಮುಟ್ಟಿರುವಂತಹ ಅಪಾಯಕಾರಿ ಮಟ್ಟ ಗೊತ್ತಾಗುತ್ತದೆ. ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ಆಗಬೇಕು, ಆಗಬಾರದು ಅಂತ ಯಾರೂ ಹೇಳುವುದಿಲ್ಲ. ಮತ್ತು ಅದನ್ನು ಅವರು ಒಂದು ಪಾರ್ಟಿ ಇಷ್ಟು ದಿನ ಹೇಳುತ್ತಿದ್ದನ್ನು ಕೇಳಿದರೆ, ಹಿಂದೂಗಳು ಮತ್ತು ಮುಸ್ಲಿಂಗಳು ಸೌಹಾರ್ದದಿಂದ ಅದನ್ನ ಕಟ್ಟಿಸುವ ವ್ಯವಸ್ಥೆ ಮಾಡುತ್ತಿದ್ದರು ಅನ್ನಿಸುತ್ತಿತ್ತು. ಬಹಳ ಮೆಚ್ಚಿಗೆಯಾದಂತಹ ಸಂಗತಿ ಅದು. ಮತ್ತು ಹಾಗೆ ಅವರಿಬ್ಬರು ರಾಮಮಂದಿರವನ್ನು ಕಟ್ಟುವುದೇ ಆದರೆ ನಮಗೂ ಸಂತೋಷವೇ. ಆದರೆ ಅವನ್ನು ಕಟ್ಟುವುದು ನಮ್ಮ ಪಕ್ಷದ ಗುರಿ ಎಂದು ಅದನ್ನು ತಮ್ಮ ಪಕ್ಷದ ಪ್ರಣಾಳಿಕೆಯಲ್ಲಿ ತಂದಿರುವುದು ಅದು ಮಾತ್ರ ಅಪಾಯಕಾರಿಯಾದಂತಹ ಅಂಶ. ಅಂದರೆ ಧರ್ಮವನ್ನು ಅಥವಾ ಧಾರ್ಮಿಕ ಭಾವನೆಗಳನ್ನು ಉದ್ರೇಕಗೊಳಿಸುವುದು ಇದರ ಹಿಂದಿರುವ ಗುರಿ ಎಂಬುದು ನಮಗೆ ಬಹಳ ಸ್ಪಷ್ಟವಾಗಿ ಗೊತ್ತಾಗುತ್ತದೆ. ಇಂತಹ ಕಾರ್ಯವನ್ನು ಯಾವ ಪಕ್ಷಗಳೂ ಮಾಡಬಾರದು. ಇದನ್ನು ಮಾಡುತ್ತಿರುವುದರಿಂದ ಈ ದೇಶದ ಪ್ರಜ್ಞಾವಂತರೆಲ್ಲರೂ ಕೂಡ, ವಿವೇಕಿಗಳಾದವರೆಲ್ಲರೂ ಕೂಡ ಇಂತಹದನ್ನು ವಿರೋಧಿಸಬೇಕು. ಇಂತಹದನ್ನು ಪ್ರತಿಭಟಿಸಬೇಕು. ಸಾಧ್ಯವಾದರೆ ಆಯಾ ಪಕ್ಷಗಳಿಗೆಲ್ಲ ಬುದ್ಧಿ ಹೇಳಬೇಕು. ಈಗ ಅಂತಹ ಅಗತ್ಯ, ಅಂತಹ ಅವಕಾಶದ ಕಾಲ ಬಂದಿದೆ. ನಾನು ಈಗಲೂ ಹೇಳುತ್ತೇನೆ. ಧರ್ಮವನ್ನು ಯಾರೂ ತಮ್ಮ ಚುನಾವಣೆಯ ಪ್ರಣಾಳಿಕೆಯಲ್ಲಿ ಬಳಸಬಾರದು. ಚುನಾವಣಾ ಪ್ರಣಾಳಿಕೆಯು ಯಾವುದೇ ಕೋಮು ಭಾವನೆಗಳನ್ನಾಗಲೀ ಮತ್ತು ಯಾವುದೇ ಧಾರ್ಮಿಕ ಭಾವನೆಯನ್ನಾಗಲೀ ಪ್ರಚೋದಿಸಲಿಕ್ಕೆ ಆಗದಂತಹ ಸ್ಥಿತಿಯಲ್ಲಿ ಇರಬೇಕು. ಯಾರಾದರೂ ಹಾಗೆ ಮಾಡಿದರೆ ಅದನ್ನು ನಾನು ಖಂಡಿತ ವಿರೋಧಿಸುತ್ತೇನೆ ಮತ್ತು ಪ್ರತಿಭಟಿಸುತ್ತೇನೆ ಎಂದು ಹೇಳಲು ಇಚ್ಛಿಸುತ್ತೇನೆ.

❍ ಡಾ॥ ಚಂದ್ರಶೇಖರ ಕಂಬಾರ

ಕೋಮುವಾದವನ್ನ ತತ್ವವಾಗಿ ಒಪ್ಪಿರುವ ಪಕ್ಷಗಳನ್ನು ಸೋಲಿಸಬೇಕು

ಇವತ್ತು ಕೋಮುವಾದವನ್ನು ವಿಜೃಂಭಿಸಿ ಧರ್ಮ ಧರ್ಮಗಳ ನಡುವೆ ಕಂದಕವನ್ನು ನಿರ್ಮಾಣ ಮಾಡುವಂತಹ ಒಂದು ರಾಜಕೀಯ ಹುನ್ನಾರ ಈ ದೇಶದಲ್ಲಿ ನಡೆಯುತ್ತಿರುವ ಸಂದರ್ಭದಲ್ಲಿ ಈ ಚುನಾವಣೆ ಎದುರಾಗಿದೆ. ನಾವು ಎಲ್ಲ ರೀತಿಯ ಮೂಲಭೂತವಾದಕ್ಕೆ ವಿರೋಧವನ್ನು ವ್ಯಕ್ತಪಡಿಸಬೇಕು. ಅದು ಹಿಂದೂ ಮೂಲಭೂತವಾದ ಆಗಿರಬಹುದು. ಮುಸ್ಲಿಂ ಮೂಲಭೂತವಾದ ಆಗಿರಬಹುದು. ಒಟ್ಟಾರೆ ಧಾರ್ಮಿಕ ಮೂಲಭೂತವಾದವನ್ನು ವಿರೋಧಿಸತಕ್ಕಂತಹ ತಾತ್ವಿಕತೆಗೆ ನಾವು ಬದ್ಧವಾಗಬೇಕಾಗಿದೆ. ದೇಶಭಕ್ತಿಯನ್ನು ದೇಗುಲಕ್ಕೆ ಸಮೀಕರಿಸಲಾಯಿತು. ದೈವತ್ವಕ್ಕೆ ಸಮೀಕರಿಸಲಾಯಿತು. ದೇಶಭಕ್ತಿಯನ್ನು ದೇಗುಲ ಮತ್ತು ದೈವಕ್ಕೆ ಸಮೀಕರಿಸುವುದರ ಜೊತೆಗೆ ದೇಶಭಕ್ತಿ ಅಂದರೆ ದೇಗುಲ, ದೇಶಭಕ್ತಿ ಎಂದರೆ ದೈವ ಎಂದು ಸಂಕುಚಿತಗೊಳಿಸಲಾಯಿತು.



> ದೇಶಭಕ್ತಿಯನ್ನು ದೈವಕ್ಕೆ ಮತ್ತು ದೇಗುಲಕ್ಕೆ ಸಂಕುಚಿತಗೊಳಿಸುವುದು ಕೋಮುವಾದ. ಇದು ಕ್ರೌರ್ಯವನ್ನು ವಿಜೃಂಭಿಸುತ್ತಾ ಹೋಗುತ್ತದೆ.

ದೇಗುಲದ ಬಗ್ಗೆ ಆಸಕ್ತಿ ಇಲ್ಲದೆ ಇರುವಂತಹವನು, ದೈವಭಕ್ತ ನಲ್ಲದೆ ಇರುವಂತಹವನೂ ಸಹ ದೇಶಭಕ್ತನಾಗಿರಲಿಕ್ಕೆ ಸಾಧ್ಯ ಎನ್ನುವುದಕ್ಕೆ ಈ ದೇಶದಲ್ಲಿ ಅನೇಕ ಉದಾಹರಣೆಗಳಿವೆ. ಅಂತಹದ್ದೊಂದು ಪರಂಪರೆ ಸಹ ನಮ್ಮ ದೇಶದಲ್ಲಿ ಇದೆ ಎನ್ನುವುದಕ್ಕೆ ಅನೇಕ ಉದಾಹರಣೆಗಳಿವೆ. ಆದ್ದರಿಂದ ದೇಶಭಕ್ತಿ ಎಂದರೆ ಒಂದು ನಿರ್ದಿಷ್ಟ ಧರ್ಮಕ್ಕೆ ಬದ್ಧವಾಗಿರಬೇಕು ಎಂದಾಗಲಿ, ಒಂದು ನಿರ್ದಿಷ್ಟ ದೇವರಿಗೆ ಬದ್ಧರಾಗಿರಬೇಕು ಎಂದಾಗಲಿ, ದೇಗುಲಕ್ಕೆ, ಮಸೀದಿಗೆ, ಚರ್ಚುಗಳಿಗೆ ಬದ್ಧವಾಗಿರಬೇಕು ಎಂದಾಗಲೀ ಅಲ್ಲ. ದೇಶಭಕ್ತಿ ಎನ್ನುನಂತಹದ್ದೇ ಒಂದು ಪ್ರತ್ಯೇಕವಾಗಿರುವಂತಹ ಒಂದು ಪರಿಕಲ್ಪನೆ.

ಕೋಮುವಾದ ಏನು ಹೇಳುತ್ತದೆಂದರೆ ದೇಶಭಕ್ತಿಯನ್ನು ದೈವಕ್ಕೆ ಮತ್ತು ದೇಗುಲಕ್ಕೆ ಸಂಕುಚಿತಗೊಳಿಸುವುದು ಕೋಮುವಾದ. ಈ ಕೋಮುವಾದ ಈ ದೇಶದ ಸಾಮಾಜಿಕ ಸಮಸ್ಯೆಗಳಿಗೆ, ಈ ದೇಶದ ಆರ್ಥಿಕ ಸಮಸ್ಯೆಗಳಿಗೆ, ಈ ದೇಶದ ಆರ್ಥಿಕ ಸಮಸ್ಯೆಗಳಿಗೆ, ಈ ದೇಶದ ಆರೋಗ್ಯದ ಸಮಸ್ಯೆಗಳಿಗೆ, ಈ ದೇಶದ ಶೈಕ್ಷಣಿಕ ಸಮಸ್ಯೆಗಳಿಗೆ ಉತ್ತರವನ್ನು ಕಂಡುಕೊಳ್ಳುವುದರ ಬದಲಾಗಿ ಭಾವೋದ್ರೇಕವನ್ನು ಉಂಟು ಮಾಡಿ ಎರಡು ಧರ್ಮೀಯರ ನಡುವೆ ಅಥವಾ ವಿಭಿನ್ನ ಧರ್ಮೀಯರ ನಡುವೆ ಮನಸ್ತಾಪವನ್ನು ಉಂಟು ಮಾಡುತ್ತದೆ. ಅಮಾನವೀಯವಾಗುತ್ತಾ ಹೋಗುತ್ತದೆ ಮತ್ತು ಕ್ರೌರ್ಯವನ್ನು ವಿಜೃಂಭಿಸುತ್ತಾ ಹೋಗುತ್ತದೆ. ಹಾಗಾಗಿ ನಾವು ಕೋಮುವಾದವನ್ನು ವಿರೋಧಿಸಲೇಬೇಕು ಮತ್ತು ಕೋಮುವಾದವನ್ನು ಒಂದು ತತ್ವವಾಗಿ ಇಟ್ಟುಕೊಂಡಿರುವಂತಹ ಪಕ್ಷಗಳನ್ನು ಸೋಲಿಸಬೇಕು. ಆ ದೃಷ್ಟಿಯಿಂದ ನೋಡಿದಾಗ ಬಿಜೆಪಿ ಕೋಮುವಾದವನ್ನು ಒಂದು ಸಿದ್ಧಾಂತವಾಗಿ ಸ್ವೀಕರಿಸಿರುವಂತಹ ಒಂದು ಪಕ್ಷ. ಬಿಜೆಪಿಗೆ ಬೆಂಬಲವಾಗಿ ನಿಂತಂತಹ ಮಿತ್ರ ಪಕ್ಷಗಳು, ಅಂದರೆ ಎನ್‌ಡಿಎ ಕೂಟ ಎಂದು ನಾವೇನು ಕರೆಯುತ್ತೇವೆ, ಅವರೂ ಸಹ ಇಂದು ಕೋಮುವಾದೀಕರಣಕ್ಕೆ ಒಳಗಾಗಿದ್ದಾರೆ. ನನ್ನ ದೃಷ್ಟಿಯಲ್ಲಿ ವಾಸ್ತವವಾಗಿ ಕೋಮುವಾದವನ್ನು ಹೆಚ್ಚು ವಿಸ್ತರಿಸುವುದಕ್ಕೆ ಸಹಾಯ ಮಾಡಿದಂತಹ ಇಬ್ಬರು ವ್ಯಕ್ತಿಗಳು ಯಾರಾದರೂ ಇದ್ದಾರೆ ಅಂತ ಹೇಳಿ ಎಂದರೆ ನಾನು ಮೊದಲು ವಾಜಪೇಯಿ ಹೆಸರನ್ನು ಹೇಳುತ್ತೇನೆ. ಆ ನಂತರ ಜಾರ್ಜ್ ಫರ್ನಾಂಡಿಸ್ ಹೆಸರನ್ನು ಹೇಳುತ್ತೇನೆ. ಅದಕ್ಕೆ ಕಾರಣ ಇಷ್ಟೆ. ತಮಗೆ ತಾವು ಸ್ಪಷ್ಟವಾಗಿ, ತಮ್ಮ ನಿಲುವು ಇದು ಎಂದು ಹೇಳಿಕೊಳ್ಳುವವರಿಗಿಂತ, ಅಸ್ಪಷ್ಟವಾಗಿ ದ್ವಂದ್ವಾತ್ಮಕವಾದಂತಹ ನೆಲೆಗಳಲ್ಲಿ ನಿಂತು ಮಾಡರೇಟ್ ಆಗಿದ್ದೇವೆ ಎಂದು ಹೇಳುತ್ತಾ ಉಪಾಯವಾಗಿ ಕೋಮುವಾದವನ್ನು ವಿಸ್ತರಿಸುತ್ತಿರುವವರೇ ಹೆಚ್ಚು ಅಪಾಯಕಾರಿಗಳು.

ಈ ದೃಷ್ಟಿಯಿಂದ ವಾಜಪೇಯಿಯವರು ಒಂದು ಮುಖವಾಡವಾಗಿ ಕೆಲಸ ಮಾಡುತ್ತಿದ್ದಾರೆ. ಎನ್‌ಡಿಎ ಕೂಟದ ಸಂಚಾಲಕರಾಗಿ ಜಾರ್ಜ್ ಫರ್ನಾಂಡಿಸ್ ಅವರು ಕೋಮುವಾದದ ವಿಸ್ತರಣೆಗೆ ಬೇರೆ ಪಕ್ಷಗಳ ಸಹಾಯವನ್ನು ಒದಗಿಸಿಕೊಟ್ಟಿದ್ದಾರೆ. ಇವತ್ತು ಚುನಾವಣೆಯಲ್ಲಿ ನಾವು ಕೋಮುವಾದವನ್ನು ಸೋಲಿಸಬೇಕು ಎಂದರೆ ಬಿಜೆಪಿಯನ್ನು ಸೋಲಿಸಬೇಕು. ಬಿಜೆಪಿಯ ಮಿತ್ರಪಕ್ಷಗಳನ್ನು ನಾವು ಸೋಲಿಸಬೇಕಾಗುತ್ತದೆ. ಬೇರೆ ಪಕ್ಷಗಳಲ್ಲೂ ಕೋಮುವಾದಿಗಳಿದ್ದಾರೆ ಅನ್ನುವುದೇನೋ ನಿಜ. ವ್ಯಕ್ತಿಗಳಾಗಿ ಬೇರೆ ಪಕ್ಷಗಳಲ್ಲಿ ಕೋಮುವಾದಿಗಳಿದ್ದಾರೆ. ಆದರೆ ಚುನಾವಣೆ ಸಂದರ್ಭದಲ್ಲಿ ಪಕ್ಷಗಳ ಮುಖಾಮುಖಿ ಮುಖ್ಯವಾಗುವುದರಿಂದ ಇಲ್ಲಿ ನಾವು ಒಂದು ನಿಲುವನ್ನು ತೆಗೆದುಕೊಳ್ಳಲೇಬೇಕು. ಯಾರು ಕೋಮುವಾದವನ್ನು ಸಿದ್ಧಾಂತವಾಗಿ ಇಟ್ಟುಕೊಂಡಿದ್ದಾರೆ ಅವರನ್ನು ವಿರೋಧಿಸಬೇಕು ಮತ್ತು ಅವರನ್ನು ಸೋಲಿಸಬೇಕು. ಇಲ್ಲಿ ಅಂಬೇಡ್ಕರ್ ಮತ್ತು ರಾಧಾಕೃಷ್ಣನ್ ಅಂತಹವರು ಹೇಳಿದಂತಹ ಎರಡು ಮುಖ್ಯವಾದಂತಹ ವಾಕ್ಯಗಳನ್ನು ನಾನು ಉದಾಹರಿಸಬೇಕು ಎಂದೆನಿಸುತ್ತದೆ.

ಸಂವಿಧಾನ ಅನುಷ್ಠಾನಗೊಳಿಸುವುದಕ್ಕಿಂತ ಮುಂಚೆ ಅದರ ಕರಡನ್ನು ಕುರಿತಂತಹ ಒಂದು ಚರ್ಚೆಯಲ್ಲಿ ಅಂಬೇಡ್ಕರ್ ಒಂದು ಮಾತನ್ನು ಹೇಳುತ್ತಾರೆ. ಜಾತ್ಯಾತೀತ ರಾಷ್ಟ್ರ ಎಂದರೆ ಈ ಪಾರ್ಲಿಮೆಂಟು ನಿರ್ದಿಷ್ಟ ಧರ್ಮವನ್ನು ಜನರ ಮೇಲೆ ಹೇರುವುದಿಲ್ಲ ಎನ್ನುವುದೇ ಅದರ ಮುಖ್ಯವಾದ ಆಶಯ ಎಂದು ಹೇಳುತ್ತಾರೆ. ಹಾಗೆಯೇ ರಾಧಾಕೃಷ್ಣನ್ ಹೇಳುತ್ತಾರೆ, ಈ ದೇಶ ನಿರ್ದಿಷ್ಟ ಧರ್ಮದ ಜೊತೆ ಗುರುತಿಸಿಕೊಳ್ಳುವುದಿಲ್ಲ, ಅದೇ ನಿಜವಾದ ಜಾತ್ಯತೀತತೆ ಎಂದು ಹೇಳುತ್ತಾರೆ. ಇಲ್ಲಿ ನಾವು ಒಂದು ವಿಷಯವನ್ನು ಗಮನಿಸಬೇಕು. ಹಿಂದೂಧರ್ಮಕ್ಕೆ ತಾತ್ವಿಕವಾಗಿ ವಿರೋಧವನ್ನು ಒಡ್ಡಿದಂತಹ ಅಂಬೇಡ್ಕರ್ ಹೇಳುವ ಮಾತು, ಹಿಂದೂ ಧರ್ಮದ ಬಗೆಗೆ ಗೌರವ ಇಟ್ಟುಕೊಂಡಿದ್ದಂತಹ ಡಾ. ರಾಧಾಕೃಷ್ಣನ್ ಹೇಳಿದಂತಹ ಮಾತು. ಎರಡೂ ಮಾತುಗಳು ಒಂದೇ ಆದಂತಹ ಆದರ್ಶವನ್ನು ಹೇಳುವಂತೆ ಇದೆ.

ಅದೇನೆಂದರೆ ಒಂದು ನಿರ್ದಿಷ್ಟ ಧರ್ಮವನ್ನು ಈ ದೇಶದಲ್ಲಿರುವ ಉಳಿದ ಜನರ ಮೇಲೆ ಹೇರುವಂತಹದ್ದು, ಒಂದು ನಿರ್ದಿಷ್ಟ ಧರ್ಮ ಉಳಿದ ಜನರನ್ನ ನಿಯಂತ್ರಿಸತಕ್ಕಂತವದ್ದು, ಮೇಲುಗೈ ಪಡೆದಿರುವಂತಹದ್ದು, ನಿಜವಾದ ಅರ್ಥದ ಜಾತ್ಯಾತೀತತೆ ಅಲ್ಲ. ಅಂದರೆ ಈ ದೇಶದಲ್ಲಿ ಬಹು ಸಂಸ್ಕೃತಿಗಳಿವೆ, ಬಹು ಧರ್ಮಗಳಿವೆ. ಅವೆಲ್ಲವೂ ಉಳಿಯಬೇಕು. ಎಲ್ಲರೂ ಸಮಾನ ಎನ್ನುವಂತಹ ಭಾವನೆ ಬರಬೇಕು. ಅದೇ ನಿಜವಾದ ಕೋಮುವಾದದ ವಿರೋಧ. ಆದರೆ ಬಿಜೆಪಿ ಮತ್ತು ಮಿತ್ರ ಪಕ್ಷಗಳು ಒಂದು ನಿರ್ದಿಷ್ಟ ಧರ್ಮವನ್ನು ಉಳಿದ ಜನರ ಮೇಲೆ ಹೇರುವ ಹುನ್ನಾರವನ್ನು ನಡೆಸುತ್ತಿರುವುದರಿಂದ ಚುನಾವಣೆಯ ಸಂದರ್ಭದಲ್ಲಿ ಅವುಗಳನ್ನು ವಿರೋಧಿಸಬೇಕಾಗಿದೆ. ಅವುಗಳನ್ನು ಸೋಲಿಸಬೇಕಾಗಿದೆ. ಈ ಮುಖಾಂತರವಾಗಿ ಈ ದೇಶದಲ್ಲಿ ಕೋಮುವಾದಕ್ಕೆ ಹಿನ್ನಡೆಯನ್ನು ಉಂಟು ಮಾಡಿ ಎಲ್ಲ ಧರ್ಮಗಳು, ಎಲ್ಲ ಸಂಸ್ಕೃತಿಗಳು ಸಮಾನ ಎನ್ನುವ ತತ್ವವನ್ನು ನಾವು ಸಾರಬೇಕಾದಂತಹ ಅನಿವಾರ್ಯತೆ ಇದೆ.

○ ಬರಗೂರು ರಾಮಚಂದ್ರಪ್ಪ

ಕೋಮುವಾದವನ್ನು ಹಿಮ್ಮೆಟ್ಟಿಸುವತ್ತ...

ಕಳೆದ ಐದಾರು ವರ್ಷಗಳಲ್ಲಿ ಬಂದಂತಹ ಇಂತಹ ಒಂದು ಸಂದಿಗ್ಧ ಪರಿಸ್ಥಿತಿಗೆ ಕೇಂದ್ರ ಸರ್ಕಾರದ ಕೃಷಿಯನ್ನು ಕುರಿತಂತಹ ನೀತಿ ಕಾರಣವಾಯಿತು ಎನ್ನುವುದನ್ನು ರೈತರು, ಮತ್ತೆ ದೇಶದ ಎಲ್ಲ ಜನ ತಿಳಿದುಕೊಳ್ಳಬೇಕು. ಸರ್ಕಾರಿ ಒಡೆತನದಲ್ಲಿ ಇದ್ದಂತಹ ಕಾರ್ಖಾನೆಗಳನ್ನು ಖಾಸಗಿ

ಕೋಮುವಾದಿ ಪಕ್ಷಕ್ಕೆ ಮತ ನೀಡಿದರೆ ಸಾವಿರ ವರ್ಷ ಹಿಂದಕ್ಕೆ ಹೋಗುತ್ತೇವೆ !

ಭಾರತ ಪ್ರಕಾಶಿಸುತ್ತಿದೆ ಎನ್ನುವುದು ಇತ್ತೀಚಿನ ಒಂದು ಘೋಷಣೆ. ನಿಜ, ಶ್ರೀಮಂತ ವರ್ತಕರು ಈಗ ಪ್ರಕಾಶಿಸುತ್ತಿದ್ದಾರೆ. ಪ್ರತಿ ತಿಂಗಳು ಸಂಬಳ ತೆಗೆದುಕೊಳ್ಳುವಂತಹ ನೌಕರರು ಬಹಳ ಪ್ರಕಾಶಿಸುತ್ತಿದ್ದಾರೆ. ಮಧ್ಯಮ ವರ್ಗದವರು ಬಹಳ ಸಂತೋಷವಾಗಿದ್ದಾರೆ. ರಸ್ತೆ ಮೇಲೆ ಓಡಾಡುತ್ತಿರುವ ಕಾರು, ಮೋಟಾರುಗಳನ್ನು ನೋಡಿದರೆ ಭಾರತ ಪ್ರಕಾಶಿಸುತ್ತಿದೆ ಎಂದು ಅನ್ನಿಸಬಹುದು. ಆದರೆ ಈ ವಾಹನಗಳು ಯಾರಿಗೆ ಸುಖ ತಂದುಕೊಡುತ್ತಿವೆ ಎಂಬುದನ್ನು ಜನ ಯೋಚನೆ ಮಾಡಬೇಕು.

ಬರಿಗಾಲಲ್ಲಿ ಓಡಾಡುತ್ತ ಇರುವಂತಹ ಬಹುಸಂಖ್ಯಾತರು ಪ್ರಕಾಶಿಸುತ್ತಿದ್ದಾರೆಯೇ ? ಅವರ ಜೀವನದ ಮಟ್ಟ ಯಾವ ರೀತಿ ಇದೆ ಎನ್ನುವುದನ್ನು ಜನ ಯೋಚನೆ ಮಾಡಬೇಕು. ನೂರು ಕೋಟಿ ಜನರಿಗೆ ಅನ್ನ ಕಾಣಿಸ್ತಾ ಇದ್ದಂತಹ ರೈತರು ಏಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಎನ್ನುವುದನ್ನು ನಾವೆಲ್ಲ ಯೋಚನೆ ಮಾಡಬೇಕು. ನಿಮಗೆ ಅನ್ನಿಸಬಹುದು, ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ರೈತರು ಕರ್ನಾಟಕದಲ್ಲಿ ಮಾತ್ರ ಎಂದು. ಅದು ಅಷ್ಟು ಸರಳವಾದ ವಿಚಾರ ಅಲ್ಲ.

ಇಡೀ ಭಾರತ ದೇಶದಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಅತಿ ಹೆಚ್ಚಿನ ರೈತರ ಆತ್ಮಹತ್ಯೆ ನಡೆದಿರುವುದು ಆಂಧ್ರಪ್ರದೇಶದಲ್ಲಿ. ಇದು ಏಕಾಯ್ತು? ವಿಶ್ವ ವಾಣಿಜ್ಯ ಒಪ್ಪಂದ ಮಾಡಿಕೊಂಡು ಅಮೆರಿಕಾ ದೇಶಕ್ಕೆ ನಮ್ಮ ರೈತರ ಹಿತಾಸಕ್ತಿಗಳನ್ನು ಬಲಿ ಕೊಟ್ಟವರು ಯಾರು? ಈ ವಿಶ್ವ ವಾಣಿಜ್ಯ ಒಪ್ಪಂದದಿಂದ ರೈತರು ಇದ್ದಂತಹ ಅನೇಕ ಸವಲತ್ತುಗಳನ್ನು ಕಳೆದುಕೊಂಡು ದಿಕ್ಕೆಟ್ಟು ಹೋಗಿದ್ದಾರೆ. ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ.

ಇನ್ನು ಕೆಲವೇ ವರ್ಷಗಳಲ್ಲಿ ಹಳ್ಳಿಗಳನ್ನು ಬಿಟ್ಟು ರೈತರು ನಗರಗಳಿಗೆ ತಂಡ ತಂಡವಾಗಿ ವಲಸೆ ಬರಬಹುದು. ಹಳ್ಳಿಗಳಲ್ಲಿ ರೈತರು ಬೇಸಾಯ ಮಾಡುವುದನ್ನು ಬಿಟ್ಟರೆ ನಮ್ಮ ದೇಶಕ್ಕೆ ಆಹಾರವನ್ನು ಬೇರೆ ದೇಶಗಳಿಂದ ತರಿಸಿಕೊಳ್ಳುವಂತಹ ಬಹಳ ಕಷ್ಟದ ಕಾಲಗಳು ಇನ್ನು ಕೆಲವೇ ವರ್ಷಗಳಲ್ಲಿ ನಮ್ಮ ದೇಶಕ್ಕೆ ಬರುತ್ತದೆ. ಇದಕ್ಕೆ ಯಾರು ಕಾರಣರು?

ಒಡೆತನಕ್ಕೆ ವರ್ಗಾಯಿಸುವ ಒಂದು ಹೊಸ ಕ್ರಮ ಈಗ ಶುರುವಾಗಿದೆ. ಕಳೆದ ನಾಲ್ಕೈದು ವರ್ಷಗಳಿಂದ ಇದರಿಂದ ಕೋಟ್ಯಾಂತರ ಜನ ಕಾರ್ಮಿಕರು ಕಂಗಾಲಾಗಿ ಹೋಗಿದ್ದಾರೆ. ಉದ್ಯೋಗಗಳನ್ನು ಕಳೆದುಕೊಳ್ಳುತ್ತಿದ್ದಾರೆ. ಇದಕ್ಕೆ ಯಾರು ಕಾರಣರು? ದೇಶದ ಅರ್ಧಭಾಗಕ್ಕೂ ಹೆಚ್ಚಿನ ಜನ ಬಡತನದ ರೇಖೆಯ ಕೆಳಗೆ ಜೀವನ ಮಾಡುತ್ತಿದ್ದಾರೆ. ನಗರಗಳಲ್ಲಿ ವಾಸಿಸುತ್ತಿರುವವರಲ್ಲಿ ಮೂರನೇ ಒಂದು ಭಾಗದ ಜನ ಕೊಳೆಗೇರಿಗಳಲ್ಲಿ ಜೀವನ ಮಾಡುತ್ತಿದ್ದಾರೆ.

ಶಾಲೆಯ ಮೆಟ್ಟಿಲನ್ನೇ ಹತ್ತದೆ, ಎರಡು ಹೊತ್ತು ಊಟಕ್ಕೂ ಗತಿಯಿಲ್ಲದೆ, ಕೋಟ್ಯಾಂತರ ಮಕ್ಕಳು ಕಂಗಾಲಾಗಿವೆ. ಭಾರತ ಪ್ರಕಾಶಿಸುತ್ತಿರುವುದರಿಂದ ಇವರಿಗೆ ಭರವಸೆ ಸಿಕ್ಕಿದೆಯೇ? ಇದು ಬಹಳ ಮುಖ್ಯವಾಗಬೇಕು. ಹೆಣ್ಣುಮಕ್ಕಳಿಗೆ ಶಾಲಾಕಾಲೇಜುಗಳಲ್ಲಿ, ಸರ್ಕಾರಿ ನೌಕರಿಗಳಲ್ಲಿ, ವಿಧಾನ ಸಭೆ, ಲೋಕಸಭೆಗಳಲ್ಲಿ ಮೀಸಲಾತಿ ತರುತ್ತೇವೆ ಎಂದು ಭರವಸೆ ಕೊಟ್ಟು ಅವರನ್ನು ಬಣ್ಣ ಬಣ್ಣದ ಮಾತುಗಳಿಂದ ಯಾರು ವಂಚಿಸಿದರು, ಯಾರು ಅವರಿಗೆ ಮೀಸಲಾತಿಯನ್ನು ತರಲಿಲ್ಲ ಎನ್ನುವುದನ್ನು ಜನ ಯೋಚನೆ ಮಾಡಬೇಕು.

ವಿಶೇಷವಾಗಿ ಹೆಣ್ಣುಮಕ್ಕಳು ಇದನ್ನು ತಮ್ಮ ವೈರಿಗಳು ಯಾರು ಎನ್ನುವುದನ್ನು ಯೋಚನೆ ಮಾಡಬೇಕು. ಕೆಲವು ವರ್ಷಗಳ ಹಿಂದೆ ಮಂಡಲ್ ಕಮಿಷನ್ ಶಿಫಾರಸುಗಳನ್ನು ಜಾರಿಗೆ ತಂದು ಕೆಳ ಜಾತಿಗಳಿಗೆ ಸಮಾನ ಅವಕಾಶ ಕೊಡಲು ಹೊರಟಾಗ ರಥಯಾತ್ರೆಯ ನೆಪ ತೆಗೆದು ನಿರುದ್ಯೋಗಿ ಯುವಕರನ್ನು ಎತ್ತಿಕಟ್ಟಿ, ದೇಶದಲ್ಲಿ ಹಿಂಸಾಚಾರವನ್ನು ನಡೆಸಿದವರು ಯಾರು, ಕೆಳ ಜಾತಿಗಳ ವೈರಿಗಳು ಯಾರು, ಹಿಂದೂಗಳಲ್ಲದವರಿಗೆ ಈ ದೇಶದಲ್ಲಿ ಸಮಾನ ಅವಕಾಶ ಇಲ್ಲ ಅಂತ ಹೇಳುತ್ತಿದ್ದಾರೆ, ಇದು ಸರಿಯೇ, ಇದನ್ನು ನಾವು ಒಪ್ಪಬೇಕೆ, ಬಿಜೆಪಿಗೆ ನೀವು ಕೊಡುವ ಮತ ನಿಮ್ಮನ್ನು ಒಂದು ಸಾವಿರ ವರ್ಷ ಹಿಂದಕ್ಕೆ ತಳ್ಳುತ್ತದೆ ಎನ್ನುವುದನ್ನು ನೀವು ಮರೆಯಬೇಡಿ.

○ ಡಾ॥ ಕೆ. ಮರುಳಸಿದ್ದಪ್ಪ



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.

ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಕೊಡಬೇಕಾಗಿ ಕೋರಲಾಗಿದೆ.

ವಿಳಾಸ:
ಸಂಪಾದಕರು, 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾನಗರ,
ವಿಶ್ವನೀಡಂ ಅಂಚೆ, ಬೆಂಗಳೂರು - ೫೬೦ ೦೯೧
ದೂರವಾಣಿ : ೩೨೮ ೭೯೪೩ / ೯೪೪೮೦೪೮೩೦೬

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಕ್ಲಾಫಾಂ ಗುಂಪಿನ ಕಾಂಪ್ಲೋಟ್ಸ್ ತನ್ನ ಪಾಲನ್ನು ಹೊಂದಿದೆಯಷ್ಟೆ ಮಿಲ್ಲಿಯಗಟ್ಟಳೆ ಮುಸುಕಿನ ಭಾರತೀಯ ಸ್ತ್ರೀಯರು ಸಾಕಷ್ಟು ಬೆತ್ತಲಾಗಿದ್ದಾರೆ. ಭಾರತೀಯ ಆಧುನಿಕತೆಯ ತಾತ, ಚಾರ್ಲ್ಸ್ ಗ್ರಾಂಟ್ ಸೂಚಿಸಿದ ಭಾಷೆಯಲ್ಲೇ ಮುಂಬಾಯಿಯಲ್ಲಿ ಇಳಿದುಕೊಂಡಿರುವ ಆ ಸ್ತ್ರೀಯರು ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ವಿರುದ್ಧ ಬೈಗುಳವನ್ನು ಎಸೆಯ ಬಹುದು. ಈ ಸ್ತ್ರೀಯರೇ ತಮ್ಮ ರಾಷ್ಟ್ರ ಪ್ರೇಮವನ್ನು ಆಚರಿಸುತ್ತಲೇ ತಮ್ಮ ಉಡುಪು ಬಿಚ್ಚಿದ್ದಾರೆ. ಆದರೆ ಅಷ್ಟೇನು ಅದೃಷ್ಟವಂತರಲ್ಲದ ಇತರರು, ಈಗಲೂ ಮನುವಿನ ಉಡುಪು-ನಿಯಮಾವಳಿಯಡಿ ಇನ್ನೂ ನರಳುತ್ತಿರುವಾಗಲೇ, ಬ್ರಿಟಿಷರನ್ನು ಬೈಯ್ಯುವುದೇಕೆಂದು ಅವರಿಗೆ ಗೊತ್ತಿಲ್ಲ. ಮನು ಧರ್ಮ ಪುರುಷರಿಗೆ ತಮ್ಮ ಉಡುಪು-ನಿಯಮಾವಳಿಯನ್ನು ನಿರ್ಧರಿಸಲು ಸ್ವಾತಂತ್ರ್ಯವನ್ನು ನೀಡಿದೆ. ಆದರಂತೆ ಅವರು ಮಹಿಳೆಯ ಉಡುಪನ್ನು ನಿರ್ಧರಿಸುತ್ತಾರೆ. ಆ ಕ್ಲಾಫಾಂ ಗುಂಪು ಆ ಕುಟಿಲ ವ್ಯವಸ್ಥೆಯ ನೀತಿ-ರಿವಾಜುಗಳನ್ನು ಬೇಧಿಸಿದೆ. ಗ್ರಾಂಟನು ಹೇಗೆ ಭಾರತೀಯ ಮುಸುಕುಧಾರಿ ನೀತಿ-ರಿವಾಜುಗಳನ್ನು ಗೇಲಿ ಮಾಡುತ್ತಾನೆಂದು ನೋಡಿ:

ಭ್ರಮೆಗಳ ಪೋಷಣೆ ಮಾಡುತ್ತದೆ. ಹಿಂದೂಗಳಿಗೆ ನಿಧಾನವಾಗಿ ಸ್ವಾಭಾವಿಕ ತತ್ತ್ವಶಾಸ್ತ್ರದ ಪ್ರತಿಯೊಂದು ಶಾಖೆಯನ್ನು ಪರಿಚಯ ಮಾಡಿಕೊಡಲೇಬೇಕಾಗುತ್ತದೆ.'

೧೭೯೧ರಲ್ಲಿ ಹೌಸ್ ಆಫ್ ಕಾಮನ್ಸ್‌ನಲ್ಲಿ ಗುಲಾಮರ ವ್ಯಾಪಾರದ ವಿರುದ್ಧ ಮೊದಲ ಭಾರಿ ಬಿಲ್‌ನ್ನು ಪ್ರತಿಪಾದಿಸಿದ ವಿಲ್ಲಿಯಂ ವಿಲ್ಬರ್‌ಪೋರ್ಸ್ ಭಾರತಕ್ಕೆ ಇಂಗ್ಲಿಷ್, ವಿಜ್ಞಾನ ಮತ್ತು ಕ್ರೈಸ್ತಮತ ಬೇಕೆನ್ನುತ್ತಾನೆ. ಸಾಮ್ರಾಜ್ಯಶಾಹಿ ವ್ಯಕ್ತಿಗಳಲ್ಲಿ ಒಬ್ಬನಾದ ಮೆಕಾಲೆ ಪಾಶ್ಚಾತ್ಯ ಸಂಸ್ಕೃತಿಗೆ ತಳಪಾಯ ಹಾಕುತ್ತಾನೆ. ಭಾರತೀಯ ಸಮಾಜದ ಎಲ್ಲಾ ಆಗು-ಹೋಗುಗಳಲ್ಲಿ ಥಾಮಸ್ ಮೆನ್ರೋ ಮತ್ತು ಎಲ್ಫಿನ್‌ಸ್ಟನ್ ಭಾಗಿಯಾಗುತ್ತಾರೆ. ಭಾರತೀಯ ಪಾರಂಪರಿಕ ಶಿಕ್ಷಣ ವ್ಯವಸ್ಥೆಯ ಬಗ್ಗೆ ಸರ್ವೆ ಮಾಡಿ ಅದರಲ್ಲಿ ಒಬ್ಬನೇ ಒಬ್ಬ ಅಸ್ಪೃಶ್ಯ ಇರದೆ, ಕೆಲವೇ ಮಂದಿ ಸ್ತ್ರೀಯರಿದ್ದರೆನ್ನುವಾಗ (ಮದ್ರಾಸ್ ೧೮೩೨, ಮುಂಬಾಯಿ ೧೮೨೫, ಬೆಂಗಾಲ್ ೧೮೨೩) ಅವರ ಆಸಕ್ತಿಯಾದರೂ ಏನಿತ್ತು. ಇದೊಂದು ಸಾಮ್ರಾಜ್ಯಶಾಹಿ ತಂತ್ರವಾಗಿ ಭಾರತಕ್ಕೆ ಮಸಿ ಬಳಿದು, ಅದನ್ನು ಆಳ್ವಿಕೆಗೊಳಪಡಿಸಬೇಕಿತ್ತು. ಲಾರ್ಡ್ ವಿಲ್ಲಿಯಂ ಬೆಂಟಿಂಕ್ ತನ್ನ ಗೌವರ್ನರ್ ಜನರಲ್ ಹುದ್ದೆಯಲ್ಲಿರುವಾಗ ಒಂದು ಸಂದರ್ಭವನ್ನು ಸೃಷ್ಟಿಸಿ, ಮಾರ್ಚ್ ೭, ೧೮೩೫ರಲ್ಲಿ ಮೆಕಾಲೆಯು ಪ್ರತಿಪಾದಿಸಿದ ಇಂಗ್ಲಿಷ್, ವಿಜ್ಞಾನ ಮತ್ತು ತಾಂತ್ರಿಕ ಶಿಕ್ಷಣಕ್ಕೆ ಅನುಮೋದನೆಯನ್ನು ನೀಡುತ್ತಾನೆ.

ಇಂಥ ಓರಿಯಂಟಲ್ ಮೌಲ್ಯ ವ್ಯವಸ್ಥೆ (ಪೂರ್ವದ ಬಗೆಗಿನ ಜ್ಞಾನ) ಎಂಥಾ ಅಣಕಿನ ಹೊಡೆತಕ್ಕೆ ಸಿಲುಕಿದೆ. ಮುಗ್ಧ ಭಾರತೀಯನ ಮೇಲೆ ಕುತಾರ್ಕಿಕವಾಗಿ ಸರಣಿಯೋಪಾದಿಯಲ್ಲಿ ಶಾಲೆಗಳು, ಕಾಲೇಜುಗಳು

ಭಾರತವನ್ನು ನಾವು ಅತ್ಯುನ್ನತಿಗೆ ಕೊಂಡೊಯ್ಯಬಹುದೇ ?

'ಕತ್ತಲೆಗೆ ನಿಜವಾದ ಮದ್ದೆಂದರೆ ಬೆಳಕನ್ನು ಹಚ್ಚುವುದು. ಹಿಂದೂಗಳು ತಪ್ಪು ಹೆಜ್ಜೆ ಇಡುತ್ತಾರೆ, ಏಕೆಂದರೆ ಅವರು ದಡ್ಡರು; ಮತ್ತು ಅವರ ತಪ್ಪುಗಳನ್ನು ಸರಿಯಾಗಿ ಅವರ ಮುಂದೆ ಇಟ್ಟಿಲ್ಲ. ನಮ್ಮ ಬೆಳಕಿನ ಸಂವಹನ ಮತ್ತು ಅವರಿಗೆ ನೀಡಿರುವ ಜ್ಞಾನ, ಅವರ ಅವ್ಯವಸ್ಥೆಗೆ ಅತ್ಯುತ್ತಮ ಪರಿಹಾರವಾಗಿದೆ.' ಈಸ್ಟ್ ಇಂಡಿಯಾ ಕಂಪನಿಯ ಅಧ್ಯಕ್ಷ ಮತ್ತೂ ಮುಂದುವರೆಯುತ್ತಾನೆ, 'ಕೆಲವೇ ಮಂದಿ ಬ್ರಾಹ್ಮಣರು ತಮ್ಮ ಧರ್ಮದ ಭಾಗವೆಂದು ತಮ್ಮ ಕಲಿಕೆಯನ್ನು ಮುಚ್ಚಿಡಲು ಬಯಸುವುದನ್ನು ಹೊರತುಪಡಿಸಿದರೆ, ಒಟ್ಟಾರೆ ಜನ ವ್ಯವಸ್ಥೆಯ ಬಗ್ಗೆ ಹಾಗೂ ಪ್ರಕೃತಿಯ ವಿದ್ಯಮಾನಗಳ ಬಗ್ಗೆ ದಿಕ್ಕು ತಪ್ಪುವಂತೆ ಮಾಡಲಾಗಿದೆ; ಅಲ್ಲದೆ ಈ ವೈಜ್ಞಾನಿಕ ಶಾಖೆಯಲ್ಲಿನ ಅವರ ತಪ್ಪುಗಳನ್ನಾಧರಿಸಿ ಪ್ರಮುಖ ನಿರ್ಣಯಗಳನ್ನು ಮಾಡುತ್ತಾರಾದರೂ, ಅವುಗಳನ್ನು ಅವರಿಗೆ ತಿಳಿಸಬಹುದಾಗಿದೆ. ಆದರೆ ಅವರ ಪೌರಾಣಿಕ ಮಿಥ್ಯೆಗಳ ಅಸಂಗತತೆ ಮತ್ತು ಸುಳ್ಳನ್ನು ಮಾತ್ರ (ಅವರಿಗೆ) ತಿಳಿಸಲಾಗದು.

'ಗ್ರಹಣದ ಬಗೆಗಿನ ನಿಜವಾದ ಕಾರಣವನ್ನು ತೋರಿಸಿದ್ದೇ ಆದರೆ, ಸೂರ್ಯ ಮತ್ತು ಚಂದ್ರ ಮರೆಯಾದಾಗ, ರಾಹು ಮತ್ತು ಕೇತು, ಡ್ರಾಗನ್‌ಗಳು ಅವನ್ನು ಸುತ್ತುವರೆದಿದ್ದಾರೆನ್ನುವ ಕಥೆ-ಈ ಕಥೆ ನಿಜವಾದ ಧಾರ್ಮಿಕ ನಂಬುಗೆಯಾಗಿ ಹಿಂದೂಗಳಲ್ಲಿ ಧಾರ್ಮಿಕ ಆಚರಣೆಗಳಿಗೆ ಕಾರಣವಾಗಿದೆ-ನೆಲಕ್ಕೆ ಉರುಳುತ್ತದೆ. ಒಂದು ಕಂಬವನ್ನು ತೆಗೆದರೆ ಸುಳ್ಳಿನ ಜೊತೆಯಲ್ಲಿನ ಒಂದು ಪದರನ್ನು ಕಳಚಿದಂತಾಗುತ್ತದೆ; ಈ ತಪ್ಪಿನ ಅರಿವಾದಲ್ಲಿ ಮನಸ್ಸು ದೃಢತೆಗೆ ತೆರೆದುಕೊಳ್ಳುತ್ತದೆಯಲ್ಲದೆ ಸತ್ಯದತ್ತ ಹೆಜ್ಜೆಯಿಡುತ್ತದೆ. ಆದರೆ ಏನೂ ಗೊತ್ತಿಲ್ಲದಿದ್ದಲ್ಲಿ ಅದೇ ಮನಸ್ಸು ಮೂಢನಂಬಿಕೆಗಳತ್ತ ತುಡಿಯುತ್ತಿರುತ್ತದೆ ಮತ್ತು ತಪ್ಪು ಕಲ್ಪನೆ ಹಾಗೂ

ಮತ್ತು ವಿಶ್ವವಿದ್ಯಾಲಯಗಳನ್ನು ಹೇರಲಾಯಿತು ! ಶುದ್ಧ ವಿಜ್ಞಾನಗಳು, ಇಂಜಿನಿಯರಿಂಗ್, ಮೆಡಿಕಲ್ ಶಿಕ್ಷಣ ಎಲ್ಲವೂ, ಪಾಶ್ಚಾತ್ಯವಾಗಿದ್ದು ಭಾರತದ ಮೇಲೆ ದಬ್ಬಲಾದವು. 'ಭಾರತ ಪ್ರಕಾಶಿಸುತ್ತಿದೆ' ಎನ್ನುವಾಗ ಅಭಾರತೀಯವಾದ ವಿದ್ಯುತ್ ಶಕ್ತಿಯನ್ನು ಅದರ ಮೇಲೆ ಹೊರಿಸಲಾಯಿತು! ಈ ಸಾಮ್ರಾಜ್ಯಶಾಹಿ ವಿಜ್ಞಾನ ಒಂದು ಕುಚೇಷ್ಟೆಯೇ ಸರಿ. ಬ್ರಿಟಿಷರು ಇಲ್ಲಿನ ನದಿಗಳನ್ನು ಹಾಳು ಮಾಡಿದರೆಂದರೆ, ಸರ್. ಕಾಟನ್ ಗೋದಾವರಿ ತಾಯಿ ಕುಡಿಯೊಡನೆ ಚೆಲ್ಲಾಟವಾಡಿದಕ್ಕಾಗಿ, ಆಂಧ್ರಾ ತೀರಪ್ರದೇಶ ಇಂದು ಬೆಲೆ ತೆರುತ್ತಿದೆಯಲ್ಲವೇ! ಇತರೆಡೆಗಳಲ್ಲೂ ಅವರು ನದಿಗಳನ್ನು ಹಾಳುಗೆಡವಿ ವಿದ್ಯುತ್‌ಶಕ್ತಿ ಮತ್ತು ನೀರಾವರಿಯನ್ನು ವೃದ್ಧಿಪಡಿಸಿದರಲ್ಲವೇ, ನೀರನ್ನು ಕೇವಲ ನಿರ್ಲಿಂಗೀಯ (ಡಿಸೆಕ್ಸುವಲೈಸೇಷನ್) ಗೊಳಿಸುವಾಗಲೇ ಪಾಶ್ಚಾತ್ಯ ವಿಜ್ಞಾನಗಳ ಸತ್ಯ ಏನೆಂಬುದು, ಗೊತ್ತಾಗುತ್ತದೆಯಲ್ಲವೇ. 'ವಿದ್ಯುತ್ ಶಕ್ತಿಗಾಗಿ ನೀವು ನೀರನ್ನ ನಿರ್ವೀರ್ಯೀಕರಣಗೊಳಿಸಿ, ಮತ್ತು ನೀರಾವರಿಗಾಗಿ ಕಳುಹಿಸಿ'. ಧಾನ್ಯದ ರುಚಿ ಹೇಗಿದೆ? ಭಾರತದಲ್ಲಿರುವ ಹಸಿವಿಗೆ ಬ್ರಿಟಿಷರು ಮಾತ್ರ ಜವಾಬ್ದಾರರು!

ಹೌರಾ ಸೇತುವೆ ಪಾಶ್ಚಾತ್ಯ ಶ್ರೇಷ್ಠತೆಯನ್ನು ಮೆರೆಯಲು ಹೂಡಿದ ಸಂಚೇ ಸರಿ! ಭಾರತೀಯರು ಸ್ವಾತಂತ್ರ್ಯಕ್ಕಾಗಿ ಪರಿತಪಿಸುವಾಗ ಬ್ರಿಟಿಷರು 'ಒಡೆದು ಆಳುವ' ನೀತಿಯನ್ನು ಆಚರಿಸುತ್ತಿದ್ದರು. ಇದಕ್ಕೊಂದು ಅತ್ಯುತ್ತಮ ನಿದರ್ಶನವೆಂದರೆ 'ಕೋರ್ಟ್ ಆಫ್ ಡೈರೆಕ್ಟರ್ಸ್' ರ ಮೇ ೨೦, ೧೮೫೭ ಸುತ್ತೋಲೆ. ಅವರಲ್ಲಿ 'ಜಾತಿಯನ್ನು ಆಧರಿಸಿ ಸರ್ಕಾರಿ ಕಾಲೇಜಿಗೆ ಅಥವಾ ಶಾಲೆಗೆ ಪ್ರವೇಶನವನ್ನು ಯಾರಿಗೂ ತಿರಸ್ಕರಿಸುವಂತಿಲ್ಲ' ಅಸ್ಪೃಶ್ಯರು ತರಗತಿಯನ್ನು ಪ್ರವೇಶಿಸಬೇಕು ಎನ್ನುವ

ಓರಿಯಂಟಲ್ ಮೌಲ್ಯ ವ್ಯವಸ್ಥೆ ಎಂಥಾ ಅಣಕಿನ ಹೊಡೆತಕ್ಕೆ ಸಿಲುಕಿದೆ. ಮುಗ್ಧ ಭಾರತೀಯನ ಮೇಲೆ ಕುತಾರ್ಕಿಕವಾಗಿ ಸರಣಿಯೋಪಾದಿಯಲ್ಲಿ ಶಾಲೆಗಳು, ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳನ್ನು ಹೇರಲಾಯಿತು ! ಶುದ್ಧ ವಿಜ್ಞಾನಗಳು, ಇಂಜಿನಿಯರಿಂಗ್, ಮೆಡಿಕಲ್ ಶಿಕ್ಷಣ ಎಲ್ಲವೂ, ಪಾಶ್ಚಾತ್ಯವಾಗಿದ್ದು ಭಾರತದ ಮೇಲೆ ದಬ್ಬಲಾದವು. 'ಭಾರತ ಪ್ರಕಾಶಿಸುತ್ತಿದೆ' ಎನ್ನುವಾಗ ಅಭಾರತೀಯವಾದ ವಿದ್ಯುತ್ ಶಕ್ತಿಯನ್ನು ಅದರ ಮೇಲೆ ಹೊರಿಸಲಾಯಿತು! ಈ ಸಾಮ್ರಾಜ್ಯಶಾಹಿ ವಿಜ್ಞಾನ ಒಂದು ಕುಚೇಷ್ಟೆಯೇ ಸರಿ. ಬ್ರಿಟಿಷರು ಇಲ್ಲಿನ ನದಿಗಳನ್ನು ಹಾಳು ಮಾಡಿದರೆಂದರೆ, ಸರ್. ಕಾಟನ್ ಗೋದಾವರಿ ತಾಯಿ ಕುಡಿಯೊಡನೆ ಚಲ್ಲಾಟವಾಡಿದಕ್ಕಾಗಿ, ಆಂಧ್ರ ತೀರಪ್ರದೇಶ ಇಂದು ಬೆಲೆ ತೆರುತ್ತಿದೆಯಲ್ಲವೇ !

ಅನುವಾದ: ಡಿ. ದಾ. ಚಿ

ಒತ್ತಾಯಕ್ಕಾಗಿ ಈ ಸುತ್ತೋಲೆಯನ್ನು ಹೊರಡಿಸಲಾಯಿತು. ಈ ಒಂದು ವಿಭಜನಾತ್ಮಕ ಹೆಜ್ಜೆಯು ಜಾತಿಯನ್ನು ಬೇರ್ಪಡಿಸಿದ ಬೀಜವನ್ನು ಬಿತ್ತಿದಂತಾಯಿತಲ್ಲವೆ! ಇದಕ್ಕಿಂತ ಹಿಂದೆ ಅಸ್ಪೃಶ್ಯರು ಮತ್ತು ಸಮಾಜ ಶಾಂತಿಯಿಂದ ಜೀವಿಸಿತ್ತಲ್ಲವೆ! ಅಲ್ಲಿ ಎಲ್ಲರೂ ಸಮಾನರು, ಎಲ್ಲರೂ ಸಮಾನ ದೂರದಲ್ಲೇ ಜೀವಿಸಿದ್ದರು! ಬ್ರಿಟಿಷರ ತಂತ್ರದಿಂದಾಗಿ ನಾವೆಲ್ಲಾ ಬೇರ್ಪಟ್ಟು ನಿಂತಿದ್ದೇವೆ!

ಏನು ಬ್ರಿಟಿಷ್ ಸಾಮ್ರಾಜ್ಯ ಭಾರತಕ್ಕೆ ಮಾಡಿತೋ ಅದನ್ನೇ ಅಮೇರಿಕಾ ಆಫ್ಘಾನಿಸ್ತಾನ್ ಮತ್ತು ಇರಾಕ್‌ನಲ್ಲಿ ಮಾಡುತ್ತಿದೆ. ಸಾಮ್ರಾಜ್ಯಶಾಹಿ ಮೊದಲು ಸಂಸ್ಕೃತಿ ಮತ್ತು ಮಹಿಳೆಯರನ್ನು ಗುರಿಯಾಗಿಸುತ್ತದೆ. ಮನಿಲಾದ ನೀಲಿ ಈಜುಕೊಳದಲ್ಲಿ ತನ್ನ ಬುರ್ಕಾವನ್ನು ಬಿಕಿನಿಗೆ ತೊರೆದ ಮಿಸ್. ವಿದ್ಯಾ ಸಮುದಾಯಿಯನ್ನು ನೋಡಿ. ಆಕೆಯ ಆಫ್ಘಾನಿಸ್ತಾನದ ನಾಗರೀಕತೆ ಯನ್ನು ನಾಚಿಸಿದ್ದಾಳೆ. ಹಾಗೆಯೇ ದೇಹಲಿಯಲ್ಲಿ ನಮ್ಮ ಯುವತಿಯರು ತಮ್ಮ ಕಾಲುಗಳನ್ನು ತೆರೆದು ತೋರಿಸುವುದರ ಮೂಲಕ ಮಾಡಿದ್ದಾರೆ. ಅಮೇರಿಕಾದ ಕಂಪನಿಗಳು ಕಂಪನಿ ಸಂಸ್ಕೃತಿಯನ್ನು ಪರಿಚಯಿಸುತ್ತಿದ್ದಾರೆ: 'ತೆರಿಗೆ ಪಾವತಿಸಿ', ಕ್ವೋಟಾ (ಮಿಸಲಾತಿ) ಸಂಸ್ಕೃತಿಯಲ್ಲಿ ಹುಟ್ಟಿರುವ ಅನೇಕ ಭಾರತೀಯ ಕಂಪನಿಗಳು ತೆರಿಗೆಯನ್ನು ಗಣರಾಜ್ಯಕ್ಕೆ ಸಲ್ಲಿಸ ಬೇಕಾಗಿದೆ? ಅಮೇರಿಕಾದ ಕಂಪನಿಗಳು ಭಾರತೀಯ ದಲಿತರಿಗೆ ವೈವಿಧ್ಯತೆಯನ್ನು ಪರಿಚಯಿಸುವುದಿಲ್ಲ ಎನ್ನುವುದರ ಬಗ್ಗೆ ಗ್ಯಾರಂಟಿ ಏನು? ಹಾಗೆಯೇ ಅವರು ಭಾರತದಲ್ಲಿ ಮನುವಿನ ಪುತ್ರಿಯರು ತೊಡೆಯೆತ್ತರಕ್ಕೆ ಸಾಗುತ್ತಿರುವಾಗ, ಒಂದು ಲಾಸ್ ವೇಗಸ್‌ನ್ನು ಸ್ಥಾಪಿಸುವುದಿಲ್ಲ ಎನ್ನುವುದಕ್ಕೆ ಗ್ಯಾರಂಟಿ ಏನು? ಮತ್ತೊಂದು ವಿಶ್ವ ಸಾಮಾಜಿಕ ವೇದಿಕೆಗೆ ಹೋಗಲು ಈಗ ಸಮಯ ಬಂದಿದೆ ಸಿಸ್ಟರ್ ಅರುಂಧತಿ, ಬ್ರದರ್ ತೊಗಡಿಯಾ, ಅಂಕಲ್ ಹರಿಕಿಷನ್ ಸುರ್ಜಿತ್.

ಬ್ರಿಟಿಷ್ ಸಾಮ್ರಾಜ್ಯ ಭಾರತಕ್ಕೆ ಮಾಡಿತೋ ಅದನ್ನೇ ಅಮೇರಿಕಾ ಆಫ್ಘಾನಿಸ್ತಾನ್ ಮತ್ತು ಇರಾಕ್‌ನಲ್ಲಿ ಮಾಡುತ್ತಿದೆ. ಸಾಮ್ರಾಜ್ಯಶಾಹಿ ಮೊದಲು ಸಂಸ್ಕೃತಿ ಮತ್ತು ಮಹಿಳೆಯರನ್ನು ಗುರಿಯಾಗಿಸುತ್ತದೆ. ಮನಿಲಾದ ನೀಲಿ ಈಜುಕೊಳದಲ್ಲಿ ತನ್ನ ಬುರ್ಕಾವನ್ನು ಬಿಕಿನಿಗೆ ತೊರೆದ ಮಿಸ್. ವಿದ್ಯಾ ಸಮುದಾಯಿಯನ್ನು ನೋಡಿ. ಆಕೆಯ ಆಫ್ಘಾನಿಸ್ತಾನದ ನಾಗರೀಕತೆ ಯನ್ನು ನಾಚಿಸಿದ್ದಾಳೆ. ಹಾಗೆಯೇ ದೆಹಲಿಯಲ್ಲಿ ನಮ್ಮ ಯುವತಿಯರು ತಮ್ಮ ಕಾಲುಗಳನ್ನು ತೆರೆದು ತೋರಿಸುವುದರ ಮೂಲಕ ಮಾಡಿದ್ದಾರೆ.

ರೂ. ೪೦೦೦/- ಕೋಟಿಯಲ್ಲಿ ಭಾರತ ಪ್ರಕಾಶಿಸಬಹುದು :

ಭಾರತ ಪ್ರಕಾಶಿಸುತ್ತಿರುವುದು ಇದೇನು ಮೊದಲ ಬಾರಿ ಯೇನಲ್ಲ. ಇ. ಎಂ. ಎಸ್. ನಂಬೂದರಿ ಪಾಡ್ ಪ್ರಕಾರ, 'ಭಾರತದಲ್ಲಿಯೂ ಸಹ ವರ್ಣಾಶ್ರಮ ಸಮಾಜದ ಸ್ಥಾಪನೆಯು ಸಂಸ್ಕೃತಿ ಮತ್ತು ನಾಗರಿಕತೆಯ ಉಚ್ಛ್ರಾಯ ಸ್ಥಿತಿಗೆ ಕಾರಣವಾಗಿದೆ. ಪ್ರಾಚೀನ ಭಾರತವು ಗ್ರೀಕ್ ಮತ್ತು ರೋಮ್ ಸೇರಿದಂತೆ ಆ ಕಾಲದ ಯಾವುದೇ ರಾಷ್ಟ್ರ ದೊಂದಿಗೆ ತತ್ತ್ವಶಾಸ್ತ್ರ ವಿಜ್ಞಾನ, ಕಲೆ, ಸಾಹಿತ್ಯ ಕ್ಷೇತ್ರಗಳಲ್ಲಿ ಸ್ಥಾನ ಪಡೆದುಕೊಂಡಿತ್ತು. ಗ್ರೀಕ್, ರೋಮ್‌ಗಳಂತೆ ಭಾರತವು ತೀವ್ರ ಸಾಮಾಜಿಕ ಸಂಘರ್ಷಗಳಿಗೆ ಒಳಗಾಗಿಲ್ಲ. ಇಂಥ ಸಾಮಾಜಿಕ ಸಂಘರ್ಷದ ಗ್ರೀಕ್ ಮತ್ತು ರೋಮ್ ಗಳಲ್ಲೇ ಆಧುನಿಕ ಯೂರೋಪಿನ ಉದಯವೂ ಸಹ ಆದದ್ದು. '(ಇಪಿಡಬ್ಲ್ಯೂ : ವಾರ್ಷಿಕ, ಫೆಬ್ರವರಿ ೧೯೭೪) ಹೀಗಿರು ವಾಗ ಕ್ರಿ.ಪೂ. ೬೦೦ ರಿಂದ ಕ್ರಿ.ಶ. ೧೫೦೦ ರ ನಡುವೆ ವೇದಗಳು, ಮಹಾಭಾರತ, ಉಪನಿಷತ್‌ಗಳನ್ನು ಸಂಕಲನ ಮಾಡಲಾಯಿತು ಮತ್ತು ವರ್ಣಾಶ್ರಮ ವ್ಯವಸ್ಥೆಯನ್ನು ರೂಪಿಸಲಾಯಿತು. ಭಾರತದ ನಾಗರೀಕತೆಯ ಅಧೋಗತಿಗೆ ಪೂರ್ವ ಪೀಠಿಕೆಯಾಗಿ ನಿರ್ಣಯವನ್ನು ಹೂಡಲಾಯಿತು.

ಇದರಂತೆ, ದಲಿತರ ನೋವುಗಳನ್ನು ಹೋಗಲಾಡಿಸಿದೆ, 'ಇಎಂಎಸ್ ಹೇಳಿದಂತೆ ಪ್ರಧಾನ ಮಂತ್ರಿ ಅಟಲ್ ಬಿಹಾರಿ ವಾಜಪೇಯಿಯವರ ಭಾರತವು ಸಹ ಪ್ರಕಾಶಿಸುತ್ತಿದೆ. ಒಟ್ಟು ಭೂರಹಿತ ಜನರಲ್ಲಿ ಶೇ.೪೫.೨೩ ರಷ್ಟು ಪ.ಜಾ / ಪಂಗಡಗಳೇ ಇವೆ. ಆದರೆ ಇವರ ಒಟ್ಟು ಜನಸಂಖ್ಯೆ ಇರುವುದು ಕೇವಲ ಶೇ. ೨೪.೬೫ ರಷ್ಟು, ಅಂದರೆ ಇತಿಹಾಸ ಇದನ್ನು ಹೀಗೆಯೇ ಇರಬೇಕೆಂದು ನಿರ್ಧರಿಸಿತೇ ?

ಒಟ್ಟಾರೆ ದಲಿತರ ಪ್ರಧಾನ ಶ್ರಮಶಕ್ತಿಯಲ್ಲಿ ಸುಮಾರು ಅರ್ಧದಷ್ಟು ಅಂದರೆ ಶೇ. ೪೪ ರಷ್ಟು ದಲಿತರು ಭೂ ರಹಿತ ಕೃಷಿ ಕಾರ್ಮಿಕರು. ಇವರು ಗಣರಾಜ್ಯವಾದ ಹಳ್ಳಿಗಳಲ್ಲಿ ದಿಕ್ಕೆಟ್ಟಿರುವವರು. ಏಕೆಂದರೆ ಅಲ್ಲಿನ ಭೂಮಿತಿಯಿಲ್ಲದವರು ದರ್ಪದಿಂದ ಬೀಗುತ್ತಿದ್ದಾರೆ. ಇಂಥ ದೀನ ರೈತರು ಶೆ. ೯ ರಷ್ಟಕ್ಕಿಂತ ಕಮ್ಮಿ ಬಡ್ಡಿಯಲ್ಲಿ ಸಾಲ ಪಡೆದು, ಭೂರಹಿತರಿಗೆ ಶೆ. ೨೫ಕ್ಕಿಂತ ಹೆಚ್ಚಿನ ಬಡ್ಡಿಗೆ ಸಾಲ ನೀಡುತ್ತಿದ್ದಾರೆ.

ಇತರರಿಗೆ ಇರುವ ಆಯ್ಕೆಗಳು ದಲಿತ ಭೂರಹಿತ ಕೂಲಿಯಾಳುಗಳಿಗೆ ಇಲ್ಲ. ಇತರರು ಟೀ ಅಂಗಡಿ, ಅಡಿಕೆ, ತರಕಾರಿ, ಹಾಲು ಮುಂತಾದ ಸಣ್ಣ ವ್ಯಾಪಾರದಲ್ಲಿ ತೊಡಗಿ ಸವರ್ಣದವರಿಗೆ ಮಾರಾಟ ನಡೆಸಬಹುದು. ಇಂಥ 'ಗ್ರಾಮ ಸ್ವರಾಜ್ಯ'ಗಳಲ್ಲಿ ಭೂ ರಹಿತ ದಲಿತ ಕೃಷಿ ಕಾರ್ಮಿಕರು ಸಾಮಾಜಿಕ ಖೈದಿಗಳಾಗಿ, ತಮ್ಮ ಪ್ರಜಾಸತಾತ್ತ್ವಕ ಹಕ್ಕುಗಳನ್ನು ಕಳೆದುಕೊಂಡು ಯಾವಾಗಲೂ ಕೊರತೆಯನ್ನು ಅನುಭವಿಸು ವವರಾಗಿದ್ದಾರೆ. ಇಂಥ ಮುಗ್ದ ಹಳ್ಳಿ ಗಣರಾಜ್ಯಗಳು ವಾಸ್ತವ ದಲ್ಲಿ ದಲಿತರಿಗೆ ಕಾನ್ಸೆಂಟ್ರೇಶನ್ ಶಿಬಿರಗಳಾಗಿವೆ. ಭೂರಹಿತ ದಲಿತ ಕೂಲಿಯಾಳುಗಳಿಗೆ ಸ್ನೇಹಿತರು ಇಲ್ಲ, ಸಹೃದಯರೂ ಇಲ್ಲ. ಯಾವುದೇ ಸಂಪನ್ಮೂಲ ಇಲ್ಲದೆ, ಅವರ ಇಚ್ಛೆಗೆ ತದ್ವಿರುದ್ಧವಾಗಿ ಕೇವಲ ನೂರು ರೂಪಾಯಿ ಸಾಲಕ್ಕೆ ತಮ್ಮ ಸ್ವಾತಂತ್ರ್ಯವನ್ನು ಒತ್ತೆಯಿಡುತ್ತಾರೆ. ಹಾಗಾಗಿ ನಾವು ದೌರ್ಜನ್ಯಗಳ ಬಗ್ಗೆ ಮಾತನಾಡುವಾಗ ಇಂಥ ದಲಿತರ ಬಗ್ಗೆ ಮಾತನಾಡುತ್ತಿರುತ್ತೇವೆ. ಆದರೆ ದುರಂತವೆಂದರೆ ಇಂಥವರ ಬಗ್ಗೆ ನಮ್ಮ ದಲಿತ ಚಿಂತನಾಧಾರೆಯಲ್ಲಿ ಯಾವುದೇ ಪ್ರಸ್ತಾಪವಿರುವುದಿಲ್ಲ.

ಇಂಥ ಗ್ರಾಮ ಗಣರಾಜ್ಯಗಳಿಂದ ಭೂರಹಿತ ದಲಿತರನ್ನು ವಿಮೋಚನೆಗೊಳಿಸಲು ನೀಲಿ ಧಿರಿಸಿನವರಿಂದ ಒಂದು ನೀಲನಕ್ಷೆ ಸಿದ್ಧವಾಗಿದೆ. ಡಾ. ಅಂಬೇಡ್ಕರ್ ಅವರ 'ಪ್ರಭುತ್ವ ಮತ್ತು ಅಲ್ಪಸಂಖ್ಯಾತರು' ಎನ್ನುವ ಪ್ರಸಿದ್ಧ ಬರವಣಿಗೆಯಲ್ಲಿ ಭಾರತೀಯರೆಲ್ಲರಿಗೂ ವಿಮಾಪಾಲಿಸಿಯನ್ನು ಒತ್ತಾಯಿಸಿದ್ದರು.

ದಲಿತ-ಭೂ ರಹಿತರ ವಿಮೋಚನಾ ಕಾರ್ಯಕ್ರಮ

೧) ದಲಿತ ಭೂ ರರಹಿತ ಕಾರ್ಮಿಕರ ಬಗ್ಗೆ ಗಣೀಕೃತ ಅಂಕಿ-ಅಂಶಗಳ ದಾಖಲಾತಿ.

೨) ಇವರೆಲ್ಲರಿಗೆ ವಿಮಾ ಪಾಲಿಸಿಯನ್ನು ಒದಗಿಸುವುದು.

೩) ಮಾರ್ಚ್ ೨೦೦೫ರಲ್ಲಿ ರಾಜ್ಯವು ರೂ. ೪೦೦/-ನ್ನು ಹಾಗೂ ಭೂ ರಹಿತ ಕಾರ್ಮಿಕರು ರೂ. ೧೦೦/- ಇಡುವುದು.

೪) ಪ್ರತಿ ತಿಂಗಳು ರಾಜ್ಯವು ರೂ. ೧೦೦/- ಹಾಗೂ ದಲಿತ ರೂ. ೧೦೦/-ನ್ನು ಇಡುವುದು.

೫) ಯೋಜನೆ ಯಶಸ್ವಿಗೊಳಿಸಿದವರಿಗೆ ರಾಜ್ಯವು ರೂ. ೫೦೦/- ನ್ನು ಬೋನಸ್ ಆಗಿ ನೀಡತಕ್ಕದ್ದು.

೨೦೦೬ ರ ಹೊತ್ತಿಗೆ ಇಂಥ ಪ್ರಯೋಜನ ಪಡೆದವರ ಖಾತೆಯಲ್ಲಿ ರೂ. ೩೨೦೦/- ಜಮಾಗೊಂಡಿರುತ್ತದೆ. ಇದೇ ಯೋಜನೆಯನ್ನು ೨೦೧೦ರ ತನಕ ಮುಂದು ವರೆಸಿದಲ್ಲಿ ರೂ. ೧೬೦೦೦ (ಬಡ್ಡಿಯನ್ನು ಸೇರಿಸಿ) ಆಗುತ್ತದೆ . ಇದನ್ನು ನಿಶ್ಚಿತ ಠೇವಣಿಯಲ್ಲಿಡಿ. ೨೦೧೭ರಲ್ಲಿ ಈ ಮೊತ್ತ ರೂ. ೩೨೦೦೦/- ಆಗಿ, ೨೦೨೪ ರ ಹೊತ್ತಿಗೆ ರೂ. ೬೪೦೦೦/- ಆಗುತ್ತದೆ. ಹಾಗೆಯೇ ೨೦೩೧ರಲ್ಲಿ ಆ ಮೊತ್ತ ದ್ವಿಗುಣಗೊಂಡು ೧,೨೮,೦೦೦/- ವಾಗುತ್ತದೆ.

ಇದರ ನಡುವೆ ಮಾರ್ಚ್ ೨೦೧೧ ರಿಂದ ಈ ಯೋಜನೆ ಮುಂದುವರೆದಲ್ಲಿ, ದಲಿತ ತನ್ನ ಒಟ್ಟು ಹಣವನ್ನು ವರ್ಷದ ಕೊನೆಯಲ್ಲಿ ಪಡೆಯುವಂತಿರಬೇಕು. ಅಂದರೆ ಎಲ್ಲಾ ದಲಿತ ಭೂರಹಿತ ಕಾರ್ಮಿಕರಿಗೆ ಪ್ರತಿ ವರ್ಷದ ಕೊನೆಯಲ್ಲಿ ರೂ. ೩೨೦೦೦/- ದೊರೆಯುವಂತಾಗುತ್ತದೆ. ಮರಣ, ಗಂಭೀರ ಕಾಯಿಲೆ, ಅಥವಾ ಊನವೇನಾದರು ಸಂಭವಿಸಿದಲ್ಲಿ ಮೊತ್ತವನ್ನು ವಿಮೆಯನ್ನಾಗಿ ಪರಿಗಣಿಸಿ ರೂ. ೧,೨೮,೦೦೦/- ವನ್ನು ನೊಂದವರಿಗೆ ಅಥವಾ ಆತ/ಕೆಯ ಸಂಬಂಧಿಗಳಿಗೆ ನೀಡಬೇಕು. ಜನವರಿ ೨೬, ೧೯೫೦ಕ್ಕೆ ಬದ್ಧರಾಗಿ, ಸಂವಿಧಾನ ಪಿತನಿಗೆ ಮಹಾತ್ಮ ಮಾಡಿದ ವಾಗ್ದಾನವನ್ನು ಗೌರವಿಸಿದಂತಾಗುತದೆ. ಇಂಥ ಸಣ್ಣ ಪ್ರಯತ್ನ ವೊಂದು ಭೂರಹಿತ ದಲಿತರಿಗೆ ಮರುಜೀವ ಒದಗಿಸಿ, ಅವರ ಬದುಕಿಗೆ ಘನತೆ ಬಂದು, ಸ್ವಾಭಿಮಾನ ಮತ್ತು ಹಳ್ಳಿ ಗಣರಾಜ್ಯಗಳ ನರಕದಿಂದ ಅವರಿಗೆ ಮುಕ್ತಿ ದೊರೆತಂತಾಗುತ್ತದೆ.

ಇಂಥ ವಿಮೋಚನಾ ಯೋಜನೆಯ ಆರ್ಥಿಕತೆ :

ಈ ಯೋಜನೆಯಿಂದ ಗಣರಾಜ್ಯದ ಬೊಕ್ಕಸಕ್ಕೆ ದುರಂತ ವೇನೂ ಸಂಭವಿಸುವುದಿಲ್ಲ ತಾನೇ? ೧೯೯೧ರ ಜನ ಗಣತಿಯ ಮೇರೆಗೆ ಪ್ರ.ಜಾ. / ಪ.ಪಂ.ಗಳ ಭೂ ರಹಿತ ಕಾರ್ಮಿಕರ ಸಂಖ್ಯೆ ೩.೩೭ ಕೋಟಿ. ೨೦೦೧ ರ ಹೊತ್ತಲ್ಲಿ ಆ ಸಂಖ್ಯೆ ೩.೫೦ ಕೋಟಿಯಾಗಬಹುದು. ಅನೇಕ ಬಾರಿ ಗಂಡ ಭೂ ರಹಿತ ಕೃಷಿ ಕಾರ್ಮಿಕನಾಗಿದ್ದಲ್ಲಿ ಆತನ ಹೆಂಡತಿಯೂ ಸಹ ಕೂಲಿಯಾಳಾಗಿಯೇ ಇರುತ್ತಾಳೆ. ಅವರಿಬ್ಬರನ್ನೂ ಒಂದು ಘಟಕವೆಂದು ಪರಿಗಣಿಸಿ, ಅವರ ಖಾತೆ ಜಂಟಿ ಯಾಗಿರುತ್ತದೆ. ಅಂದರೆ ೨೦೦೫ರ ಹೊತ್ತಿಗೆ ರಾಜ್ಯಾಂಗವು ೧.೭೫ ಕೋಟಿ ಘಟಕಗಳನ್ನಷ್ಟೆ ಪರಿಗಣನೆಗೆ ತೆಗೆದು ಕೊಳ್ಳಬೇಕಾಗುತ್ತದೆ. ಆ ಯೋಜನೆಯ ಮೇರೆಗೆ ರಾಜ್ಯಾಂಗವು ವರ್ಷಕ್ಕೆ ಒಂದು ಘಟಕಕ್ಕೆ ರೂ. ೨೦೦೦/- ನ್ನು ಮಾತ್ರ ವ್ಯಯಿಸಬೇಕಾಗುತ್ತದೆ. ಅಥವಾ ವಾರ್ಷಿಕವಾಗಿ

ರೂ. ೩೫೦೦/- ಕೋಟಿ. ಇದಕ್ಕೆ ರೂ. ೫೦೦ ಕೋಟಿ ಇತರ ಖರ್ಚು ಎಂದಿಟ್ಟುಕೊಳ್ಳೋಣ. ಯಾವಾಗ ರಾಜ್ಯಾಂಗವು ಈ ಹಳ್ಳಿ ಗಣರಾಜ್ಯಗಳಿಗೆ ರೂ. ೬೦೦೦ ಕೋಟಿಗಳನ್ನು ಒದಗಿಸಬಲ್ಲುದಾದರೆ, ಅವುಗಳ ಖೈದಿ!ಗಳಿಗೆ ರೂ. ೪೦೦೦ ಕೋಟಿಯನ್ನೇಕೆ ವ್ಯಯ ಮಾಡಬಾರದು? ಮೊನ್ನೆ ದಿನ ಹೆಚ್ಚುವರಿ ಆಹಾರದ ಬಗ್ಗೆ ಹಣಕಾಸು ಮಂತ್ರಿ ಪಾರ್ಲಿಮೆಂಟ್‌ನಲ್ಲಿ ಮಾತನಾಡಿದಾಗ, ಅದರ ಉತ್ಪಾದನೆಯಲ್ಲಿ ದಲಿತ ಕೈಗಳು ಇರಲಿಲ್ಲವೇ. ಅವು ಪಾರ್ಲಿಮೆಂಟ್ ನಿಗದಿಪಡಿಸಿರುವ ಕನಿಷ್ಟ ವೇತನವನ್ನೂ ಸಹ ಪಡೆಯದೇ ದುಡಿದದ್ದಲ್ಲವೇ? ಹೀಗಿರುವಲ್ಲಿ ಎಲ್.ಪಿ.ಜಿ. (ಅಡಿಗೆ ಅನಿಲ) ಉಪಯೋಗಿಸುವವರು ಸಿಲಿಂಡರ್‌ವೊಂದಕ್ಕೆ ೧೦೦/- ರೂ.ಗಳ ಸಬ್ಸಿಡಿ ಪಡಯುತ್ತಾರಲ್ಲವೇ!

ಮಹಾ ಸಂಚು : ಕಂಪ್ಯೂಟರ್‌ಗಳು, ಕ್ಯಾಮರಾಗಳು, ಏರ್ ಕಂಡಿಷನರ್‌ಗಳು, ವಿದೇಶಿ ಟಿ.ವಿ. ಸೆಟ್‌ಗಳು, ಫ್ರಿಡ್ಜ್‌ಗಳು, ಮೊಬೈಲ್ ಫೋನ್‌ಗಳು, ಕಾರುಗಳು ಇನ್ನೂ ಅಗ್ಗ ಬೆಲೆಯಲ್ಲಿ ದೊರೆಯಬೇಕು. ಇಂಥ ಕೂಗನ್ನು ಹಾಕುತ್ತಿರುವವರು ಭಾರತೀಯ ಕುಲೀನರು ಮತ್ತು ಮಧ್ಯಮ ವರ್ಗದವರು. ವರ್ಷ ಕಳೆದಂತೆ ಇಂಥ ವಸ್ತುಗಳ ಸುಂಕ / ತೆರಿಗೆ ತೀವ್ರವಾಗಿ ಕಮ್ಮಿ ಗೊಳಿಸಲಾಗಿದೆ. ಈಗ ವಿದ್ಯುನ್ಮಾನ ವಸ್ತುಗಳು ತುಂಬಾ ಅಗ್ಗ ವಾಗಿವೆ. ಭಾರತದಲ್ಲಿ ಮಧ್ಯಮ ವರ್ಗವೆಂದರೆ ಮೇಲ್ಜಾತಿ ಗಳು ಮತ್ತು ಮಧ್ಯಮ ಜಾತಿಗಳು / ಬಿ.ಬಿ.ಸಿಗಳು. ಕೆಲವು ಮಂದಿ ದಲಿತರಿಗೂ ಪ್ರಯೋಜನ ದೊರೆಯುತ್ತಿದೆ. ಬ.ರಾ.ಕಂ.ಗಳು ಇಂಥ ಹೊಸ ತೆರಿಗೆಗಾಗಿ ಒತ್ತಾಯಿಸುತ್ತಿದ್ದಾರೆ. ಅವರಿಗೆಲ್ಲಾ ದೊರೆತಿದೆ. ಮಾರುಕಟ್ಟೆ ಮತ್ತಷ್ಟು ವಿಸ್ತರಿಸಿದೆ. ಇದರಿಂದ ಉತ್ಪಾದನೆ / ತಯಾರಿಕೆ ಮತ್ತಷ್ಟು ವಿಸ್ತರಿಸುತ್ತದೆ. ಕೂಲಿಯಾಳುಗಳಾಗಿ ಕೆಲವು ದಲಿತರಿಗೂ ಪ್ರಯೋಜನವಾಗುತ್ತದೆ.

ಕ್ಯಾಪಟನ್ಸ್ ಎಂದು ಕರೆದುಕೊಳ್ಳುವ ಭಾರತೀಯ ಕೈಗಾರಿಕಾಪತಿಗಳು ಈಗ ಬಹಳ ಖುಷಿಯಿಂದಿದ್ದಾರೆ. ಅತಿದೊಡ್ಡ ಹೆದ್ದಾರಿ ಯೋಜನೆ ಆರಂಭದಲ್ಲಿದೆ. ಸಿಮೆಂಟ್, ಸ್ಟೀಲ್ ಮತ್ತು ಲಾರಿ ಉತ್ಪಾದಕರು ಉತ್ಸಹದಲ್ಲಿದ್ದಾರೆ. ರಬ್ಬರ್ ಉದ್ಯಮವೂ ಸಹ ಬೆಳೆಯುತ್ತದೆ. ಹಾಗೆ ನಿರ್ಮಾಣವೂ ಸಹ. ಹೆಚ್ಚು ಇಂಜಿನಿಯರ್‌ಗಳು, ನಿರ್ವಾಹಕರು, ಲೆಕ್ಕ ಪರಿಶೋಧಕರು, ಡೀಲರ್‌ಗಳು, ವ್ಯಾಪಾರಸ್ಥರು ಹುಟ್ಟಿಕೊಳ್ಳುತ್ತಾರೆ. ಹೀಗಿರುವಲ್ಲಿ ಕೆಲವು ಮಂದಿ ದಲಿತರೂ ಸಹ ಕೂಲಿಗಳಾಗಿ ಅಥವಾ ಅತಿ ಕೌಶಲ್ಯ, ಕೌಶಲ್ಯ ಕೆಲಸಗಾರರಾಗಿ ಹುಟ್ಟನ್ನು ಪಡೆಯಬಹುದು.

ಭಾರತೀಯ ಮಾರುಕಟ್ಟೆಯು ನಿರೀಕ್ಷೆಗೂ ಮೀರಿ ವಿಸ್ತರಿಸಿಕೊಳ್ಳುತ್ತಿದೆ. ಬ.ರಾ. ಕಂಪನಿಗಳು ಸ್ಥಿರವಾಗಿಯೇ ಪ್ರವೇಶಿಸುತ್ತಿವೆ. ಅಂದರೆ ಅನೇಕ ಕಂಪನಿಗಳು ತಮ್ಮ ತಯಾರಿಕಾ ಘಟಕಗಳನ್ನು ಅಭಿವೃದ್ಧಿಗೊಳ್ಳುತ್ತಿರುವ ದೇಶಗಳಿಗೆ ವರ್ಗಾಯಿಸುತ್ತಿರುವುದು ಒಳ್ಳೆಯದೇ. ಅನೇಕ ದಲಿತ ಕಾರ್ಮಿಕರು ಫ್ಯಾಕ್ಟರಿ ಕೆಲಸಗಾರರಾಗುತ್ತಾರೆ. ಹಳ್ಳಿ ಗಣರಾಜ್ಯಗಳಲ್ಲಿರುವ ಅವಕಾಶಗಳಿಗಿಂತ ಇದು ಉತ್ತಮವೇ. ದೀನ ರೈತರು, ಕೃಷಿ ಸಾಧನೆಗಳಿಗೆ, ಗೊಬ್ಬರಗಳಿಗೆ, ಕ್ರಿಮಿನಾಶಕ ಮುಂತಾದುವುಗಳಿಗೆ ಕಮ್ಮಿ ಬಡ್ಡಿಯ ಸಾಲದೊಡನೆ, ಈಗ ಕ್ರೆಡಿಟ್ ಕಾರ್ಡ್‌ಗಳನ್ನು ಭತ್ಯೆಯಾಗಿ ಪಡೆದಿದ್ದಾರೆ. ಇವರ ಅಧಿಕಾರ ಮತ್ತಷ್ಟು ಹೆಚ್ಚುತ್ತದೆ. ಹಾಗೆಯೇ ದಲಿತರ ತೊಂದರೆಗಳೂ ಹೆಚ್ಚಾಗುತ್ತವೆ. ಒಟ್ಟಾರೆಯಾಗಿ ಈ ಎಲ್ಲಾ ವಿದ್ಯಮಾನಗಳಲ್ಲಿ ಪ್ರಯೋಜನ ಪಡೆಯುವವರೆಂದರೆ ದ್ವಿಜರು ಮತ್ತು ಹಿಂಸಾತ್ಮಕ ಶೂದ್ರರು. ಪಾರ್ಲಿಮೆಂಟ್, ರಾಜ್ಯ ವಿಧಾನಸಭೆ, ಮಾಧ್ಯಮ ಮತ್ತಿತರೆ ಸಾರ್ವಜನಿಕ ವೇದಿಕೆಗಳಲ್ಲಿ ಅವರು ತಮ್ಮ ನಿರ್ದಿಷ್ಟ ಬೇಡಿಕೆಗಳ ಬಗ್ಗೆ ಮತ್ತು ಸಾಧನೆಗಳ ಬಗ್ಗೆ ಸ್ಪಷ್ಟ ಅಭಿವ್ಯಕ್ತಿಯನ್ನು ವ್ಯಕ್ತಪಡಿಸುತ್ತಾರೆ.

೧೯೯೮-೯೯ನೇ ಸಾಲಿನಲ್ಲಿ ೨.೮೮ ಕೋಟಿ ದಲಿತ ಮಕ್ಕಳು ಪ್ರಾಥಮಿಕ ಶಾಲೆಗಳಲ್ಲಿ ದಾಖಲಾದರು. ಅದೇ ವರ್ಷ ಮೆಟ್ರಿಕ್ ಹಂತದ ದಲಿತ ವಿದ್ಯಾರ್ಥಿಗಳ ಸಂಖ್ಯೆ ಕೇವಲ ೩೫.೩೦ ಲಕ್ಷ, ಅಂದರೆ ೧.೫೩ ಕೋಟಿ ವ್ಯತ್ಯಾಸ! ಅಂದರೆ ಶೇ.೮೦ರಷ್ಟು ವಿದ್ಯಾರ್ಥಿಗಳು ಮೆಟ್ರಿಕ್ ಹಂತದ ಮೊದಲೇ ಶಾಲೆಗಳಿಂದ ಕಣ್ಮರೆಯಾಗುತ್ತಾರೆ. ಇಂಥವರಿಗೆ ಭಾರತೀಯ ಸಮಾಜದಲ್ಲಿ ಇರುವುದಾದರೂ ಏನು? ಕಣ್ಣೀರು. ಇದು ಸತ್ಯ. ಇತರರಿಗೆ ಬಿಟ್ಟಿ ಚೌಕರಿ. ಭೂರಹಿತರ ಬಗ್ಗೆ ಮಾತು ಬಂದಾಗ ಅದೆಲ್ಲಾ ಕ್ಷಣಿಕ ಅಷ್ಟೆ. ಇವರು ಭಾರತೀಯ ಸಂಪತ್ತಿನ ಪಾಲು ಪಡೆಯಬೇಕಾದರೆ ಇನ್ನೂ ಕಾಯಬೇಕಷ್ಟೆ. ಅಂದರೆ ದಲಿತ ಮನಸ್ಸು ಬಲೆಯಲ್ಲಿ ಸಿಲುಕಿದೆಯೇ!? ಬ್ರಾಹ್ಮಣ್ಯ! ಹಿಂದೂ ಧರ್ಮದ ಬಗ್ಗೆ ಮಾತನಾಡುವುದು ಸರಿಯಷ್ಟೆ. ಅದರ ವಿರುದ್ಧ ಕೆಲಸ ಮಾಡಬೇಕಾಗಿದೆ. ಆದರೆ ಅದರ ಅಂತ್ಯದ ಬಗ್ಗೆ, ತಂತ್ರಗಳ ಬಗ್ಗೆ ಮೌನರಾಗಿದ್ದೇವೆ. ಅಂದರೆ ಇಂಥ ದೊಡ್ಡ ಸಂಚಿನಲ್ಲಿ ನಾವೆಲ್ಲಾ ಖುಷಿಯಿಂದಿದ್ದೇವೆ.

ಯಾವುದೇ ಬ್ರಾಹ್ಮಣನಾಗಲೀ ಹೊಸ ಆರ್ಥಿಕ ನೀತಿ ಬಂದಾಗ, 'ಬ್ರಾಹ್ಮಣ್ಯ ಚಿರಾಯುವಾಗಲಿ', 'ವರ್ಣ ವ್ಯವಸ್ಥೆ ಎತ್ತರಕ್ಕೇರಲಿ,' ಅಥವಾ 'ವರ್ಣ ಸಾಯಲಿ', 'ದಲಿತರಿಗೆ ಧಿಕ್ಕಾರ'ವೆಂದು ಕೂಗಲಿಲ್ಲ, ಬದಲು ದಲಿತರನ್ನು ಹೊರಗಿಡುವುದರ ಮೂಲಕ ಅದನ್ನೆ ಉಚ್ಚರಿಸಿದ್ದಾರೆ. ಹಾಗೆಯೇ ಉದ್ಯಮಪತಿಗಳು ಎಂದೂ 'ದಲಿತರನ್ನು ಇರುವಲ್ಲೇ ಇರಲಿ' ಎಂದು ಹೇಳಲಿಲ್ಲ ಮತ್ತು ಭಾರತೀಯ ಗಣರಾಜ್ಯದ ಆರ್ಥಿಕ ಚಟುವಟಿಕೆಗಳನ್ನು ಹಿಂತೆಗೆದುಕೊಳ್ಳಲು ವಾದಿಸಲಿಲ್ಲ. ಆದರೆ ಅವರೆಲ್ಲಾ ತಮ್ಮ ಮುಚ್ಚಿಟ್ಟ ಹಿತಾಸಕ್ತಿಗಳಲ್ಲಿ ಅದನ್ನೇ ಪ್ರತಿಪಾದಿಸಿದ್ದಾರೆ.

ಎಲ್ಲೆಲ್ಲಾ ದಲಿತ ಕೃಷಿ ಕಾರ್ಮಿಕರು, ತಮ್ಮ ಒಕ್ಕಲಿಗ, ತೇವರ್, ಮರಾಠ, ಪಟೇಲ, ಜಾಟ್ ಅಥವಾ ಯಾದವರನ್ನು ತಮಗೆ ಕನಿಷ್ಟ ಕೂಲಿಯನ್ನು ನೀಡಿ ಎಂದು ಕೇಳಿದಾಗ, ಜ್ಞಾನೋದಯಗೊಂಡ ಅವರೆಲ್ಲರ ತರ್ಕವೆಂದರೆ, 'ಕೃಷಿ ನಷ್ಟದಲ್ಲಿದೆ, ಹಣವಿಲ್ಲ' ಎಂಬುದು. ಅದೇ ಕ್ಷಣದಲ್ಲಿ ದಲಿತನೊಬ್ಬ ರೂ. ೧೦೦೦ ಸಾಲ ಕೇಳಿದಾಕ್ಷಣ, ಕ್ಷಣದಲ್ಲೇ ಅದನ್ನು ಕೊಳಕು ನೋಟುಗಳಲ್ಲಿ ನೀಡುತ್ತಾ 'ಇನ್ನು ಬೇಕೆ?' ಎನ್ನುತ್ತಾರೆ. ಇಂಥ ಉದಾರ ಭೂಮಾಲೀಕ ಶೇ. ೨೫ ರಷ್ಟು ಬಡ್ಡಿಗೆ ಒತ್ತಾಯಿಸುತ್ತಾನೆ. ಇಂಥ ದೀನ ರೈತ ಎಂದಾದರು ಪಾರ್ಲಿಮೆಂಟ್ ಹೊರಗೆ ಅಥವಾ ಒಳಗೆ, 'ನಾವೇನಾದ್ರು ದಲಿತ ಭೂರಹಿತ ಕೂಲಿಯಾಳುಗಳಿಗೆ ಕನಿಷ್ಟ ಕೂಲಿಯನ್ನು ನೀಡಿದಲ್ಲಿ ಅವರ್ಯಾರು ನಮ್ಮ ಬಳಿ ಮತ್ತಷ್ಟು ಸಾಲಕ್ಕೆ ಬರುವುದಿಲ್ಲ. ಒಮ್ಮೆ ಸ್ವತಂತ್ರಗೊಂಡಲ್ಲಿ ಅವರು ನಮ್ಮ ಮಾತನ್ನು ಕೇಳುವುದಿಲ್ಲ. ಬದಲು ಅವರು ಮತ್ತಷ್ಟು ಪ್ರತಿರೋಧ ವ್ಯಕ್ತಪಡಿಸುತ್ತಾರೆ. ಕಮ್ಮಿ ಬಡ್ಡಿಯ ಸಾಲ ಪಡೆದು ಅವರಿಗೆ ಸಾಕಷ್ಟು ಸಾಲ ನೀಡಬಹುದು ಹಾಗೂ ಅವರನ್ನು ನಮ್ಮ ಸಾಮಾಜಿಕ ಖೈದಿಗಳಾಗಿ ಉಳಿಸಿಕೊಳ್ಳಬಹುದು' ಎಂದು ವಾದಿಸುವುದಿಲ್ಲ, ಆದರೆ ಅವರು ವಾಸ್ತವದಲ್ಲಿ ಇದನ್ನು ಅನುಸರಿಸುತ್ತಾರೆ.

ಬಜೆಟ್‌ನಲ್ಲಿ ಅಥವಾ ಇಡೀ ವರ್ಷದಲ್ಲಿ ದಲಿತರು ಏನನ್ನು ನಿರೀಕ್ಷಿಸುತ್ತಾರೆ? ರಾಜಕಾರಣಿಗಳನ್ನು ನಾವು ಬಿಟ್ಟು ಬಿಡೋಣ. ದಲಿತ ವಲಯಗಳಲ್ಲಿ ಅವರೆಲ್ಲ ತೀವ್ರ ಕ್ರಾಂತಿಕಾರಿಗಳು. ಇವರೆಲ್ಲಾ ಪಾರ್ಲಿಮೆಂಟ್ ಅಥವಾ ವಿಧಾನ ಮಂಡಲಗಳಿಗೆ ಹೋಗುವಾಗ ಲಾರಿಗಟ್ಟಳೆ 'ನಿದ್ರೆಗುಳಿಗೆ'ಯನ್ನು ಒಯ್ಯುತ್ತಾರೆ. ಅದರೆಲ್ಲಾ ನಿಜವಾಗಿ ದಲಿತ ಪರವಾದಲ್ಲಿ ಅನೇಕರು ಚುನಾವಣೆಯಲ್ಲಿ ಸೋಲುತ್ತಾರೆ. ಬಾಬಾ ಅಂಬೇಡ್ಕರ್ ಸಂವಿಧಾನ ಬರೆದೂ ಸಹ ಚುನಾವಣೆಯಲ್ಲಿ ಸೋತರಲ್ಲವೆ. 'ಅಮೇರಿಕಾದ ಸ್ವಾತಂತ್ರ್ಯದ ಘೋಷಣೆ' ಮಾಡಿದ ಜಾಫರ್‌ಸನ್ ಅಮೇರಿಕಾದ ಅಧ್ಯಕ್ಷನಾದ. ಆದರೆ ಇದು ವರ್ಗ-ಭಾರತ. ಆದ್ದರಿಂದ ದಲಿತ ರಾಜಕಾರಣಿಗಳನ್ನು ನಾವು ಕ್ಷಮಿಸಬಹುದು. ದಲಿತ ಚಳುವಳಿಗಳು ಬುಡ ಮಟ್ಟದಲ್ಲಿರುವಾಗ ನಮ್ಮ ಕರುಣೆಗೆ ಅವು ಪಾತ್ರವಾಗುತ್ತವಷ್ಟೆ ಇಲ್ಲಿನ ನಾಯಕರು ಪ್ರಾಮಾಣಿಕರು, ಬದ್ಧರು, ಮುಗ್ಧರು ಮತ್ತು ಅನೇಕ ಭಾರಿ ದಡ್ಡರು. ಅವರಿಗ್ಯಾರಿಗೂ ಯೋಜನಾ ಸಮಿತಿಯ ದಾಖಲೆಗಳು ದೊರೆಯುವುದಿಲ್ಲ.

ಆದರೆ ಇಂಗ್ಲಿಷ್ ಮಾತನಾಡುವ ದಲಿತ ಬುದ್ಧಿಜೀವಿಗಳು, ದಲಿತ ಸಂಪಾದಕರು, ಬರಹಗಾರರು? ಭಾರತದ ಎಲ್ಲಾ ಜಿಲ್ಲಾ ಕೇಂದ್ರಗಳು ದಲಿತ ಪತ್ರಿಕೆ, ಮಾಸಿಕ, ವಾರ್ಷಿಕಗಳನ್ನು ಹೊಂದಿವೆ. ಈ ಎಲ್ಲಾ ಸಂಪಾದಕೀಯಗಳ ಅಜೆಂಡಾ (ಉದ್ದೇಶ) ಏನು? 'ಬ್ರಾಹ್ಮಣ್ಯಕ್ಕೆ ಧಿಕ್ಕಾರ', 'ಬ್ರಾಹ್ಮಣರಿಗೆ ಶಾಪವಾಗಲಿ', 'ಹಿಂದೂಧರ್ಮ ನಾಶವಾಗಲಿ', 'ದಲಿತರಿಗೆ ಅಧಿಕಾರ ಅಥವಾ ಬಹುಜನರಿಗೆ ಅಧಿಕಾರ' ಇತ್ಯಾದಿ......

೧೯೯೮-೯೯ನೇ ಸಾಲಿನಲ್ಲಿ ೨.೮೮ ಕೋಟಿ ದಲಿತ ಮಕ್ಕಳು ಪ್ರಾಥಮಿಕ ಶಾಲೆಗಳಲ್ಲಿ ದಾಖಲಾದರು. ಅದೇ ವರ್ಷ ಮೆಟ್ರಿಕ್ ಹಂತದ ದಲಿತ ವಿದ್ಯಾರ್ಥಿಗಳ ಸಂಖ್ಯೆ ಕೇವಲ ೩೫.೩೦ ಲಕ್ಷ, ಅಂದರೆ ೧.೫೩ ಕೋಟಿ ವ್ಯತ್ಯಾಸ! ಅಂದರೆ ಶೇ.೮೦ರಷ್ಟು ವಿದ್ಯಾರ್ಥಿಗಳು ಮೆಟ್ರಿಕ್ ಹಂತದ ಮೊದಲೇ ಶಾಲೆಗಳಿಂದ ಕಣ್ಮರೆಯಾಗುತ್ತಾರೆ. ಇಂಥವರಿಗೆ ಭಾರತೀಯ ಸಮಾಜದಲ್ಲಿ ಇರುವುದಾದರೂ ಏನು? ಕಣ್ಣೀರು. ಇದು ಸತ್ಯ. ಇತರರಿಗೆ ಬಿಟ್ಟಿ ಚೌಕರಿ. ಭೂರಹಿತರ ಬಗ್ಗೆ ಮಾತು ಬಂದಾಗ ಅದೆಲ್ಲಾ ಕ್ಷಣಿಕ ಅಷ್ಟೆ. ಇವರು ಭಾರತೀಯ ಸಂಪತ್ತಿನ ಪಾಲು ಪಡೆಯಬೇಕಾದರೆ ಇನ್ನೂ ಕಾಯಬೇಕಷ್ಟೆ

ಅಂದರೆ ದಲಿತ ಮನಸ್ಸು ಬಲೆಯಲ್ಲಿ ಸಿಲುಕಿಬೆಯೇ!? ಬ್ರಾಹ್ಮಣ್ಯ! ಹಿಂದೂ ಧರ್ಮದ ಬಗ್ಗೆ ಮಾತನಾಡುವುದು



ಸರಿಯಷ್ಟೆ. ಅದರ ವಿರುದ್ಧ ಕೆಲಸ ಮಾಡಬೇಕಾಗಿದೆ. ಆದರೆ ಅದರ ಅಂತ್ಯದ ಬಗ್ಗೆ ತಂತ್ರಗಳ ಬಗ್ಗೆ ಮೌನರಾಗಿದ್ದೇವೆ. ಅಂದರೆ ಇಂಥ ದೊಡ್ಡ ಸಂಚಿನಲ್ಲಿ ನಾವೆಲ್ಲಾ ಖುಷಿಯಿಂದಿದ್ದೇವೆ.

ದೊಡ್ಡ ಅಪಾಯ: ಕಮ್ಮಿಯೆಂದರೂ ಅರ್ಧ ಡಜನ್ ದಲಿತ ಬರಹಗಾರರು ದಲಿತರ ಮಧ್ಯೆ ಪ್ರಸಿದ್ಧರಾಗಿದ್ದಾರೆ. ಅವರ ಕೊಡುಗೆಯೆಂದರೆ: ಬ್ರಾಹ್ಮಣರನ್ನು ದೂಷಿಸುವುದು, ಬ್ರಾಹ್ಮಣ್ಯ, ಹಿಂದೂ ಧರ್ಮ, ಅಮೇರಿಕಾ, ಸಾಮ್ರಾಜ್ಯ ಶಾಹಿಯ ವಿರುದ್ಧದ ದೂಷಣೆಗಳು. ಈ ಹಿಂದೆ ಕಾಂಗ್ರೆಸ್ ಪಕ್ಷ ಎಲ್ಲಾ ಕೆಡುಕಿನ ಮೂಲವಾಗಿತ್ತು. ಆಗ ಬಿಜೆಪಿ ಜೊತೆಗಾರನಾಗಿದ್ದ. ಈಗ ಬಿಜೆಪಿ ಎಲ್ಲಾ ಕೆಡುಕಿನ ಮೂಲವಾಗಿದೆ. ಅವರನ್ನು ಸೋಲಿಸಿದಲ್ಲಿ ದಲಿತರಿಗೆ ಸುರಕ್ಷತೆಯ ಭವಿಷ್ಯ ಬಂದುಬಿಡುತ್ತದೆ. ಹೀಗೆ ಸರ್ಕಲ್ ಸುತ್ತುತ್ತಿರುತ್ತದೆ. ದಲಿತರು ಅದರಲ್ಲೇ ಇರುತ್ತಾರೆ.

ನನ್ನ ಗಮನಕ್ಕೆ ಬಂದ ಸಂಗತಿಯೆಂದರೆ ಈ ಬರಹಗಾರರೆಂದೂ ಭಾರತೀಯ ಸಿನೇಮಾ, ಸಂಗೀತ, ಉದ್ಯಮಗಳ ಬಗ್ಗೆ ಬರೆಯುವುದಿಲ್ಲ. ಕಲಾವಿದರ ಜಾತಿಗಣತಿ ಆದಲ್ಲಿ ಅವರಲ್ಲಿ ದಲಿತರೆಷ್ಟು ಮಂದಿ ಸಿಗುತ್ತಾರೆ? ಮಾಧ್ಯಮಗಳೇಕೆ ಜಾತಿ ಭೇದವನ್ನು ಮಾಡುತ್ತಿವೆ? ದಲಿತರನ್ನು ಹೊರಗಿಟ್ಟಿವೆ? ಅಥವಾ ಏಕೆ ಯೋಜನಾ ಸಮಿತಿ, ಭೂ ಸುಧಾರಣೆಗಳ ಬಗ್ಗೆ ಮಾತನಾಡುತ್ತಿಲ್ಲ? ಅಥವಾ ದಲಿತ ಶಿಕ್ಷಣ ಒಂದು ಸಂಗತಿಯಾಗುವುದಿಲ್ಲ. ಶೇ. ಅರ್ಧದಷ್ಟು ದಲಿತರು ಅನಕ್ಷರಸ್ಥರಿದ್ದರೂ, ಶೇ. ೮೦ ರಷ್ಟು ದಲಿತ ಮಕ್ಕಳು ಶಾಲೆ ಬಿಟ್ಟರೂ, ಈ ಬರಹಗಾರರ ಗಮನವಿರುವುದಿಲ್ಲ. ಆದರೂ ಇವರು ದಲಿತರಲ್ಲಿ ಎದ್ದು ಕಾಣುವ ನಾಯಕರು.

ಅಚ್ಚರಿಯ ಸಂಗತಿಯೆಂದರೆ ದಲಿತೇತರ ಬರಹಗಾರರು ದಲಿತರ ಹಕ್ಕುಗಳ ಬಗ್ಗೆ ವಾಸ್ತವದಲ್ಲಿ ಮಾತನಾಡುವ, ಇಂಥಾ ಬರಹಗಾರರನ್ನು ದೂರ ಇಡಲು ಸೂಚಿಸುತ್ತಿದ್ದಾರೆ. ಬಿಜೆಪಿ ಮಧ್ಯಪ್ರದೇಶದಲ್ಲಿ 'ಭೋಪಾಲ್ ಘೋಷಣೆ'ಯ ಪ್ರತಿಯನ್ನು ಸುಟ್ಟು ಹಾಕಿದೆ. ಹಾಗೆಯೇ ಕೆಲವು ದಲಿತ ಬರಹಗಾರರು ಮಾಡಿದ್ದಾರೆ. ಪಶ್ಚಿಮ ಬಂಗಾಳ, ಕೇರಳ, ಆಂಧ್ರಪ್ರದೇಶ ಮುಂತಾದೆಡೆ ಸರ್ಕಾರ ರಸ್ತೆ ಬದಿ ಬೆಳೆದಿರುವ ತೆಂಗಿನ ಮರಗಳನ್ನು ದಲಿತರಿಗೆ ಹಂಚಿದಲ್ಲಿ (ಭೂಮಿ ಹಂಚುವುದು ಬಿಡಿ) ಪ್ರಯೋಜನವಾಗುವುದಿಲ್ಲವೇ? ೧೦ ತೆಂಗಿನ ಮರಗಳು ಒಂದು ದಲಿತ ಕುಟುಂಬವನ್ನು ರಕ್ಷಿಸಬಹುದು. ಮಿಲ್ಲಿಯಗಟ್ಟಳೆ ದಲಿತರು ಹಸಿವಿನಿಂದ ಹೊರಬರಬಹುದು. ಭೂಮಾಲೀಕರಿಂದ ತಪ್ಪಿಸಿಕೊಳ್ಳಬಹುದು.

ಇಂದು, ಅಮೇರಿಕಾದ ಜೊತೆಯಲ್ಲಿರುವುದು ಜಪಾನ್ ದೇಶ, ಪ್ರಪ್ರಥಮವಾಗಿ ಬಾಂಬಿನಿಂದ ಜಪಾನಿಯರು ಸತ್ತರೂ ಸಹ ಸ್ನೇಹಿಗಳಾಗಿದ್ದಾರೆ. ಬಾಂಬಿನ ಆಕ್ರಮಣ ನೊಂದವರಿಗಷ್ಟೆ ಗೊತ್ತು. ಅನಂತರದವರು ಅದನ್ನು ಅರ್ಥೈಸಬಹುದಷ್ಟೆ. ಅಮೇರಿಕಾದೊಡನೆ ಜಪಾನ್ ಅತಿದೊಡ್ಡ ವ್ಯಾಪಾರ ಸಂಗಡಿಗ. ತನ್ನ ಭದ್ರತೆಗೆ, ದಲಿತ ಸಿದ್ಧಾಂತಿ ಡಿ. ಶ್ಯಾಮ್ ಬಾಬು, ಹೇಳುವಂತೆ, ಅದರ ಆಂತರಿಕ ಭದ್ರತೆಗೂ ಸಹ ಅಮೇರಿಕಾದ ಆಸರೆ ಮುಖ್ಯ.' ಒಬ್ಬ ಸಾಮಾನ್ಯ ಜಪಾನಿಯ ಗ್ರಹಿಕೆಯಲ್ಲಿ ಅಮೇರಿಕಾದ ಸೈನ್ಯದ ಗೈರು ಹಾಜರಿಯಲ್ಲಿ 'ಮಿಲಿಟರಿ' ದಂಗೆಗೆ ಮತ್ತೊಮ್ಮೆ ಜಪಾನ್ ಸಿಕ್ಕಿಕೊಳ್ಳುತ್ತದೆ' ಎನ್ನುತ್ತಾರೆ ಶ್ಯಾಮ್. ಆತ ತರಬೇತಿಯಲ್ಲಿ ನಿಶಸ್ತ್ರೀಕರಣದಲ್ಲಿ ಪಳಗಿದವನು. ಜಪಾನಿಯರಿಗೆ ಯು.ಎಸ್.ಡಿ. ಶ್ರೇಷ್ಠ ಪ್ರೊಟೀನ್. ಆದ್ದರಿಂದ ಅದನ್ನು ಪಡೆಯಬೇಕಾದರೆ ಅಮೇರಿಕಾದೊಂದಿಗೆ ಸ್ನೇಹ ಮುಖ್ಯ.

ದಲಿತರು ಅನೇಕ ಬಂಧನಗಳಿಂದ ಬಿಡುಗಡೆಗೊಳ್ಳಬೇಕಾಗಿದೆ. ಕ್ರಮವಾಗಿ ವರ್ಣವ್ಯವಸ್ಥೆ ಬ್ರಾಹ್ಮಣ್ಯದಿಂದ ಮುಕ್ತರಾಗಲೇಬೇಕು. ಆದರೆ ಅದನ್ನು ಆಳೆಯುವುದು ಹೇಗೆ? ಪ್ರಧಾನಮಂತ್ರಿ ಕಛೇರಿ / ರಾಜಧಾನಿಗಳಲ್ಲಿ ಅವರ ಗೈರು ಹಾಜರಿ ಅಥವಾ ಗುಣಮಟ್ಟದ ಶಿಕ್ಷಣ, ಅನುಕೂಲ ದಲಿತ ಜನಕ್ಕೆ ದೊರೆಯುವಂತಾಗುವುದೇ? ಮೊದಲನೆಯದ್ದು ಗುರಿಯಾದರೆ ದಕ್ಷಿಣದಲ್ಲಿ ಪಂಜಾಬ್, ಹರಿಯಾಣ, ಗುಜರಾತ್, ರಾಜಸ್ಥಾನ ಮತ್ತು ಮಹಾರಾಷ್ಟ್ರಗಳಲ್ಲಿ ದಲಿತರು ವಿಮೋಚನಗೊಳ್ಳುತ್ತಾರೆ. ಆದರೆ ಭೂ ರಹಿತ ಪ್ರಶ್ನೆ ಬಂದಾಗ ಅವರ ವಿಮೋಚನೆ ಅಖಿಲ ಭಾರತ ಮಟ್ಟದಲ್ಲಿ ತುಂಬಾ ಮುಖ್ಯವಾಗುತ್ತದೆ.

ಬನಿಯಾಗಳೆಂದು ಪಿ. ಎಂ. ಒ. (ಪ್ರಧಾನ ಮಂತ್ರಿ ಕಛೇರಿ) ಹತ್ತಿರ ಸುಳಿಯಲಿಲ್ಲ. ಕೆಲವೊಮ್ಮೆ ಅವರು ಮುಖ್ಯಮಂತ್ರಿಗಳಾಗಿದ್ದರಷ್ಟೆ. ಆದರೂ ಅವರಲ್ಯಾರು ಕೆಲಸಗಾರರಾಗಿ, ಕಸ ಗುಡಿಸುವವರಾಗಿ ಕಾಣಲಾಗುವುದಿಲ್ಲ. ಅಲ್ಲದೆ ಗಂಡಸರು ಕೂಲಿಯಾಳುಗಳಾಗುವುದಿಲ್ಲ. ಹಾಗೆಯೇ ಅನಕ್ಷರಸ್ಥ ಬ್ರಾಹ್ಮಣ ಅಥವಾ ಚಪ್ಪಲಿ ಹೊಲೆಯುವ ಹಿಂಸಾ ಶೂದ್ರ ಸಿಗುವುದಿಲ್ಲ. ಹೀಗಿರುವಾಗ ಇದೆಲ್ಲಾ ಬ್ರಾಹ್ಮಣ್ಯದ ಆಚರಣೆಯಿಂದ ಎಂದು ವಾದಿಸಬಹುದು. ಇದು ಭಾರತೀಯ ಸಮಾಜದ ಬಗ್ಗೆ ಸತ್ಯವಿರಬಹುದು.

ಚರಿತ್ರೆ ಹೀಗಿರಬೇಕಾದರೆ, ಅದನ್ನು ದಲಿತರು, ಶಿಕ್ಷಣ, ಸಂಪತ್ತು ಒಳ್ಳೆಯ ಬದಕನ್ನು ನಿರೀಕ್ಷಿಸುವ ಮೂಲಕ ಮರು ರೂಪಿಸಬಹುದಲ್ಲವೇ? ಹಾಗಾದರೆ ಇಂಗ್ಲಿಷ್ ಮಾತನಾಡುವ ದಲಿತ ಅಥವಾ ಕಾರನ್ನು ಹೊಂದಿರುವ ದಲಿತ ಬ್ರಾಹ್ಮಣ್ಯವನ್ನು ಭೇದೀಕರಿಸಬಹುದು. ಯಾವಾಗ ದಲಿತರಿಗೆ ಅಂತ ಸ್ಥಾನ ದೊರೆಯುತ್ತೋ ಅಂದು ಬ್ರಾಹ್ಮಣ್ಯವೂ ಸಹ ಅಂತ್ಯವಾಗುತ್ತದೆ. ಏಕೆಂದರೆ ಬ್ರಾಹ್ಮಣ್ಯ ಎನ್ನುವುದೇ ಅಸಮಾನ ಶ್ರೇಣೀಕರಣ ತಾನೆ. 'ವೃತ್ತಿ ಮತ್ತು ಶುದ್ಧತೆ'ಯ ನಿಯಮವನನ್ನು ಪಾಲಿಸುತ್ತಾ ದಲಿತರನ್ನು ಹೊರಗಿಟ್ಟದ್ದು ತಾನೆ.

ಇದು ಒಮ್ಮೆಗೇ ಅಥವಾ ಹಂತಹಂತಗಳಲ್ಲಿ ಹೋಗುತ್ತದೆಯೆ? ಪ್ರಜಾಪ್ರಭುತ್ವದಲ್ಲಿ ವಿಕಾಸ ಹಂತ ಹಂತಗಳಲ್ಲಿ ಘಟಿಸುತ್ತದೆ. ೩ ಮಿಲ್ಲಿಯನ್‌ಗಿಂತ ಹೆಚ್ಚಿನ ದಲಿತರಿಗೆ ಮಾಸಿಕ ಆದಾಯ, ವಿಮೆ, ಮನೆ ಇವೆ. ಇವೆಲ್ಲಾ ಹಂತಗಳಲ್ಲೇ ಬಂದದ್ದು. ಇವರೆಲ್ಲಾ ಬಹುವಾಗಿ ಬ್ರಾಹ್ಮಣ್ಯದ ಜಾಡಿನಿಂದ ಹೊರ ಬರುತ್ತಿದ್ದಾರಲ್ಲವೇ ?

'ಇಸಂ'ಗಳಿಂದ ದಲಿತ ಬುದ್ಧಿಜೀವಿಗಳು ಮುಕ್ತರಾಗಿ, ದಲಿತೇತರ ಬರಹಗಾರರಿಂದ ಬಿಡುಗಡೆಗೊಂಡಲ್ಲಿ, ಉಳಿದ ಸಮುದಾಯವೂ ಸಹ ಬ್ರಾಹ್ಮಣ್ಯದಿಂದ ತಪ್ಪಿಸಿಕೊಳ್ಳುತ್ತದೆ. ನೂರಾರು ಕಮ್ಮಗಳು, ಗೌಡರು, ಪಟೇಲರು, ತೇವರ್‌ಗಳು, ಜಾಟ್‌ರು, ಯಾದವರು.. ಬ್ರಾಹ್ಮಣರನ್ನು ದೂಷಿಸುತ್ತಾರೆ. ಆದರೆ ಅವರೆಂದೂ ದಲಿತರೊಡನೆ ಭೂ ಸುಧಾರಣೆಯಲ್ಲಿ ತೊಡಗಿಕೊಳ್ಳಲಾರರು. ಹಾಗೆಯೇ ನೂರಾರು ಬ್ರಾಹ್ಮಣರು ಅಮೇರಿಕಾಗೆ ಹೋಗುವಾಗ, ಕೆಲವರಾದರೂ ದಲಿತರಿಗೆ ಜ್ಞಾನ, ಸಂಪತ್ತಿನಲ್ಲಿ ಪಾಲು ದೊರೆಯಬೇಕೆಂದು ಭಾವಿಸುವುದಿಲ್ಲ. ದಲಿತೇತರ ಬರಹಗಾರರ 'ಇಸಂ'ಗಳ ಸಂಚಿನಿಂದ ದಲಿತ ಚಿಂತಕರು ಹೊರಬರಲಿಲ್ಲವೆಂದರೆ ಸಾಮಾನ್ಯ ದಲಿತರು ಬ್ರಾಹ್ಮಣ್ಯದ ಕೈಯಿಂದ ತಪ್ಪಿಸಿಕೊಳ್ಳಲಾದೀತೇ ? □

ನಂಬಿಕೆಗಳು ಬಿಕರಿಗಿವೆ !

ಪ್ರೊ|| ಕೆ.ಎಸ್.ಭಗವಾನ್

ಮೂಢನಂಬಿಕೆ ಸಾರ್ವತ್ರಿಕವಾದುದು. ಅದು ಒಂದಲ್ಲ ಒಂದು ರೂಪದಲ್ಲಿ ಪ್ರತಿಯೊಂದು ಜನಾಂಗದಲ್ಲಿ ಪ್ರತಿಯೊಂದು ದೇಶದಲ್ಲಿ ನೆಲಸಿದೆ. ಮೂಢನಂಬಿಕೆಯನ್ನು ಹೋಗಲಾಡಿಸಲು ನಡೆಸಿದ ಪ್ರಯತ್ನಗಳು ಅನಂತರ ಮೂಢನಂಬಿಕೆಯಾಗಿ ಪರಿವರ್ತನೆಗೊಳ್ಳುವುದು ಇತಿಹಾಸದ ವ್ಯಂಗ್ಯವಾಗಿ ಕಾಣುತ್ತದೆ. ಹಾಗೆಂದು ಸುಮ್ಮನೆ ಕೂರುವಂತಿಲ್ಲ, ಮನುಷ್ಯನಿಗೆ ನಂಬಿಕೆ ಬೇಕು. ಬಾಳು ನಂಬಿಕೆಯ ಮೇಲೆ ನಿಂತಿದೆ. ಆದರೆ ನಂಬಿಕೆ ವಿಚಾರದ ಮೇಲೆ ಅವಲಂಬಿತವಾಗಿ ತಾತ್ವಿಕ ಶಕ್ತಿಯಾಗಿ ಮಾನವರಲ್ಲಿ ಮೂಡಬೇಕು. ಇದು ನಿರಂತರವಾಗಿ ನಡೆದಾಗ ಮೂಢನಂಬಿಕೆಗೆ ಅವಕಾಶ ಇರುವುದಿಲ್ಲ. ಇನ್ನೊಬ್ಬರು ನಂಬಿದ ವಿಷಯವನ್ನು, ನಡೆದ ಹಾದಿಯನ್ನು ಅಂಧಾಭಿಮಾನದಿಂದ ಅನುಸರಿಸಿದಾಗ, ಅದು ಮೌಢ್ಯವಾಗುತ್ತದೆ.

ಮೌಢ್ಯದಲ್ಲಿ ಜೀವನವನ್ನು ಅನುಭವಿಸುವ ಚುರುಕು ಮತ್ತು ತೀವ್ರತೆ ಇರಲು ಸಾಧ್ಯವಿಲ್ಲ. ಬೇರೊಬ್ಬರ ಬದುಕು ನನ್ನ ಬದುಕಾಗಬಾರದು. ನನ್ನ ಬದುಕು ನನ್ನದಾಗಬೇಕು, ಎಂಬ ಜರೂರು ಬರಬೇಕು. ಸಂತೆ ಅಥವಾ ಮಾರುಕಟ್ಟೆಗಳಲ್ಲಿ ನಮಗೆ ಬೇಕಾದ ಆಹಾರ ಪದಾರ್ಥಗಳನ್ನು ದಿನಸಿಯನ್ನು ಕೊಂಡು ತರುತ್ತೇವೆ. ತಂದ ಸರಕುಗಳನ್ನು ಹಾಗೆಯೆ ಅಡುಗೆಗೆ ಇಡುವುದಿಲ್ಲ. ಅವುಗಳನ್ನು ಕೇರಿ, ಕಲ್ಲು, ಮಣ್ಣು ಇದ್ದರೆ ತೆಗೆದು, ಕಸವನ್ನು ಚೊಕ್ಕಟಮಾಡಿ ಒಲೆ ಮೇಲೆ ಇಡುತ್ತೇವೆ.

ಅದೇ ರೀತಿ ಜೀವನ ವ್ಯಾಪಾರದಲ್ಲಿ ಅನೇಕ ವಿಚಾರದಲ್ಲಿ ಧರ್ಮ ಮತ್ತು ದೇವರ ಹೆಸರಿನಲ್ಲಿ, ದೊಡ್ಡವರ ಹೆಸರಿನಲ್ಲಿ ಪಟ್ಟಭದ್ರ ಹಿತಾಸಕ್ತರು ಲೋಕದಲ್ಲಿ ಬಿಕರಿ ಮಾಡುತ್ತಿರುತ್ತಾರೆ. ವಂಚನೆಗೆ ಒಳಗಾಗ ಬಾರದೆಂದು ಅವೆಲ್ಲವನ್ನೂ ಪರೀಕ್ಷಿಸುವ ಅಗತ್ಯವಿದೆ.

ಬೆಳೆಸಿಕೊಂಡು ಬಂದಿದ್ದಾರೆ. ಇದರ ಉದ್ದೇಶ ಜನಸಮುದಾಯವನ್ನು ಅಜ್ಞಾನದಲ್ಲಿ ಇಡುವುದು. ಶಾಲೆಗೆ ಹೋದರೆ ಮನುಷ್ಯ ವಿದ್ಯಾವಂತನಾಗುತ್ತಾನೆ. ವಿದ್ಯೆಯಿಂದ ಬುದ್ಧಿ ಬರುತ್ತದೆ. ಬುದ್ಧಿ ಅಪಾಯಕಾರಿ. ಆದ್ದರಿಂದ ಅವನನ್ನು ದೇವಸ್ಥಾನಕ್ಕೆ ತಳ್ಳು ಮೂಢನಾಗಿರುತ್ತಾನೆ, ಎಂಬ ಧೋರಣೆ ಕೆಲಸ ಮಾಡುತ್ತಿದೆ. ದೇವಸ್ಥಾನಗಳು, ಚರ್ಚುಗಳು, ಮಸೀದಿಗಳು ಮೌಢ್ಯದ ಸ್ಮಾರಕಗಳು, ಅಜ್ಞಾನದ ಆಗರಗಳು, ಅವಿವೇಕದ ಸಂಕೇತಗಳು .

ಇರುವ ದೇವಸ್ಥಾನಗಳನ್ನೇ ಸರಿಯಾಗಿ ನೋಡಿಕೊಳ್ಳಲು ಬಾರದ ಜನ ಹೊಸ ಹೊಸ ದೇವಾಲಯಗಳನ್ನು ನಿರ್ಮಿಸುವುದು ಅನುತ್ಪಾದಕವಾಗಿದೆ. ಗುಡಿ, ಚರ್ಚು, ಮಸೀದಿ ಮುಂತಾದವುಗಳ ನಿರ್ಮಾಣಕ್ಕಾಗಿ ಖರ್ಚು ಮಾಡುವ ಹಣವನ್ನು ಕಾರ್ಖಾನೆ ಕಟ್ಟಲು, ಶಾಲೆ ಕಾಲೇಜುಗಳನ್ನು ಪ್ರಾರಂಭಿಸಲು, ನದಿಗಳಿಗೆ ಅಣೆಕಟ್ಟುಗಳನ್ನು ನಿರ್ಮಿಸಲು ಬಳಸಿದರೆ ದೇಶದ ಸಂಪತ್ತು ಹತ್ತುಪಟ್ಟು, ಸಾವಿರಪಟ್ಟು ಹೆಚ್ಚಾಗುತ್ತದೆ. ಈ ದೇವಾಲಯಗಳಿಂದ ನಮ್ಮ ಜನತೆಯ ಜೀವನ ಉತ್ತಮವಾಗಿಲ್ಲ ಎಂದು ತಿಳಿಯುವ ಅಗತ್ಯವಿದೆ. ಇವುಗಳಿಂದ ಜನಾಂಗ ದ್ವೇಷ ಹೆಚ್ಚಿ ಕೋಮು ಗಲಭೆಯಾಗುತ್ತಿದೆ. ಸಾಮೂಹಿಕ ಸಂಪತ್ತು ಆಸ್ತಿ ಪಾಸ್ತಿ ಹಾಳಾಗುತ್ತಿದೆ. ಆದ್ದರಿಂದ ಇಂತಹ ವಿನಾಶಕಾರಿ ಪ್ರವೃತ್ತಿಗಳನ್ನು ಬೆಳೆಸುವ, ಆರಾಧನಾ ಸ್ಥಳಗಳು ಅಸ್ತಿತ್ವಕ್ಕೆ ಬರದಂತೆ ನೋಡಿಕೊಳ್ಳುವುದು ಎಲ್ಲಾ ಮತಸ್ಥರ ಕರ್ತವ್ಯವಾಗಿದೆ.

ಚರಿತ್ರೆಯ ಕಾಲದಿಂದ ಇಲ್ಲಿಯವರೆಗೆ ದೇವಸ್ಥಾನಗಳಿಂದ ನಮ್ಮ ದೇಶಕ್ಕೆ ಆಗಿರುವ ಅನುಕೂಲಕ್ಕಿಂತ ಅನಾನುಕೂಲವೇ ಹೆಚ್ಚು. ನೂರಾರು ವರ್ಷಗಳ ಹಿಂದೆ, ಕೆಲವರು ಹೇಳುವಂತೆ, ಜನರು ಧಾರ್ಮಿಕರೂ ದೈವ

ನೀವು ಚಿನ್ನ ಅಥವಾ ಬೆಳ್ಳಿಯನ್ನು ಅಕ್ಕಸಾಲಿಗನ ಹತ್ತಿರ ತೆಗೆದು ಕೊಂಡು ಹೋಗಿ, ? 'ಇದು ಒಳ್ಳೆಯ ಚಿನ್ನ, ಅಪರಂಜಿ ಪೌನು' ಎಂದರೆ ಅವನು, 'ಕುಳಿತುಕೊಳ್ಳಿ, ನೋಡೋಣ' ಎನ್ನುತ್ತಾನೆ. ನಿಮ್ಮೆದುರೇ ನೀವು ಕೊಟ್ಟ ಚಿನ್ನ ಅಥವಾ ಬೆಳ್ಳಿಯನ್ನು ಒರೆ ಹಚ್ಚುತ್ತಾನೆ. ಸತ್ಯ ತಿಳಿಸಲು ಕರಗಿಸುತ್ತಾನೆ. ಆಗ ನೀವು ಮರು ಮಾತಾಡದೆ ಚಿನ್ನ ಅಥವಾ ಬೆಳ್ಳಿಯಲ್ಲಿ ಉಳಿದದ್ದನ್ನು ಅಥವಾ ಅದು ಚಿನ್ನವೇ, ಇಲ್ಲ ಬೆಳ್ಳಿಯೇ ಎಂದು ಅಂಗೀಕರಿಸುತ್ತೀರಿ. ಹೀಗೆ ಎಲ್ಲವನ್ನೂ ವಿಚಾರದ ಒಗ್ಗೆ ಹಚ್ಚುವುದೆ ವೈಚಾರಿಕತೆ. ಎಲ್ಲವನ್ನೂ ವಿಚಾರದ ಮೂಸೆಯಲ್ಲಿ ಕರಗಿಸಿ ನೋಡುವುದೇ ವೈಜ್ಞಾನಿಕತೆ.

ಇದೇ ಬಗೆಯಲ್ಲಿ ಬಾಳಿನ ಎಲ್ಲಾ ಅನಿಸಿಕೆಗಳನ್ನು ವಿಶೇಷವಾಗಿ ಧರ್ಮ ಮತ್ತು ದೇವರ ವಿಷಯಗಳನ್ನು ಭೇದಿಸಿ ನೋಡುವ ತರದ್ದೂ ಇದೆ. ವ್ಯಾಪಾರಿ ಕ್ಷೇತ್ರದಲ್ಲಿ ಎಷ್ಟು ಮೋಸ ಇದೆಯೋ ಅಷ್ಟೇ ಅಥವಾ ಅದಕ್ಕಿಂತಲೂ ಅಧಿಕ ವಂಚನೆ ಧರ್ಮ ಮತ್ತು ದೇವಾಲಯಗಳ ವಿಷಯದಲ್ಲಿ ತಾಂಡವವಾಡುತ್ತಿದೆ.

ನಗರ ಪ್ರದೇಶಗಳಲ್ಲಿ ಹೊಸ ಹೊಸ ಬಡಾವಣೆಗಳು ಬಂದಾಗ ಅಲ್ಲಿ ಬಹುಬೇಗ ದೇವಸ್ಥಾನಗಳು, ಚರ್ಚುಗಳು, ಮಸೀದಿಗಳು ಹುಟ್ಟಿಕೊಳ್ಳುತ್ತವೆ. ಬಡಾವಣೆಯನ್ನು ಉತ್ತಮಪಡಿಸುವುದಕ್ಕಿಂತ, ಜೀವನಾವಶ್ಯಕ ವಸ್ತುಗಳನ್ನು ದೊರಕಿಸಿಕೊಳ್ಳುವುದಕ್ಕಿಂತ, ಪರಿಸರವನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವುದಕ್ಕಿಂತ, ಶಾಲೆ ಆಸ್ಪತ್ರೆಗಳನ್ನು ಬರಮಾಡಿಕೊಳ್ಳುವುದಕ್ಕಿಂತ ದೇವರನ್ನು ಪ್ರತಿಷ್ಠಾಪಿಸುವುದು, ಅದಕ್ಕೊಂದು ಗರ್ಭಗುಡಿಯನ್ನು ಕಟ್ಟುವುದು ಎಲ್ಲಕ್ಕಿಂತ ಬಹಳ ಪ್ರಮುಖ ಕೆಲಸವಾಗಿಬಿಡುತ್ತದೆ. ಇತಿಹಾಸದ ಉದ್ದಕ್ಕೂ ಎಲ್ಲಾ ದೇಶಗಳಲ್ಲೂ ಧಾರ್ಮಿಕ ಸಂಸ್ಥೆಗಳನ್ನು

ಭಕ್ತಿ ಉಳ್ಳವರೂ ಆಗಿದ್ದಾಗ ನಮ್ಮ ರಾಷ್ಟ್ರದ ಮೇಲೆ ಅನೇಕ ಧಾಳಿಗಳಾಗಿವೆ. ಪ್ರಾಚೀನ ಯುಗದಿಂದ ಅರ್ವಾಚೀನ ಕಾಲದ ತನಕ ಭಾರತ ಇಪ್ಪತ್ತು ನಾಲ್ಕು ಬಾರಿ ಪರಕೀಯರ ಆಕ್ರಮಣಗಳಿಗೆ ತುತ್ತಾಗಿದೆ. ಲೆಕ್ಕವಿಲ್ಲದಷ್ಟು ಚಿನ್ನ ಬೆಳ್ಳಿ, ವಜ್ರ, ವೈಢೂರ್ಯಾದಿ ಅಪಾರ ಸಂಪತ್ತನ್ನು, ನಮ್ಮ ದೇವಾಲಯಗಳಿಂದ ಕೊಳ್ಳೆ ಹೊಡೆದು ಆನೆ, ಒಂಟೆ, ಕುದುರೆಗಳ ಮೇಲೆ ಮತ್ತು ರಥಗಳಲ್ಲಿ ಹೇರಿಕೊಂಡ ಹೋದ ಸಂಗತಿಯನ್ನು ಇತಿಹಾಸ ಗ್ರಂಥಗಳಲ್ಲಿ ಓದಿದಾಗ ಕರುಳು ಕತ್ತರಿಸಿದಂತಾಗುತ್ತದೆ.

ಆಗ ಜನರು ಪೂಜಿಸುತ್ತಿದ್ದ ದೇವರುಗಳು ತಮ್ಮ ಭಕ್ತರಿಗೆ ಏನು ಮಾಡಿದವು? ಇರಲಿ. ಚಿನ್ನ ಬೆಳ್ಳಿ ಮುಂತಾದ ಅಮೂಲ್ಯ ಲೋಹಗಳಲ್ಲಿ ತಯಾರಿಸಿದ್ದ ದೇವರ ವಿಗ್ರಹಗಳನ್ನು ಹೊತ್ತುಕೊಂಡು ಹೋಗಲು ಸಾಧ್ಯವಾಗದೆ ಇದ್ದಾಗ ಅವುಗಳನ್ನು ಮುರಿದು, ಕತ್ತರಿಸಿ ಸಣ್ಣ ಸಣ್ಣ ತುಂಡುಗಳನ್ನಾಗಿ ಮಾಡಿದಾಗ ಈ ದೇವರುಗಳು ಏನು ಮಾಡುತ್ತಿದ್ದವು? ತಮ್ಮನ್ನೇ ರಕ್ಷಿಸಿಕೊಳ್ಳಲಾಗದ ಈ ದುರ್ಬಲ ದೇವರು ತಮ್ಮ ಭಕ್ತಾದಿಗಳನ್ನು ಹೇಗೆ ಕಾಪಾಡಬಲ್ಲರು? ಇಂಥ ಭಯಂಕರ ಉದಾಹರಣೆಗಳ ಸತ್ಯ ಸಂಗತಿಗಳಿದ್ದರೂ ಜನತೆ ಈ ನಿಷ್ಪ್ರಯೋಜಕ ದೇವಾನುದೇವತೆಗಳಿಗೆ ಜೋತು ಬಿದ್ದಿರುವುದು ಅವರ ಅಜ್ಞಾನ, ಬೇಜವಾಬ್ದಾರಿ, ಅಸಹಾಯಕತೆ, ಅಶಕ್ತತೆಗೆ ಹಿಡಿದ ಭೂತಗನ್ನಡಿಯಾಗಿದೆ.

ಸ್ವಶಕ್ತಿ ಮತ್ತು ಸ್ವಸಾಮರ್ಥ್ಯವನ್ನು ಮರೆತು ಹಾಗೂ ಕಡೆಗಣಿಸಿ ದೇವರನ್ನು ನಂಬಿದ ಜನರು ಬಹಳವಾಗಿ ದುರ್ಬಲರಾಗಿದ್ದಾರೆ. ಅವರ ದುರ್ಬಲತೆಗೆ ಅವರು ಪೂಜಿಸುವ ದೇವರೇ ಕಾರಣರೆಂದು ಹೇಳಿದ್ದರೆ ಅವರು ಸಿಟ್ಟಾಗುತ್ತಾರೆ. ಸಿಟ್ಟನ್ನು ಒತ್ತಟ್ಟಿಗಿಟ್ಟು ಸತ್ಯವನ್ನು ತಿಳಿಯಬೇಕೆಂಬ ಸಾಮಾನ್ಯ ತಿಳಿವು ಅವರಿಗೆ ನಿಜಕ್ಕೂ ಶೋಚನೀಯವಾಗಿದೆ.

ಚಿಂತನೆ

ಮೂಢನಂಬಿಕೆ ಸಾರ್ವತ್ರಿಕವಾದುದು. ಅಲ್ಲಿ ಒಂದಲ್ಲ ಒಂದು ರೂಪದಲ್ಲಿ ಪ್ರತಿಯೊಂದು ಜನಾಂಗದಲ್ಲಿ ಪ್ರತಿಯೊಂದು ದೇಶದಲ್ಲಿ ನೆಲಸಿದೆ. ಮೂಢನಂಬಿಕೆಯನ್ನು ಹೋಗಲಾಡಿಸಲು ನಡೆಸಿದ ಪ್ರಯತ್ನಗಳು ಅನಂತರ ಮೂಢನಂಬಿಕೆಯಾಗಿ ಪರಿವರ್ತನೆಗೊಳ್ಳುವುದು ಇತಿಹಾಸದ ವ್ಯಂಗ್ಯವಾಗಿ ಕಾಣುತ್ತದೆ. ಹಾಗೆಂದು ಸುಮ್ಮನೆ ಕೂರುವಂತಿಲ್ಲ. ಮನುಷ್ಯನಿಗೆ ನಂಬಿಕೆ ಬೇಕು. ಬಾಳೂ ನಂಬಿಕೆಯ ಮೇಲೆ ನಿಂತಿದೆ. ಆದರೆ ನಂಬಿಕೆ ವಿಚಾರದ ಮೇಲೆ ಅವಲಂಬಿತವಾಗಿ ತಾತ್ವಿಕ ಶಕ್ತಿಯಾಗಿ ಮಾನವರಲ್ಲಿ ಮೂಡಬೇಕು. ಇದು ನಿರಂತರವಾಗಿ ನಡೆದಾಗ ಮೂಢನಂಬಿಕೆಗೆ ಅವಕಾಶ ಇರುವುದಿಲ್ಲ. ಇನ್ನೊಬ್ಬರು ನಂಬಿದ ವಿಷಯವನ್ನು, ನಡೆದ ಹಾದಿಯನ್ನು ಅಂಧಾಭಿಮಾನದಿಂದ ಅನುಸರಿಸಿದಾಗ, ಅದು ಮೌಢ್ಯವಾಗುತ್ತದೆ.

ಹಿಂದೂಗಳ ಯಾವುದೇ ದೊಡ್ಡ ದೇವಸ್ಥಾನಕ್ಕೆ ಹೋದರೂ ಅಲ್ಲಿನ ಎಲ್ಲಾ ಅರ್ಚನೆಗಳ ಪೂರ್ಣ ವಿವರ ಮತ್ತು ಅವುಗಳಿಗೆ ತಗಲುವ ಮಜೂರಿಯ ದರದ ಫಲಕವನ್ನು ತೂಗು ಹಾಕಿರುವುದು ಕಾಣುತ್ತದೆ. ಸಂತೇಪೇಟೆ ಅಥವಾ ಮಾರುಕಟ್ಟೆಯ ಅಂಗಡಿಗಳಿಗೆ ಹೋದರೆ ಅಲ್ಲಿ ಸಿಗುವ ಎಲ್ಲಾ ದಿನಸಿಗಳ, ಮಾರಾಟಕ್ಕಿರುವ ವಸ್ತುಗಳ ಕ್ರಮದ ಪಟ್ಟಿ ಇಟ್ಟಿರುವುದನ್ನು ನೋಡಬಹುದು. ನಮ್ಮ ದೇವಾಲಯಗಳಿಗೂ ಮಾರುಕಟ್ಟೆ ಅಂಗಡಿಗಳಿಗೂ ಏನಾದರೂ ವ್ಯತ್ಯಾಸ ಇದೆಯೆ? ಎರಡು ಕಡೆಯೂ ಮಾರಾಟ ನಡೆಯುತ್ತಿಲ್ಲವೆ? ೩೦-೧೧-೨೦೦೧ ರಂದು ನನಗೆ ಸಿಕ್ಕಿದ ಮಲೆ ಮಹದೇಶ್ವರ ಬೆಟ್ಟದಲ್ಲಿ ನಡೆಯುವ ಉತ್ಸವಾದಿಗಳ ದರದ ಪಟ್ಟಿ ಹೀಗಿದೆ: ಕೆಲವು ಮುಖ್ಯವಾದ ಅರ್ಚನೆಗಳನ್ನು ಇಲ್ಲಿ ಕೊಟ್ಟಿದೆ.

ಮಹಾರುದ್ರಾಭಿಷೇಕ	ರೂ. ೪೦೦೦-೦೦
ಅನ್ನ ಬ್ರಹ್ಮೋತ್ಸವ	ರೂ. ೧೦೦೦-೦೦
ಸಾಮ್ರಾಜ್ಯೋತ್ಸವ ಸೇವೆ	ರೂ. ೪೦೦೦-೦೦

ಶೃಂಗೇರಿಯ ದಕ್ಷಿಣಾಮ್ನಾಯ ಶಾರದಾಪೀಠ ದೇಗುಲದಲ್ಲಿ ನಡೆಯುವ ಅನೇಕ ಸೇವಾ ವಿವರಗಳಲ್ಲಿ ಕೆಲವು ಇವು (ದಿನಾಂಕ ೩.೩..೨೦೦೧ ರಲ್ಲಿ ನೋಡಿದಂತೆ).

ಅಕ್ಷರಾಭ್ಯಾಸ	ರೂ.೧೦೦-೦೦
ಸಪ್ತಶತಿ ಪಾರಾಯಣ	ರೂ.೧೫೦-೦೦
ಬೆಳ್ಳಿದಿಂಡಿ ಉತ್ಸವ	ರೂ. ೧೦೦೦-೦೦
ಲಕ್ಷಾರ್ಚನೆ	ರೂ. ೧೫೦೦-೦೦
ಶತರುದ್ರಾಭಿಷೇಕ	ರೂ. ೫೦೦೦-೦೦

ಇವುಗಳಲ್ಲದೆ ರೂ. ೫೦,೮೦,೧೦೦ ರೂ.ಗಳ ಸೇವೆಗಳಿಗೆ ಲೆಕ್ಕವಿಲ್ಲ. ಇದು ದೇವಸ್ಥಾನಗಳಲ್ಲಿ ನಡೆಯುತ್ತಿರುವ ನಿರಂತರ ವ್ಯಾಪಾರ; ದೇವರು ಮತ್ತು ಧರ್ಮದ ಹೆಸರಿನಲ್ಲಿ ಸಾಗಿರುವ ಹಗಲು ದರೋಡೆ. ಮಾರುಕಟ್ಟೆಗಳಲ್ಲಿ ಅಂಗಡಿಗಳಲ್ಲಿ ಹಾಕಿರುವ ದರಪಟ್ಟಿಗೂ ಇದಕ್ಕೂ ಏನು ವ್ಯತ್ಯಾಸ? ಎರಡೂ ಒಂದೇ! ವ್ಯಾಪಾರ ಕೊಳಕು ವ್ಯಾಪಾರ! ಅತ್ಯಂತ ಪರಿಶುದ್ಧ ಜೀವನ ನಡೆಸಿ ಪೂಜ್ಯರಾಗಿರುವ ಶ್ರೀರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಶ್ರೀ ಅರವಿಂದ, ಶ್ರೀ ರಮಣ ಮಹರ್ಷಿ ಮುಂತಾದವರ ಜೀವನ ಮತ್ತು ಉಪದೇಶಗಳನ್ನು ಎಚ್ಚರಿಕೆಯಿಂದ ಅಧ್ಯಯನ ಮಾಡಿದರೆ, ನಮ್ಮ ದೇವಾಲಯಗಳಲ್ಲಿ ಪರಿಪಾಟಲಾಗಿರುವ ಪದ್ಧತಿಗೆ ಅವಕಾಶವಿಲ್ಲ ಎಂದು ತಿಳಿಯುತ್ತದೆ.

ಅಲ್ಲದೆ ಈ ಪುರೋಹಿತ ಪ್ರವೃತ್ತಿಗೆ ಪಾರಮಾರ್ಥ ಪ್ರಾಪ್ತಿ ಆಗುವುದಿಲ್ಲವೆಂದು ಅರಿವಾಗುತ್ತದೆ. ದುಡ್ಡಿನಿಂದ ದೇವರು ಧರ್ಮವನ್ನು ಕೊಂಡುಕೊಳ್ಳಲು ಖಂಡಿತ ಸಾಧ್ಯವಿಲ್ಲ. ಅನ್ಯಾಯ, ಅಧರ್ಮ, ಮೋಸದಿಂದ ಅಪಾರ ಹಣ ಸಂಪಾದಿಸಿದವರು ತಾವು ಮಾಡಿದ ಅಪರಾಧಕ್ಕೆ ಹೆದರಿ, ಮನಃ ಶಾಂತಿಗಾಗಿ ಈ ಬಗೆಯ ಅರ್ಚನೆಗಳಿಗೆ ಹಣ ಸುರಿದು ತಾವು ಧರ್ಮಾತ್ಮರೆಂದು ನಟಿಸುತ್ತಾರೆ, ಕರೆಯಿಸಿಕೊಳ್ಳುತ್ತಾರೆ. ಪಾಪಕ್ಕೆ ಪ್ರಾಯಶ್ಚಿತ್ತ ಪಶ್ಚಾತ್ತಾಪ. ಜೀವನದಿಂದ, ಪರೋಪಕಾರದಿಂದ ಪರಮ ಪದವಿ ಲಭಿಸುತ್ತದೆಂದು ಮಹಾತ್ಮರ ನಡೆ ನುಡಿಯಿಂದ ಗೊತ್ತಾಗುತ್ತದೆ. ದೇವಾಲಯ ಅಂದರೆ ದೇವರು ಮತ್ತು ಧರ್ಮ 'ಲಯ' (ನಾಶ) ವಾಗಿರುವ ಜಾಗ ಎಂದು ಅರ್ಥ.



ಹಿಂದೂಗಳ ಯಾವುದೇ ದೊಡ್ಡ ದೇವಸ್ಥಾನಕ್ಕೆ ಹೋದರೂ ಅಲ್ಲಿನ ಎಲ್ಲಾ ಅರ್ಚನೆಗಳ ಪೂರ್ಣ ವಿವರ ಮತ್ತು ಅವುಗಳಿಗೆ ತಗಲುವ ಮಜೂರಿಯ ದರದ ಫಲಕವನ್ನು ತೂಗು ಹಾಕಿರುವುದು ಕಾಣುತ್ತದೆ. ಸಂತೇಪೇಟೆ ಅಥವಾ ಮಾರುಕಟ್ಟೆಯ ಅಂಗಡಿಗಳಿಗೆ ಹೋದರೆ ಅಲ್ಲಿ ಸಿಗುವ ಎಲ್ಲಾ ದಿನಸಿಗಳ, ಮಾರಾಟಕ್ಕಿರುವ ವಸ್ತುಗಳ ಕ್ರಮಪಟ್ಟಿ ಇಟ್ಟಿರುವುದನ್ನು ನೋಡಬಹುದು. ನಮ್ಮ ದೇವಾಲಯಗಳಿಗೂ ಮಾರುಕಟ್ಟೆ ಅಂಗಡಿಗಳಿಗೂ ಏನಾದರೂ ವ್ಯತ್ಯಾಸ ಇದೆಯೆ? ಎರಡು ಕಡೆಯೂ ಮಾರಾಟ ನಡೆಯುತ್ತಿಲ್ಲವೆ?

ಪಂಚಭೂತಗಳಿಗೆ ಪ್ರಚಾರವಿಲ್ಲ, ಅವು ಪ್ರಚಾರ ಬಯಸುವುದಿಲ್ಲ. ಅವುಗಳ ಉಪಯುಕ್ತತೆಯೇ ಅವುಗಳ ಇರುವಿಕೆಯನ್ನು ಸ್ಥಿರ ಪಡಿಸುತ್ತದೆ. ಪಂಚಭೂತಗಳಿಲ್ಲದಿದ್ದರೆ ಲೋಕವಿಲ್ಲ, ಜೀವಗಳಿಲ್ಲ, ಏನೊಂದೂ ಇಲ್ಲ. ಇಲ್ಲದಿರುವ ವಸ್ತುಗಳ ಬಗ್ಗೆ ಪ್ರಚಾರ ಜಾಸ್ತಿ. ಅಂಥವುಗಳಲ್ಲಿ ದೇವರೂ ಒಂದು. ಈ ಸಂಬಂಧವಾಗಿ ಒಂದು ಜನಪದ ಕತೆ ನೆನಪಾಗುತ್ತದೆ.

ರಾಜ ತನ್ನ ರಾಜ್ಯದ ಸ್ಥಿತಿಗತಿಯನ್ನು ನೋಡಲು ವೇಷ ಮರೆಸಿಕೊಂಡು ಹೊರಟ. ಜನರ ಸುಖ ದುಃಖ, ಮಳೆ ಬೆಳೆಗಳ ಸುಭಿಕ್ಷವನ್ನು ಕಾಣುವುದು ಅವನ ಉದ್ದಿಶ್ಯ. ಕುದುರೆ ಏರಿ ಸುತ್ತಾಡಿಕೊಂಡು ಬರುವಾಗ ನೀರು ಕುಡಿಯಲು ಒಂದು ಕೆರೆಯ ಬಳಿ ಬಂದ. ಅಲ್ಲಿ ಮೂವರು ಪಡ್ಡೆ ಹುಡುಗಿಯರು ಪಾತ್ರ ತೊಳೆಯುತ್ತ ಬಟ್ಟೆ ಒಗೆಯುತ್ತ ಮಾತನಾಡಿಕೊಳ್ಳುತ್ತಿದ್ದರು ಒಬ್ಬ ಹುಡುಗಿ ಇನ್ನೊಬ್ಬಳನ್ನು 'ಯಾವುದೇ ಬಹಳ ರುಚಿ?' ಎಂದು ಕೇಳಿದಳು. ಅದಕ್ಕೆ ಅವಳು 'ಕನ್ನಗೋಳಿ ಎಸರು ಬಹಳ ರುಚಿ' ಎಂದು ಉತ್ತರಿಸಿದಳು. ಇನ್ನೊಬ್ಬ ಹುಡುಗಿ, 'ಇಲ್ಲಕನ ಬುಡಮ್ಮಿ, ಮಳ್ಳಿಕುನ್ನೆಸರು ತುಂಬಾ ರುಚಿ' ಎಂದಳು. ಅದಕ್ಕೆ ಮೊದಲನೆಯ ಹುಡುಗಿ, 'ನೀವಿಬ್ಬರೂ ಹೇಳಿದ್ದು ತಪ್ಪು ಕಣಮ್ಮಿ, ಸುಳ್ಳೇ ರುಚಿ' ಎಂದು ನಗೆ ಬೀರಿದಳು.

ಇವನ್ನು ಕೇಳಿದ ರಾಜನಿಗೆ ಅತ್ಯಾಶ್ಚರ್ಯವಾಯಿತು. ಅವನ ಆಸ್ಥಾನದಲ್ಲಿದ್ದ ಮಹಾ ಮಹಾ ವಿದ್ವಾಂಸರೂ ಇಂಥ ಮಾತನ್ನು ಆಡಿರಲಿಲ್ಲ. ರಾಜನಿಗೆ ಕುತೂಹಲ ನೂರ್ಮಡಿಯಾಯಿತು. ಹೇಗೆ ಸುಳ್ಳೇ ರುಚಿ? ಎಂದು ಅರಿಯಲು ಅವನ ಆಸಕ್ತಿ ಧಿಗ್ಗನೆ ಹತ್ತಿಕೊಂಡಿತು. ನಾಡಾಡಿಯಂತೆ ಕಾಣುತ್ತಿದ್ದ ದೊರೆ ಆ ಹುಡುಗಿಯರ ಹತ್ತಿರ ಹೋಗಿ, 'ಸುಳ್ಳೆ ರುಚಿ, ಅಂದ್ಯಲ್ಲ ಮಗ, ಹೆಂಗವ್ವ?' ಎಂದು ಕೇಳಿದನು. ಅದಕ್ಕೆ ಆ ಘಟಿಂಗ ಹೆಣ್ಣು 'ಅದಿರ್ಲಿ, ನಿನ್ನ ಮ್ಯಾಗೆ ನಂಗೆ ಒಂದು ಇಷ್ಯ ಗೊತ್ತಿದೆ. ನೀನು ನಿಮ್ಮಪ್ಪನಿಗೆ ಹುಟ್ಟಿಲ್ಲ!' ಎಂದು ಬಿಡುವುದೇ? ರಾಜನಿಗೆ ಸಿಟ್ಟು ಕಾಲಿನ ಬುಡದಿಂದ ನೆತ್ತಿಯವರೆಗೆ ಏರಿತು. 'ಏಯ್! ಏನಂದೆ? ನಿನ್ನನ್ನ ಕತ್ತರಿಸಿ ಹಾಕ್‌ಬುಡ್ತೀನಿ' ಎಂದು ಕತ್ತಿಯನ್ನು ಸರಕ್ಕನೆ ಎಳೆದ.

'ನನ್ನ್ಯಾಕೆ ಕತ್ತರಿಸಿ. ಹೋಗಿ ನಿಮ್ಮವ್ವನ ಕತ್ತರಿಸು ' ಎಂದಳು ಆ ತುಂಟಿ, ಅಪ್ರತಿಭಳಾಗದೆ. ಅವಮಾನಿತನಾದ ರಾಜ ಅರಮನೆಗೆ ದೌಡಾಯಿಸಿ ಬಂದು ತನ್ನ ನೋವನ್ನು ಹೇಳಿಕೊಂಡು ರಾಜಮಾತೆಯನ್ನು ಕತ್ತರಿಸಲು ಖಡ್ಗ ಝಳಪಿಸಿ ಮುಂದಾದ. ಅವನ ತಾಯಿ ಮಹಾ ಪ್ರಜ್ಞೆ. ವಿಷಯವನ್ನೆಲ್ಲ ತಿಳಿದುಕೊಂಡು ಇದರಲ್ಲಿ ಏನೋ ಮರ್ಮ ಇದೆ ಎಂದು ಆ ಹುಡುಗಿಯನ್ನು ಕರೆ ತರಲು ಆ ಹಳ್ಳಿಗೆ ಭಟರನ್ನು ಅಟ್ಟಿದಳು. ಅವರು ಆಕೆಯನ್ನು ಹುಡುಕಿ ಕರೆತಂದರು.

ಆ ಹುಡುಗಿ ಹೇಳಿದಳು: 'ನಾನು ಬರೀ ಸುಳ್ಳು ಹೇಳಿದೆ. ನೀವು ಅದನ್ನೇ ನಿಜ ಅಂತ ನಂಬಿಕೊಂಡು ನಿಮ್ಮ ತಾಯಿಯವರನ್ನು ಕಡಿಯಲು ಹೋದಿರಿ. ಈಗ ಹೇಳಿ, ಸುಳ್ಳೇ ರುಚಿ, ಅಲ್ಲವೆ?' ಎಲ್ಲರೂ ಗೊಳ್ಳೆಂದು ನಕ್ಕರು. ಈ ಕತೆ ನಗು ಉಕ್ಕಿಸಿದರೂ ಇದರಲ್ಲಿ ಗಾಢವಾದ ಅರ್ಥವಿದೆ. ಪ್ರಪಂಚ ಎಷ್ಟೆಷ್ಟೋ ಸುಳ್ಳು ವಿಷಯಗಳನ್ನೇ ಸತ್ಯವೆಂದು ನಂಬಿಕೊಂಡು ಮಾರಾಮಾರಿ ಹೊಡೆದಾಡುತ್ತಿದೆ. ಸುಳ್ಳು ಸಂಗತಿಗಳು ಲೋಕ ಕಂಟಕವಾಗಿವೆ. ಇಲ್ಲದ ದೇವರ ಬಗ್ಗೆ ಮಾನವ ಜನಾಂಗಗಳು ನಂಬಿಕೆ ಇಟ್ಟುಕೊಂಡು 'ನಮ್ಮ ದೇವರು ಹೆಚ್ಚು ನಮ್ಮ ದೇವರು ಹೆಚ್ಚು' ಎಂದು ಕಚ್ಚಾಡುತ್ತಿವೆ. ಇದಕ್ಕೆ ಸರಿಯಾದ ಮದ್ದೆಂದರೆ ಸರಿಯಾದ ಅರಿವು. ಸರಿಯಾದ ಅರಿವು ಸುಳ್ಳುಗಳ ಸಮೂಹವನ್ನು ಸಂಹಾರ ಮಾಡಿಬಿಡುತ್ತದೆ.

ಜರ್ಮನಿಯ ರಾಕ್ಷಸ ಹಿಟ್ಲರ್‌ನ (೧೮೮೯-೧೯೪೫) ಹತ್ತಿರ ಗೋಬಲ್ಸ್ ಎಂಬ ಮಂತ್ರಿ ಇದ್ದ. ಅವನದು ಪ್ರಚಾರ ಖಾತೆ. ಅವನು ಹೇಳುತ್ತಿದ್ದುದು ಪ್ರಖ್ಯಾತವಾಗಿದೆ; 'ನಿರಂತರ ಪ್ರಚಾರದಿಂದ ಸ್ವರ್ಗವನ್ನು ನರಕ ಎಂದೂ, ನರಕವನ್ನು ಸ್ವರ್ಗ ಎಂದೂ ಜನರಿಗೆ ನಂಬಿಸಬಹುದು'. ವ್ಯಾಪಾರಿಗಳು ಮತ್ತು ಉದ್ಯಮಿಗಳು ಒಂದೇ ಸಮನೆ ತಮ್ಮ ಸರಕು ಒಳ್ಳೆಯದು,

ಅತ್ಯುತ್ತಮವಾದುದು ಎಂದು ಪ್ರಚಾರ ಮಾಡುತ್ತಾರೆ. ಆಧುನಿಕ ಜಗತ್ತು ಜಾಹೀರಾತಿನ ಜಗತ್ತು. ವ್ಯಾಪಾರ ಮಾಡಿ ಲಾಭ ಕಮಾಯಿಸಲು ನಿಂತ ಅವರಿಗೂ ದೇವರು ಧರ್ಮ ಸ್ವರ್ಗ ನರಕ, ಮೋಕ್ಷಗಳ ಬಗ್ಗೆ ಮಾತಾನಾಡುವವರಿಗೂ ಏನೂ ವ್ಯತ್ಯಾಸವಿಲ್ಲ 'ವ್ಯಾಪಾರಂ ದ್ರೋಹ ಚಿಂತನಂ'. ವ್ಯಾಪಾರ ಎಂದರೆ ವಂಚನೆ. ದೇವರು ಧರ್ಮದ ಸುತ್ತ ಹರಡಿಕೊಳ್ಳುವ ಈ ಜಾಲ ಅಪಾಯಕಾರಿಯಾದುದು.

ಗಣಪತಿ ಹಬ್ಬವನ್ನು ಉಪಯೋಗಿಸಿಕೊಂಡು ರಾಷ್ಟ್ರೀಯತೆಯನ್ನು ಹರಡಲು ಸಾಧ್ಯ ಎಂದು ಮನಗಂಡು ಅದನ್ನು ಒಂದು ರಾಷ್ಟ್ರೀಯ ಉತ್ಸವವನ್ನಾಗಿ ಬಾಲಗಂಗಾಧರ ತಿಲಕ್ ಮಾಡಿದರು. ಆದರೆ ಗಣಪತಿ ಹಬ್ಬ ಮುಂದೆ ದೊಡ್ಡ ದಂಧೆ ಆಗಬಹುದೆಂದು ಅವರು ಊಹಿಸದವರಾದರು. ಉದ್ದೇಶ ಉತ್ತಮವಿದ್ದ ಕೂಡಲೇ ಪರಿಣಾಮ ಪರಮೋಚ್ಚವಿರುತ್ತದೆಂದು ಹೇಳಲು ಬರುವುದಿಲ್ಲ.

ಬರುಬರುತ್ತ ಗಣಪತಿ ಹಬ್ಬ ಹಿಂದೂಗಳಲ್ಲಿ ಹರಡಿಕೊಂಡಿದ್ದು ಈಗ ಅದು ಹಳ್ಳಿ ಹಳ್ಳಿಗೂ ವ್ಯಾಪಿಸಿದೆ. ಎಲ್ಲ ಕಡೆ ಜನರನ್ನು ಅಮರಿಕೊಳ್ಳುತ್ತಿದೆ.

ಸಧ್ಯದಲ್ಲಿ ಭಾರತದ ಜನಸಂಖ್ಯೆ ೧೦೨ ಕೋಟಿಯನ್ನು ದಾಟುತ್ತಿದೆ. ಇವರಲ್ಲಿ ಹಿಂದೂಗಳೆನ್ನಿಸಿಕೊಂಡವರು ಜನ ಸಂಖ್ಯೆ ಸುಮಾರು ಮುಕ್ಕಾಲು ಭಾಗ ಇರಬಹುದು. ಈ ಸಮುದಾಯದಲ್ಲಿ ಸುಮಾರು ಅರ್ಧಕ್ಕಿಂತ ಹೆಚ್ಚು ಮಂದಿ ಗಣೇಶನ ಚತುರ್ಥಿಯ ಸಂದರ್ಭದಲ್ಲಿ ತಮ್ಮ ತಮ್ಮ ಮನೆಗಳಲ್ಲಿ ಅವನ ಮಣ್ಣಿನ ಮೂರ್ತಿಯನ್ನು ಇಟ್ಟು ಪೂಜಿಸುವ ಪರಿಪಾಠ ಮಾಡಿಕೊಂಡವರು ಇದ್ದಾರೆ. ಗಣಪತಿಯ ಮಣ್ಣಿನ ಮೂರ್ತಿಗಳು ಸುಮಾರು ೨೦-೪೦ ಕೋಟಿ ಖರ್ಚಾಗುತ್ತವೆಂದು ಭಾವಿಸೋಣ. ಇವುಗಳಲ್ಲಿ ಒಂದೊಂದಕ್ಕೂ, ಅವುಗಳ ಆಕಾರ, ಗಾತ್ರ, ಎತ್ತರ, ಅಲಂಕಾರಕ್ಕೆ ತಕ್ಕಂತೆ ಸುಮಾರು ೧೦೦-೧೫೦ ರೂ.ಗಳಿಂದ ಹಿಡಿದು ಸಾವಿರ, ಐದು ಸಾವಿರ, ಹತ್ತು ಸಾವಿರ, ಇಪ್ಪತ್ತು ಸಾವಿರ ರೂಪಾಯಿ ಇತ್ಯಾದಿ ಬೆಲೆ ಬಾಳುವ ಗಣೇಶನ ಮೂರ್ತಿಗಳು ಮಾರಾಟವಾಗುತ್ತವೆ ಎಂದು ಇಟ್ಟುಕೊಳ್ಳೋಣ.

ಇದಕ್ಕಾಗಿ ಸುಮಾರು ೪೦೦-೫೦೦ ಸಾವಿರ ಕೋಟಿ ರೂಪಾಯಿಗಳನ್ನು ನಮ್ಮ ಜನರು ಪ್ರತಿ ವರ್ಷ ಖರ್ಚು ಮಾಡುತ್ತಾರೆನ್ನಬಹುದು. ಈ ಮಣ್ಣಿನ ಮೂರ್ತಿಗಳು ಎಷ್ಟು ದಿನ ಅವರ ಮನೆಯಲ್ಲಿ ಇರುತ್ತವೆ? ಒಂದು ದಿನ, ಹೆಚ್ಚು ಅಂದರೆ ಮೂರು ದಿವಸ ಮಾತ್ರ. ಇಂಥ ಒಂದು ಸಂಭ್ರಮಕ್ಕಾಗಿ ದೇಶದ ಜನತೆ ಇಷ್ಟೊಂದು ಕೋಟಿ ರೂಪಾಯಿಗಳನ್ನು ಪೋಲು ಮಾಡುವುದು ಸರಿಯೇ? ಎಂದು ವಿವೇಚಿಸುವ ಅಗತ್ಯವಿದೆ. ಪ್ರತಿ ವರ್ಷ ವಿಗ್ರಹಗಳ ಬೆಲೆ ಏರುವುದರಿಂದ ಈ ದುಂದು ವೆಚ್ಚ ವರ್ಷೇ ವರ್ಷೇ ಹೆಚ್ಚಾಗುತ್ತಾ ಹೋಗುವುದನ್ನು ಗಮನಿಸಬೇಕು. ಇದೆಲ್ಲ ವೃಥಾ ದಂಡದ ಖರ್ಚು.

ಹಿಂದೂಗಳಲ್ಲಿ ಬಹಳ ಮಂದಿ ಬಡವರಾಗಿರುವುದರಿಂದ ಅವರ ಬಡತನಕ್ಕೆ ಈ ವಿವೇಕ ಹೀನ ವೆಚ್ಚದ ದೇವರುಗಳೇ ಕಾರಣ ಎಂದರೆ ಹುಸಿ ಭಕ್ತರು ಸಿಟ್ಟಾಗುವುದು ಸಹಜ. ಈ ನಾಮಕಾವಸ್ತೆ ಭಕ್ತರು ಮಣ್ಣಿನ ಗಣಪತಿಯ ಮೇಲಿನ ತಮ್ಮ ಪ್ರೀತಿಯನ್ನು ಉಸಿರಾಡುವ ಮಣ್ಣಿನ ಮಕ್ಕಳು ಮತ್ತು ಗರೀಬರ ಮೇಲೆ ತೋರಿಸಿದರೆ ಅವರ ಭಕ್ತಿಗೆ ಶಕ್ತಿ ಬರುತ್ತದೆ. ತಮ್ಮ ತಪ್ಪು ಕಲ್ಪನೆಯ ದೇವರು ಮತ್ತು ಧರ್ಮವನ್ನು ಅವರು ತಿದ್ದಿಕೊಳ್ಳಲು ಸಾಧ್ಯವಾಗುತ್ತದೆ. ಶ್ರೀ ವಿವೇಕಾನಂದ ಮಹಾಸ್ವಾಮಿಗಳು ಹೇಳಿದಂತೆ, ಪಾಪಿಗಳು ದರಿದ್ರರು ('ಪಾಪಿ ದೇವೋಭವ; ದರಿದ್ರ "ದಲಿತ ದೇವೋ ಭವ') ಎನ್ನಬಹುದು. ನಮ್ಮ ದೇವರಾಗಬೇಕು ಜೊತೆಗೆ ಆಗ ನಮ್ಮ ಹೃದಯ ಅವರ ಬಗ್ಗೆ ಆರ್ದ್ರವಾಗುತ್ತದೆ. ಒಡ ಹುಟ್ಟಿದ ಅಣ್ಣ ತಮ್ಮಂದಿರು, ಅಕ್ಕ ತಂಗಿಯರು ಹೀನ ಸ್ಥಿತಿಯಲ್ಲಿ ಇದ್ದರೆ ಹೇಗೆ ನಾವು ಮಮ್ಮಲ ಮರುಗುತ್ತೇವೆಯೋ, ಅವರ ನೆರವಿಗೆ ಹೋಗುತ್ತೇವೆಯೋ ಹಾಗೆ ಈ ನತದೃಷ್ಟರ ಮೇಲಿನ ನಮ್ಮ ಪ್ರೀತಿ ಅರ್ಥವಂತಿಕೆಯನ್ನು ಪಡೆಯುತ್ತದೆ. ಮಾನವ ಭ್ರಾತೃತ್ವ ಆಚರಣೆಗೆ ಬರುತ್ತದೆ. ಸಹ ಮಾನವರನ್ನು ಪ್ರೀತಿಸುವುದು, ಅವರ ನೆರವಿಗೆ ಧಾವಿಸುವುದೆ ನಿಜವಾದ ಭಕ್ತಿ.

ದೇವರು ಮತ್ತು ಧರ್ಮದ ಹೆಸರಿನಲ್ಲಿ ಸಾಗಿರುವ ಹಗಲು ದರೋಡೆ. ಮಾರುಕಟ್ಟೆಗಳಲ್ಲಿ ಅಂಗಡಿಗಳಲ್ಲಿ ಹಾಕಿರುವ ದರಪಟ್ಟಿಗೂ ಇದಕ್ಕೂ ಏನು ವ್ಯತ್ಯಾಸ? ಎರಡೂ ಒಂದೇ! ವ್ಯಾಪಾರ ಕೊಳಕು ವ್ಯಾಪಾರ! ಅತ್ಯಂತ ಪರಿಶುದ್ಧ ಜೀವನ ನಡೆಸಿ ಪೂಜ್ಯರಾಗಿರುವ ಶ್ರೀರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಶ್ರೀ ಅರವಿಂದ, ಶ್ರೀ ರಮಣ ಮಹರ್ಷಿ ಮುಂತಾದವರ ಜೀವನ ಮತ್ತು ಉಪದೇಶಗಳನ್ನು ಎಚ್ಚರಿಕೆಯಿಂದ ಅಧ್ಯಯನ ಮಾಡಿದರೆ, ನಮ್ಮ ದೇವಾಲಯಗಳಲ್ಲಿ ಪರಿಪಾಟಲಾಗಿರುವ ಪದ್ಧತಿಗೆ ಅವಕಾಶವಿಲ್ಲ ಎಂದು ತಿಳಿಯುತ್ತದೆ. ಅಲ್ಲದೆ ಈ ಪುರೋಹಿತ ಪ್ರವೃತ್ತಿಗೆ ಪಾರಮಾರ್ಥ ಪ್ರಾಪ್ತಿ ಆಗುವುದಿಲ್ಲವೆಂದು ಅರಿವಾಗುತ್ತದೆ. ದುಡ್ಡಿನಿಂದ ದೇವರು ಧರ್ಮವನ್ನು ಕೊಂಡುಕೊಳ್ಳಲು ಸಾಧ್ಯವಿಲ್ಲ.

ಆರ್ಥಿಕವಾಗಿ ಗಣೇಶನ ಹಬ್ಬ ರಾಷ್ಟ್ರಕ್ಕೆ ಕೋಟ್ಯಂತರ ರೂಪಾಯಿಗಳ ನಷ್ಟ ಉಂಟುಮಾಡುವುದಷ್ಟೇ ಅಲ್ಲದೆ ವಾಯುಮಾಲಿನ್ಯ, ಜಲಮಾಲಿನ್ಯಕಾರಿ ಆಘಾತಗಳನ್ನು ತರುತ್ತದೆ. ಒಂದೆರಡು ದಿನಗಳಲ್ಲಿ ಜನರು ತಾವು ಕೊಂಡು ತಂದು ಪೂಜಿಸಿದ ಮಣ್ಣಿನ ಗಣಪತಿಗಳನ್ನು ತಮ್ಮ ಹತ್ತಿರದ ಕೆರೆಗಳಲ್ಲಿ, ಹೊಂಡಗಳಲ್ಲಿ ಅಥವಾ ಹೊಳೆಗಳಲ್ಲಿ ವಿಸರ್ಜನೆ ಮಾಡುತ್ತಾರೆ. ಈ ಮಣ್ಣಿನ ಮೂರ್ತಿಗಳ ಜೊತೆ ಬಾಳೆಕಂಬ, ಹೂಮಾಲೆ ಎಲೆ ಇತ್ಯಾದಿಗಳನ್ನು ನೀರಿಗೆ ಬಿಡುತ್ತಾರೆ. ಇದರಿಂದ ನೀರು ವಿಪರೀತ ಕಲುಷಿತವಾಗುತ್ತದೆ. ಹೆಚ್ಚು ಕೊಳಕು ಮಾಡುವುದೇ ಅಧಿಕ ಧಾರ್ಮಿಕತೆ ಎಂದು ಜನರು ತಿಳಿದುಕೊಂಡಿರುವಂತಿದೆ! ಪ್ರತಿ ವರ್ಷ ಈ ಮೃತಿಕಾ ಮೂರ್ತಿಗಳನ್ನು ಕೆರೆ ಕಟ್ಟೆ ನದಿಗಳಿಗೆ ಬಿಡುವುದರಿಂದ ಅವುಗಳ ಆಳ ಕಡಿಮೆಯಾಗುತ್ತಿದೆ. ಹಿಂದೆಯಾದರೆ ನೀರು ಬತ್ತಿದಾಗ ರೈತರು ತಮ್ಮ ಊರಿನ ಕೆರೆಯಲ್ಲಿ ಗೋಡನ್ನು ಹೊಡೆಯುತ್ತಿದ್ದುದರಿಂದ ಕೆರೆಗಳ ಹೂಳೆತ್ತಿದಂತಾಗುತ್ತಿತ್ತು. ಅವುಗಳ ಆಳ ಹೆಚ್ಚುತ್ತಿತ್ತು.

ಆದರೆ ಈಚೆಗೆ ರಾಸಾಯನಿಕ ಗೊಬ್ಬರಗಳು ಬಂದು ಬಿಟ್ಟಿರುವುದರಿಂದ ಈ ಸಹಜ ಹೂಳೆತ್ತುವ ಕೆಲಸ ನಿಂತು ಹೋಗಿದೆ. ರಾಸಾಯನಿಕ ಗೊಬ್ಬರಗಳನ್ನು ಹಾಕುವುದರಿಂದ ಎರೆಹುಳುಗಳು ನಾಶವಾಗಿ ಮಣ್ಣು ಫಲವಂತಿಕೆ ಕಳೆದುಕೊಂಡು ಬರಡಾಗುತ್ತದೆ. ಇನ್ನೂ ಮುಖ್ಯವಾಗಿ ಗಮನಿಸಬೇಕಾದ ಅಂಶವಿದೆ. ಗಣೇಶನ ಮೂರ್ತಿಗಳಿಗೆ ಹಚ್ಚುವ ನಾನಾ ಬಣ್ಣಗಳು ಕರಗಿ ನೀರಿನಲ್ಲಿ ಬೆರತು ಹೋಗುತ್ತವೆ. ಆ ನೀರನ್ನು ಕುಡಿಯುವುದರಿಂದ ನಪುಂಕಸತ್ವ ಉಂಟಾಗುತ್ತದೆ ಎಂದು ವೈದ್ಯಕೀಯ ವರದಿ ಗಳು ಬಂದಿವೆ. ದೇವರು ಎಷ್ಟು ಅಪಾಯಕಾರಿ ನೋಡಿ. ಇನ್ನು ಹಬ್ಬದ ಸಂದರ್ಭದಲ್ಲಿ ಅಪಾರವಾಗಿ ಪಟಾಕಿ ಸಿಡಿಸುತ್ತಾರೆ. ಇದರಿಂದ ವಾಯು ಮಾಲಿನ್ಯ, ಶಬ್ದ ಮಾಲಿನ್ಯವಾಗುತ್ತದೆಂದು ತಿಳಿಯಬೇಕಾಗಿದೆ.

ಹಬ್ಬದ ಹೆಸರಿನಲ್ಲಿ ದೇವರ ಮೆರವಣಿಗೆ ಮತ್ತು ಆರಾಧನೆಯಲ್ಲಿ ಜನರು ಎಷ್ಟೊಂದು ಹಣವನ್ನು ದುರ್ವ್ಯಯ ಮಾಡುತ್ತಾರೆಂದು ತಣ್ಣಗೆ ಯೋಚಿಸುವುದು ಅತ್ಯಂತ ಜರೂರಾದ ಕರ್ತವ್ಯವಾಗಿದೆ.

ಹಬ್ಬಗಳು ಖರ್ಚು, ಮೌಢ್ಯ, ಬಡತನವನ್ನು ತರುವುದರ ಜೊತೆಗೆ ಕೋಮುಗಲಭೆಗಳನ್ನು ಹುಟ್ಟು ಹಾಕಿ ಜನ ಜೀವನವನ್ನು ಬಗ್ಗಡ ಮಾಡುತ್ತವೆ. ಮೊಹರಂ ಗಲಾಟೆಗಳು, ಗಣೇಶನ ಗದ್ದಲಗಳು ಒಂದೊಂದು ರೀತಿಯಲ್ಲಿ ಒಂದೊಂದು ತೆರನಾಗಿವೆ. ಒಂದು ಕೋಮಿನವರು ಇನ್ನೊಂದು ಕೋಮಿನವರ ಅಂಗಡಿ ಮುಂಗಟ್ಟುಗಳನ್ನು ಧ್ವಂಸ ಮಾಡುವುದು, ತಮ್ಮ ಊಹಿತ ವೈರಿಗಳ ಆಸ್ತಿಪಾಸ್ತಿಗಳನ್ನು ಸುಡುವುದು ಸಾಮಾನ್ಯ ಸಂಗತಿಯಾಗಿ ಬಿಟ್ಟಿದೆ. ಇವೆಲ್ಲ ಅಜ್ಞಾನ ಅಸೂಯೆಗಳಿಂದ ನಡೆಯುವ ಅನಾಗರಿಕ ಕೃತ್ಯಗಳಾಗಿವೆ. ಭಾರತೀಯರು ಇನ್ನೂ ಬರ್ಬರ ಸ್ಥಿತಿಯಲ್ಲೇ ಇದ್ದಾರೆ ಎಂಬುದನ್ನು ಈ ಕೃತ್ಯಗಳು ಜಗತ್ತಿಗೆ ಸಾರುತ್ತಿವೆ. ಇದು ನಮ್ಮ ದೇಶದ ಸಂಪತ್ತು. ಇವುಗಳನ್ನು ನಾಶಪಡಿಸಿದರೆ ನಮ್ಮ ರಾಷ್ಟ್ರೀಯ ಐಶ್ವರ್ಯಗಳನ್ನು ಹಾಳುಗೆಡವುತ್ತೇವೆಂದು ಜನರಿಗೆ ಅರಿವು ಮೂಡಿಸುವ ಅಗತ್ಯವಿದೆ. ಅರಿವನ್ನು ಉಪನ್ಯಾಸ ಚರ್ಚೆ ಪ್ರಚಾರ ಪ್ರಕಟಣೆಗಳ ಮೂಲಕ ತರಬೇಕಾಗಿದೆ.

ನಂಜನಗೂಡು, ತಿರುಪತಿ, ಧರ್ಮಸ್ಥಳ ಮುಂತಾದ ದೇವಸ್ಥಾನಗಳು ಮತ್ತು ಯಾತ್ರಾಸ್ಥಳಗಳಿಗೆ ಹೋಗುವ ಜನರು ತಮ್ಮ ತಲೆಯನ್ನು ಮುಡಿ ಕೊಡುವ ಪದ್ಧತಿ ಇಟ್ಟುಕೊಂಡಿದ್ದಾರೆ. ನಮ್ಮ ದೇವರುಗಳೆಲ್ಲ ತಲೆಯನ್ನೇ ಕೇಳುತ್ತಿವೆ. ಏಕೆ? ತಲೆ ಇದ್ದರೆ ಅಲ್ಲವೆ ತೊಂದರೆ? ಆದ್ದರಿಂದ ತಲೆ ತೆಗೆಯುವ ಕೆಲಸ ನಿರಂತರವಾಗಿ ನಮ್ಮ ಧಾರ್ಮಿಕ ವ್ಯವಸ್ಥೆಯಲ್ಲಿ ನಡೆಯುತ್ತಾ ಬಂದಿದೆ. ನಮ್ಮ ಜನರು ಸಹ ಕಿಲಾಡಿಗಳೆನ್ನಬೇಕಾಗಿದೆ. ಅವರು ನಮಗೆ ಬೇಡವಾದ ತಲೆಗೂದಲನ್ನು ಮಾತ್ರ ದಾನ ಕೊಡುತ್ತಿದ್ದಾರೆ! ಇದರಿಂದ ಅವರಿಗೆ ಯಾವ ಖರ್ಚೂ ಇಲ್ಲ! ತಲೆ ಬೋಳಿಸಿಕೊಳ್ಳುವುದು ವಿಚಾರ ಶಕ್ತಿಯನ್ನು ಬೋಳಿಸಿಕೊಳ್ಳುವುದಕ್ಕೆ ಸಂಕೇತವಾಗಿದೆ. ಇಂಥ ತೀರ್ಥ ಕ್ಷೇತ್ರಗಳಿಗೆ ಹೋಗಿ ಬರಲು ಸಾವಿರಾರು ರೂಗಳು ಖರ್ಚಾಗುತ್ತವೆ. ಅದಕ್ಕೆಲ್ಲ ಸಾಲ ಮಾಡುವವರ ಸಂಖ್ಯೆ ಅಪಾರವಾಗಿದೆ. ಇದಕ್ಕೆ ಬದಲಾಗಿ ಜನರು ತಾವು ಇರುವ ಕಡೆಯೆ ಇದ್ದುಕೊಂಡು ಒಳ್ಳೆಯ ಕೆಲಸ ಮಾಡಿದರೆ ಅವರಿಗೆ ಎಲ್ಲಾ ತೀರ್ಥ ಸ್ನಾನಾದಿಗಳ ಫಲ ದೊರೆ

ಯುತ್ತದೆ ಎಂಬ ಮನವರಿಕೆಯ ಧೈರ್ಯ ಬರಬೇಕು. ಅರಿವು ಎಲ್ಲಾ ಕಷ್ಟಕರ ಆದಾಯಗಳಿಗಿಂತ ಕಷ್ಟತರವಾದುದು.

ಗಣಪತಿಯ ಮಣ್ಣಿನ ಪ್ರತಿಮೆಗಳನ್ನು ಕೊಂಡು ತಂದು ಒಂದೆರಡು ದಿನಗಳಲ್ಲೆ ನೀರಿಗೆ ಬಿಡುವುದು , ಪಟಾಕಿಗಳನ್ನು ಎಗ್ಗ ಮುಗ್ಗಾ ಸುಡುವುದು, ಮೆರವಣಿಗೆ ಮಾಡುವುದು- ಮುಂತಾದ ಚಟುವಟಿಕೆಗಳಿಗಾಗಿ ಎಷ್ಟೊಂದು ಕೋಟಿ ರೂಪಾಯಿಗಳನ್ನು ನಾವು ವ್ಯರ್ಥ ಮಾಡುತ್ತಿದ್ದೇವೆಂದು ದೇಶದ ಜನತೆ ತೀವ್ರವಾಗಿ ಆಲೋಚಿಸಬೇಕಾಗಿದೆ. ಇದೇ ಕೋಟ್ಯಂತರ ಅಪಾರ ಹಣವನ್ನು ಅವರು ತಮ್ಮ ಸಮಾಜದ ಊರಿನ, ರಾಜ್ಯದ ರಾಷ್ಟ್ರದ ಶಾಲಾ ಕಾಲೇಜುಗಳನ್ನು ಕಟ್ಟಲು, ರಸ್ತೆಗಳನ್ನು ದುರಸ್ತಿ ಮಾಡಿಸಲು ಚರಂಡಿಗಳನ್ನು ಚೊಕ್ಕಟ ಮಾಡಲು, ಸಮುದ್ರಗಳಿಗೆ ಸುಮ್ಮನೆ ಹರಿದು ಹೋಗುವ ಹೊಳೆಗಳ ನೀರನ್ನು ಹಿಡಿದಿಡಲು, ಅಣೆಕಟ್ಟುಗಳನ್ನು ಜಲಾ ಶಯಗಳನ್ನು ನಿರ್ಮಿಸಲು ಇತ್ಯಾದಿ ರಚನಾತ್ಮಕ ಕೆಲಸ ಗಳಿಗೆ ಬಳಸಿದರೆ ಎಷ್ಟೊಂದು ಪ್ರಯೋಜನಕಾರಿ ಆಗುತ್ತ ದೆಂದು ಚಿಂತಿಸುವುದು ಒಳಿತು. ಪೋಲಾಗುವ ಹಣವನ್ನು ಸಂಗ್ರಹಿಸಿ ರಾಷ್ಟ್ರ ನಿರ್ಮಾಣ ಕಾರ್ಯಕ್ಕೆ ನೀಡುವುದರಿಂದ ನಮ್ಮ ರಾಷ್ಟ್ರ ವನ್ನು ನಾವು ಭವ್ಯ ರೀತಿಯಲ್ಲಿ ಕಟ್ಟಿದಂತೆ ಆಗುತ್ತದಲ್ಲವೆ?

ಆದರೆ ಮನುಷ್ಯ ಕೆಟ್ಟು ಸಹಿಸುತ್ತಾನೆಯೇ ಹೊರತು ಕೊಟ್ಟು ಸಹಿಸುವುದಿಲ್ಲ! ಎಲ್ಲವನ್ನೂ ಸರ್ಕಾರವೆ ಮಾಡಬೇಕು ಎಂದು ನಿರೀಕ್ಷಿಸುವುದು ಪ್ರಜ್ಞಾವಂತ ಜವಾಬ್ದಾರಿಯುತ ಪ್ರಜೆಗಳ ಧೋರಣೆಯಲ್ಲ. ಸರ್ಕಾರಕ್ಕೆ, ಪುರಸಭೆಗಳಿಗೆ, ನಗರಪಾಲಿಕೆ ಗಳಿಗೆ ಹಣ ಎಲ್ಲಿಂದ ಬರುತ್ತದೆ? ಜನರಿಂದ ಅಲ್ಲವೆ? ಆದ್ದರಿಂದ ಜನತೆಯೇ ಈ ಕೆಲಸಗಳನ್ನು ತಾವೇ ಮಾಡಿ ಕೊಳ್ಳುವುದನ್ನು ಕಲಿಯುವುದು ಅಗತ್ಯವಾಗಿದೆ. ಸ್ವಯಂ ಆಡಳಿತವೇ ಅತ್ಯುತ್ತಮ ಆರ್ಥಿಕ ಫಲಕಾರಿಯಾದ ಆಡಳಿತ. ಇದು ಪ್ರೌಢ ನಾಗರಿಕ ಸಮಾಜದ ಫಲಪ್ರದ ಆಳ್ವಿಕೆ. ಪ್ರಜಾಧಿಪತ್ಯ ಪರಮಾಧಿಕಾರ, ಪ್ರಾತಿನಿಧಿಕ ಪ್ರಜಾಪ್ರಭುತ್ವವಲ್ಲ.

ಮೌಢ್ಯ ಸರ್ವ ವ್ಯಾಪಕವಾಗಿ ಅಮರವೇನೋ ಎಂಬ ಭಾವನೆಯನ್ನು ತಂದುಕೊಡುತ್ತಿದೆ. ಇದಕ್ಕೆ ಚಲನಚಿತ್ರಗಳು ಪ್ರಮುಖವಾಗಿ ಕಾರಣವಾಗಿವೆ. ಏನೇನೋ ಮಹಾತ್ಮೆಗಳು, ಎಂಥೆಂಥವೋ ಪೂಜಾಫಲಗಳು, ಇನ್ನೇನೋ ದರ್ಶನಗಳು ಎಂಬ ಹೆಸರಿನಲ್ಲಿ ಜನರನ್ನು ರಂಜಿಸುವ ನೆಪದಲ್ಲಿ ಅವರನ್ನು ವ್ಯವಸ್ಥಿತವಾಗಿ ವಂಚಿಸಲಾಗುತ್ತಿದೆ. ಸಿನೆಮಾದಲ್ಲಿ ಬರುವ ನಾನಾ ಬಗೆಯ ಮನೋರಂಜನೆಗಳು, ರಾತ್ರಿಕೂಟಗಳು, ಕಾಮಕೇಳಿಗಳು. ಆಹ್ಲಾದವನ್ನುಂಟುಮಾಡುತ್ತ ಪ್ರೇಕ್ಷಕರ ಮನಸನ್ನು ಅಪಹರಿಸುತ್ತಿವೆ. ಇದು ಸರಿಯೇ ತಪ್ಪೇ ಎಂಬ ವಿವೇಚನೆ ಇಲ್ಲದ, ಮನಸ್ಸು ಬಲಿಯದ ಯುವ ಚೇತನಗಳು ಮೈಯನ್ನು ಚುಮುಚುಮುಗೊಳಿಸುವ ದೃಶ್ಯಾವಳಿಗಳಿಂದ ಪ್ರಭಾವಿತರಾಗುತ್ತಾರೆ. ಅವುಗಳನ್ನೆಲ್ಲ ಕಾರ್ಯರೂಪಕ್ಕೆ ಇಳಿಸುವ ರೋಚಕತೆಗೆ ತುತ್ತಾಗುತ್ತಾರೆ. ಸಿನೆಮಾ ಕುದಿಯುವ ಮಾಧ್ಯಮ; ಮನುಷ್ಯನ ಎಲ್ಲಾ ಇಂದ್ರಿಯಗಳಿಗೂ ಕೆಲಸ ಕೊಟ್ಟು ಅವನನ್ನು ಕುದಿಸುವ ಮಾಧ್ಯಮ ಅದು.

ಮೌಢ್ಯಗಳನ್ನು ಮಾರಾಟ ಮಾಡುವುದರಲ್ಲಿ ರಾಜಕಾರಣಿ ಗಳು ಮುಂಚೂಣಿಯಲ್ಲಿ ಇದ್ದಾರೆ. ಚುನಾವಣೆಗಳಲ್ಲಿ ಗೆಲ್ಲ ಬೇಕೆಂಬ ಮಹದಾಸೆಯಿಂದ ಮಾಡದ ಯಜ್ಞ ಯಾಗಗಳಿಲ್ಲ. ಒಂದೇ ಸ್ಥಾನಕ್ಕೆ ಸ್ಪರ್ಧಿಸಿದ ಬೇರೆ ಬೇರೆ ಪಕ್ಷಗಳಿಗೆ ಸೇರಿದ ನಾನಾ ಅಭ್ಯರ್ಥಿಗಳು, ಉಮೇದುವಾರರು ಒಂದೇ ದೇವರಿಗೆ ಬಗೆಬಗೆಯ ಪೂಜೆಗಳನ್ನು ಮಾಡಿಸುತ್ತಾರೆ. ಆದರೆ ಎಲ್ಲರೂ



ಕಲೆ: ಮೋಹನ್ ಕಲ್ಯಾಣ. ಎಲ್

ಹಬ್ಬಗಳು ಖರ್ಚು, ಮೌಢ್ಯ, ಬಡತನವನ್ನು ತರುವುದರ ಜೊತೆಗೆ ಕೋಮುಗಲಭೆಗಳನ್ನು ಹುಟ್ಟುಹಾಕಿ ಜನ ಜೀವನ ವನ್ನು ಬಗ್ಗಡ ಮಾಡುತ್ತವೆ. ಮೊಹರಂ ಗಲಾಟೆಗಳು, ಗಣೇಶನ ಗದ್ದಲಗಳು ಒಂದೊಂದು ರೀತಿಯಲ್ಲಿ ಒಂದೊಂದು ತೆರನಾಗಿವೆ. ಒಂದು ಕೋಮಿನವರು ಇನ್ನೊಂದು ಕೋಮಿನವರ ಅಂಗಡಿ ಮುಂಗಟ್ಟುಗಳನ್ನು ಧ್ವಂಸ ಮಾಡುವುದು, ತಮ್ಮ ಊಹಿತ ವೈರಿಗಳ ಆಸ್ತಿಪಾಸ್ತಿಗಳನ್ನು ಸುಡುವುದು ಸಾಮಾನ್ಯ ಸಂಗತಿಯಾಗಿ ಬಿಟ್ಟಿದೆ. ಇವೆಲ್ಲ ಅಜ್ಞಾನ ಅಸೂಯೆಗಳಿಂದ ನಡೆಯುವ ಅನಾಗರಿಕ ಕೃತ್ಯಗಳಾಗಿವೆ.

ಗೆಲ್ಲಲು ಸಾಧ್ಯವಿಲ್ಲ. ಏಕೆಂದರೆ ಇರುವುದು ಒಂದೇ ಸ್ಥಾನ, ಆಯ್ಕೆಯಾಗಬೇಕಾದ ಉಮೇದುವಾರ ಒಬ್ಬರೇ. ಆದ್ದರಿಂದ ಅವರೆಲ್ಲ ಬಡಪಾಯಿ ದೇವರಿಗೆ ವಿಧ ವಿಧ ಹಿಂಸೆ ಕೊಡುವುದು ಸರಿಯಲ್ಲ.

ಅದಕ್ಕಾಗಿ ಅವರು ಲಕ್ಷಾಂತರ ರೂಪಾಯಿ ನೀರಿನಂತೆ ಖರ್ಚುಮಾಡುತ್ತಾರೆ. ಆದರೂ ಅವರು ಭಯಂಕರವಾಗಿ ಸೋಲು ಅನುಭವಿಸುತ್ತಾರೆ. ಸಚಿವ ಪದವಿ, ಮುಖ್ಯಮಂತ್ರಿ ಅಥವಾ ಪ್ರಧಾನಮಂತ್ರಿ ಪದವಿಗಳನ್ನು ಕಳೆದುಕೊಳ್ಳುತ್ತಾರೆ. ಅಪಾರ ನಷ್ಟ ಅನುಭವಿಸುತ್ತಾರೆ. ಆದರೆ ಅವರುಗಳೆಲ್ಲ ತಮ್ಮ ಕೆಲಸಕ್ಕೆ ಬಾರದ ಯಜ್ಞಗಳ ಆಚರಣೆ ಮೇಲೆ ಹಾಕುವುದೆಲ್ಲ 'ತಮಗೆ ನಸೀಬಿಲ್ಲ, ದೈವೇಚ್ಛೆ ಹಾಗಿತ್ತು' ಎಂದು ಸಮಾಧಾನ ಪಟ್ಟುಕೊಳ್ಳುತ್ತಾರೆ.

ಇಂಥ ಕೆಟ್ಟ ಮಾದಕ ಸಂಪ್ರದಾಯಗಳಿಂದ ಜನರು ಪಾಠ ಕಲಿಯುತ್ತಿಲ್ಲ. ಜನ ಸಾಮಾನ್ಯರನ್ನು ರಾಜಕಾರಣಿಗಳು ಅಧೋಗತಿಗೆ ತಳ್ಳುತ್ತಿದ್ದಾರೆ ಮೂಢರಾದಷ್ಟೂ ಆಳುವವರು ಅವರ ಮೇಲೆ ಚೆನ್ನಾಗಿ ಕೂತು ಸವಾರಿ ಮಾಡುತ್ತಾರೆ.

ಜನರ ಅಜ್ಞಾನದ ದುರುಪಯೋಗ, ರಾಜಕಾರಣಿಗಳು, ಪೂಜಾರಿಗಳಿಗೆ ಮಾತ್ರ ಸೀಮಿತವಾಗಿಲ್ಲ. ಕಾನೂನಿನ ಕ್ಷೇತ್ರ ಗಳಲ್ಲಿ ಅದರ ಅಟ್ಟಹಾಸ ವಿಪರೀತವಾಗಿದೆ. ಜನರ ಅಜ್ಞಾನವೇ ಸುಲಿಗೆಕೋರರ ಬಂಡವಾಳ. ವಕೀಲರು ವಸೂಲಿಗಾರರು ಆದ್ದರಿಂದ ಅವರ ವಶವಾಗದಂತೆ ಬದುಕು ನಡೆಸಬೇಕು. ಕೇಸಿನಲ್ಲಿ 'ಗೆದ್ದವನು ಸೋತ ಸೋತವನು ಸತ್ತ'' ಎಂಬ ನಾಣ್ನುಡಿ ಅನುಭವ ಪ್ರಮಾಣವಾಗಿರುವುದನ್ನು ತಿಳಿಯುವುದು ಸೂಕ್ತ.

ನಟ ರಾಜ್‌ಕುಮಾರ್‌ನನ್ನು ಕಾಡುಗಳ್ಳ ವೀರಪ್ಪನ್ ತನ್ನ ಒತ್ತೆಯಾಳಾಗಿ ಇಟ್ಟುಕೊಂಡಿದ್ದ ಸಮಯದಲ್ಲಿ ಕನ್ನಡ ಚಲನ ಚಿತ್ರ ಕಲಾವಿದರ ಮೌಢ್ಯ ಬಹಿರಂಗವಾಯಿತು. ಅವರ ತಿಳುವಳಿಕೆಯ ಪರಮಾವಧಿ ಬಯಲಾಯಿತು. ಎಲ್ಲ ದೇಗುಲಗಳಲ್ಲಿ ಎಲ್ಲಾ ಬಗೆಯ ಪೂಜೆಗಳಾದವು. ಅರ್ಚನೆಗಳಾದವು. ಅಭಿಷೇಕಗಳಾದವು. ಕಲಾವಿದರು ಉರುಳು ಸೇವೆ ಮಾಡಿದರು. ಆದರೂ ರಾಜ್‌ಕುಮಾರ್ ಬಿಡುಗಡೆ ಆಗಲಿಲ್ಲ. ರಾಜ್‌ಕುಮಾರ್ ಅವರು ನಟಿಸಿರುವ ಅ ಸಂಖ್ಯಾತ ಚಿತ್ರಗಳಲ್ಲಿ ಭಕ್ತಿ ಪಾತ್ರವನ್ನು ಅನ್ಯಾದೃಶ್ಯವಾಗಿ ನಿರ್ವಹಿಸಿರುವುದನ್ನು ನೋಡಬಹುದು. ಅವರ ಭಕ್ತಿಗೆ ಮೆಚ್ಚಿ ದೇವರು ಪ್ರತ್ಯಕ್ಷ ವಾಗಿದ್ದಾನೆ. ಸತ್ತ ಮಗುವನ್ನು ಅವರ ಭಕ್ತಿ ಸಿನಿಮಾದಲ್ಲಿ ಬದುಕಿಸಿದೆ. ಹೀಗೆ ಏನೇನೋ ಪವಾಡಮಯ ಕೃತ್ಯಗಳು ಬೆಳ್ಳಿ ತೆರೆಯ ಮೇಲೆ ಬರುತ್ತವೆ. ಅವರ ಭಕ್ತಿ ನಿಜವಾಗಿದ್ದರೆ, ಅದಕ್ಕೆ ಶಕ್ತಿ ಇದ್ದರೆ, ಅವರ ಕತೆಗಳು ವಾಸ್ತವಿಕವಾದರೆ ಅವರ ದೇವರು ಬಂದು ಅವರನ್ನು ವೀರಪ್ಪನ್‌ನಿಂದ ಬಿಡುಗಡೆ ಮಾಡಿಸ ಬೇಕಿತ್ತು. ಅಲ್ಲದೆ ಹೀಗೆಲ್ಲ ತೊಂದರೆ ಕೊಡದಂತೆ ವೀರ ಪ್ಪನ್‌ಗೆ ಆ ಸರ್ವಶಕ್ತ ದೇವರು ಇದ್ದರೆ, ಬುದ್ಧಿ ಕೊಡಬೇಕಾ ಗಿತ್ತು. ಈ ಅವಧಿಯಲ್ಲಿ ರಾಜ್‌ಕುಮಾರ್‌ನ ಭಕ್ತರೂ ಏನೇನೋ ಆರಾಧನೆಗಳನ್ನು ನೆರವೇರಿಸಿದರು. ಆದರೂ ರಾಜ್‌ಕುಮಾರ್ ಅವರನ್ನು ವೀರಪ್ಪನ್ ಬಿಡಲಿಲ್ಲ.

ಇದರಿಂದ ಮೂಢನಂಬಿಕೆಗಳಿಂದ ಮೂಢಾಚಾರಗಳಿಂದ ಏನೂ ಆಗುವುದಿಲ್ಲ ಎಂದು ಖಚಿತವಾಯಿತು. ನಮ್ಮ ನಟನಟಿಯರಿಗೆ ವಸ್ತು ಸ್ಥಿತಿ ಏನೂ ಗೊತ್ತಿಲ್ಲ. ಅವರು ಯಾರೋ ಬರೆದುಕೊಟ್ಟದ್ದನ್ನು ಬಾಯಿ ಪಾಠ ಮಾಡಿ ಒಪ್ಪಿಸುವ ಅಭಿನಯಪಟುಗಳು. ದೇವರು ಧರ್ಮ, ಉತ್ಸವ, ಆರಾಧನೆ,

ಭಜನೆ ಮುಂತಾದವುಗಳಿಗೆ ಎಷ್ಟೊಂದು ಕಾಲಹರಣ, ಹಣ ಮತ್ತು ಶಕ್ತಿಗಳು ವ್ಯಯವಾಗುತ್ತವೆಂದು, ಇದೆಲ್ಲ ಮಾನವ ಗಂಟೆಗಳ ಅಪವ್ಯಯ ಎಂದು ತಿಳಿಯಬೇಕಾಗಿದೆ, ಮನುಷ್ಯರ ತಿಳಿವಳಿಕೆಗೆ ತಕ್ಕಂತೆ ಅವರ ಶಕ್ತಿ ಇರುತ್ತದೆ, ಅವರ ಬಾಳು ಸಾಗುತ್ತದೆ.

ಸತ್ತವರನ್ನು ಸುಟ್ಟು ಅವರ ಅಸ್ಥಿ ಮತ್ತು ಭಸ್ಮಗಳನ್ನು ಶ್ರೀರಂಗಪಟ್ಟಣದ ಪಶ್ಚಿಮವಾಹಿನಿಯಲ್ಲಿ ಹಾಗೂ ಇನ್ನಿತರ ನದಿಗಳಲ್ಲಿ ವಿಸರ್ಜನೆ ಮಾಡುವುದು ನಮ್ಮ ಜನರ ಹವ್ಯಾಸವಾಗಿದೆ. ಕಾಶಿಯಲ್ಲಿ ಗಂಗಾನದಿಯ ನೀರಿನಲ್ಲಿ ತೇಲುವ ಹೆಣಗಳ ರಾಶಿಯನ್ನು ನೋಡಬಹುದು ಇದರಿಂದ ನೀರು ಕೆಡುತ್ತದೆ. ಗಂಗಾ ನದಿಯ ನೀರು ಎಷ್ಟು ಕೊಳಕಾಗಿದೆ ಎಂದರೆ ಅದನ್ನು ಮುಟ್ಟುವುದಕ್ಕೂ ಅಸಹ್ಯವಾಗುತ್ತದೆ. ಅದರಲ್ಲಿ ಸ್ನಾನ ಮಾಡಿದರೆ ವಿವಿಧ ಬಗೆಯ ಚರ್ಮವ್ಯಾಧಿಗಳು ಅಂಟುತ್ತವೆಂಬುದರಲ್ಲಿ ಅನುಮಾನವಿಲ್ಲ. ಗಂಗಾನದಿಯ ನೀರಿಗಿಂತ ತಿಪ್ಪೆ ಅಥವಾ ಕಕ್ಕಸ್ಸು ಗುಂಡಿಯ ನೀರು ಎಷ್ಟೋ ಪಾಲು ಶುದ್ಧವಾಗಿದೆ ಎಂದು ಹೇಳಲೇಬೇಕಾಗಿದೆ. 'ಪವಿತ್ರ' ಅಮರ ನದಿಯ ನೀರು ಅಷ್ಟೊಂದು ಕೆಟ್ಟು ಗಬ್ಬೆದ್ದು ಹೋಗಿದೆ. ಪವಿತ್ರವೆಂದು ಅದನ್ನು ಕುಡಿದರೆ, ಕುಡಿಸಿದರೆ ಆರೋಗ್ಯ ಕೆಡುವುದಂತೂ ನಿಶ್ಚಯ.

'ದಾಸನ ಮಾಡಿಕೊ' ಎಂದು ಹಾಡಿದರೆ
ಮಾಡಿಕೊಳ್ಳುವವರು ಸದಾ ಕಾಯು
ತ್ತಿರುತ್ತಾರೆ. ಅಗ ಅವರನ್ನು ಇವರನ್ನು ಬೈದು
ಏನೂ ಫಲವಿಲ್ಲ. ನಿಮ್ಮ ಬದುಕಿಗೆ
ನೀವೇ ಹೊಣೆಗಾರರು.
ಮೌಢ್ಯ ಕೆಸರು ; ವಿಚಾರ ಎಳನೀರು.

ಅವರಿಗೆ ಮೋಕ್ಷ ಸಿಗುತ್ತದೆಯೋ ಇಲ್ಲವೋ ಅನಿಶ್ಚಯ. ಅವರು ಪರಂಧಾಮವನ್ನೈದುವುದಂತೂ ಖಂಡಿತ. ಆದ್ದರಿಂದ ಅದು ಬಿತ್ತರಿಸುವ ಭಾವುಕತನ ಅತ್ಯಂತ ಮಾರಕವಾಗಿದೆ. ಮತ ಒಂದು ಅಂಟುರೋಗ. ಮತ ಲೋಕಮೈತ್ರಿಗೆ ವಿಷಕಾರಿಯಾಗಿದೆ. ಮತೀಯ ಭಾವನೆಗಳು ವಿಶ್ವಶಾಂತಿಯ ವಿನಾಶಕ್ಕೆ ಎಸೆದ ಬಾಂಬುಗಳು. ಹಾಗಾಗಿ ಮನುಷ್ಯ ಮತ, ಶಾಸ್ತ್ರಗ್ರಂಥಗಳನ್ನು ಅವಲಂಬಿಸದೆ ವಿಶ್ವತತ್ವಗಳ ಆಧಾರದ ಮೇಲೆ ತನ್ನ ಹೃದಯ ಮನಸ್ಸುಗಳನ್ನು ಬೆಳೆಸಿಕೊಳ್ಳುವ ಅಗತ್ಯವಿದೆ. ಮತೀಯ ಕೆಲಸಗಳಿಗೆ ಖರ್ಚು ಮಾಡುವ ಸಂಪತ್ತನ್ನು ಲೋಕದ ಹಿತಕ್ಕಾಗಿ, ಹಸುರನ್ನು ಬೆಳೆಸುವುದಕ್ಕಾಗಿ, ಪರಿಸರವನ್ನು ಸ್ವಚ್ಛಗೊಳಿಸಿ ಉತ್ತಮಪಡಿಸುವುದಕ್ಕಾಗಿ ಬಳಸಿದರೆ ಜಗತ್ತು ಹೆಚ್ಚು ಸುಂದರವಾಗುತ್ತದೆ. ಸೌಂದರ್ಯ ಸುಖಪ್ರದ. ಜನೋಪಯೋಗಿ ಕೆಲಸದಿಂದ ಪರೋಪಕಾರ ಜೀವನದಿಂದ ವ್ಯಕ್ತಿಗೆ ಸಾಯುಜ್ಯ ಲಭಿಸುತ್ತದೆ ಎನ್ನಬಹುದು. ಆದಕ್ಕೆ ಬದಲಾಗಿ ಅವರ ಬೂದಿ ಮೂಳೆಗಳನ್ನು ಹೊಳೆಗೆ ಬಿಡುವುದರಿಂದ ಅವರಿಗೆ ಮುಕ್ತಿ ಲಭಿಸುವುದಿಲ್ಲ. ಇದು ಮೌಢ್ಯದ ಪರಮಾವಧಿ ಅಷ್ಟೇ. ಇಪ್ಪತ್ತು ನಾಲ್ಕು ಗಂಟೆಗಳೂ ನೀರಿನಲ್ಲೆ ಇರುವ ಜಲಚರಾದಿಗಳೆಲ್ಲ ಮಾನವರಿಗಿಂತ ಮೊದಲೇ ಸ್ವರ್ಗಕ್ಕೆ ಹೋಗಬೇಕಾಗಿತ್ತು. ಎಂದ ಸ್ವಾಮಿ ವಿವೇಕಾನಂದರ ವಿವೇಕವಾಣಿ ಜನತೆಯ ಕಣ್ಣು ತೆರೆಸಬೇಕು. ಆದ್ದರಿಂದ ಜಲಮಾಲಿನ್ಯ ತಪ್ಪಿಸಲು ಸರ್ಕಾರ ಮುಂದಾಗಬೇಕು. ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡಿ ಗಲೀಜು ಮಾಡುವುದನ್ನು ತಪ್ಪಿಸಲು ಕರ್ನಾಟಕ ಸರ್ಕಾರ ಕಾಯ್ದೆ ಮಾಡಿದೆ.

ನದಿಗಳಿಗೆ ಹೆಣಗಳನ್ನು ಬಿಸಾಡುವುದು, ದಹನವಾಗದ ಅಸ್ಥಿಗಳನ್ನು ಬಿಡುವುದು, ದೇವರ ವಿಗ್ರಹಗಳನ್ನು ವಿಸರ್ಜನೆ ಮಾಡುವುದು, ಮುಂತಾದವುಗಳಿಂದ ಉಂಟಾಗುವ ಜಲ ಮಾಲಿನ್ಯವನ್ನು ನಿಷೇಧಿಸಲು ಶಾಸನ ತರುವುದು ಅಗತ್ಯವಾಗಿದೆ. ಇಲ್ಲದಿದ್ದರೆ ಕಾಲಾಂತರದಲ್ಲಿ ನಮ್ಮ ನದಿಗಳ ನೀರನ್ನು ಬಳಸುವುದಿರಲಿ, ಮುಟ್ಟುವುದಕ್ಕೂ ಸಾಧ್ಯವಾಗದಂಥ ಹೊಲಸು ಪರಿಸ್ಥಿತಿ ಉದ್ಭವಿಸುತ್ತದೆ. ಐರೋಪ್ಯ ದೇಶಗಳು ತಮ್ಮ ನಾಡಿನ ನದಿಗಳನ್ನು ಎಷ್ಟು ಚೊಕ್ಕಟವಾಗಿ ಕಾಪಾಡಿಕೊಂಡು ಬರುತ್ತಿವೆ ಎಂಬುದನ್ನು ಕೇಂದ್ರ ಮತ್ತು ವಿವಿಧ ರಾಜ್ಯ ಸರ್ಕಾರಗಳು ಚೆನ್ನಾಗಿ ಪರಿಶೀಲಿಸಬೇಕಾಗಿದೆ. ನದಿಗಳ ಸ್ವಚ್ಛ ನೀರಿನ ಸಂರಕ್ಷಣೆಗೆ ಶಾಸನದ ಅಗತ್ಯವಿದೆ. ಒಳ್ಳೆಯ ಮಾತಿಗೆ ಬಗ್ಗದ ಜನ ಪೊಲೀಸರ ಲಾಠಿಗೆ, ಕಾನೂನಿಗೆ ಬೆಲೆ ಕೊಡುತ್ತಾರೆ. ಅಸ್ಪೃಶ್ಯತೆಯನ್ನು ಆಚರಿಸಬೇಡಿ ಎಂದು ಮಹಾತ್ಮ ಗಾಂಧೀಜಿ ಉಪದೇಶ ಮಾಡಿದರೆ, ಕೇಳಿದರೇ ಭಾರತೀಯರು ? ಅದು ಕಾನೂನು ಬಾಹಿರ, ಆಚರಿಸಿದರೆ ಉಗ್ರ ಶಿಕ್ಷೆ ಎಂದು ಕಟ್ಟಳೆ ಮಾಡಿದಾಗ ಅದನ್ನು ಕೈಬಿಟ್ಟರು! ಕಾನೂನಿಂದಲೆ ಕಾರ್ಯಸಿದ್ಧಿ!

ಧರ್ಮದ ಹೆಸರಿನಲ್ಲಿ ನಡೆಯುವ ಕಾರ್ಯಾವಳಿಗಳು ವೈವಿಧ್ಯಮಯವಾಗಿವೆ. ಈ ವಂಚನೆಯ ಜಾಲ ಹೇಗಿದೆ ಎಂಬುದನ್ನು ಮುಂದಿನ ರೂಪಕದಿಂದ ವಿವರಿಸಬಹುದು.

ನಮ್ಮ ಹಳ್ಳಿಯ ನಮ್ಮ ಹಿತ್ತಲಲ್ಲಿ ಕಾಚಿಗಿಡ, ಹೂಲಿಕಡ್ಡಿ ಉಣ್ಣೆಮೆಳೆಗಳು ಇತ್ಯಾದಿ ಇದೆ. ಈ ಗಿಡಗಳ ಮೇಲೆ ಜೇಡ ಬಲೆ ಕಟ್ಟುತ್ತದೆ. ಅದರ ಬಲೆ ಸಾಮಾನ್ಯವಾಗಿ ಒಂದೂವರೆ ಗೇಣುದ್ದ ಚೋಟಗಲ ಇರುತ್ತದೆ. ಕೆಲವೊಮ್ಮೆ ಮೊಳುದ್ದ ದೊಡ್ಡದಾಗಿರುತ್ತದೆ. ಈ ಜೇಡದ ಬಲೆಗೆ ಏನಾದರೂ ಕ್ರಿಮಿ ಕೀಟಗಳು ಬಂದರೆ ಅದರ ಮೇಲೆ ಹರಿದಾಡಿದರೆ ತನ್ನ ರಂಧ್ರ ಗೃಹದೊಳಗೆ ಇದ್ದ ಜೇಡ ಬರ್ರನೆ ಹೊರಗೆ ಬರುತ್ತದೆ. ತನ್ನ ಬಲೆಗೆ ಬಿದ್ದಿರುವ ಮಿಕದ ಮೇಲೆ ಅತ್ತಿಂದಿತ್ತ ಇತ್ತಿಂದಿತ್ತ ತನ್ನ ಒಡಲ ನೂಲಿನಿಂದ ಬಲೆ ನೆಲೆಯುತ್ತದೆ.

ಜೇಡನ ಮೈನಿಂದ ಬರುವ ದಾರ ಬಹುಶಃ ನುಣ್ಣಗೆ ತಂಪಾಗಿ, ಹಿತವಾಗಿ ತೋರುವುದರಿಂದ ಹುಳು ಅಥವಾ ಕೀಟಕ್ಕೆ ಅದು ಆಪ್ಯಾಯಮಾನವಾಗಿ ಕಂಡು ತನಗೇನೋ ರಕ್ಷಣೆ ದೊರಕುತ್ತಿದೆ ಎಂದು ಅದು ಚಲಿಸದೆ ಅಥವಾ ಬಚಾವಾಗಲು ಪ್ರಯತ್ನಿಸದೆ ಅಲ್ಲೇ ಕೂರುತ್ತದೆ. ಜೇಡ ಅದರ ಮೇಲೆ ಬಲೆ ಹೆಣೆದು ಅದು ಅತ್ತ ಇತ್ತ ಅಲುಗಾಡಲಾರದು ಎಂದು ಖಾತರಿಪಡಿಸಿಕೊಂಡು ಅದರ ಮೇಲೆ ಧಾಳಿ ಮಾಡುತ್ತದೆ. ಅದನ್ನು ಹಿಡಿದು ಕಚ್ಚಿಕೊಂಡು ತನ್ನ ಮನೆಯೊಳಕ್ಕೆ ಹೋಗುತ್ತದೆ. ಕಾಣದಂತೆ ಭಕ್ಷಿಸುತ್ತದೆ.

ವ್ಯವಸ್ಥೆ ಜೇಡದ ಜಾಲದಂತಿದೆ. ಎಚ್ಚರ ತಪ್ಪಿದರೆ ಸಾಕು, ಜನ ಬಲಿಯಾಗುತ್ತಾರೆ. 'ದಾಸನ ಮಾಡಿಕೊ' ಎಂದು ಬೇಡಿದರೆ, ಹಾಡಿದರೆ ಮಾಡಿಕೊಳ್ಳುವವರು ಸದಾ ಕಾಯುತ್ತಿರುತ್ತಾರೆ. ಅಗ ಅವರನ್ನು ಇವರನ್ನು ಬೈದು ಏನೂ ಫಲವಿಲ್ಲ. ನಿಮ್ಮ ಬದುಕಿಗೆ ನೀವೇ ಹೊಣೆಗಾರರು. ನೀವು ದುರ್ಬಲರಾದರೆ ಪ್ರಬಲರು ನಿಮ್ಮನ್ನು ಆಳಲು ಕಾಯುತ್ತಿರುತ್ತಾರೆ. ಆದ್ದರಿಂದ ಆಯ್ಕೆ ನಿಮ್ಮದು.

ಮೌಢ್ಯ ಕೆಸರು ; ವಿಚಾರ ಎಳನೀರು. □

ಸಂವಾದ



ಲೇಖಕರಲ್ಲಿ ಮನವಿ

'ಸಂವಾದ'ವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಶೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು.

'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

-ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು - ೫೬೦ ೦೯೧



ಪುರುಷೋತ್ತಮನಾಗುವ ಮೊದಲು

ಸಂಕುಲಜೀವ

ಯತ್ರ ನಾರ್ಯಸ್ತು ಪೂಜ್ಯಂತೇ ಎಂದು
ಹಾಡಿದ ನಾಡಿನಲ್ಲಿ
ಜನನೀ ಜನ್ಮಭೂಮಿಶ್ಚ ಎಂದು
ಹೊಗಳಿದ ಬೀಡಿನಲ್ಲಿ
ಸಾವಿರಾರು ವರ್ಷಗಳ ಸುದೀರ್ಘ
ಇತಿಹಾಸದ ಗೂಡಿನಲ್ಲಿ
ಈ ಭವ್ಯ ಸಂಸ್ಕೃತಿಯ ತೊಟ್ಟಿಲಿನಲ್ಲಿ
ಹುಟ್ಟುವ ಮೊದಲೇ ಕಾಣೆಯಾಗುತಿವೆ
ಹೆಣ್ಣು ಕುಡಿಗಳು

ಅಲ್ಲಿ ಆ ಧರ್ಮಹೀನ ದೇವಹೀನ ಚೀನದಲ್ಲಿ ಅಲ್ಲ
ಅಥವಾ ಆ ಮುಕ್ತಕಾಮದ ಭೋಗಭೂಮಿ
ಅಮೆರಿಕದಲ್ಲಿ ಅಲ್ಲ
ಇಲ್ಲಿ ಈ ಮೂವತ್ತ ಮೂರು ಕೋಟಿ ದೇವತೆಗಳು
ಪೊರೆವ ಪುಣ್ಯಭೂಮಿಯಲ್ಲಿ
ಈ ನೆಲದಲ್ಲಿ, ಬೇರಾರದೂ ಅಲ್ಲ
ನಿನ್ನದೇ ಮನೆಯಲ್ಲಿ
ನಿತ್ಯ ನಡೆದಿದೆ ಹೆಣ್ಣು ಭ್ರೂಣಗಳ ಮಾರಣ ಹೋಮ.

ನಿನ್ನ ಹಡೆದವಳು
ನಿನ್ನ ಮಕ್ಕಳ ಹಡೆದವಳು
ನಾಳೆ ನಿನ್ನ ಮೊಮ್ಮಕ್ಕಳನ್ನು ಹಡೆಯಬೇಕಾದವಳು
ಅವಳ ಕುಲವನ್ನು
ತಣ್ಣಗಿನ ರಕ್ತದಲಿ ಸತತವಾಗಿ ಸಣ್ಣಗೆ
ಮುಗಿಸಲಾಗುತಿದೆ
ಕೊಯ್ದಷ್ಟು ನುಣ್ಣಗೆ ಕೂದಲೆಳೆಯಿದಿಂದ ಬೆಣ್ಣೆ

ಶ್ರೀರಾಮ ಸಂಜಾತ ಸುಸಂಸ್ಕೃತ ಸುಶಿಕ್ಷಿತ ಸದ್ಗೃಹಸ್ಥರೇ
ಸಾವಿರ ಸಾವಿರ ಸೀತೆಯರು
ಜನಿಸಿ ಕಣ್ಣು ತೆರೆಯುವ ಮೊದಲೇ
ಸೇರುತಿಹರು ಸಾವಿನರಮನೆಯನ್ನು

ಪ್ರಾಚೀನ ಮೌಲ್ಯದ ಕೈಗೆ
ಆಧುನಿಕ ತಂತ್ರಜ್ಞಾನದ ಕೊಡಲಿ
ನೋಡಬೇಡ ಅತ್ತ ಇತ್ತ
ನೀನೆ ಪರಶುರಾಮ ಇಂದು
ನೀನೆ ಪರಶುರಾಮ

ನಾನಲ್ಲ ನನಗೆ ಗೊತ್ತಿಲ್ಲ
ಇದರಲ್ಲಿ ನನ್ನ ಪಾಲೇನೂ ಇಲ್ಲ

ಅನ್ನಲಾಗದು ನೀನು
ನೆನಪಿರಲಿ ಪುರುಷಶ್ರೇಷ್ಠತೆಯ ಉದ್ದ
ಸರಪಳಿಯಲ್ಲಿ ನೀನೂ ಒಂದು ಕೊಂಡಿ
ಗೊತ್ತಿರಲಿ ಹೆಣ್ಣಿನ ಕೊರಳಿಗೆ ಉರುಳಾಗಿರುವ
ಪುರುಷ ಪ್ರಧಾನತೆಯ ಹಗ್ಗದಲಿ
ನೀನೂ ಒಂದು ಎಳೆ

ಏಳು ಎದ್ದು ಬಾ
ಹರಿದು ಬಾ ಹಗ್ಗವನು
ಮುರಿದು ಬಾ ಸರಪಳಿಯ
ಬಾ ಸಮತೆ ಸಹಬಾಳ್ವೆಯ ಹರಿಕಾರನಾಗು
ಬಾಳಪಯಣದಲಿ ಸಹಪಥಿಕನಾಗು
ಬಾ ಪುರುಷೋತ್ತಮನಾಗುವ ಮೊದಲು
ನೀ ನಿಜ ಮಾನವನಾಗು.

ಭಾರತದಲ್ಲಿ ಜಾತಿ-ವರ್ಗ ಸಮಸ್ಯೆ

ವಿಶ್ಲೇಷಣೆ

ಭಾರತದ ಸಾಮಾಜಿಕ (ಹಿಂದು) ಪದ್ಧತಿಯ ಪ್ರಧಾನವಾದ ಲಕ್ಷಣ ಎಂದರೆ ಜಾತಿ. ಇದು ಸಾಮಾಜಿಕ ವ್ಯವಸ್ಥೆಗೆ ಅಡಿಪಾಯವಷ್ಟೇ ಅಲ್ಲ ಸಾಮಾಜಿಕ ಸಂಸ್ಥೆಯಾಗಿ ಬಲಗೊಂಡು ಪ್ರಾಚೀನ ಕಾಲದಿಂದ ಇಂದಿನ ಆಧುನಿಕ ಕಾಲದವರೆಗೂ ಮುಂದುವರಿಯುತ್ತಿದೆ. ಜಾತಿ ಎಂದರೆ ಆಳುವ ವರ್ಗಗಳು ಶ್ರಮ ಶೋಷಣೆಗೆ ನಿರ್ಮಿಸಿಕೊಂಡ ಕೆಟ್ಟ ವ್ಯವಸ್ಥೆ. ೧೫.೦೨.೨೦೦೪ ರಂದು ಬೆಂಗಳೂರಿನಲ್ಲಿ ಭಾರತೀಯ ಮಾರ್ಕ್ಸ್‌ವಾದಿ ಅಧ್ಯಯನ ಸಂಸ್ಥೆ, ದಲಿತ ಕ್ರಿಶ್ಚಿಯನ್ ಫೋರಂ ಹಾಗೂ ಪ್ರಗತಿಪರ ಪ್ರಜಾ ವೇದಿಕೆ ಏರ್ಪಡಿಸಿದ್ದ 'ಎಡಪಂಥೀಯರು ಮತ್ತು ದಲಿತ ಸಂಘಟನೆಗಳ ದೃಷ್ಟಿಯಲ್ಲಿ ಜಾತಿ ವಿನಾಶ' ಎಂಬ ವಿಚಾರ ಸಂಕಿರಣದಲ್ಲಿ ಪ್ರಗತಿಪರ ಪ್ರಜಾ ವೇದಿಕೆ ಮಂಡಿಸಿದ ಪ್ರಬಂಧ 'ಸಂವಾದ' ಓದುಗರಿಗಾಗಿ ಇಲ್ಲಿದೆ.

ಸಂಸದೀಯ ಪ್ರಜಾಪ್ರಭುತ್ವದ ಹೆಸರಿನಲ್ಲಿ ರಾಜಕೀಯ ಲಾಭಗಳಿಗಾಗಿ ಜಾತಿಯು ರಾಜಕೀಯಕರಣ ಆಗುತ್ತಿರುವ ಪರಿಸ್ಥಿತಿಯಲ್ಲಿ ನಾವು ಬದುಕುತ್ತಿದ್ದೇವೆ. ಭಾರತದ ಕೆಲವು ಭಾಗಗಳಲ್ಲಿ ಮಧ್ಯ ಯುಗದಲ್ಲಿನ ಜಾತಿ ರೂಪದ ಶೋಷಣೆ ಮುನ್ನಡೆಯುತ್ತಿದೆ. ಗ್ರಾಮೀಣ ಪ್ರದೇಶಗಳಲ್ಲಿ ಅಗ್ರ ಜಾತಿಗಳು ಭೂಮಾಲೀಕರಾಗಿದ್ದು ಹಿಂದುಳಿದ-ದಲಿತ ವರ್ಗಗಳನ್ನು ಕ್ರೂರವಾಗಿ ದಮನಿಸಿ ಶೋಷಿಸಲಾಗುತ್ತಿದೆ. ಜಾತಿ ಕಲಹಗಳು, ಸಾಮಾಜಿಕ ಬಹಿಷ್ಕಾರಗಳು, ಅತ್ಯಾಚಾರಗಳು ಹಾಗೂ ಕೊಲೆಗಳು ನಿರಂತರವಾಗಿ ನಡೆಯುತ್ತಿವೆ.

ಭಾರತದ ನೂತನ ಪ್ರಜಾತಾಂತ್ರಿಕ ಕ್ರಾಂತಿಯ ದೃಷ್ಟಿಕೋನದಲ್ಲಿ ಜಾತಿ ಪ್ರಶ್ನೆಯನ್ನು ಪ್ರಜಾತಂತ್ರವಾದಿಗಳು ಹಾಗೂ ದಲಿತರು ಕಮ್ಯೂನಿಸ್ಟ್ ಕ್ರಾಂತಿಕಾರಿಗಳು ಗಂಭೀರವಾಗಿ ಪರಿಗಣಿಸಬೇಕಿದೆ.

ನಾವು ಜಾತಿ ಪ್ರಶ್ನೆಯನ್ನು ಚರ್ಚಿಸುವ ಮುನ್ನ 'ಮಾನವ ಸಮಾಜ'ವನ್ನು ಕುರಿತು ತಿಳಿದುಕೊಳ್ಳುವ ಅಗತ್ಯ ಬಹಳಷ್ಟಿದೆ.

ಮಾನವ ಸಮಾಜ:

ಮನುಷ್ಯರೆಲ್ಲರು 'ಸಮಾನರಾಗಿ ಒಂದೇ ಸ್ಥಿತಿಯಲ್ಲಿ ಯಾಕಿಲ್ಲ? ಅಂದರೆ ಮನುಷ್ಯರಲ್ಲಿ ಕೆಲವರು 'ಧನಿಕರು ಇನ್ನು ಕೆಲವರು ಬಡವ'ರಾಗಿ ಹೇಗಾದರು? 'ಮೇಲು-ಕೀಳು' ಅಂದರೆ 'ಅಸಮಾನತೆ'ಗಳು ಏರ್ಪಡಲು ಕಾರಣಗಳೇನು? ನಗರ-ಹಳ್ಳಿಗಳ ಮಧ್ಯೆದಲ್ಲಿ ವೈರುಧ್ಯಗಳು ಹೇಗೆ ಏರ್ಪಟ್ಟವೆ. ಹೀಗೆ ಸಮಾಜದಲ್ಲಿ ಅನೇಕ ವೈರುಧ್ಯಗಳನ್ನು ನಾವು ಕಾಣಬಹುದು. 'ಮಾನವ ಸಮಾಜ'ಕ್ಕೆ ಸಂಬಂಧಿಸಿದ ಸತ್ಯಾಂಶಗಳನ್ನು ತಿಳಿದುಕೊಳ್ಳಬೇಕೆಂದರೆ 'ಧನಿಕ-ಬಡವರ'ರ ಮಧ್ಯೆ ಅಂತರ ಅಥವಾ ವ್ಯತ್ಯಾಸಗಳು ಹೇಗಾದವು ಎನ್ನುವುದೇ ಪ್ರಧಾನ ಪ್ರಶ್ನೆ.

'ಮಾನವ ಸಮಾಜ'ವನ್ನು ಕುರಿತು ಯಾವುದು ಸತ್ಯವಾದರೆ ಅದನ್ನೆ ತಿಳಿದುಕೊಳ್ಳಬೇಕು. ಸತ್ಯವನ್ನು ತಿಳಿದುಕೊಳ್ಳುವುದೇ 'ಜ್ಞಾನ', ಅಸತ್ಯವಾದದ್ದು 'ಅಜ್ಞಾನ'. ಅಸತ್ಯವಾದದ್ದನ್ನೇ ಸತ್ಯವೆಂದು ತಿಳಿದುಕೊಳ್ಳುತ್ತಿದ್ದರೆ ಆ ಮನುಷ್ಯ ಅಜ್ಞಾನದಲ್ಲಿದ್ದಾನೆ ಎಂದರ್ಥ. ಅಜ್ಞಾನ ಮನುಷ್ಯನಿಗೆ ಸಮಸ್ಯೆಗಳನ್ನು ಒಡ್ಡುತ್ತದೆ, ಜ್ಞಾನ ಸಮಸ್ಯೆಗಳನ್ನು ಬಗೆಹರಿಸುತ್ತದೆ. ಮನುಷ್ಯ ತನ್ನ ಜೀವನ ಮಾರ್ಗವನ್ನು ಸುಖ-ಶಾಂತಿಗಳಿಂದ ನಿರ್ಮಿಸಿಕೊಳ್ಳುವುದಕ್ಕಾಗಿಯೇ ಆತನಿಗೆ ಸತ್ಯದ ಮೇಲೆ ಆಧಾರ ಹೊಂದಿದ 'ಜ್ಞಾನ' ಅಗತ್ಯ.

ಈ ಸಮಾಜದಲ್ಲಿನ ಬಹುತೇಕ ಮಂದಿ 'ಮನುಷ್ಯರಲ್ಲಿ ಧನಿಕ-ಬಡವರ ಮಧ್ಯೆ ಇರುವ ಅಂತರ ಕುರಿತು ಹೀಗೆ ಭಾವಿಸುತ್ತಾರೆ'... ಧನಿಕರೆಲ್ಲರಿಗೂ, ಆ ಸಿರಿತನ ಅವರ 'ಪೂರ್ವಜ'ರಿಂದ ಬಂದಿದೆ ಎಂದು ಅಥವಾ 'ಸ್ವಯಂ ಕೃಷಿಯಿಂದ' ಸಂಪಾದಿಸಿದ್ದಾರೆ, ಅಂತಹವರೇ ಶ್ರೀಮಂತರಾಗುತ್ತಾರೆ. ಅವರು ಧನಿಕರಾಗಿರುವುದರಿಂದಲೇ ಯಜಮಾನರಾಗಿರುತ್ತಾರೆ. ಪೂರ್ವಜರಿಂದ ಧನವನ್ನು ಪಡೆಯದವರು, ಸ್ವಯಂ ಕೃಷಿ ಇಲ್ಲದವರು ಬಡವರಾಗುತ್ತಾರೆ, ಅಷ್ಟೇ ಅಲ್ಲ, ಅದೃಷ್ಟ ದುರಾದೃಷ್ಟಗಳಿಂದಲೂ ಮನುಷ್ಯರು ಧನಿಕರಾಗಿಯೋ, ಬಡವರಾಗಿಯೋ ಆಗುತ್ತಿರುತ್ತಾರೆ. ಹೀಗೆ ಭಾವಿಸುವುದು ಧನಿಕರಷ್ಟೇ ಅಲ್ಲ, ಬಡವರೂ ಸಹ ಭಾವಿಸುತ್ತಾರೆ.

ಭಾರತ ದೇಶದಲ್ಲಿ ಜಾತಿ ಪ್ರಶ್ನೆಯನ್ನು ಪರಿಶೀಲಿಸುವಾಗ ವಸ್ತು ಪರಿಸ್ಥಿತಿಗಳ ಮೇಲೆ ಆಧಾರ ಹೊಂದಿದ, ಶಾಸ್ತ್ರೀಯವಾದ, ತಾರ್ಕಿಕವಾದ ಅಂದರೆ ಭಾವಾನುವಾದದಿಂದ ಮುಕ್ತಿಯಾಗಿ ಭೌತಿಕವಾದದ ದೃಷ್ಟಿಕೋನದಿಂದ ಜಾತಿ ಪ್ರಶ್ನೆಯನ್ನು ನೋಡುವುದು ಸೂಕ್ತ.

ಜಾತಿ ವ್ಯವಸ್ಥೆಯ ಉಗಮ:

ಭಾರತದ ಸಾಮಾಜಿಕ (ಹಿಂದು) ಪದ್ಧತಿಯ ಪ್ರಧಾನವಾದ ಲಕ್ಷಣ ಎಂದರೆ ಜಾತಿ. ಇದು ಸಾಮಾಜಿಕ ವ್ಯವಸ್ಥೆಗೆ ಅಡಿಪಾಯವಷ್ಟೇ ಅಲ್ಲ ಸಾಮಾಜಿಕ ಸಂಸ್ಥೆಯಾಗಿ ಬಲಗೊಂಡು ಪ್ರಾಚೀನ ಕಾಲದಿಂದ ಇಂದಿನ ಆಧುನಿಕ ಕಾಲದವರೆಗೂ ಮುಂದುವರಿಯುತ್ತಿದೆ. ಜಾತಿ ಎಂದರೆ ಜನ ಸಮೂಹಗಳಲ್ಲಿ ಮೇಲು-ಕೀಳೆಂಬ ವಿವಿಧ ಸಾಮಾಜಿಕ ಸ್ತರಗಳ ಮೇಲ್ರಚನೆಯ ವ್ಯವಸ್ಥೆಯು ಮೂಲರಚನೆಯ ಆಧಾರದ ಮೇಲೆ ಉತ್ಪಾದಕ ಕ್ರಿಯೆ/ವೃತ್ತಿ ಆಧಾರಿತ ಕೆಲಸ/ಉತ್ಪಾದನೆ ಸೇವಾ ಕೆಲಸಗಳನ್ನು ಕೀಳಾಗಿಸುವುದರ (Degradation of labour) ಹಿಂದೆ ಒಂದು ಉದ್ದೇಶ ಇರಲೇಬೇಕು. ನೇರವಾಗಿ ಹೇಳಬೇಕೆಂದರೆ ಆಳುವ ವರ್ಗಗಳು ಶ್ರಮ ಶೋಷಣೆಗೆ ನಿರ್ಮಿಸಿಕೊಂಡ ಕೆಟ್ಟ ವ್ಯವಸ್ಥೆ. ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಜಾತಿ ಪ್ರಾಚೀನ ಕಾಲದಿಂದ ಇಂದಿನ ಆಧುನಿಕ ಕಾಲದವರೆಗೂ ದುಡಿಯುವ ಸಮೂಹಗಳನ್ನು ಶೋಷಿಸುವ ಹಾಗೂ ಧಮನಿಸುವ ವಿಧಾನಗಳಲ್ಲಿ ಪ್ರಧಾನ ಪಾತ್ರವಹಿಸುತ್ತಿದೆ. ಜಾತಿ ವ್ಯವಸ್ಥೆಯು ಆಳುವ ವರ್ಗಗಳಿಗೆ ಹೆಚ್ಚಾಗಿ ಶ್ರಮಿಕರನ್ನು ನಿರ್ಬಂಧಿಸಲು ಮತ್ತು ಶೋಷಿಸಲು ಹಾದಿ ಮಾಡಿಕೊಟ್ಟಿರುವ ಸಿದ್ಧಾಂತವಷ್ಟೇ ಅಲ್ಲ ಸಮಾಜ ವ್ಯವಸ್ಥೆಯೂ ಆಗಿದೆ. ಜಾತಿ ವ್ಯವಸ್ಥೆಯನ್ನು ನಿರ್ಮೂಲನೆ ಮಾಡಲು ಮೊದಲು ನಾವು ಅದರ ಹುಟ್ಟು ಬೆಳವಣಿಗೆಯನ್ನು ತಿಳಿದುಕೊಳ್ಳಬೇಕಾಗಿದೆ.

ಮನುಷ್ಯ ಪ್ರಾಣಿ ಪ್ರಪಂಚದಿಂದ ಬೇರ್ಪಟ್ಟ ನಂತರ ಸಮಾಜದ ಅಭಿವೃದ್ಧಿ ಕ್ರಮವನ್ನು ನಾವು ವೈಜ್ಞಾನಿಕ ದೃಷ್ಟಿಕೋನದಿಂದ ನೋಡಿದಾಗ/ಪರಿಶೀಲಿಸಿದಾಗ ಮಾತ್ರ 'ಜಾತಿ-ವರ್ಗ' ಪ್ರಶ್ನೆ ಕುರಿತು ಒಂದು ಸ್ಪಷ್ಟ ಅಭಿಪ್ರಾಯ ಅಥವಾ ನಿಲುವು ತೆಗೆದುಕೊಳ್ಳಲು ಸಾಧ್ಯವಾಗಬಹುದು.

ಜಾತಿ ಸಮಸ್ಯೆಗೆ ಮೂರು ಸಾವಿರ ವರ್ಷಗಳ ಚರಿತ್ರೆ ಇದೆ. ಜಾತಿ, ವರ್ಗ ಸಮಾಜದ ಬೆಳವಣಿಗೆ ರಾಜ್ಯದ (ಪ್ರಭುತ್ವ) ಉಗಮ, ಊಳಿಗಮಾನ್ಯ ಉತ್ಪಾದನಾ ವಿಧಾನದ ಬೆಳವಣಿಗೆ ಹಾಗೂ ನಿರಂತರವಾದ ಆದರೆ ತಮ್ಮದೇ ಆದ ರೂಢಿ, ಆಚರಣೆಗಳನ್ನು ಹೊಂದಿದ್ದ ಬುಡಕಟ್ಟು ಗುಂಪುಗಳನ್ನು ಶೋಷಣಾ ವ್ಯವಸಾಯದ ಆರ್ಥಿಕತೆಯೊಂದಿಗೆ ನಿರ್ಬಂಧಿತವಾಗಿ ಅಂತರ್ಗತ ಮಾಡಿಕೊಂಡಿರುವುದರೊಂದಿಗೆ, ಬೇರ್ಪಡಿಸಲಾರದಂತೆ ಬೆಸೆದುಕೊಂಡಿದೆ. ಜಾತಿ ವ್ಯವಸ್ಥೆಯ ಉಗಮ ಹಾಗೂ ಬೆಳವಣಿಗೆಯ ಕಾಲ ಘಟ್ಟಗಳನ್ನು ಪರಿಶೀಲಿಸೋಣ.

೧.ವರ್ಣಗಳ ರೂಪದಲ್ಲಿ ವರ್ಗಗಳು

ಕೃಷಿಯನ್ನು ಅವಲಂಬಿಸಿದ ಬುಡಕಟ್ಟುಗಳು ಹಾಗೂ ಕೃಷಿಯೇತರ ಬುಡಕಟ್ಟು ಸಮುದಾಯಗಳೊಂದಿಗೆ ಘರ್ಷಿಸಲಾರಂಭಿಸಿದಂದಿನಿಂದ ವರ್ಣಗಳ ರೂಪದಲ್ಲಿ ವರ್ಗಗಳು ಅಸ್ತಿತ್ವಕ್ಕೆ ಬಂದವು. (ಚಾರಿತ್ರಿಕ ಭೌತಿಕವಾದದ ಪ್ರಕಾರರ ಪ್ರಪಂಚದ ವಿವಿಧ ಭಾಗಗಳಲ್ಲಿ, ವಿವಿಧ ಕಾಲಘಟ್ಟಗಳಲ್ಲಿ ಮನುಷ್ಯ, ಪ್ರಾಣಿ ಪ್ರಪಂಚದಿಂದ ಬೇರ್ಪಟ್ಟ ನಂತರ ಆಹಾರ ಸಂಗ್ರಹಣೆ, ಬೇಟೆಯಾಡುವಿಕೆ, ಪಶುಸಂಗೋಪನೆ, ವ್ಯವಸಾಯ ಪದ್ಧತಿ, ರಾಜ್ಯದ ಉಗಮ, ಊಳಿಗಮಾನ್ಯ ವ್ಯವಸ್ಥೆ ಅರೇ ಊಳಿಗಮಾನ್ಯ ಅರೇ ವಸಾಹತು ವ್ಯವಸ್ಥೆಯಿಂದ ಭಾರತದ ಸಮಾಜವನ್ನು ಈ ಮೇಲಿನ ಅಭಿವೃದ್ಧಿ ಕ್ರಮಗಳಿಂದ ಎಂದೂ ಬೇರ್ಪಡಿಸಲಾಗದು. ಅಂದರೆ, ಆಳುವ ವರ್ಗ ಅಸ್ತಿತ್ವಕ್ಕೆ ಬಂದಿದೆ ಎಂದರ್ಥ), ಆಡಳಿತದಲ್ಲಿ ಬ್ರಾಹ್ಮಣರು-ಕ್ಷತ್ರಿಯರಿದ್ದರೆ, ವೈಶ್ಯರು ಶೋಷಣೆಗೊಳಪಟ್ಟ

ರೈತರಾಗಿದ್ದರು. ವ್ಯವಸಾಯವು ಪ್ರಮುಖ ಉತ್ಪಾದನಾ ವ್ಯವಸ್ಥೆಯಾಗಿ ಉಗಮಗೊಂಡಾಗ ಸೆರೆಯಿಲ್ಲದ ಗುಲಾಮಿ ಶೂದ್ರರು ಅದರ ಅತೀ ಕೆಳಗಿನ ವರ್ಣ ವಾದರು. ಕ್ರಿ.ಪೂ ೫೦೦ ರ ಹೊತ್ತಿಗೆ ರಾಜ್ಯ (ಪ್ರಭುತ್ವ) ಉಗಮವಾಯಿತು.

೨. ಊಳಿಗಮಾನ್ಯತೆಯ ಹುಟ್ಟು-ಬೆಳವಣಿಗೆ:

ಕ್ರಿ.ಪೂ. ೫೦೦ ರಲ್ಲಿ ಪ್ರಭುತ್ವದ ಉಗಮದ ನಂತರ ಕ್ರಿ. ಶ. ೪ನೇ ಶತಮಾನದವರೆಗೆ ವ್ಯವಸಾಯದ ವಿಸ್ತರಣೆಯಾಯಿತು. ಈ ಕಾಲಘಟ್ಟದಲ್ಲಿ ಕಬ್ಬಿಣದ ನೇಗಿಲಿನ ವಿಸ್ತೃತ ಬಳಕೆ ಯಾಯಿತು. ಹಳ್ಳಿಗಳು ಕಾಣಿಸಿಕೊಂಡವು. ವೈಶ್ಯ ರೈತರಿಂದ ತೆರಿಗೆ ಹಾಗೂ ಕೊಡುಗೆಗಳ ಮೂಲಕ ಹೆಚ್ಚುವರಿಯನ್ನ ವಶ ಪಡಿಸಿಕೊಳ್ಳಲಾಗುತ್ತಿತ್ತು. ರಾಜಪ್ರಭುತ್ವದಲ್ಲಿ ರಾಜನ ವಿಶಾಲ ಭೂಮಿಗಳಲ್ಲಿ ಶೂದ್ರರನ್ನು ಬಲವಂತರಾಗಿ ದುಡಿಸ ಲಾಗುತ್ತಿತ್ತು. ವ್ಯಾಪಾರ ಅಭಿವೃದ್ಧಿಯಾಯಿತು. ದೊಡ್ಡ ರಾಜ್ಯಗಳು ಬೆಳೆದವು. ಊಳಿಗಮಾನ್ಯತೆಯ ಈ ಭ್ರೂಣಾ ವಸ್ಥೆಯ ಕಾಲಘಟ್ಟದಲ್ಲಿ ಬೌದ್ಧಧರ್ಮ ಹಾಗೂ ಜೈನ ಧರ್ಮಗಳು ಅಸ್ತಿತ್ವಕ್ಕೆ ಬಂದವು.

೩. ಜಾತಿ ಆಧಾರಿತ ಊಳಿಗಮಾನ್ಯ ವ್ಯವಸ್ಥೆಯ ಬೆಳವಣಿಗೆ.

ಕ್ರಿ.ಶ. ೩ನೇ ಶತಮಾನದಲ್ಲಿ ಮೊಟ್ಟಮೊದಲ ಪ್ರಭುತ್ವವಾದ ಮೌರ್ಯ ಸಾಮ್ರಾಜ್ಯ ಮೊದಲ್ಗೊಂಡು ಬ್ರಿಟಿಷರ ಆಗಮನ ದವರೆಗೆ ಜಾತಿ ಆಧಾರಿತ ಊಳಿಗಮಾನ್ಯ ವ್ಯವಸ್ಥೆಯಲ್ಲಿ ಬೆಳವಣಿಗೆ, ಬುಡಕಟ್ಟುಗಳ ಮಧ್ಯೆ ಯುದ್ಧಗಳು, ಊಳಿಗ ಮಾನ್ಯ ರಾಜರುಗಳ ಮಧ್ಯೆ ಯುದ್ಧಗಳು, ಭಕ್ತಿ ಚಳುವಳಿ, ಸುಧಾರಣಾ ಚಳವಳಿ, ರೈತರ ಸಶಸ್ತ್ರ ದಂಗೆಗಳು, ಭಾಷಾ ಚಳುವಳಿ, ದಲಿತ ಚಳವಳಿ, ಆದಿವಾಸಿ-ಗಿರಿಜನರ ಹೋರಾಟಗಳು, ಇನ್ನೂ ಹಲವಾರು ಹೋರಾಟಗಳು ಹುಟ್ಟಿ ಬೆಳೆದು ಕಣ್ಮರೆಯಾದ ಭಾರತದ ಸಮಾಜದಲ್ಲಿನ ಜಾತಿ ಪ್ರಶ್ನೆ ಮಾನವ ಸಮಾಜದ ವಿಕಾಸಕ್ಕೆ ದೊಡ್ಡ ಸವಾಲಾಗಿ ನಿಂತಿದೆ.

ಬ್ರಾಹ್ಮಣೇತರ ಜಾತಿ ವಿರೋಧಿ ಹೋರಾಟಗಳು:

ಬ್ರಿಟೀಷ್ ಸಾಮ್ರಾಜ್ಯಶಾಹಿ ಪರಿಚಯಿಸಿದ ಬಂಡವಾಳವಾದಿ ಆರ್ಥಿಕ ವಿಧಾನಗಳಿಂದ ೧೯-೨೦ ನೇ ಶತಮಾನಗಳಲ್ಲಿ ಬ್ರಾಹ್ಮಣೇತರ ಜಾತಿಗಳಲ್ಲಿ ಹೊಸ ವರ್ಗಗಳ ಬೆಳವಣಿಗೆಯಿಂದ ಅವರಲ್ಲಿ ಪ್ರಜಾತಾಂತ್ರಿಕ ಪ್ರಜ್ಞೆ ಬೆಳೆಯ ಲಾರಂಭಿಸಿತು. ದಕ್ಷಿಣ ಹಾಗೂ ಪಶ್ಚಿಮ ಭಾರತದಲ್ಲಿ ಬ್ರಾಹ್ಮಣವಾದಿ ಊಳಿಗಮಾನ್ಯ ಹಿಡಿತ ಹಾಗೂ ಶೋಷಣೆಯ ವಿರುದ್ಧ ಶೂದ್ರ-ಅತೀ ಶೂದ್ರ ಜಾತಿಗಳ ನಡುವೆ 'ಜ್ಯೋತಿಬಾ ಪುಲೆ ಯವರ ಸತ್ಯಶೋಧಕ ಸಮಾಜ ಚಳುವಳಿ', 'ಪೆರಿಯಾರ್ ಸ್ವಾಭಿಮಾನ ಚಳುವಳಿ' ಹಾಗೂ 'ಅಂಬೇಡ್ಕರ್‌ರ ಜಾತಿ ವಿರೋಧಿ ಚಳುವಳಿ'ಗಳು ಬೆಳೆಯತೊಡಗಿದವು. ಈ ಮೂರು ಚಳುವಳಿಗಳು ತಮ್ಮ ಬೂರ್ಷ್ವಾ, ಉದಾರವಾದಿ ಸೈದ್ಧಾಂತಿಕ ದೃಷ್ಟಿಕೋನ ದಿಂದಾಗಿ ಜಾತಿ-ವರ್ಗ ಪ್ರಶ್ನೆ ಕುರಿತು ಸ್ಪಷ್ಟ ಹಾಗೂ ಸರಿಯಾದ ನಿಲುವುಗಳನ್ನು ತೆಗೆದುಕೊಳ್ಳಲಾಗಲಿಲ್ಲ. ಆ ಚಳವಳಿ ಗಳು ಮುಖ್ಯವಾಗಿ, ದೇವಾಲಯಗಳ ಪ್ರವೇಶ, ಅಸ್ಪೃಶ್ಯರಿಗೆ ಸಾರ್ವಜನಿಕ ಬಾವಿಗಳಲ್ಲಿ ಕುಡಿಯುವ ನೀರಿಗೆ ಅವಕಾಶ, ಮಹಿಳಾ ಶೋಷಣೆ, ಜೊತೆಗೆ ಕೆಲವು ಆರ್ಥಿಕ ಹೋರಾಟ ಗಳನ್ನು ಕೈಗೆತ್ತಿಕೊಂಡು ಮಧ್ಯ ಮಾರ್ಗದಲ್ಲಿಯೇ ಹೋರಾಟ ಗಳು ಕ್ರಮೇಣ ಸ್ಥಗಿತಗೊಂಡು ಕಣ್ಮರೆಯಾದವು.

ಬ್ರಾಹ್ಮಣೇತರ ಜಾತಿ ವಿರೋಧಿ ಹೋರಾಟಗಳು:
ಬ್ರಿಟೀಷ್ ಸಾಮ್ರಾಜ್ಯಶಾಹಿ ಪರಿಚಯಿಸಿದ ಬಂಡವಾಳವಾದಿ ಆರ್ಥಿಕ ವಿಧಾನಗಳಿಂದ ೧೯-೨೦ ನೇ ಶತಮಾನಗಳಲ್ಲಿ ಬ್ರಾಹ್ಮಣೇತರ ಜಾತಿಗಳಲ್ಲಿ ಹೊಸ ವರ್ಗಗಳ ಬೆಳವಣಿಗೆಯಿಂದ ಅವರಲ್ಲಿ ಪ್ರಜಾತಾಂತ್ರಿಕ ಪ್ರಜ್ಞೆ ಬೆಳೆಯಲಾರಂಭಿಸಿತು. ದಕ್ಷಿಣ ಹಾಗೂ ಪಶ್ಚಿಮ ಭಾರತದಲ್ಲಿ ಬ್ರಾಹ್ಮಣವಾದಿ ಊಳಿಗಮಾನ್ಯ ಹಿಡಿತ ಹಾಗೂ ಶೋಷಣೆಯ ವಿರುದ್ಧ ಶೂದ್ರ-ಅತೀ ಶೂದ್ರ ಜಾತಿಗಳ ನಡುವೆ 'ಜ್ಯೋತಿಬಾ ಪುಲೆಯವರ ಸತ್ಯಶೋಧಕ ಸಮಾಜ ಚಳುವಳಿ', 'ಪೆರಿಯಾರ್ ಸ್ವಾಭಿಮಾನ ಚಳುವಳಿ' ಹಾಗೂ 'ಅಂಬೇಡ್ಕರ್‌ರ ಜಾತಿ ವಿರೋಧಿ ಚಳುವಳಿ'ಗಳು ಬೆಳೆಯತೊಡಗಿದವು. ಈ ಮೂರು ಚಳುವಳಿಗಳು ತಮ್ಮ ಬೂರ್ಷ್ವಾ, ಉದಾರವಾದಿ ಸೈದ್ಧಾಂತಿಕ ದೃಷ್ಟಿಕೋನದಿಂದಾಗಿ ಜಾತಿ-ವರ್ಗ ಪ್ರಶ್ನೆ ಕುರಿತು ಸ್ಪಷ್ಟ ಹಾಗೂ ಸರಿಯಾದ ನಿಲುವುಗಳನ್ನು ತೆಗೆದುಕೊಳ್ಳಲಾಗಲಿಲ್ಲ.

ಜಾತಿ ಕುರಿತು ಅಂಬೇಡ್ಕರ್‌ರ ನಿಲುವುಗಳು:

ಜಾತಿಯು ಭಾರತದ ಪ್ರಾಚೀನ ಉತ್ಪಾದನಾ ಸಂಬಂಧ ಗಳಿಂದ ಹುಟ್ಟಲಿಲ್ಲ ಬದಲಿಗೆ ಹಿಂದೂ ಧರ್ಮದಿಂದ ಹುಟ್ಟಿ ತೆಂಬ ಆಧ್ಯಾತ್ಮವಾದಿ ದೃಷ್ಟಿಕೋನವನ್ನು ಅಂಬೇಡ್ಕರ್‌ರ ಬರವಣಿಗೆಗಳಲ್ಲಿ ಕಾಣಬಹುದು. ಹೀಗಾಗಿ ಸಮಾಜ ವ್ಯವಸ್ಥೆ ಯನ್ನು ಬದಲಾಯಿಸುವ ಬದಲಿಗೆ ಹಿಂದೂ ಧರ್ಮವನ್ನು ಸುಧಾರಿಸುವುದರಿಂದ ಜಾತಿಯನ್ನು ಬೇರು ಸಮೇತ ಕೀಳಬಹು ದೆಂದು ಅಂಬೇಡ್ಕರ್‌ರವರು ಭಾವಿಸಿದ್ದರು. ವೇದಗಳನ್ನು ರದ್ದು ಮಾಡಬೇಕು, ಎಲ್ಲಾ ಜಾತಿಗಳಿಂದ ಪೂಜಾರಿಗಳ ನೇಮಕಾತಿ ಮಾಡಬೇಕು, ಸಾಮಾನ್ಯ ಅಧಿಕೃತ ಹಿಂದೂ ಧಾರ್ಮಿಕ ಪುಸ್ತಕವನ್ನು/ಗ್ರಂಥವನ್ನು ರಚಿಸ ಬೇಕೆಂದೂ ಅಂಬೇಡ್ಕರ್ ಪ್ರತಿ ಪಾದಿಸಿದರು.

ಅಂತರ್ಜಾತಿ ಮದುವೆಗಳು, ಸಾಮೂಹಿಕ ಭೋಜನ ಕೂಟಗಳಿಂದ ಜಾತಿ ವ್ಯವಸ್ಥೆಯನ್ನು ಬದಲಾಯಿಸಬಹು ದೆಂದು ಅಂಬೇಡ್ಕರ್ ಭಾವಿಸಿದ್ದರಷ್ಟೇ ಅಲ್ಲ ಪ್ರೋತ್ಸಾಹಿಸುತ್ತಿ ದ್ದರು. ಜಾತಿಯ ಸಾಮಾಜಿಕ ಹಾಗೂ ಆರ್ಥಿಕ ಬುನಾದಿ ಯನ್ನು ಮುರಿಯದೆ ಅವುಗಳನ್ನು ಸಾಮೂಹಿಕ ಮಟ್ಟದಲ್ಲಿ ಸಾಧಿಸಲಾಗುವುದಿಲ್ಲ ಎನ್ನುವುದನ್ನು ಅವರಿಂದ ಗ್ರಹಿಸಲಾಗ ಲಿಲ್ಲ. ಇಸ್ಲಾಂ, ಕ್ರೈಸ್ತ ಸಿಖ್ ಹಾಗೂ ಬೌದ್ಧ ಧರ್ಮಗಳ ಲ್ಲಿಯೂ ಜಾತಿ ಮುಂದುವರಿಯುತ್ತಿದ್ದ ಪ್ರಶ್ನೆಗೆ ಹಿಂದು ಧರ್ಮದ ಸುಧಾರಣೆಯ ಮೇಲೆ ಅವರು ನೀಡಿದ ಒತ್ತಾಗಲೀ ಅಥವಾ ನಂತರದ ಮತಾಂತರವಾಗಲೀ ಉತ್ತರ ನೀಡಲಿಲ್ಲ.

ಹೀಗಾಗಿ ಬೌದ್ಧ ಧರ್ಮಕ್ಕೆ ಅವರ ಅಂತಿಮ ಸಾಮೂಹಿಕ ಮತಾಂತರವು ಜಾತಿ ವ್ಯವಸ್ಥೆಯಿಂದ ವಿಮೋಚನೆಗೊಳ್ಳುವ ಹಾದಿಯನ್ನು ತೋರಲಿಲ್ಲ. ಅಂಬೇಡ್ಕರ್‌ರಲ್ಲಿ ಜಾತಿ ಪ್ರಶ್ನೆಗೆ ಅಧ್ಯಾತ್ಮವಾದಿ ನಿಲುವು, ಕಾನೂನುಗಳಿಂದ ಜಾತಿ ವಿನಾಶ ಸಾಧ್ಯವೆಂಬ ಭಾವನೆ ಇದ್ದುದರಿಂದ ವಿಮೋಚನೆ, ಸಮಾನತೆ ಹಾಗೂ ಭ್ರಾತೃತ್ವದ ಬೂರ್ಷ್ವಾ ಕ್ರಾಂತಿಕಾರಿ ನಿಯಮಗಳಿಂದ ಸ್ಫೂರ್ತಿ ಪಡೆದರೂ ಬಂಡವಾಳಶಾಹಿ ಸರ್ವಾಧಿಕಾರದ ಮೂಲಭೂತ ಜನ ವಿರೋಧಿ ಸ್ವಭಾವವನ್ನು ಅವರು ಗುರುತಿಸಲಿಲ್ಲ. ಅವರು ನಿರ್ದಿಷ್ಟವಾಗಿ ಸಾಮ್ರಾಜ್ಯವಾದದ ಶೋಷಕ, ಪ್ರತಿಗಾಮಿ ಸ್ವಭಾವವನ್ನಾಗಲಿ ಅಥವಾ ಅದರ ವಾರಸುದಾರರಾದ ದಲ್ಲಾಳಿ ಊಳಿಗಮಾನ್ಯ ಭಾರತದ ಪ್ರಭುತ್ವದ ಗುಣವನ್ನಾಗಲೀ ಗುರುತಿಸಲಿಲ್ಲ. ಹೀಗಾಗಿ ಕೊನೆಯವರೆಗೂ ರಾಜಕೀಯದಲ್ಲಿ ಪ್ರಾತಿನಿಧ್ಯ, ರಾಜ್ಯಾಂಗ ದಲ್ಲಿ ಮೀಸಲಾತಿ ಹಕ್ಕುಗಳನ್ನು ಕಲ್ಪಿಸುವುದರಿಂದ ಸಾಮಾಜಿಕ ಬದಲಾವಣೆ ತರಲು ಹೊರಟರು.

ಸೈದ್ಧಾಂತಿಕವಾಗಿ ಅಂಬೇಡ್ಕರ್‌ರವರು ಉದಾರ ಪ್ರಜಾ ಪ್ರಭುತ್ವವಾದಿ ಹಾಗೂ ಬಂಡವಾಳಶಾಹಿ ಸುಧಾರಕರಾಗಿದ್ದ ರೆಂಬುದನ್ನು ನಾವು ಗುರುತಿಸಬಹುದು.

ಅಂಬೇಡ್ಕರ್‌ರ ವಿಚಾರಗಳಿಂದ ಸ್ಫೂರ್ತಿಗೊಂಡ ದಲಿತ ಜನಾಂಗ, ಮುಖ್ಯವಾಗಿ ಮಧ್ಯಮ ವರ್ಗ ನಾಯಕತ್ವದಡಿ ಯಲ್ಲಿ ಪ್ರಾರಂಭಗೊಂಡ ಮಹಾರಾಷ್ಟ್ರದ 'ದಲಿತ ಪ್ಯಾಂಥರ್ಸ್', ಕರ್ನಾಟಕದಲ್ಲಿ 'ದಲಿತ ಸಂಘರ್ಷ ಸಮಿತಿ' ಹಾಗೂ ಆಂಧ್ರದ 'ದಲಿತ ಮಹಾಸಭೆ' ಹೋರಾಟಗಳು ಸುಧಾರಣಾ ಹಾದಿ ಹಿಡಿದು ನುಚ್ಚುನೂರಾಗಿ ಆಳುವ ವರ್ಗ ಗಳೊಂದಿಗೆ ಸಂದಾನ ರಾಜೀ ಹೋರಾಟಗಳನ್ನು ನಡೆಸುತ್ತಾ ಚಳುವಳಿ ಕಾರ್ಯಕ್ರಮಗಳನ್ನು ಕೈಬಿಟ್ಟಿರುವುದನ್ನು ಕಾಣುತ್ತೇವೆ.

ಜಾತಿ ಪ್ರಶ್ನೆಯನ್ನು ಕಮ್ಯೂನಿಸ್ಟ್‌ರು ಗ್ರಹಿಸಿದ್ದು ಹೇಗೆ?

ಸಿ.ಪಿ.ಐ. ಜಾತಿ ಭೇದ, ಅಸಮಾನತೆ ಮತ್ತು ಬ್ರಾಹ್ಮಣವಾದಿ ಸಿದ್ಧಾಂತದ ವಿರುದ್ಧ ಹೋರಾಟಗಳನ್ನು ರೂಪಿಸಲಿಲ್ಲ. ಕಾರಣ ಜಾತಿ ಮೇಲ್ರಚನೆಗಷ್ಟೇ ಸಂಬಂಧಿಸಿದ್ದು ಎಂದು ತಪ್ಪಾಗಿ ಗ್ರಹಿಸಿ ಉತ್ಪಾದನಾ ಕ್ಷೇತ್ರದಲ್ಲಿ, ಅಂದರೆ ಮೂಲ ರಚನೆಯಲ್ಲಿಯೂ ಜಾತಿಯ ಅಸ್ತಿತ್ವವಿದೆ ಎನ್ನವುದನ್ನು ಅದು ಅರ್ಥ ಮಾಡಿಕೊಳ್ಳಲಿಲ್ಲ.

ಊಳಿಗಮಾನ್ಯ ಹಾಗೂ ದಲ್ಲಾಳಿ ವರ್ಗಗಳೊಂದಿಗಿನ ಸಾಮ್ರಾಜ್ಯಶಾಹಿಯ ಮೈತ್ರಿಯನ್ನು ನೋಡದೆ ಶತಮಾನ ಗಳಷ್ಟು ಹಳೆಯದಾದ ಜಾತಿ ವ್ಯವಸ್ಥೆಯನ್ನು ಹಾಗೆಯೇ ಉಳಿಸಿಕೊಂಡು ತಮ್ಮ ಅಗತ್ಯಕ್ಕೆ ತಕ್ಕಂತೆ ಬದಲಾಯಿಸುವ ಸಾಮ್ರಾಜ್ಯಶಾಹಿ ಹಾಗೂ ದಲ್ಲಾಳಿ ವರ್ಗದ ಆಸಕ್ತಿಗಳನ್ನು ಸರಿಯಾಗಿ ಗುರುತಿಸಲಿಲ್ಲ.

ಕೃಷಿ ಪ್ರಧಾನವಾದ ಈ ದೇಶದಲ್ಲಿ ಸಣ್ಣ ಭೂರಹಿತ ರೈತರ ಹಾಗೂ ಕೃಷಿ ಕೂಲಿಗಾರರ ಹಿತಾಸಕ್ತಿಗಳನ್ನು ಎತ್ತಿ ಹಿಡಿಯುವಂತೆ ರೈತರನ್ನು ಸಂಘಟಿಸುವ ಬಗ್ಗೆ ಅವರು ಪ್ರಾಮುಖ್ಯತೆ ನೀಡಲಿಲ್ಲ. ಊಳಿಗಮಾನ್ಯತೆಯ ಪ್ರಣಾಳಿಕೆ ಯಾದ ಜಾತಿ ವ್ಯವಸ್ಥೆಯು ಸೂಪರ್‌ಫಿಶಿಯಲ್ ಎಂದು ಗ್ರಹಿಸಿ, ಮೂಲರಚನೆ- ಮೇಲ್ ರಚನೆಯ ಸಂಯೋಜನೆ ಯಿಂದ ಜಾತಿ ವ್ಯವಸ್ಥೆಯನ್ನು ಆಳುವ ವರ್ಗಗಳು ತಮ್ಮ ಶೋಷಣಾ ಆಳ್ವಿಕೆ ಬಯಸಿಕೊಳ್ಳುತ್ತಿರುವುದನ್ನು ಗ್ರಹಿಸದೆ

ನಿರ್ದಿಷ್ಟ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಲಿಲ್ಲ ಕಮ್ಯೂನಿಸ್ಟ್‌ರು ಜಾತಿ ಪ್ರಶ್ನೆಯನ್ನು ಸರಿಯಾಗಿ ಕೈಗೆತ್ತಿಕೊಂಡಿದ್ದರೆ ಅಂಬೇಡ್ಕರ್‌ರ ಜಾತಿ ವಿರೋಧಿ ಚಳುವಳಿಯ ಪ್ರಶ್ನೆ ಉದ್ಭವಿಸುತ್ತಿರಲಿಲ್ಲ ಎಂಬ ವಾದವೂ ಇದೆ.

ಜಾತಿ ಪ್ರಶ್ನೆ ಕುರಿತು ಕಮ್ಯೂನಿಸ್ಟ್ ಕ್ರಾಂತಿಕಾರಿಗಳು ಏನು ಹೇಳುತ್ತಾರೆ?

ಮಾರ್ಕ್ಸ್‌ವಾದ- ಲೆನಿನ್‌ವಾದ- ಮಾವೋವಾದ ಸಿದ್ಧಾಂತದ ಮಾರ್ಗದರ್ಶನದಲ್ಲಿ ಪ್ರಪಂಚ ಕ್ರಾಂತಿಯ ಭಾಗವಾದ ಭಾರತದ ನೂತನ ಪ್ರಜಾತಾಂತ್ರಿಕ ಕ್ರಾಂತಿಯ ಗೆಲುವಿಗಾಗಿ ಆತ್ಮತ್ಯಾಗ ರಾಜಕೀಯಗಳೊಂದಿಗೆ ಹೋರಾಡುತ್ತಿರುವ ಕೆಲವು ಕಮ್ಯೂನಿಸ್ಟ್ ಕ್ರಾಂತಿಕಾರಿಗಳು (ಗುಂಪುಗಳು) ಜಾತಿ ನಿರ್ಮೂಲನೆ ಕುರಿತು ಹೇಳುವುದು ಹೀಗೆ:

೧. ವ್ಯವಸ್ಥೆ ಬದಲಾದಾಗ ಜಾತಿ ಮೇಲ್ರಚನೆ ಆಗಿರುವುದರಿಂದ ಅದು ತಾನಾಗಿಯೇ ನಿರ್ಮೂಲನೆಯಾಗುತ್ತದೆ. ಇದಕ್ಕೆ ಪ್ರತ್ಯೇಕ ಕಾರ್ಯಕ್ರಮಗಳು ಹಾಗೂ ಹೋರಾಟಗಳು ಬೇಕಿಲ್ಲ. ಅಂದರೆ ವರ್ಗ ಹೋರಾಟಗಳನ್ನಷ್ಟೆ ಹಮ್ಮಿಕೊಳ್ಳಬೇಕೆನ್ನುವುದು ಇದರ ಅರ್ಥ. ಇದು ಯಾಂತ್ರಿಕವಾದದ್ದು. ಕ್ರಾಂತಿಯ ನಂತರದ ಕಾಲಘಟ್ಟದಲಿ ಜಾತಿ ನಿರ್ಮೂಲನೆ ಆಗುತ್ತದೆಂಬುದು ಇವರ ವಾದ.

೨. ಜಾತಿ ಹೋರಾಟಕ್ಕೂ ವರ್ಗ ಹೋರಾಟಕ್ಕೂ ಯಾವ ವ್ಯತ್ಯಾಸವೂ ಇಲ್ಲ ಎಂದು ಜಾತಿ ಹೋರಾಟವನ್ನು ವರ್ಗ ಹೋರಾಟವಾಗಿ ವಕ್ರೀಕರಿಸುವ ಕ್ರಾಂತಿಕಾರಿಗಳೂ ಇದ್ದಾರೆ. ಇದು ಮತ್ತೊಂದು ಕೆಟ್ಟ ಪ್ರವೃತ್ತಿ.

ಈ ಎರಡೂ ಪ್ರವೃತ್ತಿಗಳು ಮಾರ್ಕ್ಸ್‌ವಾದಕ್ಕೆ ವಿರುದ್ಧವಾದುವು.

೩. ದಲಿತ ಅಂಬೇಡ್ಕರ್ ವಾದಿಗಳ, ದಲಿತ ಮಾರ್ಕ್ಸ್‌ವಾದಿಗಳ ಪರಿಸ್ಥಿತಿಯಂತೂ ಹೇಳತೀರದು. ಇವರು ಭಾರತದಲ್ಲಿ ಮೊದಲು ಜಾತಿ ಹೋರಾಟ ನಡೆಯಬೇಕೆಂದು, ಈ ಕೆಲಸ ವನ್ನು ಕಮ್ಯೂನಿಸ್ಟ್ ಕ್ರಾಂತಿಕಾರಿಗಳು ಕೈಗೆತ್ತಿಕೊಳ್ಳಬೇಕೆಂದೂ, ದಮನಿತ ಜಾತಿಗಳು ಮೇಲ್ಜಾತಿಗಳ ವಿರುದ್ಧ ಹೋರಾಡಬೇಕೆಂದು, ದಲಿತ ಪ್ರಭುತ್ವವನ್ನು ಸ್ಥಾಪಿಸಬೇಕೆಂದು ವಾದಿಸಿದ ಸಂದರ್ಭಗಳೂ ಇವೆ. ಕೆಳ ಹಾಗೂ ಮೇಲ್ಜಾತಿಗಳ ಮಧ್ಯೆ ಇರುವ ವೈರುಧ್ಯವೆ ಪ್ರಧಾನವಾದದ್ದೆಂದು ತಾತ್ವೀಕರಿಸುವುದರ ಮೂಲಕ ಜಾತಿ ವಿರೋಧಿ ಹೋರಾಟವನ್ನು ಮಾಡುವುದೇ ಕ್ರಾಂತಿಕಾರಿಗಳ ಮುಂದಿರುವ ಪ್ರಧಾನ ಕರ್ತವ್ಯವೆಂದು ವಾದಿಸಿದ ದಲಿತ ಮೂಲಭೂತವಾದಿಗಳೂ ಇದ್ದಾರೆ. ಇದನ್ನು ಗುರುತಿಸದಿರುವುದೇ ಕಮ್ಯೂನಿಸ್ಟ್‌ರ ವೈಫಲವೆಂದು ದಲಿತ ಅಂಬೇಡ್ಕರ್ ವಾದಿಗಳ, ದಲಿತ ಮಾರ್ಕ್ಸ್‌ವಾದಿಗಳ ಆಪಾದನೆಯೂ ಇದೆ.

ಈ ಮೇಲಿನ ವಾದಗಳ ಸಾರಾಂಶ ಏನೆಂದರೆ, ಜಾತಿ ಕ್ರಾಂತಿಯ ನಂತರ ವರ್ಗ ಸಂಘರ್ಷ ನಡೆಯಬೇಕು. ಸಾಂಸ್ಕೃತಿಕ-ಸಾಮಾಜಿಕ ಕ್ರಾಂತಿಯು ರಾಜಕೀಯ ಕ್ರಾಂತಿಗಿಂತ ಮುನ್ನವೆ ನಡೆಯಬೇಕೆನ್ನುವುದನ್ನು ದಲಿತ ಅಂಬೇಡ್ಕರ್- ಮಾರ್ಕ್ಸ್‌ವಾದಿಗಳು ಜಾತಿ ಹೋರಾಟದ ನೆಪದಲ್ಲಿ ವರ್ಗ ಹೋರಾಟವನ್ನು ಬದಿಗೊತ್ತುತ್ತಿದ್ದಾರೆ. ಜನರು ತಮ್ಮ ಶತ್ರುಗಳಾರು, ಮಿತ್ರರಾರು ಎನ್ನುವುದನ್ನು ಗುರುತಿಸದಂತೆ ಮಾಡುತ್ತಿದ್ದಾರೆ. ಭಾರತದಲ್ಲಿನ ಜಾತಿ ಶೋಷಣೆಯ ವ್ಯವಸ್ಥೆಯನ್ನು ಪ್ರಸ್ತುತ ವ್ಯವಸ್ಥೆಯ ಚೌಕಟ್ಟಿನೊಳಗೆ ಸಾಮಾಜಿಕ ಹೋರಾಟವನ್ನು ಮಾಡುವುದರ ಮೂಲಕ ಜಾತಿಯನ್ನು ನಾಶ ಮಾಡಬಹುದೆಂದು ಭ್ರಮೆಯನ್ನು ಜನರಲ್ಲಿ ಸೃಷ್ಟಿಸುತ್ತಿದ್ದಾರೆ.

ದಲಿತ ಅಂಬೇಡ್ಕರ್‌ವಾದಿಗಳ, ದಲಿತ ಮಾರ್ಕ್ಸ್‌ವಾದಿಗಳ ಪರಿಸ್ಥಿತಿಯಂತೂ ಹೇಳತೀರದು. ಭಾರತದಲ್ಲಿ ಮೊದಲು ಜಾತಿ ಹೋರಾಟ ನಡೆಯಬೇಕೆಂದು, ಈ ಕೆಲಸವನ್ನು ಕಮ್ಯೂನಿಸ್ಟ್ ಕ್ರಾಂತಿಕಾರಿಗಳು ಕೈಗೆತ್ತಿಕೊಳ್ಳಬೇಕೆಂದೂ, ದಮನಿತ ಜಾತಿಗಳು ಮೇಲ್ಜಾತಿಗಳ ವಿರುದ್ಧ ಹೋರಾಡಬೇಕೆಂದು, ದಲಿತ ಪ್ರಭುತ್ವವನ್ನು ಸ್ಥಾಪಿಸಬೇಕೆಂದು ವಾದಿಸಿದ ಸಂದರ್ಭಗಳೂ ಇವೆ. ಕೆಳ ಹಾಗೂ ಮೇಲ್ಜಾತಿಗಳ ಮಧ್ಯೆ ಇರುವ ವೈರುಧ್ಯವೆ ಪ್ರಧಾನವಾದದ್ದೆಂದು ತಾತ್ವೀಕರಿಸುವುದರ ಮೂಲಕ ಜಾತಿ ವಿರೋಧಿ ಹೋರಾಟವನ್ನು ಮಾಡುವುದೇ ಕ್ರಾಂತಿಕಾರಿಗಳ ಮುಂದಿರುವ ಪ್ರಧಾನ ಕರ್ತವ್ಯವೆಂದು ವಾದಿಸಿದ ದಲಿತ ಮೂಲಭೂತವಾದಿಗಳೂ ಇದ್ದಾರೆ.

ಜಾತಿ-ವರ್ಗ ಒಂದು ಮಟ್ಟದಲ್ಲಿ ಬೆಸೆದುಕೊಂಡಿರುವುದು ನಿಜವಾದರೂ ಅವೆರಡೂ ಒಂದೇ ಅಲ್ಲ ಎಂಬುದನ್ನು ಗ್ರಹಿಸಬೇಕಾಗಿದೆ. ಆದರೆ ದಲಿತ ವಿಷಯದಲ್ಲಿ ಇವೆರಡೂ ಒಂದೇ.

ಆಳುವ ವರ್ಗಗಳಿಗೆ ಸೇವೆ ಮಾಡುವ ಕೆಲ ದಲಿತ ಬುದ್ಧಿಜೀವಿ ಹಾಗೂ ನೌಕರಿ ವರ್ಗವನ್ನು ಹೊರತುಪಡಿಸಿದರೆ, ಬಹುಪಾಲು ಮಂದಿ ಶೇ. ೯೫ ಕ್ಕಿಂತಲೂ ಹೆಚ್ಚು ಗ್ರಾಮೀಣ ಪ್ರದೇಶದಲ್ಲಿನ ಕೃಷಿ ಕೂಲಿಗಾರರ ಬಡ ರೈತ ಹಾಗೂ ಮತ್ತಿತರ ಕ್ರಾಂತಿಕಾರಿ ವರ್ಗಗಳಿಗೆ ಸೇರಿದವರಾಗಿದ್ದಾರೆ. ಹಿಂದುಳಿದ ವರ್ಗಗಳಲ್ಲಿ ಒಂದು ದೊಡ್ಡ ಸ್ತರವು ಭೂಮಾಲೀಕರಾಗಿ, ಶ್ರೀಮಂತ ಹಿಂದುಳಿದ ವರ್ಗಗಳಲ್ಲಿ ಕೆಲವರು ಶೋಚನೀಯ ಸ್ಥಿತಿ ಯಲ್ಲಿದ್ದರೆ, ಕೆಲವರು ಉತ್ತಮ ಸ್ಥಿತಿಯಲ್ಲಿದ್ದಾರೆ, ಬಹುಪಾಲು ಕಾರ್ಮಿಕ ವರ್ಗ ಸ್ವಭಾವವನ್ನು ಹೊಂದಿರುವುದರಿಂದ ಕ್ರಾಂತಿಯನ್ನು ಬಯಸುತ್ತಾರೆ. ಇಲ್ಲಿ ಅವರನ್ನು ಜಾತಿ ಆಧಾರದ ಮೇಲೆ ಸಂಘಟಿಸಬೇಕೋ ಅಥವಾ ವರ್ಗದ ಆಧಾರದ ಮೇಲೆ ಸಂಘ ಟಿಸಬೇಕೋ ಎನ್ನುವುದು ಗಂಭೀರವಾದ ಪ್ರಶ್ನೆ. ದಲಿತರಿಗೂ ಈ ಪ್ರಶ್ನೆ ಅನ್ವಯಿಸುತ್ತದೆ. ಜಾತಿ ವ್ಯವಸ್ಥೆಯ ವಿರುದ್ಧ ಹೋರಾಡುವಾಗ ದಲಿತ-ಹಿಂದುಳಿದವರನ್ನು ವರ್ಗದ ಆಧಾರದ ಮೇಲೆ ಸಂಘಟಿಸಬೇಕು.

ಮೇಲ್ಜಾತಿಗಳಲ್ಲಿ ಎಲ್ಲರೂ ಶೋಷಕರು, ಕೆಳಜಾತಿಗಳಲ್ಲಿ ಶೋಷಕರೇ ಇಲ್ಲ ಎನ್ನುವುದು ತಪ್ಪು. ಜಾತಿ ಶೋಷಣೆಗೆ ಗುರಿಯಾಗುತ್ತಿರುವ ದಮನಿತರೆಲ್ಲರನ್ನೂ ಸಂಘಟಿಸಿ ಜಾತಿ ವಿರೋಧಿ ಹೋರಾಟವನ್ನು ನೂತನ ಪ್ರಜಾತಾಂತ್ರಿಕ ಕ್ರಾಂತಿಯ ಅವಿಭಾಜ್ಯ ಅಂಗವಾಗಿ ಮಾರ್ಪಡಿಸಬೇಕಿದೆ. ಪ್ರತ್ಯೇಕತವಾದಿ ಚಳವಳಿಗಳಿಂದ ಜಾತಿಯನ್ನು ನಿರ್ಮೂಲನೆ ಮಾಡಲು ಅಸಾಧ್ಯವೆಂದು ಪ್ರಜಾತಾಂತ್ರಿಕ ಕ್ರಾಂತಿಯಿಂದ ಜಾತಿ ನಿರ್ಮೂಲನೆಗೆ ಭೌತಿಕ ನೆಲೆಯನ್ನು ಒದಗಿಸುತ್ತದೆಂಬುದನ್ನು ಗುರುತಿಸಬೇಕಾಗಿದೆ.

ಜಾತಿ ಕೇವಲ ಮೇಲ್‌ರಚನೆಗೆ ಸಂಬಂಧಿಸಿದ್ದೆಂದು ವಾದಿಸುವುದು ಸರಿಯಾದುದಲ್ಲ. ಅದು ಮಾರ್ಕ್ಸ್‌ವಾದಕ್ಕೆ ವಿರುದ್ಧವಾದುದ್ದು ಅದು ಮೂಲರಚನೆಯ ಭಾಗವೂ ಆಗಿದೆ ಎಂಬುದನ್ನು ಗುರುತಿಸಬೇಕಾಗಿದೆ. ಊಳಿಗಮಾನ್ಯತೆಯ ಕಾಲಘಟ್ಟದಲ್ಲಿ ಮೂಲರಚನೆಯಲ್ಲಿನ ಜಾತಿಯ ಪಾತ್ರವು ಅತ್ಯಂತ ಬಲಶಾಲಿಯಾಗಿದ್ದು ಅರೇ ಊಳಿಗಮಾನ್ಯ ಹಾಗೂ ಬಂಡವಾಳಶಾಹಿ ಸಂಬಂಧಗಳ ಬೆಳವಣಿಗೆಯೊಂದಿಗೆ ಅದು ಕಡಿಮೆ ಆಗಿದೆ. ಆದರೆ, ಅರೇ ಊಳಿಗಮಾನ್ಯ ವ್ಯವಸ್ಥೆ ಚಾಲ್ತಿಯಲ್ಲಿರುವವರೆಗೂ ಬಂಡವಾಳಶಾಹಿ ವರ್ಗವು ತನ್ನ ಶೋಷಣೆ ಹಾಗೂ ಆಳ್ವಿಕೆಗೆ ಅದನ್ನು ಬಳಸಿಕೊಳ್ಳುವವರೆಗೂ ಜಾತಿ ತಳಹದಿ ಅಥವಾ ಮೂಲ ರಚನೆಯಲ್ಲಿ ತನ್ನ ಪಾತ್ರವನ್ನು ನಿರ್ವಹಿಸುತ್ತಿರುತ್ತದೆ.

ಜಾತಿ ನಿರ್ಮೂಲನೆಯನ್ನು ಮೂಲರಚನೆ ಹಾಗೂ ಮೇಲ್‌ರಚನೆಯ ಮಟ್ಟದಲ್ಲಿ ಅಹರ ಆರಂಭದಿಂದ ಸಂಪೂರ್ಣ ನಾಶಮಾಡುವವರೆಗೂ ಎಲ್ಲಾ ರೀತಿಯಲ್ಲೂ ಜಾತಿ ವಿರುದ್ಧ ಸಮರ ನಡೆಸಬೇಕಾಗಿದೆ.

ಜಾತಿ ವ್ಯವಸ್ಥೆಗೆ ಆರಂಭವೊಂದೇ ಇರುವುದಿಲ್ಲ, ಬೆಳವಣಿಗೆ ಹಾಗೂ ಅಂತ್ಯವನ್ನೂ ಹೊಂದಿದೆ.

ಪ್ರಕೃತಿಯಲ್ಲಿ ಹೇಗೆ ಬದಲಾವಣೆಗಳು ಆಗುತ್ತಿವೆಯೋ, ಮಾನವ ಸಮಾಜದ ವಿವಿಧ ಭಾಗಗಳಲ್ಲಿ ಬದಲಾವಣೆಗಳು ಆಗುತ್ತಿರುವಂತೆ, ಜಾತಿ ವ್ಯವಸ್ಥೆಯಲ್ಲೂ ಬದಲಾವಣೆ / ಪರಿವರ್ತನೆ ಆಗಲೇಬೇಕು. ೧೨,೧೬,೧೮ ಹಾಗೂ ೨೦ನೇ ಶತಮಾನಗಳಲ್ಲಿದ್ದ ಜಾತಿ ಬಿಗಿಮುಷ್ಟಿ ಈಗಿಲ್ಲ, ಬದಲಾಗಿದೆ. ಆದರೆ ನಾಶ ಆಗಿಲ್ಲ.

ಜಾತಿ ವ್ಯವಸ್ಥೆಯು ಉತ್ಪಾದನೆಗೆ ಸಹಕರಿಸುವ ಒಂದು ಸಾಧನವಾಗಿ ತನ್ನ ಪಾತ್ರವನ್ನು ಕಳೆದುಕೊಂಡಿದೆ ಎಂದು ಹೇಳಬಹುದು. ರೂಪದಲ್ಲಿ ಜಾತಿ ಆಧಾರಿತ ವೃತ್ತಿಗಳು ಅಸ್ತಿತ್ವದಲ್ಲಿರುವುದಾದರೂ ಬಂಡವಾಳಶಾಹಿ ಮಾರುಕಟ್ಟೆಯ ದಾಳಿಯಿಂದ ಅವು ಕ್ರಮೇಣ ಬದಲಾಗುತ್ತಿವೆ.

ಜಾತಿ ಸಮಸ್ಯೆಯು ಸಾರಾಂಶದಲ್ಲಿ ವರ್ಗ ಸಮಸ್ಯೆಯೇ ಆಗಿದೆ. ಮಾರ್ಕ್ಸ್‌ವಾದಿ ದೃಷ್ಟಿಕೋನದಲ್ಲಿ ಗ್ರಹಿಸಿದಾಗ ಸಮಾಜದಲ್ಲಿರುವ ಈಗಿನ ಎಲ್ಲಾ ವೈರುಧ್ಯವೂ ಜಾತಿ ರೂಪದಲ್ಲಿ ಹೇಗೆ ವ್ಯಕ್ತವಾಗುತ್ತದೆ ಎನ್ನುವುದನ್ನು ನಾವು ನೋಡಬಹುದು. ನಮ್ಮ ದೇಶದ ಕೃಷಿಯನ್ನು ತೆಗೆದುಕೊಂಡರೆ ರೈತರಲ್ಲಿ ಶೇ. ೫ ಕ್ಕಿಂತಲೂ ಹೆಚ್ಚಿನ ಊಳಿಗಮಾನ್ಯ ಭೂಮಾಲೀಕರು ಹಾಗೂ ದಲ್ಲಾಳಿ ಭೂಮಾಲೀಕರು ಇರಲಾರರು. ಇಂದು ಶೇ. ೯೦ ಕ್ಕಿಂತಲೂ ಹೆಚ್ಚಿನ ಭೂಮಾಲೀಕ ಕುಟುಂಬಗಳು ಮೇಲ್ಜಾತಿಗಳಿಗೆ (ಗೌಡ, ಲಿಂಗಾಯತ, ಬ್ರಾಹ್ಮಣ) ಸೇರಿದವರಾಗಿದ್ದಾರೆ. ಹೀಗೆಯೇ ಹೆಚ್ಚಿನ ಅಂದರೆ ಶೇ. ೯೦ಕ್ಕಿಂತಲೂ ಬಡ ರೈತರು ಅಥವಾ ಕೂಲಿಗಾರರು ದಲಿತ, ಹಿಂದುಳಿದ ಜಾತಿಗಳಿಗೆ ಸೇರಿದವರಾಗಿದ್ದಾರೆ.

ಹೀಗಾಗಿ ವ್ಯವಸಾಯ ಕ್ರಾಂತಿಯ ಮೂಲಕವೇ ಜಾತಿ ಹೋರಾಟಗಳನ್ನು ವರ್ಗ ಸಂಘರ್ಷದಲ್ಲಿ ಬೆಸೆದು ಯಶಸ್ವಿ ಪ್ರಜಾತಾಂತ್ರಿಕ ಕ್ರಾಂತಿಯಲ್ಲಿ ಜಾತಿ ನಿರ್ಮೂಲನೆಯ ಪ್ರಶ್ನೆ ಅಡಗಿದೆ ಎಂಬುದನ್ನು ಚರ್ಚೆ, ವಿಮರ್ಶೆಗಳ ಮೂಲಕ ತಿಳಿಯೋಣ, ನೂತನ ಸಮಾಜಕ್ಕಾಗಿ ಶ್ರಮಿಸೋಣ.

ವಿಮರ್ಶೆಗಳಿಗೆ ಸ್ವಾಗತ. □

ಮೂರು ಕವನಗಳು :

○ಟಿ. ಎಸ್. ರಾಜೇಂದ್ರ ಪ್ರಸಾದ್, ಹೊಸದುರ್ಗ

ಅಲ್ಲಿ ಹೆಣ ರಣರುದ್ರ ಮೌನ!

ಅಲ್ಲಿ ಹೆಣ ರಣರುದ್ರ ಮೌನ
ಜೀವಕಿಲ್ಲ ಮೂರುಕಾಸು ಕಿಮ್ಮತಿ
ದುಮ್ಮಾನ ಕೊರೆದು ಎದೆಯೊಳಗೆ
ಬಡಿಗುಂಡು ಮದ್ದುಗಳ ರಾಕ್ಷಸ ಕುಣಿತ
ಜನವಿಲ್ಲ ಸತ್ತವರ ಉತ್ತರ ಕ್ರಿಯೆಗಳಿಗೆ
ಋಣವೆಲ್ಲ ಕಾಗೆ ಹದ್ದುಗಳಿಗೆ ?

ಅಲ್ಲಿ ವಾಸನೆಯೇ ದರ್ಬಾರು
ಕೊಲ್ಲಿಯಲಿ ಬಿಸಾಡಿದ ಬದುಕು
ಕರಿನೆರಳ ಸಮರ. ಷೆಲ್ಲಿನ ದಟ್ಟ ಚಾಮರ
ಬೂಟುಗಳು ಬರೆದ ಭಯದ ಗೀತೆ
ಬೊಕ್ಕೆಯೆದ್ದ ಮನಸುಗಳ ಮಾನವ ಬಾಂಬು
ಹೆಜ್ಜೆಯಡಿ ಕಾಯ್ದಿರಿಸಿದ ಸಾವು!

ಆಕ್ರಾಂದನವೇ ಹೋದಂತೆ ಮೂರ್ಛೆ
ಕಿರಾತಕರ ಅಧಿಕಾರ ದಾಹಕೆ
ನೆಲ ತೊಳೆದ ರಕ್ತ
ಅಲ್ಲಿ ಹೆಣ, ರಣ ರುದ್ರ ಮೌನ!

ಕಾರ್ಗಿಲ್ಲು, ಚೆಚನ್ಯ, ಬಾಗ್ದಾದು, ನಮೀಬಿಯಾ
ಲಂಕೆ ಹೋದ ಹೋದಂತೆ
ಬಾಚಿಕೊಂಡಿದ ಪ್ರಜಾಪ್ರಭುವಿನ ನಾಲಿಗೆ
ಜಗದ ಮರಣ ಮೃದಂಗ!

ಸರಿರಾತ್ರಿ

ಆ ಸರಿ ರಾತ್ರಿ
ಚದುರಿ ಕರಿಮೋಡ ಜಾಡಿಸಿ ನಿದ್ದೆ
ಹಸಿದು ಹರಿದುಹಾಕಲು ಕುಂತಜನ
ಬಾಚಿಕೊಳ್ಳಲು ಸಿಂಧೂನದಿಯ
ಜಿನ್ನಾ ಮುನ್ನಾಗಳು ಹಾರಾಡಿದ ದಿನ ಹದ್ದಾಗಿ!

ಆ ಸರಿ ರಾತ್ರಿ
ಪ್ರಜಾ ಪ್ರಭುವಿನ ಮಂಚದೊಳಗೆ
ಮದನ ಹಾವಾಗಿ ಹೆಡೆಬಿಚ್ಚಿ
ಗುಲಾಬಿ ಹೂವಿನ ಗೆಳೆಯನ
ಗಲ್ಲಾ ಪೆಟ್ಟಿಗೆಯಲಿ ಅಡಾ ಬಿದ್ದದಿನ!

ಸದ್ದಡಗಿ ಹಿಂಸೆ ಬ್ರೂಣ
ಹಾರಿದವು ಪಾರಿವಾಳ ಎದ್ದುಬಿದ್ದು
ಹಣ್ಣು ಹಣ್ಣು ಮುದುಕನ ಕನಸು
ಜೀವಂತ!

ಈ ಸರಿ ರಾತ್ರಿ ಪುಟ ಮಗುಚಿ ಚರಿತ್ರೆ
ಹಣ್ಣು ಹಣ್ಣು ಮುದುಕನ ಕಣ್ಣಲಿ ಹನಿದು ರಕ್ತ
ಗಲ್ಲಿ ಗಲ್ಲಿ ಗಳಲಿ ಹರಾಜಿಗಿದೆ ದೇಶ
ಶೀತಲ ತಿಕ್ಕಾಟದಲಿ ಹೊಸಕಿದೆ ಕಾಲ!

ಪ್ರಜಾ ಪ್ರಭುಗಳ ಪಾಳೆ ಪಟ್ಟನಲಿ
ಕಾಶ್ಮೀರದ ಕೊಲ್ಲಿಯಲಿ
ನಕ್ಸಲ್, ಬೋಡೋಗಳ ಕೋವಿಯಲಿ
ಜೆಹಾದಿಗಳ ಮಾನವ ಬಾಂಬುಗಳಲಿ ಹೆಣವಾಗಿ
ಉತ್ತರ ಕ್ರಿಯಾದಿಗಳಾಗದೇ ಎಲುಬಾಗಿ ಬಿದ್ದ ಜನ!

ಒಂದಿಷ್ಟು ಸಂವಿಧಾನ ಪ್ರಣಾಳಿಕೆ.....!

ಕೆಂಡಕಾರಿದೆ ಆಕಾಶವೇ ದಿಕ್ಕು ತಪ್ಪಿ
ನಿಂತಿದೆ ಭುವನಕೆ ಕಿರಳಿ ಉರಿವ ಚೆಂಡಾಗಿ
ಬತ್ತಿ ಬಾವಿ ಕೊಳ್ಳ ಹಳ್ಳ
ಬಾಯಿಗೆ ಬಂದ ಬದುಕು!
ಬಾಳ ತುಂಬಾ ಕಪ್ಪು ಕಪ್ಪಾದ ನುಸುಕು !

ಇಂತಹ ಕಂಗೆಟ್ಟ ದಿನಗಳಲಿ
ಪಟ್ಟದ ಮೆರವಣಿಗೆ ಪ್ರಜಾಪ್ರಭುವಿಗೆ
ಅಧಿಕಾರ ಸೂತ್ರಧಾರಣೆಗೆ
ಒಂದಿಷ್ಟು ಚುನಾವಣೆ !

ಆಳುವ ಪ್ರಭುವಿಗೆ ಸ್ಲೋ-ಗನ್ನುಗಳು
ಆಮಿಷ ಪ್ರಸ್ತಾವನೆಗಳು
ಆಶ್ವಾಸನೆ ಅಫೀಮುಗಳು
ದುಂಡು ಮೇಜಿನ ತುಂಬಾ ಮಧುಪಾನ
ಜೊತೆಗೆ ಒಂದಿಷ್ಟು ಪ್ರಣಾಳಿಕೆ !

'ಅಖಾಡ' ಜನ ವಿಕ್ರಯಕೆ
ಬಂದೂಕ ನಳಿಕೆಗೆ ಅಡಾ ಬಿದ್ದ ಭಯ
ಪ್ರಜಾ ಪ್ರಭುವಿನ ಪಟ್ಟಕೆ !

ನಿರಂತರ ... ಜನ
ಬಂದಾಗಲೆಲ್ಲಾ ಚುನಾವಣೆ
ಖರೀದಿಯಾಗುತ್ತಾರೆ ಆಮಿಷಕೆ, ಆತಂಕಕೆ !





ಹೊಸ ಪುಸ್ತಕ

ಮಾತೆಯರು ಮಾನ್ಯರಾಗಿದ್ದಾಗ

ಲೇ. ದೇವಿಪ್ರಸಾದ್ ಚಟ್ಟೋಪಾಧ್ಯಾಯ

ಬೆಲೆ : ರೂ ೨೦/-

ಕೃಷಿ ಕೆಲಸದ ಆವಿಷ್ಕಾರವೇ ನಾಗರಿಕತೆಗಳ ಬುನಾದಿ. ಆದರೆ ಈ ಆವಿಷ್ಕಾರದ ಮೂಲ ಕಾರಣಕರ್ತರು ಯಾರು? ಪುರುಷರೋ ಸ್ತ್ರೀಯರೋ? ಉತ್ತರ ಕೇಳಿದರೆ ಆಶ್ಚರ್ಯವಾಗಬಹುದು. ಏಕೆಂದರೆ ಕೃಷಿ ಸ್ತ್ರೀಯರ ಆವಿಷ್ಕಾರ! ಇಂಥ ಹಲವು ವಿಷಯಗಳನ್ನು ತಿಳಿಸಿಕೊಡುವ ವಿಚಾರ ಪ್ರಚೋದಕ ಕೃತಿ ಇದು. ಜಿ. ಕುಮಾರಪ್ಪ ಅವರು ಸುಂದರವಾಗಿ ಕನ್ನಡಕ್ಕೆ ಅಳವಡಿಸಿರುವ ಈ ಕೃತಿ ಮಹಿಳೆಯರನ್ನು ಹೀಗಳೆಯುವವರಿಗೆ ದಿಟ್ಟ ಉತ್ತರವಾಗಿದೆ.

ಪ್ರಕಾಶಕರು : ನವಕರ್ನಾಟಕ ಪ್ರಕಾಶನ
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ
ಬೆಂಗಳೂರು-೫೬೦ ೦೦೧

ಭಗವದ್ಗೀತೆ : ಅಪರಾಧ ಮತ್ತು ಶಿಕ್ಷೆ

ಲೇ. ಆರ್.ಡಿ. ಹೆಗಡೆ ಆಲ್ಮನೆ

ಬೆಲೆ : ರೂ. ೩೫/-

ವಿಚಾರ ಸಾಹಿತ್ಯದ ಮೌಲಿಕ ಕೊಡುಗೆಯಾದ ಈ ಪ್ರಬಂಧ ಸಂಕಲನ, ಸಮಕಾಲೀನ ಬದುಕಿನ ಆಧ್ಯಾತ್ಮಿಕ ಹಾಗೂ ಭೌತಿಕ ಅಗತ್ಯಗಳ ದೃಷ್ಟಿಯಿಂದ ಬಹು ಮುಖ್ಯವಾದುದು. ಯಾವುದೇ ಪೂರ್ವಾಗ್ರಹಗಳಿಗೆ ಒಳಗಾಗದೆ ಲೇಖಕರು ಪ್ರಾಚೀನ ಚಿಂತನೆಯ ವಿಮರ್ಶೆಯನ್ನೂ ಇಲ್ಲಿ ಮಾಡಿದ್ದಾರೆ. ನಮ್ಮ ಸಂಸ್ಕೃತಿಯ ಬಹುರೂಪವನ್ನು ಓದುಗರಿಗೆ ಮನಗಾಣಿಸುವ ಲೇಖಕರ ಪ್ರಯತ್ನ ಪ್ರಶಂಸನೀಯ.

ಪ್ರಕಾಶಕರು : ನವಕರ್ನಾಟಕ ಪ್ರಕಾಶನ
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ
ಬೆಂಗಳೂರು-೫೬೦ ೦೦೧.



ಗಣಪತಿ

ಲೇ. ಪುರಾಣಂ ಸುಬ್ರಹ್ಮಣ್ಯ ಶರ್ಮಾ

ಬೆಲೆ : ರೂ. ೧೨/-

ವಿಘ್ನೇಶ್ವರ, ವಿನಾಯಕ, ಗಣನಾಯಕ, ಗಣೇಶ ಇನ್ನೂ ಮುಂತಾದ ವಿವಿಧ ಹೆಸರುಗಳಿಂದ ಕರೆಯಲಾಗುವ ಗಣಪತಿಯ ಹುಟ್ಟಿನ ಬಗ್ಗೆ ಎಲ್ಲರಿಗೂ ತಿಳಿದಿರುವ ಪುರಾಣ ಪ್ರಸಂಗಕ್ಕೆ ಪ್ರತಿಯಾಗಿ ಇರಬಹುದಾದ ಇತರೆ ಸಾಧ್ಯತೆಗಳನ್ನು ಶೋಧಿಸುವ ಕೃತಿ ಇದು. ಗಣಪತಿ ಒಬ್ಬನಲ್ಲದೆ ಹಲವು ಗಣಪತಿಗಳು ಇದ್ದರೆಂಬುದು ಈ ಕೃತಿಯಲ್ಲಿ ವ್ಯಕ್ತವಾಗುತ್ತದೆ. ಪೌರಾಣಿಕ ವ್ಯಕ್ತಿತ್ವಗಳ ಬಗೆಗೆ ತಿಳಿಯಬೇಕೆಂದು ಒಲವುಳ್ಳವರಿಗೆ ಈ ಕೃತಿ ಸಹಾಯಕ.

ಪ್ರಕಾಶಕರು: ನವಕರ್ನಾಟಕ ಪ್ರಕಾಶನ
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ
ಬೆಂಗಳೂರು-೫೬೦ ೦೦೧

ತಮಟೆ ತಿಮ್ಮನ ತಿರುಳು

ಲೇ. ದುದ್ದ ಶ್ರೀನಿವಾಸ್

ಬೆಲೆ:ರೂ. ೪೫/-

'ತಮಟೆ ತಿಮ್ಮ' ಅಂಕಿತ ನಾಮದ ಈ ಕವನ ಸಂಕಲನ ಜೀವನಾನುಭವ ಸಾರಗಳನ್ನು ಹೇಳುವ ವಿಶಿಷ್ಟ ಮಾದರಿಯ ಪ್ರಕಟಣೆ. ರಾಜಕೀಯ, ಧಾರ್ಮಿಕ ಹಾಗೂ ಸಾಮಾಜಿಕ ಜೀವನದ ನಡೆನುಡಿ, ರೀತಿನೀತಿ, ಸಣ್ಣತನ, ಸ್ವಾರ್ಥ, ಶೀಲ, ಮೌಢ್ಯ, ಅಸಮಾನತೆ, ಅಸ್ಪೃಶ್ಯತೆ ಮುಂತಾದವುಗಳ ವಿಡಂಬನೆಯೇ ಇಲ್ಲಿನ ಕವಿತೆಗಳ ವಸ್ತು. ಮನುಷ್ಯನ ಒಳಗನ್ನು ಅರಿತುಕೊಳ್ಳಲು ಈ ಕವಿತೆಗಳು ಸಹಕಾರಿಯಾಗುತ್ತವೆ.

ಪ್ರಕಾಶಕರು : ನಿಸರ್ಗ ಪ್ರಕಾಶನ,
೧೩೬೧, ಪಿಡಬ್ಲ್ಯುಡಿ ಕಾಲನಿ,
ಹಾಸನ-೫೭೩ ೨೦೧



ಇದೊಂದು ಬದುಕು

ಲೇ. ಜಿ.ಬಿ. ಪೂಜಾರಿ

ಬೆಲೆ : ರೂ. ೬೦/-

ನವ್ಯೋತ್ತರ ಸಾಹಿತ್ಯೇತಿಹಾಸದಲ್ಲಿ ಗುಲ್ಬರ್ಗಾ ಪ್ರದೇಶಕ್ಕೆ ವಿಶಿಷ್ಟ ಸ್ಥಾನವಿದೆ. ಪ್ರತಿಭಾವಂತ ಲೇಖಕರು ತಮ್ಮ ಸಾಹಿತ್ಯ ಕೃತಿಗಳ ಮೂಲಕ ಸಾಹಿತ್ಯಿಕ ಜೀವಧಾರೆಯನ್ನು ಪೋಷಿಸಿಕೊಂಡು ಬರುತ್ತಿದ್ದಾರೆ. ಇಂಥ ಧಾರೆಯಲ್ಲೊಬ್ಬರಾದವರು ಕವಿ ಜಿ.ಬಿ. ಪೂಜಾರಿ. ವಾಸ್ತವದ ಸತ್ಯಗಳಿಗೆ ಕಾವ್ಯದ ರೂಪುಕೊಡುವ ಕವಿ ಸಹಜವಾದ ಪ್ರತಿಭಟನೆ ಧ್ವನಿಯನ್ನು ಮೈಗೂಡಿಸಿಕೊಂಡಿದ್ದಾರೆ. ಸಾಮಾಜಿಕ ಅಸಮಾನತೆಗೆ ಸ್ಪಂದಿಸುವ ಇಲ್ಲಿನ ಕವನಗಳು ಆಕರ್ಷಕವಾಗಿವೆ.

ಪ್ರಕಾಶಕರು : ಕೆಂಧೂಳಿ ಪ್ರಕಾಶನ,
ಶಹಾಪುರ, ಕಲಬುರ್ಗಿ ಜಿಲ್ಲೆ

ಧರ್ಮ ಮತ್ತು ದಗಲ್‌ಬಾಜಿಗಳು

ಲೇ. ವಿಶ್ವಾರಾಧ್ಯ ಸತ್ಯಂಪೇಟೆ

ಬೆಲೆ : ರೂ. ೭೫/-

ಅಂಧಶ್ರದ್ಧೆ ಮೂಢನಂಬಿಕೆಗಳನ್ನು ಹೊಡೆದೋಡಿಸಿ ಪ್ರಾದೇಶಿಕ ಶಾಹಿಯ ಕಬಂಧ ಬಾಹುಗಳಿಂದ ಬಿಡುಗಡೆ ಮಾಡುವ ಕ್ರಾಂತಿಕಾರಿ ವಿಚಾರಗಳು ಈ ಕೃತಿಯ ವಸ್ತು. ಹದಿಮೂರು ಲೇಖನಗಳ ಈ ಸಂಗ್ರಹದಲ್ಲಿ ಜಾತಿ ಜಂಜಡಗಳಿಂದ ಜಡ್ಡುಗಟ್ಟಿದ ಭಾರತೀಯ ಸಮಾಜ ವ್ಯವಸ್ಥೆಯನ್ನು ಸರಿಪಡಿಸಬೇಕೆನ್ನುವ ಉತ್ಕಟ ಆಕಾಂಕ್ಷೆ ಇದೆ. ವೈಚಾರಿಕ ತಳಹದಿಯೊಂದಿಗೆ ಅಸಮಾನ ಸಮಾಜವನ್ನು ಶಸ್ತ್ರಚಿಕಿತ್ಸೆಗೆ ಗುರಿಪಡಿಸಲಾಗಿದೆ. ಹೊಸದೃಷ್ಟಿ-ಆಕಾಂಕ್ಷೆಗಳಿಂದ ಕೃತಿ ಅಧ್ಯಯನ ಯೋಗ್ಯವಾಗಿದೆ.

ಪ್ರಕಾಶಕರು : ಅಗ್ನಿ ಅಂಕುರ ಪತ್ರಿಕೆ ಪ್ರಕಾಶನ,
ಶಹಾಪುರ, ಗುಲ್ಬರ್ಗಾ ಜಿಲ್ಲೆ



ಆಗಂತುಕ ವಿಚಾರ



ಬತ್ಸುಜೆನ್ ತನ್ನ ಶಿಷ್ಯರಿಗೆ ಹೀಗೆ ಹೇಳಿದ:

'ನಿಮ್ಮಲ್ಲಿ ಪ್ರತಿಯೊಬ್ಬರಿಗೂ ಎರಡೆರಡು ಕಿವಿಗಳಿವೆ; ಅವುಗಳಿಂದ ನೀವು ಯಾವತ್ತಾದರೂ ಏನನ್ನಾದರೂ ಕೇಳಿದ್ದುಂಟಾ? ನಿಮ್ಮಲ್ಲಿ ಪ್ರತಿಯೊಬ್ಬರಿಗೂ ಒಂದೊಂದು ಬಾಯಿಯಿದೆ. ಅದರಿಂದ ನೀವು ಯಾವತ್ತಾದಾರೂ ಏನನ್ನಾದರೂ ಹೇಳಿದ್ದುಂಟಾ? ನಿಮ್ಮಲ್ಲಿ ಪ್ರತಿಯೊಬ್ಬರಿಗೂ ಕಣ್ಣುಗಳಿವೆಯಲ್ಲ, ಆದರೆ, ಅವುಗಳಿಂದ ನೀವು ಯಾವತ್ತಾದರು ಏನನ್ನಾದರೂ ಕಂಡದ್ದುಂಟೋ? ಇಲ್ಲ ಇಲ್ಲ, ನೀವು ಯಾವತ್ತೂ ಕೇಳಿದ್ದೇ ಇಲ್ಲ, ಯಾವತ್ತೂ ಕಂಡದ್ದೇ ಇಲ್ಲ, ಯಾವತ್ತೂ ಆಘ್ರಾಣಿಸಿದ್ದೇ ಇಲ್ಲ.

ಆದರೆ, ಹಾಗಿದ್ದಾಗ್ಯೂ ಈ ಎಲ್ಲ ಬಣ್ಣಗಳು, ರೂಪಗಳು, ಶಬ್ದಗಳು, ಗಂಧಗಳು ಎಲ್ಲಿಂದ ಬಂದವು? ಎಲ್ಲಿಂದ ಬಂದವು ?'

ಬೆನ್ನಿನ ಭಾರ



ಅವತ್ತು ಅಕಸ್ಮಾತ್ ಭಾರೀ ಮಳೆ ಸುರಿದು ನಗರದ ರಸ್ತೆಗಳೆಲ್ಲ ಕೊಚ್ಚೆ ರಾಡಿನಿಂದ ತುಂಬಿ ಹೋಗಿದ್ದವು. ತನ್‌ಜನ್ ಮತ್ತು ಇಕಿಡೊ ಎಂಬಿಬ್ಬರು ಭಿಕ್ಷುಗಳು ಅಲ್ಲಿ ಹೋಗುತ್ತಿದ್ದಾಗ, ರಸ್ತೆಯ ಒಂದು ಬದಿಯಲ್ಲಿ ಅಂದವಾಗಿ ರೇಶಿಮೆಯ ವಸ್ತ್ರ ತೊಟ್ಟ ಎಳೆಯ ವಯಸ್ಸಿನ ಹುಡುಗಿಯೊಬ್ಬಳು ಆತಂಕದಿಂದ ನಿಂತಿರುವುದನ್ನು ಕಂಡರು. ಆಕೆ, ರಸ್ತೆದಾಟಿ ಆಚೆ ಹೋಗಬೇಕಿತ್ತು, ರಸ್ತೆಯಲ್ಲಿ ಮೊಳಕಾಲುದ್ದದ ರಾಡಿ ಹರಿಯುತ್ತಿತ್ತು.

ತನ್‌ಜನ್ ನೇರ ಅವಳ ಹತ್ತಿರ ಹೋದ. 'ಬಾರೆ ಹುಡುಗಿ, ದಾಟಿಸುತ್ತೇನೆ' ಎಂದು, ತನ್ನ ತೋಳುಗಳಲ್ಲಿ ಆಕೆಯನ್ನು ಅನಾಮತ್ತಾಗಿ ಎತ್ತಿಕೊಂಡು ರಸ್ತೆಯನ್ನು ದಾಟಿಸಿ ಕೆಳಗೆ ಬಿಟ್ಟ.

ಆಮೇಲೆ, ಭಿಕ್ಷುಗಳಿಬ್ಬರೂ ದಾರಿ ಹಿಡಿದು ನಡೆದರು. ದಾರಿಯುದ್ದ ಅವರು ಮಾತಾಡಲೇ ಇಲ್ಲ, ವಿಹಾರಕ್ಕೆ ಹಿಂತಿರುಗಿದರು.

ಆ ದಿನ ರಾತ್ರಿ, ಅವರಿಬ್ಬರೇ ಇದ್ದಾಗ, ಇಕಿಡೊ ತಡೆಯಲಿಕ್ಕಾಗದೆ. ಹೀಗೆ ಕೇಳಿದ-'ಅಯ್ಯಾ, ಭಿಕ್ಷುಗಳು ಹರೆಯದ ಹೆಣ್ಣುಗಳ ಸಮೀಪ ಸುಳಿಯಬಾರದು. ಆದರೂ ಆ ಹುಡುಗಿ ಅಂಥ ಚೆಲುವೆ, ನೀನು ಹಾಗೆ ಮಾಡಿದ್ದು ಸೂಕ್ತವೆ?'

ತನ್‌ಜನ್ ಹೀಗೆ ಉತ್ತರಿಸಿದ -'ಅಪ್ಪಾ ಮಿತ್ರಾ, ಆ ಹುಡುಗಿಯನ್ನು ಹೊತ್ತ ನಾನು ಆಗಲೇ ನಗರದ ರಸ್ತೆಯಲ್ಲಿ? ಅಲ್ಲೇ ಕೆಳಕ್ಕಿಳಿಸಿಬಿಟ್ಟೆ. ನೀನು ಮಾತ್ರ ಆಕೆಯನ್ನು ಇನ್ನೂ ಹೊತ್ತುಕೊಂಡೇ ಇದ್ದೀಯಲ್ಲ.'

ಕನ್ನಡಿ ಮಾತು

ಚು ಅಂಗ್ ತ್ಸು ಎಂಬಾತ ಹೀಗೆ ಹೇಳುತ್ತಾನೆ-

ಕನ್ನಡಿಯನ್ನು ನೋಡಿ. ಅದು ಏನನ್ನೂ ಸ್ವೀಕರಿಸುವುದಿಲ್ಲ,
ಏನನ್ನೂ ತಿರಸ್ಕರಿಸುವುದೂ ಇಲ್ಲ. ಅದು ಏನಿದ್ದರೂ ಗ್ರಹಿಸುತ್ತದೆ.
ಆದರೆ ಯಾವುದನ್ನೂ ಸಂಗ್ರಹಿಸಿಕೊಳ್ಳುವುದಿಲ್ಲ,
ಮನುಷ್ಯ, ಮನಸ್ಸನ್ನು ಕನ್ನಡಿಯ ಹಾಗೆ ಇಟ್ಟುಕೊಳ್ಳಬೇಕು.

ಝೆನ್

ಅವಲೋಕನ
ಕಥೆ ಪ್ರಸಂಗ
ಸಂವಾದ
ಒಗಟು
ಮುಂಡಿಗೆಗಳು



○ಕೆ.ವಿ. ಸುಬ್ಬಣ್ಣ

ಶಾಂತಿಗೆ ತೋಳು

ಬೋಧಿಧರ್ಮ, ಚೀನಾದ ನೆಲಕ್ಕೆ ಬಂದು ಬೌದ್ಧಧರ್ಮದ ಝೆನ್ ಪಂಥವನ್ನು ಹುಟ್ಟುಹಾಕಿದ ಮೇಲೆ, ಕಾಡಿನಲ್ಲಿದ್ದ ಒಂದು ವಿಹಾರ ಸೇರಿಕೊಂಡು, ಅಲ್ಲಿ ಗೋಡೆಗೆ ಮುಖಮಾಡಿ ಕೂತು ಒಂಬತ್ತು ವರ್ಷಗಳ ದೀರ್ಘಕಾಲ ಧ್ಯಾನಮಗ್ನನಾಗಿದ್ದ. ಆ ಕಾಲದಲ್ಲಿ ಒಮ್ಮೆ ಕನ್‌ಫೂಸಿಯನ್ ಧರ್ಮದ ಸನ್ಯಾಸಿಯೊಬ್ಬ ಆತನನ್ನು ಕಂಡು ಧರ್ಮಬೋಧೆ ಪಡೆಯಲಿಕ್ಕಾಗಿ ಬಂದ. ಆದರೆ ಬೋಧಿಧರ್ಮ, ಆತನ ಪ್ರಾರ್ಥನೆಗೆ ಗಮನ ಕೊಡಲೇ ಇಲ್ಲ. ಆ ಸನ್ಯಾಸಿ, ಏಳು, ಹಗಲು ಏಳು ರಾತ್ರಿಗಳ ಪರ್ಯಂತ ವಿಹಾರದ ಹೊರಗೆ ಮಂಜಿನಲ್ಲಿ ನಿಂತು ಕಾದ. ಗುರುವಿನಿಂದ ಬೋಧೆ ಪಡೆಯಲೇಬೇಕೆಂಬ ತೀವ್ರ ಹಂಬಲವನ್ನು ಹತ್ತಿಕ್ಕಲಾರದೆ ಆತ, ಕಟ್ಟಕಡೆಯ ಉಪಾಯವಾಗಿ, ಹರಿತವಾದ ಕತ್ತಿಯೊಂದನ್ನು ತೆಗೆದುಕೊಂಡು ತನ್ನ ಒಂದು ತೋಳನ್ನೇ ಕತ್ತರಿಸಿಕೊಂಡ; ಅದನ್ನು ಬೋಧಿಧರ್ಮನ ಬಳಿಗೆ ಕೊಂಡುಹೋಗಿ ಒಪ್ಪಿಸಿದ.

'ಗುರುವೇ ಇಗೋ. ಇದು ನನ್ನ ನಿಷ್ಠೆಗೆ ಸಾಕ್ಷಿ, ನಾನು ಅನೇಕ ವರ್ಷಗಳಿಂದ ಮನಃಶಾಂತಿಯನ್ನು ಪಡೆಯಲು ಪ್ರಯತ್ನಸಿದ್ದೇನೆ, ಸಾಧ್ಯವಾಗಿಲ್ಲ. ನೀವು ಅದನ್ನು ಕೊಡಬಲ್ಲಿರಿ. ಆ ಭರವಸೆಯನ್ನು ತಾಳಿ ಇಲ್ಲಿಗೆ ಬಂದಿದ್ದೇನೆ' ಎಂದು ಬಿನ್ನವಿಸಿಕೊಂಡ.

'ಒಳ್ಳೆಯದಪ್ಪಾ, ತೋಳನ್ನೇಕೆ ಕತ್ತರಿಸಿ ತಂದೆ? ನಿನ್ನ ಮನಸ್ಸನ್ನು ತೆಗೆದುಕೊಂಡು ಬಾ. ನಾನು ನಿನ್ನ ಮನಸ್ಸನ್ನು ಶಾಂತಗೊಳಿಸಬೇಕಲ್ಲವೆ?' ಎಂದ, ಬೋಧಿಧರ್ಮ.

'ಅದೇ ಅಸಾಧ್ಯವಾಗಿದೆ, ಗುರುವೇ, ಮನಸ್ಸನ್ನು ನಾನು ಕಾಣಲಾರೆ, ಅದನ್ನು ಹಿಡಿಯಲಾರೆ; ಹಾಗಿರುವಾಗ ಅದನ್ನು ಇಲ್ಲಿಗೆ ಹೇಗೆ ಕೊಂಡುಬರಲಿ?' ಎಂದು ಆತ ತನ್ನ ಅಸಹಾಯಕತೆಯನ್ನು ಹೇಳಿಕೊಂಡ.

ಆಗ ಬೋಧಿಧರ್ಮ ಹೇಳಿದ -'ಕಂಡೆಯಾ ಅಪ್ಪಾ, ಈಗ ನಾನು ನಿನಗೆ ಮನಃಶಾಂತಿ ಕೊಟ್ಟಿದ್ದೇನೆ.'

ಬೇಸರವಿಲ್ಲದ ಲಿಪಿ



ಭಾರೀ ಉನ್ನತ ಹುದ್ದೆಯಲ್ಲಿದ್ದಂಥ ಅಧಿಕಾರಿಯೊಬ್ಬ ಒಮ್ಮೆ ಗುರು ಟಕುಅನ್‌ನ ಹತ್ತಿರ ಬಂದ. ಜನರ ಅಹವಾಲುಗಳನ್ನು ಕೇಳಿಕೊಳ್ಳುವುದರಲ್ಲಿಯೂ ರಾಜ್ಯದ ಸ್ಥಿತಿಗತಿಗಳ ವರದಿಯನ್ನು ಪರಿಶೀಲಿಸುವುದರಲ್ಲಿಯೂ ತಾನು ಇಡೀ ದಿನ ಕಳೆಯುತ್ತಿರುವುದಾಗಿ ಹೇಳಿ, ಅದರಿಂದ ತನಗೆ ಬೇಸರವುಂಟಾಗಿಬಿಟ್ಟಿದೆ ಎಂದ. ದಿನಗಳನ್ನು ಹೆಚ್ಚು ಉಪಯುಕ್ತವಾಗಿ ಕಳೆಯಲು ಏನಾದರೊಂದು ಉಪಾಯವನ್ನು ಕಾಣಿಸಿ ಕೊಡಲು ಬೇಡಿಕೊಂಡ.

ಟಕುಅನ್, ಬದಿಯಲ್ಲಿದ್ದ ಒಂದು ಕುಂಚ ಮತ್ತು ಕಾಗದವನ್ನೆತ್ತಿಕೊಂಡು ಎಂಟು ಲಿಪಿಗಳನ್ನು ಮೂಡಿಸಿ ಕಾಣಿಸಿದ. ಚೀನಿ ಭಾಷೆಯ ಆ ಲಿಪಿಗಳ ಒಟ್ಟೂ ಅರ್ಥ ಹೀಗೆ-

ಕಳೆದ ದಿನ ಮರಳುವುದಿಲ್ಲ, ಇಲ್ಲ,
ಒಂದಂಗುಲ ಕಾಲಕ್ಕಿರುವ ಬೆಲೆ
ಗೇಣುದ್ದದ ಪಚ್ಚೆಮಣಿಗಿಲ್ಲ, ಇಲ್ಲ,

ಜ್ಯೋತಿಷ್ಯ, ಪುರೋಹಿತ ಇತ್ಯಾದಿ.....

ವಿವೇಕಾನಂದರ ವಿಚಾರಗಳು

ಕಪಟ ಪುರೋಹಿತರ ವಿಷಯ ಎಷ್ಟು ಕಡಿಮೆ ಹೇಳಿದರೆ ಅಷ್ಟು ವಾಸಿ. ಈಗಿನ ಕಾಲದಲ್ಲಿ ಅವರ ಮಾತನ್ನಾರೂ ಕೇಳುವುದಿಲ್ಲ. ಆದರೂ ತಾವೇ ಆ ನಾಯಕ ಪಟ್ಟವನ್ನು ವಹಿಸುವರು. ತೀರ್ಥ ಮತ್ತು ಕಲಿಯುಗದ ಸನ್ಯಾಸಿ ಇವರ ವಿಷಯ ನಿಮಗೆ ಗೊತ್ತಿದೆ. ನೀವು ಹಣ ಎಸೆದರೆ ದೇವರನ್ನಾದರೂ ಪೂಜಾರಿಗಳು ಹೊರದೂಡಿ ನಿಮಗೆ ಆ ಸ್ಥಳವನ್ನು ಕೊಡುವರು. ವಂಚಕರಿಂದ ಈ ಜಗತ್ತು ಎಷ್ಟು ಮಟ್ಟಿಗೆ ಮರುಳುಗೊಳಿಸಲ್ಪಟ್ಟಿದೆ! ನಾಗರಿಕತೆ ಪ್ರಾರಂಭವಾದಂದಿನಿಂದ ಬಡ ಮಾನವನ ಮೇಲೆ ಅದೆಷ್ಟೊಂದು ಮೌಢ್ಯದ ಹೊರೆ!

ಸಂಗ್ರಹ:
ಜ.ಹೂ. ನಾರಾಯಣಸ್ವಾಮಿ

ಜ್ಯೋತಿಷ್ಯ ಮುಂತಾದುವನ್ನು ಹೇಳಿ ಉದರ ಪೋಷಣೆ ಮಾಡಿಕೊಳ್ಳುವವರ ಹತ್ತಿರ ಸಂಬಂಧವನ್ನು ಇಟ್ಟುಕೊಳ್ಳಕೂಡದು ಎನ್ನುವನು ಬುದ್ಧ. ಅವನಿಗೆ ಇದರ ರಹಸ್ಯ ಚೆನ್ನಾಗಿ ಗೊತ್ತಾಗಿರಬೇಕು. ತಾರೆಗಳು ತೀಕ್ಷ್ಣ ದೃಷ್ಟಿಯಿಂದ ನೋಡಿದರೇನಂತೆ? ತಾರೆಯೊಂದು ನನ್ನ ಜೀವನದ ಮೇಲೆ ತನ್ನ ಪ್ರಭಾವವನ್ನು ಬೀರಿ ವ್ಯಥೆಯನ್ನು ತಂದರೆ ನನ್ನ ಜೀವನ ಕುರುಡು ಕಾಸಿಗೂ ಯೋಗ್ಯವಲ್ಲ. ಜ್ಯೋತಿಷ್ಯ ಮುಂತಾದ ರಹಸ್ಯಗಳನ್ನೆಲ್ಲಾ ನೆಚ್ಚುವುದು ದೌರ್ಬಲ್ಯದ ಚಿಹ್ನೆ. ಈ ಸ್ವಭಾವ ನಿಮ್ಮ ಮನಸ್ಸಿನಲ್ಲಿ ಬಲವಾಗುತ್ತಿದ್ದರೆ ನೀವು ಒಬ್ಬ ವೈದ್ಯನನ್ನು ನೋಡಿ; ಒಳ್ಳೆಯ ಆಹಾರ ಮತ್ತು ವಿಶ್ರಾಂತಿಯನ್ನು ತೆಗೆದುಕೊಳ್ಳಿ... ಜ್ಯೋತಿಷ್ಯ ಮುಂತಾದವುಗಳಲ್ಲೇ ಸ್ವಲ್ಪ ಸತ್ಯಾಂಶವಿದ್ದರೂ ಅದನ್ನು ನಾವು ನಿರ್ಲಕ್ಷದಿಂದ ನೋಡಬೇಕು. ಮೂಢಭಾವನೆಗಳು ನಾಯಿ ಕೊಡೆಯಂತೆ ನಿಮ್ಮ ದೇಶದಲ್ಲಿ ಹಬ್ಬುತ್ತಿವೆ. ವಿಚಾರ ಮಾಡದ ಸ್ತ್ರೀಯರು, ಇನ್ನೂ ಸ್ವಾತಂತ್ರ್ಯಕ್ಕೆ ಹೋರಾಡುತ್ತಿರುವವರು, ದುಷ್ಟರು ಕೆಲಸಕ್ಕೆ ಬಾರದ ಮೂಢನಂಬಿಕೆಗಳಿಂದ ಅಂಜಿಸುತ್ತಿರುವರು. ಒಬ್ಬ ಹಣಕ್ಕಾಗಿ ಮತ್ತೊಬ್ಬರನ್ನು ಮೋಸ ಮಾಡಿದರೆ ಅವನನ್ನು ಮೋಸಗಾರ ಎನ್ನುವಿರಿ. ಇತರರನ್ನು ಆಧ್ಯಾತ್ಮಿಕ ದೃಷ್ಟಿಯಿಂದ ಪಾಪಿಗಳು ಎಂದು ಮೋಸಗೊಳಿಸುವವರು ಎಂತಹ ಪಾಪಿಗಳಿರಬೇಕು? ಇದು ಪರಮಪಾತಕ. ಸತ್ಯ ನಿಮ್ಮನ್ನು ಧೀರರನ್ನಾಗಿ ಮಾಡಬೇಕು; ಮೌಢ್ಯತೆಯಿಂದ ಪಾರಾಗುವಂತೆ ಮಾಡಬೇಕು. ಇದೇ ಸತ್ಯದ ಪರೀಕ್ಷೆ...ಬೇಕಾದರೆ ತಾರೆಗಳನ್ನು ನಿಮ್ಮ ಬೊಗಸೆಯಿಂದ ಎತ್ತಿ ನುಂಗಿಹಾಕಬಹುದು. ನಿಮ್ಮ ನೈಜ ಸ್ವಭಾವ ಅಂತಹುದು. ಧೀರರಾಗಿ, ಎಲ್ಲಾ ವಿಧದ ಮೂಢನಂಬಿಕೆಗಳಿಂದ ಪಾರಾಗಿ, ಮುಕ್ತರಾಗಿ.

ಜ್ಯೋತಿಷ್ಕನ ಒಂದು ಹಳೆಯ ಕಥೆ ಇದೆ. ಅವನು ಒಬ್ಬ ರಾಜನ ಬಳಿ ಬಂದು 'ನೀನು ಇನ್ನು ಆರು ತಿಂಗಳಲ್ಲಿ ಸಾಯುವೆ' ಎಂದ. ರಾಜ ಭಯದಿಂದ ಕಂಪಿಸತೊಡಗಿದ. ಅಂಜಿಕೆಯಿಂದ ಅವನು ಆಗಲೇ ಸಾಯುವ ಸ್ಥಿತಿಯಲ್ಲಿದ್ದ. ಆದರೆ ಮಂತ್ರಿ ಬಹಳ ಬುದ್ಧಿವಂತ. ರಾಜನಿಗೆ, ಈ ಜ್ಯೋತಿಷ್ಯನನ್ನು ನಂಬಬೇಡಿ, ಅವರೆಲ್ಲಾ ಮೂರ್ಖರು ಎಂದು ಬುದ್ಧಿ ಹೇಳಿದ. ರಾಜ ಇದನ್ನು ನಂಬಲಿಲ್ಲ. ಮಂತ್ರಿ ಜ್ಯೋತಿಷ್ಕ ಮೂರ್ಖ ಎಂಬುದನ್ನು ತೋರಿಸುವುದಕ್ಕೆ ಜ್ಯೋತಿಷ್ಕನನ್ನು ಪುನಃ ಅರಮನೆಗೆ ಬರಮಾಡಿಕೊಂಡ. ಮಂತ್ರಿ ಅವನಿಗೆ ನಿನ್ನ ಲೆಕ್ಕಾಚಾರವೆಲ್ಲ ಸರಿಯಾಗಿದೆಯೇ? ನೋಡು ಎಂದ. ಜ್ಯೋತಿಷ್ಕನಿಗೆ ಲವಲೇಶವೂ ಸಂದೇಹವಿರಲಿಲ್ಲ. ಆದರೆ ಮಂತ್ರಿಯ ತೃಪ್ತಿಗಾಗಿ ಪುನಃ ಲೆಕ್ಕಾಚಾರಹಾಕಿ ಎಲ್ಲ ಸರಿಯಾಗಿದೆ ಎಂದ. ಭಯದಿಂದ ರಾಜನ ಮುಖ ಸಪ್ಪೆಯಾಯಿತು. ಮಂತ್ರಿ ಜ್ಯೋತಿಷ್ಕ ನನ್ನು 'ನೀನು ಇನ್ನೆಷ್ಟು ದಿನಗಳವರೆಗೆ ಬದುಕಿರುವೆ?', ಎಂದ. ಜ್ಯೋತಿಷ್ಕ ತನ್ನ ಜಾತಕದ ಪ್ರಕಾರ ಹನ್ನೆರಡು ವರುಷ ಎಂದ. ಮಂತ್ರಿ ತಕ್ಷಣ ತನ್ನ ಸೊಂಟದ ಕತ್ತಿಯಿಂದ ಜ್ಯೋತಿಷ್ಕನ ತಲೆಯನ್ನು ಛೇದಿಸಿ ರಾಜನಿಗೆ 'ಈ ಸುಳ್ಳುಗಾರನ ಗತಿ ಏನಾಯಿತು ಗೊತ್ತಿಲ್ಲವೇ? ಹನ್ನೆರೆಡು ವರುಷ ಬದುಕಿರುತ್ತೇನೆ ಎಂದವನು ಈ ಕ್ಷಣ ಸತ್ತು ಹೋದನು' ಎಂದು ಹೇಳಿದ.

ಪುರೋಹಿತರು ಮಾಮೂಲಿನಂತೆ ಏನನ್ನೋ ಹೇಳಿ ಏನನ್ನೋ ನಿರೀಕ್ಷಿಸುವರು. ಜನರು ಆಕಾಶವನ್ನೇ ನೋಡುತ್ತ ಪ್ರಾರ್ಥಿಸುವರು. ಪುರೋಹಿತರಿಗೆ ದಕ್ಷಿಣೆ ಕೊಡುವರು. ಮಾಸಗಳು ಕಳೆದಂತೆ ಅವರು ಇನ್ನೂ ಆಕಾಶವನ್ನು ನೋಡುತ್ತಿರುವರು. ದಕ್ಷಿಣೆ ಕೊಡುವರು, ಪ್ರಾರ್ಥಿಸುವರು. ಇದನ್ನು ಕುರಿತು ಯೋಚಿಸಿ ನೋಡಿ! ಇದೊಂದು ಹುಚ್ಚಲ್ಲವೇ? ಮತ್ತೇನು? ಇದಕ್ಕೆ ಕಾರಣರು ಯಾರು? ನೀವು ಮತ್ತೊಬ್ಬನಿಗೆ ಕೊಟ್ಟ ಪ್ರತಿಯೊಂದು ದುರ್ಬಲ ಆಲೋಚನೆಗೂ ಬಡ್ಡಿ ಸಹಿತ ಅನುಭವಿಸ ಬೇಕಾಗಿದೆ.

ಮಂತ್ರವಾದಿಗಳ ಮತ್ತು ಮೋಸಗಾರರ ಕೈಗೆ ಬೀಳುವುದಕ್ಕಿಂತ ಯಾವುದರಲ್ಲಿಯೂ ನಂಬದೆ ಸಾಯುವುದು ಮೇಲು.

ಪುರೋಹಿತ

ಇನ್ನು ಕಪಟ ಪುರೋಹಿತರ ವಿಷಯ ಎಷ್ಟು ಕಡಿಮೆ ಹೇಳಿದರೆ ಅಷ್ಟು ವಾಸಿ. ಈಗಿನ ಕಾಲದಲ್ಲಿ ಅವರ ಮಾತನ್ನಾರೂ ಕೇಳುವುದಿಲ್ಲ. ಆದರೂ ತಾವೇ ಆ ನಾಯಕ ಪಟ್ಟವನ್ನು ವಹಿಸುವರು. ತೀರ್ಥ ಮತ್ತು ಕಲಿಯುಗದ ಸನ್ಯಾಸಿ ಇವರ ವಿಷಯ ನಿಮಗೆ ಗೊತ್ತಿದೆ. ನೀವು ಹಣ ಎಸೆದರೆ ದೇವರನ್ನಾದರೂ ಪೂಜಾರಿಗಳು ಹೊರದೂಡಿ ನಿಮಗೆ ಆ ಸ್ಥಳವನ್ನು ಕೊಡುವರು. ವಂಚಕರಿಂದ ಈ ಜಗತ್ತು ಎಷ್ಟು ಮಟ್ಟಿಗೆ ಮರುಳುಗೊಳಿಸಲ್ಪಟ್ಟಿದೆ! ನಾಗರಿಕತೆ ಪ್ರಾರಂಭವಾದಂದಿನಿಂದ ಬಡ ಮಾನವನ ಮೇಲೆ ಅದೆಷ್ಟೊಂದು ಮೌಢ್ಯದ ಹೊರೆ!

ನಮ್ಮ ದಾಕ್ಷಿಣಾತ್ಯ ಸಹೋದರ ಅಷ್ಟು ದೊಡ್ಡ ನಾಮವನ್ನು ಹಾಕಿಕೊಳ್ಳುತ್ತಾನೆ. ಅದನ್ನು ಅಳಿಸಬೇಕಾದರೆ ಒಂದು ಉಜ್ಜುವ ಕಲ್ಲು ಬೇಕು. ಪುರೋಹಿತರ ಪ್ರಾಬಲ್ಯದ ಕಾಲದಲ್ಲಿ ಸತ್ಯಾನ್ವೇಷಣೆಗಾಗಿ ಉಪಯೋಗಿ ಸುತ್ತಿದ್ದ ತ್ಯಾಗ, ಇಂದ್ರಿಯ ನಿಗ್ರಹ, ತಪಸ್ಸು ಇವಗಳೆಲ್ಲ ಅವರ ಅವನತಿಯ ಕಾಲದಲ್ಲಿ, ಸ್ವಾರ್ಥ ತೃಪ್ತಿಗಾಗಿ ವಿಷಯ ವಸ್ತುಗಳನ್ನು ಕೂಡಿ ಹಾಕುವುದರಲ್ಲಿ, ಮತ್ತೂ ಉಳಿದವರ ಮೇಲೆ ತಮ್ಮ ಹಕ್ಕಿನ ಅಧಿಕಾರವನ್ನು ವಿಸ್ತರಿಸುವುದರಲ್ಲಿ ಮಾತ್ರ ಹೊಸದಾಗಿ ನಿರತವಾಗಿ ವ್ಯಯವಾಯಿತು...ಜೀವನದ ಲಕ್ಷ್ಯವನ್ನು ಮರೆತು ಗೊತ್ತು ಗುರಿ ಇಲ್ಲದೆ ಸಂಚರಿಸುತ್ತಾ, ಬ್ರಾಹ್ಮಣ್ಯ ಶಕ್ತಿ ಜೇಡರ ಹುಳು ತಾನು ನೇಯ್ದ ಬಲೆಯಲ್ಲಿ ತಾನೇ ಸಿಕ್ಕಿ ಬಿದ್ದಂತೆ ಬಿದ್ದು ನರಳುತ್ತಿರುವುದು..ಪುರೋಹಿತರು ತಮ್ಮ ಪ್ರಾಬಲ್ಯದ ಅವನತಿಗೆ ಅನ್ಯರನ್ನು ದೂರುವುದನ್ನು ಬಿಟ್ಟು, ಪ್ರಕೃತಿಯ ಅನಿವಾರ್ಯ ನಿಯಮಕ್ಕೆ ಅನುಸಾರವಾಗಿ ಬ್ರಾಹ್ಮಣ ಪಂಗಡವು ತನ್ನ ಕೈಯಿಂದಲೆ ತನ್ನ ಸಮಾಧಿ ಮಂದಿರವನ್ನು ಕಟ್ಟುತ್ತಿದೆ ಎಂಬುದನ್ನೂ ತಿಳಿಯಬೇಕು.

ಅಸೂಯೆ ಇಲ್ಲದಿರುವುದೇ ಅಹಿಂಸೆಗೆ ಸಾಕ್ಷಿ. ಯಾರಾದರೂ ತಾತ್ಕಾಲಿಕ ಉದ್ರೇಕಕ್ಕೆ ಒಳಗಾಗಿಯೋ, ಪುರೋಹಿತರ ಕಾಟಕ್ಕೆ ಒಳಗಾಗಿಯೋ ಅಥವಾ ಮೂಢನಂಬಿಕೆಯ ಬಲಾತ್ಕಾರದಿಂದಲೋ ಒಂದು ದಾನ ಮಾಡಬಹುದು. ಆದರೆ ಯಾರ ಮೇಲೂ ಅಸೂಯೆ ಇಲ್ಲದವನೇ ನಿಜವಾದ ಮಾನವ ಪ್ರೇಮಿ..ಯಾರು ದಯಾ ದಾಕ್ಷಿಣ್ಯಗಳಿ ಲ್ಲದೆ ಅನಾಥರನ್ನು ವಿಧವೆಯರನ್ನು ಮೋಸಗೊಳಿಸಿ, ಹಣಕ್ಕೋಸುಗ ಮಾಡಬಾರದುದನ್ನೆಲ್ಲಾ ಮಾಡಿರುವರೋ ಅವರು ಬರಿಯ ಹುಲ್ಲನ್ನೇ ತಿಂದು ಜೀವಿಸಿದರೂ ಅಂತಹವರು ಅತಿ ನರಾಧಮನಿಗಿಂತಲೂ ಮೇಲಲ್ಲ.

ಮತ್ತೊಬ್ಬರನ್ನು ನೋಯಿಸುವಂತಹ ಆಲೋಚನೆಯನ್ನು ಕೂಡ ಯಾವನು ಮಾಡುವುದಿಲ್ಲವೋ, ಯಾವನು ತನ್ನ ಪರಮಶತ್ರು ಅಭಿವೃದ್ಧಿಯಾಗುತ್ತಿ ದ್ದರೂ ಅದನ್ನು ಸಂತೋಷದಿಂದ ನೋಡುವನೋ ಅವನೇ ಮುಕ್ತ. ಅವನು ಪ್ರತಿದಿನ ಹಂದಿಯ ಮಾಂಸವನ್ನು ತಿಂದರೂ ಅವನೇ ಯೋಗಿ. ಅವನು ಗುರುಗಳ ಗುರು. ಆದಕಾರಣ ಆಂತರಿಕ ಪರಿಶುದ್ಧಿ ಯಾಗುವುದಕ್ಕೆ ಮಾತ್ರ ಬಾಹ್ಯ ಪರಿಶುದ್ಧಿ ಎಂಬುದನ್ನು ನಾವು ನೆನಪಿ ನಲ್ಲಿಡಬೇಕು.. ನಿಜವಾದ ಧರ್ಮದ ತಿರುಳನ್ನು ಮರೆತು ಅರ್ಥವಿಲ್ಲದ ಬಾಹ್ಯ ಆಚಾರಗಳನ್ನೆಲ್ಲಾ ಕಪಿಮುಷ್ಟಿಯಲ್ಲಿ ಹಿಡಿದು ಅವನ್ನು ಬಿಡದ ವ್ಯಕ್ತಿಗೆ ಧಿಕ್ಕಾರ, ಅಂಥ ದೇಶಕ್ಕೆ ಧಿಕ್ಕಾರ. ಆಂತರ್ಯದಲ್ಲಿರುವ ಚೇತನವನ್ನು ಪ್ರದರ್ಶಿಸುವುದಕ್ಕೆ ಮಾತ್ರ ಬಾಹ್ಯ ಆಚಾರಗಳು ಇರುವುದು.

ಅವು ಚೇತನವನ್ನು ವ್ಯಕ್ತಗೊಳಿಸದೆ ಇದ್ದರೆ ನಿರ್ದಾಕ್ಷಿಣ್ಯದಿಂದ ಅವನ್ನು ಕಿತ್ತೊಗೆಯಿರಿ.

ಪೂಜಾರಿಗಳು ಸಂಪ್ರದಾಯಸ್ಥರ ಪ್ರತಿನಿಧಿಗಳು, ಪ್ರವಾದಿಗಳು ಪ್ರಗತಿಪರ ಶಕ್ತಿಯ ಪ್ರತಿನಿಧಿಗಳು.

ಭರತಖಂಡದಲ್ಲಿ ಬಹಳ ಪೂರ್ವದಿಂದಲೂ ಬ್ರಾಹ್ಮಣರು ತಾವು ಎಲ್ಲಾ ನಿಯಮಗಳಿಗೂ ಅತೀತರು ಎಂದು ಭಾವಿಸಿದ್ದರು. ತಾವು ದೇವರೇ ಎಂದು ಹೇಳಿಕೊಳ್ಳುತ್ತಿದ್ದರು. ಅವರು ಬಡವರು, ಆದರೆ ಅವರ ಒಂದು ದೌರ್ಬಲ್ಯವೇ ಅಧಿಕಾರದ ಲಾಲಸೆ.

ಪುರೋಹಿತನು ಎಲ್ಲವನ್ನೂ ಮೀರಿರುವನು. ಒಮ್ಮೆ ಸಾವಿನಿಂದ ಮತ್ತು ಸರ್ವನಾಶದಿಂದ ಕೂಡಿರುವ ಸನ್ನಿವೇಶಗಳಲ್ಲಿ ನಿರತನಾಗಿರುವಂತೆ ಆತನು ರಾಜನಿಗೆ ಆಜ್ಞೆ ಮಾಡುವನು. ಒಮ್ಮೆ ದಯಾಪೂರಿತನಾಗಿ ಒಳ್ಳೆಯ ಬುದ್ಧಿವಾದಗಳನ್ನು ಹೇಳುತ್ತಲೂ, ಮತ್ತೊಮ್ಮೆ ಕೌಶಲ್ಯಮಯವಾದ ನೀತಿ ಜಾಲವನ್ನು ವಿಸ್ತರಿಸುವುದರಿಂದಲೂ ಬಲೆಯನ್ನು ಒಡ್ಡುವನು. ಹೀಗೆ ಮಾಡಿ ರಾಜನ ಅಧಿಕಾರ ಸಂಪೂರ್ಣವಾಗಿ ತನ್ನ ಅಧೀನವಾಗಿರುವಂತೆ ಪುರೋಹಿತನು ವರ್ತಿಸುತ್ತಿರುವುದು ಅನೇಕ ವೇಳೆ ನಮಗೆ ಕಾಣಬರುತ್ತದೆ. ಕ್ಷತ್ರಿಯರಿಗಿರುವ ಎಲ್ಲಕ್ಕಿಂತಲೂ ದೊಡ್ಡ ಅಂಜಿಕೆ ಎಂದರೆ ರಾಜವಂಶೀಯರ ಕೀರ್ತಿ ಗೌರವವಲ್ಲ ನಿಂತಿರುವುದು.

ಪುರೋಹಿತನ ಲೇಖನಿಯ ಕೃಪಾದೃಷ್ಟಿಯ ಮೇಲೆ...ಯಾರು ಮಳೆಗಾಲದಲ್ಲಿ ಅನವರತವೂ ಬೀಳುತ್ತಿರುವ ಮಳೆಯ ಹನಿಯಂತೆ ಪುರೋಹಿತನ ಮೇಲೆ ಅನಂತ ಧನ ರಾಶಿಯನ್ನು ಸುರಿದರೋ, ಅಂತಹ ರಾಜರು ಮಾಡಿದ ಅಶ್ವಮೇಧ ಮುಂತಾದ ದೊಡ್ಡ ದೊಡ್ಡ ಯಾಗಗಳೂ ಮತ್ತು ಹೆಸರುಗಳೂ ಇತಿಹಾಸದಲ್ಲಿ ಸ್ವರ್ಣಾಕ್ಷರಗಳಿಂದ ಬರೆದು ಇಡಲ್ಪಟ್ಟವು. ದೇವತೆಗಳ ಪ್ರೀತಿ ಪಾತ್ರನಾದ ಧರ್ಮಶೋಧಕನ ಹೆಸರು ಪುರೋಹಿತರ ಪ್ರಪಂಚದಲ್ಲಿ ಕೇವಲ ಒಂದು ಹೆಸರು ಮಾತ್ರವಾಗಿದೆ. ಆದರೆ ಪರೀಕ್ಷಿತನ ಮಗನಾದ ಜನಮೇಜಯನಾದರೋ ಅಬಾಲವೃದ್ಧರಿಗೆ ಮತ್ತು ವನಿತೆಯರಿಗೆ ಚಿರಪರಿಚಿತನಾಗಿರುವನು. ಪುರೋಹಿತರ ಕೃಪಾಕಟಾಕ್ಷಕ್ಕೆ ಧನ್ಯವಾದಗಳು!

ರಾಜನು ದೇಶ ರಕ್ಷಣೆಗಾಗಿ, ತನ್ನ ಮತ್ತು ಪರಿವಾರದವರ ಸುಖಭೋಗಗಳಿಗಾಗಿ ಮತ್ತು ಅವೆಲ್ಲಕ್ಕಿಂತಲೂ ಹೆಚ್ಚಾಗಿ ಶ್ರೇಷ್ಠರಾದ ಬಲಾಢ್ಯರಾದ ಪುರೋಹಿತರ ತೃಪ್ತಿಗಾಗಿ ಭಂಡಾರವನ್ನು ಭರ್ತಿಯಾಗಿಡಬೇಕಾಗಿತ್ತು. ಅದಕ್ಕಾಗಿ ಸೂರ್ಯನು ಭೂಮಿಯ ಮೇಲೆ ಇರುವ ತಂಪನ್ನು ಹೀರಿಕೊಳ್ಳುವಂತೆ ಅನವರತವೂ ತನ್ನ ಪ್ರಜೆಗಳ ಆದಾಯವನ್ನು ಸೂರೆಗೊಳ್ಳುತ್ತಿದ್ದನು. ಅವನ ಬೇಟೆಯ ಮುಖ್ಯಗುರಿ, ಕಾಮಧೇನು ಮತ್ತು ವೈಶ್ಯರು.

ರಾಜನೆಂಬ ಭಯಂಕರ ಸಿಂಹ ಒಂದು ಕಡೆ, ಭಯಗ್ರಸ್ತ ಕುರಿಯ ಮಂದೆಯಂತೆ ಇರುವ ಪ್ರಜಾವರ್ಗ ಒಂದು ಕಡೆ. ಇವರ ಮಧ್ಯದಲ್ಲಿ ಪುರೋಹಿತ ಇರುವನು.

ಪುರೋಹಿತರು ಒಬ್ಬ ದೇವರಿರುವನೆಂದು ನಂಬುವರು. ಆದರೆ ಆ ದೇವರನ್ನು ಅವರ ಮೂಲಕ ಮಾತ್ರ ನೋಡಬಹುದು ಎನ್ನುತ್ತಾರೆ. ಜನರು ಪುರೋಹಿತನ ಅಪ್ಪಣೆ ಪಡೆದರೆ ಮಾತ್ರ ಭಗವಂತನ ಸನ್ನಿಧಿಗೆ ಹೋಗಬಲ್ಲರು. ನೀವು ಅವರಿಗೆ ಹಣ ಕೊಡಬೇಕು, ಪೂಜೆ ಸಲ್ಲಿಸಬೇಕು. ಎಲ್ಲವನ್ನೂ ಅವರಿಗೆ

ಪುರೋಹಿತನು ಎಲ್ಲವನ್ನೂ ಮೀರಿರುವನು. ಒಮ್ಮೆ ಸಾವಿನಿಂದ ಮತ್ತು ಸರ್ವನಾಶದಿಂದ ಕೂಡಿರುವ ಸನ್ನಿವೇಶಗಳಲ್ಲಿ ನಿರತನಾಗಿರುವಂತೆ ಆತನು ರಾಜನಿಗೆ ಆಜ್ಞೆ ಮಾಡುವನು. ಒಮ್ಮೆ ದಯಾಪೂರಿತನಾಗಿ ಒಳ್ಳೆಯ ಬುದ್ಧಿವಾದಗಳನ್ನು ಹೇಳುತ್ತಲೂ, ಮತ್ತೊಮ್ಮೆ ಕೌಶಲ್ಯಮಯವಾದ ನೀತಿ ಜಾಲವನ್ನು ವಿಸ್ತರಿಸುವುದರಿಂದಲೂ ಬಲೆಯನ್ನು ಒಡ್ಡುವನು. ಹೀಗೆ ಮಾಡಿ ರಾಜನ ಅಧಿಕಾರ ಸಂಪೂರ್ಣವಾಗಿ ತನ್ನ ಅಧೀನವಾಗಿರುವಂತೆ ಪುರೋಹಿತನು ವರ್ತಿಸುತ್ತಿರುವುದು ಅನೇಕ ವೇಳೆ ನಮಗೆ ಕಾಣಬರುತ್ತದೆ. ಕ್ಷತ್ರಿಯರಿಗಿರುವ ಎಲ್ಲಕ್ಕಿಂತಲೂ ದೊಡ್ಡ ಅಂಜಿಕೆ ಎಂದರೆ ರಾಜವಂಶೀಯರ ಕೀರ್ತಿ ಗೌರವವಲ್ಲ ನಿಂತಿರುವುದು. ಪುರೋಹಿತನ ಲೇಖನಿಯ ಕೃಪಾದೃಷ್ಟಿಯ ಮೇಲೆ...ಯಾರು ಮಳೆಗಾಲದಲ್ಲಿ ಅನವರತವೂ ಬೀಳುತ್ತಿರುವ ಮಳೆಯ ಹನಿಯಂತೆ ಪುರೋಹಿತನ ಮೇಲೆ ಅನಂತ ಧನರಾಶಿಯನ್ನು ಸುರಿದರೋ, ಅಂತಹ ರಾಜರು ಮಾಡಿದ ಅಶ್ವಮೇಧ ಮುಂತಾದ ದೊಡ್ಡ ದೊಡ್ಡ ಯಾಗಗಳೂ ಮತ್ತು ಹೆಸರುಗಳೂ ಇತಿಹಾಸದಲ್ಲಿ ಸ್ವರ್ಣಾಕ್ಷರಗಳಿಂದ ಬರೆದು ಇಡಲ್ಪಟ್ಟವು. ದೇವತೆಗಳ ಪ್ರೀತಿ ಪಾತ್ರನಾದ ಧರ್ಮಶೋಧಕನ ಹೆಸರು ಪುರೋಹಿತರ ಪ್ರಪಂಚದಲ್ಲಿ ಕೇವಲ ಒಂದು ಹೆಸರು ಮಾತ್ರವಾಗಿದೆ.

ಸಮರ್ಪಿಸಬೇಕು. ಇತಿಹಾಸದಲ್ಲೆಲ್ಲಾ ಪುರೋಹಿತವರ್ಗ ಪದೇ ಪದೇ ಮೇಲೆದ್ದಿರುವುದು. ಅಧಿಕಾರದ ಮೇಲೆ ಅಧಿಕ ಆಸೆ ಅವರಿಗೆ. ವ್ಯಾಘ್ರದಂತಹ ರಕ್ತದಾಹ ಮಾನವನ ಒಂದು ಸ್ವಭಾವಾದಂತೆ ಕಾಣುವುದು. ಪುರೋಹಿತರು ನಿಮ್ಮನ್ನೂ ಆಳುವರು. ನೂರಾರು ಆಚಾರಗಳಿಂದ ನಿಮ್ಮನ್ನು ಬಲಾತ್ಕಾರವಾಗಿ ಬಿಗಿಯುವರು. ಅತಿ ಸರಳವಾದ ಸತ್ಯವನ್ನು, ತಿಳಿಯಲಾಗದ ಒಂದು ಜಾಲವಾಗಿ ಮಾಡುವರು.

ತಮ್ಮ ಶ್ರೇಷ್ಠತೆಯನ್ನು ತೋರಿಸಿಕೊಳ್ಳುವುದಕ್ಕೆ ಕಥೆಗಳನ್ನು ಹೇಳುವರು. ನೀವು ಇಹದಲ್ಲಿ ಚೆನ್ನಾಗಿರಬೇಕಾದರೆ, ಪರದಲ್ಲಿ ಸ್ವರ್ಗಕ್ಕೆ ಹೋಗಬೇಕಾದರೆ. ಅವರ ಮೂಲಕ ಸಾಗಬೇಕು. ಹಲವು ಬಗೆಯ ಕರ್ಮಗಳನ್ನು ಮಾಡಬೇಕು. ಇವೆಲ್ಲ ನಮ್ಮ ಜೀವನವನ್ನು ಒಂದು ಗೋಜಿಗೆ ತಂದಿವೆ. ನಮ್ಮ ತಿಳುವಳಿಕೆಯನ್ನು ಕೆಡಿಸಿವೆ. ಇದರಿಂದ ಏನಾಗಿದೆ ಎಂದರೆ, ನಿಮಗೆ ಸರಳವಾಗಿ ಹೇಳಿದರೆ ನೀವು ಅತೃಪ್ತರಾಗಿ ಮನೆಗೆ ಹೋಗುವಿರಿ. ನಿಮ್ಮ ತಿಳುವಳಿಕೆಯೆಲ್ಲಾ ಕದಡಿ ಹೋಗಿದೆ. ಕಡಿಮೆ ತಿಳಿದಷ್ಟು ಮೇಲೆಂದು ಭಾವಿಸುತ್ತೀರಿ. ಪ್ರವಾದಿಗಳು ಪುರೋಹಿತರ ತಂತ್ರ ಯಂತ್ರ ಮೂಢನಂಬಿಕೆಗಳಿಗೆ ವಿರೋಧವಾಗಿ ಜನರನ್ನು ಎಚ್ಚರಿಸುತ್ತಿರುವವರು. ಆದರೆ ಹೆಚ್ಚಿನ ಜನರು ಆ ಎಚ್ಚರಿಕೆಗೆ ಗಮನ ಕೊಡುತ್ತಿರಲಿಲ್ಲ. ಅವರಿಗೆ ವಿದ್ಯಾಭ್ಯಾಸ ಇನ್ನೂ ಬರಬೇಕಾಗಿದೆ.

ಪ್ರತಿಯೊಂದು ದೇಶದಲ್ಲಿಯೂ ಪುರೋಹಿತರು ಒಂದು ದೋಷವೇ. ಏಕೆಂದರೆ ಅವರು ಯಾವುದೋ ಒಂದನ್ನು ಮಾಡಲು ಉಳಿದ ಹಲವನ್ನು ಹಾಳುಮಾಡುವರು. ಯಾವಾಗಲೂ ಟೀಕಿಸುವರು, ದೋಷಾರೋಪಣೆ ಮಾಡುವರು. ಪ್ರೀತಿ ಎಂದಿಗೂ ದೋಷವನ್ನು ಆರೋಪಿಸುವುದಿಲ್ಲ. ಆಕಾಂಕ್ಷೆಯೇ ಹಾಗೆ ಮಾಡುವುದು.

ನೀವು ಜನರನ್ನು ಹಿಂಸಿಸಿದರೆ ನೀವೂ ಕೂಡ ಅದೇ ಹಿಂಸೆಗೆ ಒಳಗಾಗಬೇಕಾಗುವುದು. ಭರತಖಂಡದಲ್ಲಿರುವ ನಾವು ಕೋಪಕ್ಕೆ ತುತ್ತಾಗಿರುವೆವು. ಈ ವಿಷಯಗಳನ್ನು ನೋಡಿ, ತಮ್ಮ ಐಶ್ವರ್ಯವನ್ನು ವೃದ್ಧಿಮಾಡಿಕೊಳ್ಳುವುದಕ್ಕಾಗಿ ಬಡಜನರ ಕೈಯಿಂದ ಚೆನ್ನಾಗಿ ದುಡಿಸಿಕೊಂಡರು. ಅವರ ಗೋಳಿಗೆ ಕಿವಿಗೊಡಲಿಲ್ಲ. ಬಡವರು ಹೊಟ್ಟೆಗೆ ಹಿಟ್ಟು ಇಲ್ಲದೇ ಅಳುತ್ತಿದ್ದಾಗ ಇವರು ಬೆಳ್ಳಿ, ಚಿನ್ನದ ತಟ್ಟೆಯಲ್ಲಿ ಊಟಮಾಡುತ್ತಿದ್ದರು. ತಮ್ಮ ಕ್ರೂರತನದಿಂದ ಅವರು ಜನಸಾಮಾನ್ಯರನ್ನು ಅಧೋ ಗತಿಗೆ ತಂದರು.

ಭರತಖಂಡದ ಋಷಿವರ್ಯರು ಪುರೋಹಿತರ ಆಚಾರಗಳನ್ನು ಅಲ್ಲಗೆಳೆದು ಸತ್ಯವನ್ನು ಬೋಧಿಸಿದರು. ಅವರು ಪುರೋಹಿತರ ದರ್ಪವನ್ನು ಅಡಗಿಸಲು ಯತ್ನಿಸಿ ಅದರಲ್ಲಿ ಸ್ವಲ್ಪ ಜಯಶೀಲರಾದರು. ಆದರೆ ಎರಡು ತಲೆಮಾರಿನ ಮೇಲೆ ಅವರ ಅನುಯಾಯಿಗಳೇ ಮೂಢಾಚಾರಕ್ಕೆ ವಶರಾಗಿ, ಪುರೋಹಿತರಿಗೆ ಶರಣಾಗಿ, ಅವರೇ ಪುರೋಹಿತ ರಾದರು.

ಅವೈದಿಕವೂ, ಅಶಾಸ್ತ್ರೀಯವೂ ಆದ ಕುಲಗುರು ಪದ್ಧತಿಯನ್ನು ಸ್ವಾರ್ಥಪರರಾದ ಬ್ರಾಹ್ಮಣರೇ ಈ ದೇಶದಲ್ಲಿ ಪ್ರಚಾರಕ್ಕೆ ತಂದಿದ್ದಾರೆ. ಇದರಿಂದಲೇ ಸಾಧನೆ ಮಾಡಿದರೂ ಜನರು ಈಗ ಸಿದ್ಧರೂ ಆಗಲಾರದವರಾಗಿದ್ದಾರೆ.

ವೇದದಲ್ಲಿ 'ಋಷಿ' ಶಬ್ದಕ್ಕೆ ಮಂತ್ರದ್ರಷ್ಟ(ಮಂತ್ರಗಳನ್ನು ಕಂಡವನು) ಎಂದು ಅರ್ಥ. ಯಜ್ಞೋಪವೀತ ಕತ್ತಿನಲ್ಲಿದ್ದ ಮಾತ್ರಕ್ಕೆ ಬ್ರಾಹ್ಮಣನಲ್ಲ, ಬ್ರಾಹ್ಮಣಾದಿ ಜಾತಿ ವಿಭಾಗವು ಆಮೇಲೆ ಆಯಿತು. ಋಷಿಯ ಅವಸ್ಥೆ ಯಾವ ಕಾಲ-ದೇಶ-ಲಿಂಗಗಳಿಂದಲೂ ಬದ್ಧವಾಗಿಲ್ಲ. ಈ ಋಷಿತ್ವ ಎಂಬುದು ಋಷಿಸಂತಾನ, ಆರ್ಯ, ಅನಾರ್ಯ, ಮ್ಲೇಚ್ಛರು ಇವರೆಲ್ಲರಿಗೂ ಸಾಮಾನ್ಯವಾದ ಸಂಪತ್ತು ಎಂದು ವಾತ್ಸಾಯನ ನಿರ್ಭಯವಾಗಿ ಹೇಳುವನು.

ಯಾರಾದರಾಗಿರಲಿ, ಶೂದ್ರನಾಗಲೀ, ಚಂಡಾಲನಾಗಿರಲಿ, ಅವನು ತತ್ವವನ್ನು ಬ್ರಾಹ್ಮಣನಿಗೂ ಹೇಳಬಹುದು. ಸತ್ಯವನ್ನು ಎಂತಹ ಪಾಮರನಿಂದಲೂ ಕಲಿತುಕೊಳ್ಳಬಹುದು. ಅವನು ಯಾವ ಜಾತಿಗೆ ಅಥವಾ ಮತಕ್ಕೆ ಸೇರಿದ್ದರೂ ಚಿಂತೆ ಇಲ್ಲ.

(ಈ ವಿಚಾರ ಲಹರಿಗಳನ್ನು ಮೈಸೂರಿನ ಶ್ರೀರಾಮಕೃಷ್ಣಾಶ್ರಮ ಪ್ರಕಟಿಸಿದ 'ಸ್ವಾಮಿ ವಿವೇಕಾನಂದ ಕೃತಿ ಶ್ರೇಣಿ'ಯ ಹತ್ತು ಸಂಪುಟಗಳಿಂದ ಆಯ್ದುಕೊಳ್ಳಲಾಗಿದೆ.) □

AMVADA' Kannada Monthly. MAY 2004 RNI-KAR KAN/2002/9246 CPMG/KA/BGW-706/2003-05



ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳ ಸಮರ್ಥ ವಿಶ್ಲೇಷಣೆಗಾಗಿ
ವಿಚಾರಶೂನ್ಯವಾಗುತ್ತಿರುವ ಸಮಾಜದ ಜಾಗೃತಿಗಾಗಿ
ಎಲ್ಲ ಜನವರ್ಗಗಳ ಅಭಿವ್ಯಕ್ತಿ ವೇದಿಕೆಯಾಗಿ

ಇಂದೇ ಚಂದಾದಾರರಾಗಿ

ಸಂವಾದ

ಶೋಷಣೆ ಮುಕ್ತ ಸಮಾಜಕ್ಕಾಗಿ

'ಸಂವಾದ' ಮಾಸಪತ್ರಿಕೆ, ಸ್ಫೂರ್ತಿಧಾಮ, ಅಂಜನಾನಗರ, ವಿಶ್ವನೀಡಂ ಅಂಚೆ, ಬೆಂಗಳೂರು - ೫೬೦ ೦೯೧